ರಾಜ್ಯ ನಗರಾಭಿವೃದ್ಧಿ ಸಂಸ್ಥೆ

# ನಗರ ಬಡತನ ನಿವಾರಣೆ

**ತರಬೇತಿಗೆ ಪೂರಕವಾಗುವ ಕುರಿತು ಕೆಲವು ಆಯ್ದ ಲೇಖನಗಳು**

**SIUD**

ಸಂಗ್ರಹ :

**ರಾಜ್ಯ ನಗರಾಭಿವೃದ್ಧಿ ಸಂಸ್ಥೆ**

ಆಡಳಿತ ತರಬೇತಿ ಸಂಸ್ಥೆ ಆವರಣ, ಲಲಿತಮಹಲ್ ರಸ್ತೆ, ಮೈಸೂರು - 570 011

ಫೋನ್ : 0821 - 2520116 ಫ್ಯಾಕ್ಸ್ : 0821 - 2520164

Website : www.siudmysore.gov.in,  E-mail : directorsiud@yahoo.co.in

ಡಾ|| (ಶ್ರೀಮತಿ) ಅಮಿತಾ ಪ್ರಸಾದ್,
ಭಾ.ಆ.ಸೇ.,
ಮಹಾ ನಿರ್ದೇಶಕರು

**Dr. (Smt) AMITA PRASAD,**
I.A.S.,
**Director General**

ಕರ್ನಾಟಕ ಸರ್ಕಾರ
Government of Karnataka

ಆಡಳಿತ ತರಬೇತಿ ಸಂಸ್ಥೆ
ಲಲಿತ್‌ಮಹಲ್ ರಸ್ತೆ, ಮೈಸೂರು - 570 011
ADMINISTRATIVE TRAINING INSTITUTE
LALITHA MAHAL ROAD, MYSORE - 570 011

## ಮುನ್ನುಡಿ

**ಡಾ.(ಶ್ರೀಮತಿ) ಅಮಿತಾ ಪ್ರಸಾದ್ ಐ.ಎ.ಎಸ್**
**ಮಹಾನಿರ್ದೇಶಕರು.**

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡತನ ನಿವಾರಣೆಗಾಗಿ ನೂರಾರು ಕಾರ್ಯಕ್ರಮಗಳನ್ನು ಕಳೆದ ಆರು ದಶಕಗಳಿಂದ ಅನುಷ್ಠಾನಗೊಳಿಸುತ್ತಾ ಬಂದಿವೆ. ಜನಸಂಖ್ಯೆ ಬೆಳವಣಿಗೆ, ಯೋಜನೆಗಳನ್ನು ಅನುಷ್ಠಾನಗೊಳಿಸುವಲ್ಲಿ ಆಡಳಿತಾತ್ಮಕ ತೊಂದರೆಗಳು, ಅಗತ್ಯವಿರುವ ಜನರು ಯೋಜನೆಯಲ್ಲಿ ಭಾಗವಹಿಸದೇ ಇರುವುದು ಹೀಗೆ ಹಲವಾರು ಕಾರಣಗಳಿಂದ ಬಡತನವನ್ನು ನಿರೀಕ್ಷಿತ ಪ್ರಮಾಣದಲ್ಲಿ ನಿವಾರಣೆಯ ಗುರಿಯನ್ನು ತಲುಪಲು ಸಾಧ್ಯವಾಗಿಲ್ಲ.

ದೇಶದ ಬಡತನದ ಪ್ರಮಾಣವನ್ನು ಕುರಿತು ಇತ್ತೀಚಿನ ಸುರೇಶ್ ತೆಂಡೂಲ್ಕರ್ ವರದಿಯಲ್ಲಿ ತಿಳಿಸಿರುವಂತೆ ಬಡತನವು ಶೇ 27.05 ರಿಂದ ಶೇ 37.02 ಕ್ಕೆ ಏರಿಕೆಯಾಗಿದೆ. ಈ ಸಂಗತಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಬಡತನ ನಿವಾರಣೆಯಲ್ಲಿ ಹೆಚ್ಚು ಜವಾಬ್ದಾರಿಯಿಂದ ಕಾರ್ಯನಿರ್ವಹಿಸುವಂತೆ ಮಾಡಿದೆ. ನಗರದ ಬಡಜನರಿಗೆ ಸ್ವ-ಉದ್ಯೋಗಕ್ಕಾಗಿ ಸ್ವಸ್ತ್ಯಗಳು ಮತ್ತು ಕೌಶಲಗಳನ್ನು ಒದಗಿಸುವ ಉದ್ದೇಶವುಳ್ಳ ಬಡತನ ನಿವಾರಣೆಯಂತಹ ಕಾರ್ಯಕ್ರಮಗಳು ಯಶಸ್ವಿಯಾಗಬೇಕಾದರೆ ಸಮುದಾಯದ ಭಾಗವಹಿಸುವಿಕೆಗೆ ಪ್ರಥಮ ಆದ್ಯತೆಯಿರಬೇಕು. ಇದಕ್ಕೆ ಪೂರಕವಾಗಿ ಅಧಿಕಾರಿಗಳು ಮತ್ತು ನೌಕರರು ಯೋಜನೆಯ ಉದ್ದೇಶಗಳಿಗನುಗುಣವಾಗಿ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿಸಿಕೊಳ್ಳಬೇಕು.

ಈ ನಿಟ್ಟಿನಲ್ಲಿ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯು ಕರ್ನಾಟಕ ಪೌರ ಸುಧಾರಣೆಯ ಯೋಜನೆಯ ಮೂಲಕ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರ ಬಡತನ ನಿವಾರಣೆ ಕಾರ್ಯಕ್ರಮಗಳನ್ನು ನೇರವಾಗಿ ನಗರದ ಎಲ್ಲಾ ಬಡವರಿಗೆ ತಲುಪಿಸುವ ಕಾರ್ಯನಿರ್ವಹಿಸುವಂತಹ ಅಧಿಕಾರಿಗಳನ್ನು ಮತ್ತು ನೌಕರರನ್ನು ಗಮನದಲ್ಲಿರಿಸಿಕೊಂಡಿದೆ.ಇವರ ಸಾಮರ್ಥ್ಯ ಬಲವರ್ಧನೆಗಾಗಿ ನಗರ ಬಡತನ ನಿವಾರಣೆ ಕುರಿತು ತರಬೇತಿಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ಈ ಪುಸ್ತಕದಲ್ಲಿ ಪ್ರಕಟಿಸಲಾದ ಮಾಹಿತಿಗಳನ್ನು ದಿನನಿತ್ಯದ ತಮ್ಮ ಕಾರ್ಯದಲ್ಲಿ ಅಳವಡಿಸಿಕೊಂಡರೆ ತರಬೇತಿ ಕಾರ್ಯಕ್ರಮದ ನಮ್ಮ ಉದ್ದೇಶ ಈಡೇರಿದಂತಾಗುವುದು.

ಕೈಪಿಡಿಯನ್ನು ನಿಗದಿತ ಸಮಯದಲ್ಲಿ ಪ್ರಕಟಣೆಗೆ ಪೂರ್ವ ತಯಾರಿ ನಡೆಸಿ ಓದುವ ಸಾಮಗ್ರಿಯನ್ನು ಪ್ರಶಿಕ್ಷಣಾರ್ಥಿಗಳಿಗೆ ತಲುಪಿಸುವ ಕಾರ್ಯದಲ್ಲಿ ತೊಡಗಿಸಿಕೊಂಡ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ನಿರ್ದೇಶಕರಾದ ಶ್ರೀ ಮುಕುಂದರಾಗ ಶಿವಸಾಲಿರವರಿಗೆ ಹಾಗು ಸಂಸ್ಥೆಯ ಇತರ ಸಿಬ್ಬಂದಿಯವರಿಗೆ ಅಭಿನಂದನೆಗಳು.

ತರಬೇತಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿ ಅನುಷ್ಠಾನಕ್ಕೆ ತರುವ ಜವಾಬ್ದಾರಿಯನ್ನು ಹೊತ್ತು, ಓದುವ ಸಾಮಗ್ರಿಯನ್ನು ತಯಾರಿಸಿದ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ಬೋಧಕರಾದ ಶ್ರೀ ಸಿ. ಅಶೋಕ ಹಾಗು ಸಕಾಲದಲ್ಲಿ ಲೇಖನಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟ ಶ್ರೀ ಬಿ.ಕೆ ವಾಸುದೇವರ ಶ್ರಮ ಅಭಿನಂದನೀಯ.

ಮಹಾನಿರ್ದೇಶಕರು.

ದಿನಾಂಕ: 22-05-2010

0821-2443264, 2443863, 2443831, 2522142 Fax : (0821) 25233899 e-mail : dgatimysore@yahoo.com, dgatimysore-karny@nic.in
Website : atimysore.gov.in

ರಾಜ್ಯ ನಗರಾಭಿವೃದ್ಧಿ ಸಂಸ್ಥೆ
ಆಡಳಿತ ತರಬೇತಿ ಸಂಸ್ಥೆ ಆವರಣ, ಲಲಿತ ಮಹಲ್ ರಸ್ತೆ,
ಮೈಸೂರು-570 011

State Institute for Urban Development
ATI Campus, Lalitha Mahal Road
Mysore - 570 011

## ಮುನ್ನುಡಿ

**ಪ್ರಾಣಲಿಂಗ ಶಿವಸಾಲಿ**
**ನಿರ್ದೇಶಕರು**

ರಾಜ್ಯ ನಗರಾಭಿವೃದ್ಧಿ ಸಂಸ್ಥೆಯು ಕರ್ನಾಟಕ ಪೌರ' ಸುಧಾರಣೆಯ ಯೋಜನೆಯ ಮೂಲಕ ರಾಜ್ಯದ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಲ್ಲಿ ನಗರ ಬಡತನ ನಿವಾರಣೆ ಕಾರ್ಯಕ್ರಮಗಳನ್ನು ನೇರವಾಗಿ ನಗರದ ನಾಗರೀಕರಿಗೆ ತಲುಪಿಸುವಲ್ಲಿ ಕಾರ್ಯನಿರ್ವಹಿಸುವಂತಹ ಅಧಿಕಾರಿಗಳನ್ನು ಮತ್ತು ನೌಕರರನ್ನು ಗಮನದಲ್ಲಿರಿಸಿಕೊಂಡು ನಗರ ಬಡತನ ನಿವಾರಣೆ ಕುರಿತು ತರಬೇತಿಕಾರ್ಯಕ್ರಮಗಳನ್ನು ರೂಪಿಸಲಾಗಿದೆ. ತರಬೇತಿಗೆ ಪೂರಕವಾಗಿ ಕನ್ನಡದಲ್ಲಿ ನಗರ ಬಡತನ ನಿವಾರಣೆ ಕುರಿತಾದ ಪರಿಕಲ್ಪನೆಯನ್ನು ಸರಳವಾಗಿ ಅರ್ಥಮಾಡಿಕೊಳ್ಳುವಲ್ಲಿ ಓದುವ ಸಾಮಗ್ರಿಗಳ ಕೊರತೆಯನ್ನು ಹೋಗಲಾಡಿಸುವ ನ್ಟಿನಲ್ಲಿ ನಗರ ಬಡತನ ನಿವಾರಣೆ ಕುರಿತು ಆಯ್ದ ಕೆಲವು ಲೇಖನಗಳನ್ನು ಸಂಗ್ರಹಿಸಿ ಕನ್ನಡಕ್ಕೆ ಅನುವಾದ ಮಾಡಿಸಿ ತರಬೇತಿಯಲ್ಲಿ ಭಾಗವಹಿಸುವ ಪ್ರಶಿಕ್ಷಣಾರ್ಥಿಗಳಿಗೆ ಲಭ್ಯವಾಗುವಂತೆ ಕರ್ನಾಟಕ ಪುರಸಭೆಗಳ ಸುಧಾರಣೆಯ ಯೋಜನೆಯಡಿಯಲ್ಲಿ ಪ್ರಕಟಿಸಲಾಗಿದೆ.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಆರ್ಥಿಕ ಸಹಕಾರದೊಂದಿಗೆ ಮತ್ತು ಸ್ಥಳೀಯ ಸಂಸ್ಥೆಗಳು ನಿರಂತರವಾಗಿ ಹಲವಾರು ಯೋಜನೆಗಳ ಮೂಲಕ ಅನುಷ್ಟಾನಗೊಳಿಸುತ್ತಾ ಬಂದಿವೆ. ನಗರದ ಬಡವರು ಆರ್ಥಿಕವಾಗಿ ಸದೃಢಗೊಳ್ಳಲು ಮತ್ತು ಸ್ವಯ-ಉದ್ಯೋಗದ ಮೂಲಕ ಸ್ವಾವಲಂಬಿಗಳನ್ನಾಗಿಸುವ ನ್ಟಿನಲ್ಲಿ ೧)ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆ ಮತ್ತು ಬಡತನ ನಿವಾರಣೆಗೆ ಪೂರಕವಾಗಿರುವ ಯೋಜನೆಗಳಾದ೨)ಸಮಗ್ರ ಗೃಹನಿರ್ಮಾಣ ೩)ಕೊಳಗೇರಿಯ ಅಭಿವೃದ್ಧಿ ಕಾರ್ಯಕ್ರಮ, ಜವಹರಲಾಲ್ ನೆಹರು ರಾಷ್ಟ್ರೀಯ ಪುನರ್ನವೀಕರಣ ಅಭಿಯಾನ, ಇಂತಹ ಯೋಜನೆಗಳ ಮೂಲಕ ಬಡತನ ನಿರ್ಮೂಲನೆ ಕಾರ್ಯಕ್ರಮಗಳನ್ನು ಯುದ್ಧದೋಪಾದಿಯಲ್ಲಿ ಅನುಷ್ಠಾನಗೊಳಿಸಲಾಗುತ್ತದೆ. ಈ ಕಾರ್ಯಕ್ರಮಗಳ ಪ್ರಮುಖ ಉದ್ದೇಶವು ನಗರದ ಬಡವರಿಗೆ ಕನಿಷ್ಟ ವಸತಿ ಮತ್ತು ಮೂಲಸೌಕರ್ಯಗಳು ಜೊತೆಗೆ ಅಗತ್ಯ ಉದ್ಯೋಗಾವಕಾಶಗಳನ್ನು ಒದಗಿಸುವುದೇ ಆಗಿದೆ. ಸದರಿ ಪುಸ್ತಕದಲ್ಲಿ ಲಿಂಗ ಮತ್ತು ಬಡತನ, ಕೊಳೆಗೇರಿಗಳ ಸಂಖ್ಯೆ ಮತ್ತು ಅದರ ಬೆಳವಣಿಗೆ , ನಗರ ಸ್ಥಳೀಯ ನಿಕಾಯಗಳ ಪ್ರಕಾರ್ಯ ವ್ಯಾಪ್ತಿ,ನಗರ ಬಡತನದ ಲಿಂಗಸಂಬಂಧಿ ಆಯಾಮಗಳು, ಜವಹರಲಾಲ್ ನೆಹರು ರಾಷ್ಟ್ರೀಯ ಪುನರ್ನವೀಕರಣ ಅಭಿಯಾನ, ಸಮಗ್ರ ಗೃಹನಿರ್ಮಾಣ ಮತ್ತು ಕೊಳಗೇರಿ ಅಭಿವೃದ್ಧಿ ಕಾರ್ಯಕ್ರಮ (ಐಹೆಚ್‌ಎಸ್‌ಡಿಪಿ), ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಗರ ಮೂಲ ಸೌಕರ್ಯಗಳ ಅಭಿವೃದ್ಧಿ ಕಾರ್ಯಯೋಜನೆ, ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆ (ಎಸ್‌ಜೆಎಸ್‌ಆರ್‌ವೈ)ಯಂಥ ಪ್ರಮುಖ ವಿಷಯಗಳನ್ನು ಮಾಹಿತಿಯನ್ನು ಈ ಪುಸ್ತಕದಲ್ಲಿ ಚರ್ಚಿಸಲಾಗಿದೆ.

ಸ್ಥಳೀಯ ಸಂಸ್ಥೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳು ಮತ್ತು ಸಿಬ್ಬಂದಿಗಳಿಗೆ ತರಬೇತಿ ಕಾರ್ಯಕ್ರಮ ರೂಪಿಸಲು ಮಾರ್ಗದರ್ಶನ ನೀಡಿದ ಆಡಳಿತ ತರಬೇತಿ ಸಂಸ್ಥೆಯ ಮಹಾನಿರ್ದೇಶಕರಾದ ಡಾ ಶ್ರೀಮತಿ ಅಮಿತಾಪ್ರಸಾದ್ ಐ.ಎ.ಎಸ್. ರವರಿಗೆ ಧನ್ಯವಾದಗಳು. ತರಬೇತಿ ಕಾರ್ಯಕ್ರಮವನ್ನು ಕರ್ನಾಟಕ ಪೌರ ಸುಧಾರಣೆಯ ಯೋಜನೆಯಡಿಯಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲು ಹಣಕಾಸಿನ ನೆರವನ್ನು ನೀಡಿದ ಕರ್ನಾಟಕ ನಗರ ಮೂಲ ಸೌಕರ್ಯ ಅಭಿವೃದ್ಧಿ ಹಾಗು ಹಣಕಾಸು ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಶ್ರೀ ಅರವಿಂದ ಶ್ರೀವಾತ್ಸವ ಐ.ಎ.ಎಸ್. ರವರಿಗೆ ಧನ್ಯವಾದಗಳು. ತರಬೇತಿ ಕಾರ್ಯಕ್ರಮವನ್ನು ರೂಪಿಸುವಲ್ಲಿ ಪ್ರತೀ ಹಂತದಲ್ಲಿ ಸಲಹೆ-ಸಹಕಾರ, ಪ್ರೋತ್ಸಾಹ ನೀಡಿದ ಶ್ರೀ ಅಂಜುಂಪರ್‌ವಿಜ್, ಐ.ಎ.ಎಸ್. ಆಯುಕ್ತರು ಪೌರಾಡಳಿತ ನಿರ್ದೇಶನಾಲಯ ರವರಿಗೆ ನಾನು ಕೃತಜ್ಞನಾಗಿದ್ದೇನೆ.

ತರಬೇತಿ ಕಾರ್ಯಕ್ರಮವನ್ನು ವಿನ್ಯಾಸಗೊಳಿಸಿ ಅನುಷ್ಟಾನಕ್ಕೆ ತರುವ ಜವಾಬ್ದಾರಿಯನ್ನು ಹೊತ್ತಿರುವ ರಾಜ್ಯ ನಗರಾಭಿವೃದ್ಧಿ ಸಂಸ್ಥೆಯ ಬೋಧಕರಾದ ಶ್ರೀ ಸಿ. ಅಶೋಕರವರಿಗೆ ಹಾಗು ಸಕಾಲದಲ್ಲಿ ಆಯ್ದ ಲೇಖನಗಳನ್ನು ಕನ್ನಡಕ್ಕೆ ಅನುವಾದ ಮಾಡಿಕೊಟ್ಟ ಶ್ರೀ ಬಿ.ಕೆ ವಾಸು,ರವರಿಗೂ ಸಹ ಧನ್ಯವಾದಗಳು.

ನಿರ್ದೇಶಕರು.

Telephone : [illegible] Fax : [illegible] 2520164
E-mail : [illegible], directorsiud@yahoo.co.in
Website : www.siudmysore.gov.in

# ಪರಿವಿಡಿ


| | | |
|---|---|---|
| 1. | ಜನಸಂಖ್ಯೆ ಮತ್ತು ಬಡತನ | 1–16 |
| 2. | ನಗರಕೊಳೆಗೇರಿಗಳು– ಒಂದು ಮೇಲ್ನೋಟ | 17–22 |
| 3. | ಸಂವಿಧಾನದ ಅನುಚ್ಛೇದ 243 ಝೆಡ್ಎ (74ರ) ಅಧಿನಿಯಮ 1992. | 23–34 |
| 4. | ಲಿಂಗಾಧಾರಿತ ಆಯ–ವ್ಯಯ | 35–56 |
| 5. | ಸ್ವರ್ಣಜಯಂತಿ ಶಹರಿ ರೋಜಗಾರ ಯೋಜನೆ ಉತ್ತಮವಾಗಿ ಕಾರ್ಯನಿರ್ವಹಿಸಿದ ಗುಂಪುಗಳ ಅಧ್ಯಯನ | 37–74 |
| 6. | ಎಸ್.ಜೆ. ಎಸ್.ಆರ್.ವೈ. ಕಾರ್ಯಕ್ರಮದ ಮೂಲಕ ಮಹಿಳಾ ಸಬಲೀಕರಣ | 75-83 |

# ಜನಸಂಖ್ಯೆ ಮತ್ತು ಬಡತನ

**ಭಾರತದ ನಗರಪ್ರದೇಶಗಳಲ್ಲಿನ ಬಡತನದ ರೂಪುರೇಷೆ:**

ಭಾರತದಲ್ಲಿ ಪರಿಸರ ಹದಗೆಡುವುದಕ್ಕೆ ತೀವ್ರಗತಿಯ ಜನಸಂಖ್ಯೆಯ ಬೆಳವಣಿಗೆಯೇ ಕಾರಣವೆನ್ನಬಹುದು. ಭಾರತದ ಜನಸಂಖ್ಯೆಯು ಜಗತ್ತಿನ ಜನಸಂಖ್ಯೆಯ ಶೇಕಡ 18 ರಷ್ಟಿದೆ. ಆದರೆ ಭೌಗೋಳಿಕ ಕ್ಷೇತ್ರವು ಕೇವಲ ಶೇ 2 ರಷ್ಟಿದೆ. ವೈದ್ಯಕೀಯ ಸೌಲಭ್ಯತೆ ಮತ್ತು ಸಾಮಾಜಿಕ ಜಾಗೃತಿಯಿಂದ ಮರಣದ ಪ್ರಮಾಣದ ಕಡಿಮೆಯಾಗಿದ್ದರೆ ಜನನವು ಅದೇ ಪ್ರಮಾಣವನ್ನು ಕಾಯ್ದುಕೊಂಡು ಬರುತ್ತಿದೆ. 1972–78 ಮತ್ತು 1979–90 ರ ಅವಧಿಯ ಮರಣ ಪ್ರಮಾಣ ಮತ್ತು ಜನನ ಪ್ರಮಾಣದ ಇಳಿಕೆಯ ಪ್ರವೃತ್ತಿಯನ್ನು ವಿಶ್ಲೇಷಿಸಿ ಶ್ರೀ ದಾಂಡೇಕರ್ ಅವರು ಮೊದಲನೆಯ ಅವಧಿಗಿಂತ (1972–78) ಎರಡನೆಯ ಅವಧಿಯಲ್ಲಿ (1979–90) ಮರಣದ ಪ್ರಮಾಣವು ತೀವ್ರಗತಿಯಲ್ಲಿ ಇಳಿಕೆ ಯಾಯಿತೆಂದು ಹೇಳುತ್ತಾರೆ. ಆದರೂ ಎರಡನೆಯ ಅವಧಿಯಲ್ಲಿ ಆದ ಮರಣದ ಪ್ರಮಾಣದ ಇಳಿಕೆಗೆ ಜನನದ ಪ್ರಮಾಣದ ಇಳಿಕೆಯನ್ನು ಹೋಲಿಸಿ ನೋಡಿದರೆ ಜನನ ಪ್ರಮಾಣದ ಇಳಿಕೆಯು ಕಡಿಮೆ ಇತ್ತೆಂದು ಹೇಳಬಹುದು. ಈ ಕಾರಣದಿಂದಲೇ ಬಡತನ ನಿವಾರಣೆಯು ಐವತ್ತು ವರ್ಷಗಳಿಗೂ ಹೆಚ್ಚಾಗಿ ಒಂದು ರಾಷ್ಟ್ರೀಯ ಕಾರ್ಯಸೂಚಿ ಆಗಿದ್ದಾಗ್ಯೂ ಬಡತನವನ್ನು ನಿರ್ಮೂಲನ ಮಾಡುವುದು ಸಾಧ್ಯವಾಗಿಲ್ಲ. 1972 ರಲ್ಲಿ ನಡೆದ ಸ್ಟಾಕ್‌ಹೋಮ್ ಸಮ್ಮೇಳನದಲ್ಲಿ ಅಂದಿನ ಪ್ರಧಾನ ಮಂತ್ರಿಯವರಾದ ಶ್ರೀಮತಿ ಇಂದಿರಾಗಾಂಧಿಯವರು ಬಡತನವೇ ಒಂದು ದೊಡ್ಡ ಮಾಲಿನ್ಯ ಕಾರಕವೆಂದು ಹೇಳಿದ್ದರು. 20 ವರ್ಷಗಳ ತರುವಾಯ 1992ರಲ್ಲಿ ಜಾಗತಿಕ ಬ್ಯಾಂಕ್ "ಬಡವರು ಪರಿಸರ ಹಾನಿಯ ಕಾರಕರೂ ಮತ್ತು ಬಲಿಪಶುಗಳೂ ಆಗಿದ್ದಾರೆ" ಎಂದು ಹೇಳಿತು. ಬಡವರು ಪರಿಸರ ಹಾನಿಯ ಬಲಿಪಶುಗಳಾಗಿದ್ದುಕೊಂಡೇ ಪರಿಸರ ಹಾನಿಗೆ ಕಾರಕರೂ ಆಗಿರುತ್ತಾರೆ.

ಪರಸರಹಾನಿಯಿಂದ ಮಾನವ ಅಭಿವೃದ್ಧಿಯ ಮೇಲೂ ಪ್ರತಿಕೂಲ ಪರಿಣಾಮ ಉಂಟಾಗುತ್ತದೆ. ಪರಿಸರ ಸ್ವಚ್ಛತೆಯ ಎರಡು ಸೂಚಕಗಳಾದ ಸುರಕ್ಷಿತ ಕುಡಿಯುವ ನೀರು ಮತ್ತು ನೈರ್ಮಲ್ಯ ಇವು ಮಾನವ ಅಭಿವೃದ್ಧಿಯ ಎರಡು ಅತಿ ಮುಖ್ಯ ಸೂಚಕಗಳಾದ ಶಿಶು ಮರಣ ಮತ್ತು ಆಯುಷ್ಕಾಲ ಇವುಗಳಿಗೆ ನಿಕಟ ಸಂಬಂಧವನ್ನು ಹೊಂದಿದೆ. ವಾಸಸ್ಥಳಗಳಲ್ಲಿನ ಕಲುಷಿತ ಗಾಳಿ ಮತ್ತು ಅನಾರೋಗ್ಯಕರ ಆವರಣ ಆಯುರ್ಮಾನವನ್ನು ತಗ್ಗಿಸಿ ಶಿಶು ಮರಣವು ಹೆಚ್ಚಾಗಲು ಕಾರಣವಾಗಿದೆ. ಭಾರತದಲ್ಲಿ ಆಯುರ್ಮಾನವು ಇಂದಿಗೂ ಅತಿ ಕೆಳಗಿದ್ದು ಶಿಶು ಮರಣದ ಪ್ರಮಾಣವು ಅನಪೇಕ್ಷಣೀಯವಾಗಿ ಹೆಚ್ಚಾಗಿರುತ್ತದೆ. ಈ ಕಾರಣದಿಂದ ಬಡವರು ಈ ಎಲ್ಲಕ್ಕೂ ಪರಿಹಾರಾರ್ಥವಾಗಿ ಮತ್ತು ಅಪಾಯಗಳನ್ನು ತಪ್ಪಿಸಲು ಹೆಚ್ಚು ಮಕ್ಕಳನ್ನು ಪಡೆಯುವ ನಿರ್ಧಾರ ಮಾಡುತ್ತಾರೆ. ಹೆಚ್ಚಿನ ಜನಸಂಖ್ಯೆಯು ಹೆಚ್ಚಿದ ಬಡತನಕ್ಕೆ ದಾರಿ ಮತ್ತು ಪರಿಸರದ ಸ್ಥಿತಿಯೂ ಹದಗೆಡುತ್ತದೆ. ಇದೊಂದು ವಿಷಮವೃತ್ತ.

**ಮನೆ ಮತ್ತು ಮೂಲ ಸೇವೆಗಳು:**

ನಮಗೆ ಆಹಾರವಷ್ಟೇ ಸಾಲದು. ಆಹಾರದ ಜೊತೆಗೆ ಕುಡಿಯುವ ನೀರು, ಮಲಮೂತ್ರ ವಿಲೇವಾರಿಯ ಉತ್ತಮ ವ್ಯವಸ್ಥೆ , ಉತ್ತಮ ನೈರ್ಮಲ್ಯ ಮತ್ತು ಕಾಯಿಲೆಯನ್ನು ತಡೆಗಟ್ಟಲು ವೈಯಕ್ತಿಕ ಆರೋಗ್ಯ ಇವೂ ಸಹ ಬೇಕು. ನಮ್ಮ ಗ್ರಾಮಗಳಲ್ಲಿ ನಡೆಸಿದ ಹಲವಾರು ಅಧ್ಯಯನಗಳು ಆಮಶಂಕೆ ಮತ್ತು ಶ್ವಾಸಕೋಶದ ರೋಗಗಳು ಮಕ್ಕಳಲ್ಲಿ ಅತಿ ಸರ್ವೇಸಾಧಾರಣವಾದ ಮತ್ತು ಅಪಾಯಕರವಾದ ರೋಗಗಳೆಂಬುದನ್ನು ದೃಢೀಕರಿಸುತ್ತದೆ. ಇದು ಬಹುತೇಕ ಸಂದರ್ಭದಲ್ಲಿ ಜ್ವರದೊಡಗೂಡಿ ಉಂಟಾಗುವ ಬಿ ಎಂ ಆರ್ ಹೆಚ್ಚಳವನ್ನು

ಶಮನ ಮಾಡಲು ಹೆಚ್ಚಿನ ಶಕ್ತ್ಯಾಹಾರದ ಅಗತ್ಯ ಮತ್ತು ಕಾಯಿಲೆಯನ್ನು ಎದುರಿಸುವ ಸಲುವಾಗಿ ರೋಗವಿರೋಧಿಯ ಹೆಚ್ಚಳಕ್ಕಾಗಿ ಸಸಾರ ಜನಕ ಮತ್ತು ಪೌಷ್ಠಿಕಾಹಾರವನ್ನು ತೆಗೆದುಕೊಳ್ಳುವ ಅಗತ್ಯ ಎರಡೂ ಸೇರಿ ಅಪೌಷ್ಠಿಕತೆಯಲ್ಲಿ ಪರ್ಯವಸಾನವಾಗುತ್ತದೆ. ಈ ನಕಾರಾತ್ಮಕ ಸಂಬಂಧವನ್ನು ಗಮನಿಸಿದ ಜಪಾನ್ ಯುದ್ಧೋತ್ತರದ ವರ್ಷಗಳಲ್ಲಿ ಕುಡಿಯುವ ನೀರು, ಮಲವಿಲೇವಾರಿಗೆ ಗುಂಡಿಪಾಯಿಖಾನೆ, ಕೀಟ ಮತ್ತು ಸೊಳ್ಳೆಗಳನ್ನು ನಿಯಂತ್ರಿಸಲು ನೈರ್ಮಲ್ಯ ಇವುಗಳಿಗೆ ಒತ್ತುಕೊಟ್ಟು ನೀತಿಯನ್ನು ರೂಪಿಸಿತು. ಇದರಿಂದ ಯುದ್ಧೋತ್ತರದ ಒಂದು ದಶಕದ ಅವಧಿಯಲ್ಲಿ ಆಯುರ್ಮಾನವು 12 ವರ್ಷಗಳಷ್ಟು ಹೆಚ್ಚಿತು.

**ನಗರೀಕರಣ**

ತೀವ್ರನಗರೀಕರಣದಿಂದ ಪರಿಸರದ ಮೇಲೆ ಕೆಟ್ಟ ಪರಿಣಾಮ ಬೀರಿದೆ. ಭಾರತದಲ್ಲಿ ನಗರದ ಜನಸಂಖ್ಯೆಯು ವಾರ್ಷಿಕವಾಗಿ ಶ 3.5 ರಷ್ಟು ಬೆಳೆಯುತ್ತಿದೆ. ಇಂದು ನಮ್ಮ ನಗರಗಳು ಬಹುಮುಖವಾದ ಜಟಿಲ ಪರಿಸರೀಯ ಸಮಸ್ಯೆಗಳನ್ನು ಎದುರಿಸುತ್ತಿದೆ. ಜನಸಂಖ್ಯೆಯ ಒತ್ತಡದಿಂದಾಗಿ ನಗರಗಳ ಪರಿಸರ ಆಧಾರ ಮೂಲಗಳು ತೀವ್ರಗತಿಯಲ್ಲಿ ಕ್ಷೀಣಿಸುತ್ತಿದೆ. ನಗರ ಜನಸಂಖ್ಯೆಯ ಐದನೇ ಒಂದುಭಾಗವು ಕೊಳಗೇರಿಯಲ್ಲಿ ವಾಸಿಸುತ್ತಿದ್ದಾರೆ. ಜನಸಂಖ್ಯೆಯ ಮೂರನೇ ಒಂದು ಭಾಗಕ್ಕೆ ನೇರವಾದ ನೈರ್ಮಲ್ಯ ಮತ್ತು ನೀರಿನ ಲಭ್ಯತೆಯಿಲ್ಲ. ಇದು ಅನಾರೋಗ್ಯಕ್ಕೆ ಎಡೆಮಾಡಿಕೊಡುತ್ತದೆ.

## 1. ಅತೀವ ಬಡತನ ಮತ್ತು ಹಸಿವಿನ ನಿರ್ಮೂಲನೆ

## ಲಕ್ಷ್ಯ 1 : 1990–2015 ರ ಅವಧಿಯೊಳಗೆ ದಿನವೊಂದಕ್ಕೆ ಒಂದು ಡಾಲರ್ ಆದಾಯ ಇರುವ ಜನಗಳ ಪ್ರಮಾಣವನ್ನು ಅರ್ಧದಷ್ಟು ಕಡಿಮೆ ಮಾಡುವುದು

**1.1** ಬಡತನ ನಿವಾರಣೆಯು ಭಾರತದ ಯೋಜನಾ ಪ್ರಕ್ರಿಯೆಯಲ್ಲಿನ ಒಂದು ಮಾರ್ಗದರ್ಶಿ ತತ್ವವಾಗಿ ಇರುತ್ತದೆ. ಜನಕ್ಕೆ ಹೆಚ್ಚು ಉದ್ಯೋಗದ ಮಾರ್ಗಗಳನ್ನು ಒದಗಿಸಿ ಕೊಡುವುದರಲ್ಲಿ ಆರ್ಥಿಕ ಬೆಳವಣಿಗೆಯ ಪಾತ್ರವನ್ನು ಸ್ಪಷ್ಟವಾಗಿ ಗುರುತಿಸಲಾಗಿದೆ. ಈ ಅಭಿವೃದ್ಧಿ ಮುಖಿ ನಡೆಯು ನಿರ್ದಿಷ್ಟ ಕ್ಷೇತ್ರಗಳತ್ತ ಕೇಂದ್ರೀಕರಿಸುವ ಒತ್ತಾಸೆಯನ್ನು ಒಳಗೊಂಡಿರುವ ಮೂಲಕ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನಗಳ ಭಾಗವಹಿಸುವಿಕೆಗೆ ಹೆಚ್ಚಿನ ಅವಕಾಶಗಳನ್ನು ಒದಗಿಸುತ್ತದೆ. ಆರೋಗ್ಯ, ಶಿಕ್ಷಣ ಮತ್ತು ಇತರ ಮೂಲ ಸೇವೆಗಳಲ್ಲಿನ ದಾರಿದ್ರ್ಯದ ಹಲವಾರು ಆಯಾಮಗಳನ್ನು ಪ್ರಗತಿಕಾರಕವಾಗಿ ಯೋಜನಾ ಪ್ರಕ್ರಿಯೆಯಲ್ಲಿ ಅಂತರ್ಗತಗೊಳಿಸಲಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಬಡವರ ಸಾಮರ್ಥ್ಯವರ್ಧನೆ ಮತ್ತು ಕ್ಷೇಮವನ್ನು ಪ್ರವರ್ಧಿಸುವ ಶಿಕ್ಷಣ, ಆರೋಗ್ಯ ನೈರ್ಮಲ್ಯ ಮತ್ತು ಇತರ ಸೌಕರ್ಯಗಳಿಗೆ ಅನುದಾನವನ್ನು ಗಣನೀಯವಾಗಿ ಹೆಚ್ಚಿಸಿದೆ. ಕೃಷಿ, ಕ್ಷೇತ್ರಾಭಿವೃದ್ಧಿ ಕಾರ್ಯಕ್ರಮಗಳು ಮತ್ತು ಅರಣ್ಯೀಕರಣವು ಉದ್ಯೋಗ ಮತ್ತು ಆದಾಯಕ್ಕೆ ಮಾರ್ಗಗಳನ್ನು ಒದಗಿಸಿವೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳಿಗೆ ಮತ್ತು ಇತರ ದುರ್ಬಲ ಗುಂಪುಗಳಿಗೆ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಜನರಿಗೆ ಸ್ವಉದ್ಯೋಗಕ್ಕಾಗಿ ಸ್ವತ್ತುಗಳು ಮತ್ತು ಕೌಶಲಗಳನ್ನು ವರ್ಗಾಯಿಸುವ ಉದ್ದೇಶವುಳ್ಳ ಬಡತನ ವಿರೋಧಿ ಕಾರ್ಯಕ್ರಮಗಳು, ತತ್ಕಾಲದ ಬಡತನವನ್ನು ಹೋಗಲಾಡಿಸುವ ಸಾರ್ವಜನಿಕ ಕಾಮಗಾರಿಗಳ ಕಾರ್ಯಕ್ರಮಗಳು ಇವು ಬೃಹದ್ರೂಪದ ಬಡತನ ವಿರೋಧಿಕಾರ್ಯತಂತ್ರದ ಮೂರುಸ್ತರಗಳಾಗಿರುತ್ತವೆ. ತತ್ಫಲಿತವಾಗಿ ದೇಶದಲ್ಲಿನ ಬಡತನವನ್ನು ಕಡಿಮೆ ಮಾಡುವುದಕ್ಕಾಗಿ ಕಾಲಕಾಲಕ್ಕೆ ಹಲವಾರು ಬಡತನ ವಿರೋಧಿ ಕಾರ್ಯಕ್ರಮಗಳನ್ನು ಪ್ರಾರಂಭಿಸಲಾಗುತ್ತಿದೆ.

**1.2** 1973–74 ರಲ್ಲಿ ಶೇ. 55 ರಷ್ಟು ಇದ್ದ ಬಡತನದ ಪ್ರಮಾಣವು 1993–94 ರ ವೇಳೆಗೆ ಶೇ. 36ಕ್ಕೆ ಇಳಿದಿದ್ದು 2004–05 ರ ವೇಳೆಗೆ ಮತ್ತೂ ಶೇ.27.5ಕ್ಕೆ ಇಳಿಯಿತು. ಈ ಮಧ್ಯಾವಧಿಯಲ್ಲಿ 1999–2000 ವರ್ಷದ ಬಡತನ ಅಂದಾಜು ವಿವರಗಳನ್ನು ಪ್ರಕಟಿಸಲಾಯಿತು. ಇದು ಹಿಂದಿನ ಅಂದಾಜುಗಳಿಗೆ ಮತ್ತು 2004–05ರ ಅಂಕಿ ಸಂಖ್ಯೆಗಳಿಗೆ ಕರಾರುವಕ್ಕಾಗಿ ಹೋಲಿಕೆ ಇರುವುದಿಲ್ಲ. ಏಕೆಂದರೆ ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆಯು (ಎನ್ ಅಸ್ ಅಸ್ ಓ) ಗ್ರಾಹಕ ವೆಚ್ಚದ ಸಮೀಕ್ಷೆಗೆ ಅನುಸರಿಸುವ ಮನನಾವಧಿಯಲ್ಲಿ ಇರುವ ವ್ಯತ್ಯಾಸ ಕಾರಣ. 1999–2000ದ ಅಂದಾಜುಗಳ ಪ್ರಕಾರ ಬಡತನದ ಪ್ರಮಾಣವು ಶೇ. 26ರಷ್ಟಿತ್ತು. ಆದರೂ 2004–2005ರ ವರ್ಷದ ಬಡತನ ಅನುಪಾತವು 1999–2000ದ ಅಂಕಿಸಂಖ್ಯೆಗೆ ಸ್ಥೂಲವಾಗಿ ಹೋಲಿಸಿದಾಗ ಶೇ. 21.8 ಇರುತ್ತದೆ. ಕಳೆದ ದಶಕದಲ್ಲಿ ಬಡತನ ರೇಖೆಯ ಕೆಳಗೆ ಬದುಕುವ ಜನರ ಪ್ರಮಾಣದಲ್ಲಿ ಕಂಡು ಬರುವ ಇಳಿಕೆಯು ಕೆಲವು ಕುತೂಹಲದಾಯಕ ಲಕ್ಷಣಗಳನ್ನು ತೋರಿಸುತ್ತದೆ. ಏಕರೀತಿಯ ಮನನಾವಧಿ (ಯು ಆರ್ ಪಿ)1 ನೆಲೆಯಲ್ಲಿ ಗ್ರಾಹಕ ವಿತರಣೆ ಮೇರೆಗೆ 1993–94 ಮತ್ತು 2004–05 ರ ವರ್ಷಗಳಿಗೆ ಅಂದಾಜು ಮಾಡಿದಾಗ ಶೇ.8.5 ಅಂಶಗಳು ಇಳಿಕೆ ಕಂಡುಬಂದಿದ್ದರೆ ಇದಕ್ಕೆ ಪರ್ಯಾಯವಾಗಿ ಮಿಶ್ರಮನನಾವಧಿ(ಎಂ ಆರ್ಪಿ ಪಿ) 2ಯ ಮೂಲದ ಗ್ರಾಹಕ ವಿತರಣೆಯು 1999–2000ದಿಂದ 2005–05 ರ ಅವಧಿಯಲ್ಲಿ ಶೇ. 4.3ರಷ್ಟು ಅಂಶಗಳ ಇಳಿಕೆ ಕಂಡು ಬಂದಿದೆ. ಈ ಪ್ರವೃತ್ತಿಗಳು ಬಡತನ ರೇಖೆಯ ಕೆಳಗೆ ಬದುಕುವ ಜನರ ಪ್ರಮಾಣವನ್ನು ಅರ್ಧದಷ್ಟು ಇಳಿಸುವ ಪ್ರಯತ್ನದಲ್ಲಿ ಭಾರತ ಸರಿಧಾರಿಯಲ್ಲಿ ನಡೆದಿದೆ ಎಂಬುದನ್ನು ಸೂಚಿಸುತ್ತದೆ. ಸೂಚಕಗಳ ಪ್ರವೃತ್ತಿಗಳನ್ನು ಕೋಷ್ಟಕ 1.1 ರಲ್ಲಿ

**ಕೋಷ್ಟಕ 1.1**

**ಬಡತನ ತಲವಾರು ಅನುಪಾತ**

| | ಏಕರೀತಿಯ ಮನನಾವಧಿಯ ಗ್ರಾಹಕ ವಿತರಣೆ | | ಮಿಶ್ರ ಮನನಾವಧಿಯ ಗ್ರಾಹಕರ ವಿತರಣೆ | |
|---|---|---|---|---|
| ಸೂಚಕ :1ಎ | 1993–94 | 2004–05 | 1999–2000 | 2004–05 |
| ಒಟ್ಟಾರೆ | 37.0 | 27.5 | 26.1 | 21.8 |
| ಗ್ರಾಮೀಣ | 37.3 | 28.3 | 27.1 | 21.8 |
| ನಗರ | 32.4 | 25.7 | 23.6 | 21.7 |

**1.3** 1973–74 ಮತ್ತು 2004–05 ರ ಅವಧಿಯಲ್ಲಿ ಬಡತನದಲ್ಲಿ ಬದುಕುವ ಜನಸಂಖ್ಯೆಯ ಪ್ರಮಾಣವು ಶೇ 50ಕ್ಕೂ ಹೆಚ್ಚು ಇಳಿಕೆ ಆಗಿರುವುದಾದರೂ ಭಾರತದಲ್ಲಿ ವರ್ಷೇ ವರ್ಷೇ ಅಪಾರವಾಗಿ ಹೆಚ್ಚುತ್ತಿರುವ ಜನಸಂಖ್ಯೆಯ ಕಾರಣದಿಂದ 2004–05 ರಲ್ಲಿ ಪೂರ್ಣ ಬಡವರ (ಏಕರೀತಿಯ ಮನನಾವಧಿಯ ಪ್ರಕಾರ) ಸಂಖ್ಯೆಯು 301 ದಶಲಕ್ಷಕ್ಕೂ ಹೆಚ್ಚಿರುವ ಸಂಗತಿಯನ್ನು ಉಲ್ಲೇಖಿಸುವುದು ಮುಖ್ಯವಾಗುತ್ತದೆ. 1993–94ಇದರ ಅಂಖ್ಯೆಯು 320 ದಶಲಕ್ಷವಿತ್ತು. 301 ದಶಲಕ್ಷ ಮಂದಿಯಲ್ಲಿ 221 ದಶಲಕ್ಷ ಮಂದಿಯು ಗ್ರಾಮೀಣ ಪ್ರದೇಶದಲ್ಲಿ ವಾಸಮಾಡುತ್ತಿದ್ದರು. ಮಿಶ್ರಮನನಾವಧಿಯ ಆಧಾರದ ಅಂದಾಜುಗಳ ಪ್ರಕಾರ 2004–05 ರಲ್ಲಿ ಬಡವರ ಸಂಖ್ಯೆಯು 238 ದಶಲಕ್ಷಕ್ಕಿಳಿಯಿತು. ಇದು 1999–2000ದಲ್ಲಿ 260ದಶಲಕ್ಷವಿತ್ತು.1987–88ರಿಂದ 1993–94ರ ಅವಧಿಯಲ್ಲಿ ಇಳಿಕೆಯು ನಗರ ಪ್ರದೇಶಗಳಲ್ಲಿ ಹೆಚ್ಚು ಜಾಸ್ತಿ ಇದ್ದರೆ 1993–94ರಿಂದ 2005ರ ಅವಧಿಯಲ್ಲಿ ಇಳಿಕೆಯು ಗ್ರಾಮೀಣ ಪ್ರದೇಶಗಳಲ್ಲಿ (ಶೇ.9ರಷ್ಟು ಅಂಶ)ನಗರ ಪ್ರದೇಶಗಳಿಗಿಂತ (ಶೇ.6.7ರಷ್ಟು ಅಂಶಗಳು) ಜಾಸ್ತಿಯಾಗಿತ್ತು. ಆದಾಗ್ಯೂ ನಗರ ಬಡತನಕ್ಕಿಂತ

ಗ್ರಾಮೀಣ ಬಡತನವು ಹೆಚ್ಚು ತೀವ್ರವಾಗಿ ಇಳಿಕೆಯಾಗಿರುವುದು ಇದೇ ಮೊದಲಲ್ಲ. ಇದು ಈ ಹಿಂದಿನ 1977–78ರಿಂದ 1983,1903ರಿಂದ 1987–88 ಅವಧಿಗಳಲ್ಲಿಯೂ ಕಂಡು ಬಂದಿತ್ತು. ಇನ್ನೂ ಹೇಳಬೇಕೆಂದರೆ ಗ್ರಾಮ–ನಗರದಲ್ಲಿನ ಬಡತನದ ಅಂತರವು ಕಡಿಮೆಯಾಗುತ್ತಿದೆ. ಅಂದರೆ ನಗರದ ಮತ್ತು ಗ್ರಾಮದ ಒಟ್ಟು ಜನಸಳಖ್ಯೆಯಲ್ಲಿ ಬಡವರ ಸಂಖ್ಯೆಯು ಹಿಂದೆಂದಿಗಿಂತಲೂ ಹೆಚ್ಚುಕಮ್ಮಿ ಒಂದೇ ಇರುತ್ತದೆ. 2004–05 ರ ಅವಧಿಯಲ್ಲಿ  ಸ್ವಲ್ಪಮಟ್ಟಿನ ವ್ಯತ್ಯಾಸವಿರುತ್ತದಷ್ಟೆ. (2.6ರಷ್ಟು ಅಂಶಗಳು) ಈ ವರ್ಷದಲ್ಲಿ ಭಾರತದ ನಗರ ಮತ್ತು ಗ್ರಾಮಪ್ರದೇಶಗಳಲ್ಲಿನ ಬಡತನದ ಮಟ್ಟ ಅನುಕ್ರಮವಾಗಿ ಶೇಕಡ 25.7 ಮತ್ತು ಶೆ.28.3 ಇತ್ತು. 1993–94ರ ಅವಧಿಯಲ್ಲಿ ಶೇ.4.9ರಷ್ಟು ಅಂಶಗಳ ಅಂತರದಲ್ಲಿ ಅನುಕ್ರಮವಾಗಿ ಶೇ. 32.4 ಮತ್ತು ಶೆ. 37.3 ರ ಅನುಪಾತದಲ್ಲಿತ್ತು.

**1.4** ಭಾರತದಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿನ ಸರಾಸರಿ ಬಡತನದ ಮಟ್ಟಗಳಲ್ಲಿನ ಅಂತರವು ಅಷ್ಟೇನು ಹೆಚ್ಚಲ್ಲದಿದ್ದರೂ ಕೆಲವೆಡೆ ಇದು ಎದ್ದು ಕಾಣುತ್ತದೆ. ಉದಾಹರಣೆಗೆ ಜಾರ್ಖಂಡ್ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಬಡತನ ರೇಖೆಯ ಕೆಳಗೆ ಬದುಕುವ ಮಂದಿಯ ಸಂಖ್ಯೆ ಶೇ. 46.3 ರಷ್ಟಿದ್ದರೆ ನಗರ ಪ್ರದೇಶಗಳಲ್ಲಿ ಶೇ20.2 ಇರುತ್ತದೆ. ಮಧ್ಯಪ್ರದೇಶದ ಗ್ರಾಮಪ್ರದೇಶಗಳಲ್ಲಿ ಬಡತನವು ನಗರಗಳಿಗೆ ಹೋಲಿಸಿಕೊಂಡರೆ ಶೇ.36.9:ಶೇ42.1ರ ಅನುಪಾತದಲ್ಲಿರುತ್ತದೆ. ನಿಜ ಹೇಳಬೇಕೆಂದರೆ 1993–94 ಮತ್ತು 2004–05 ರ ಅವಧಿಯಲ್ಲಿ ಗ್ರಾಮಪ್ರದೇಶಗಳಲ್ಲಿನ ಬಡವರ ಸಂಖ್ಯೆಯು ಪೂರ್ಣಾರ್ಥದಲ್ಲಿವಾಸ್ತವವಾಗಿ ಕುಸಿದಿದೆ.ನಗರಪ್ರದೇಶಗಳಲ್ಲಿ ಹೆಚ್ಚುಕಮ್ಮಿ 45ಲಕ್ಷದಷ್ಟು ಬಡವರ ಸಂಖ್ಯೆಯು ಹೆಚ್ಚಾಗಿರುತ್ತದೆ. ಎಂ ಆರ್ ಪಿ ಆಧಾರಿತ ಅಂದಾಜುಗಳ ಪ್ರಕಾರ 2004–05 ರಲ್ಲಿ ಮಹಾರಾಷ್ಟ್ರ, ತಮಿಳುನಾಡು, ಆಂದ್ರಪ್ರದೇಶ ಮತ್ತು ಕರ್ನಾಟಕ ಒಳಗೊಂಡಂತೆ ಏಳು ರಾಜ್ಯಗಳಲ್ಲಿ ಗ್ರಾಮೀಣ ಪ್ರದೇಶಗಳ ಬಡತನ ರೇಖೆಯ ಕೆಳಗಿರುವವರ ಸಂಖ್ಯೆಗೆ ಹೋಲಿಸಿಕೊಂಡರೆ ನಗರಗಳಲ್ಲಿನ ಬಡವರ ಸಂಖ್ಯೆಯು ಹೆಚ್ಚಾಗಿರುತ್ತದೆ.

**1.5** ಭಾರತದಂತಹ ದೊಡ್ಡಮತ್ತು ವೈವಿಧ್ಯತೆಯುಳ್ಳ ದೇಶದಲ್ಲಿ ಒಟ್ಟು ಮೊತ್ತಗಳು ಬಡತನ ರೇಖೆಯ ಕೆಳಗೆ ಬದುಕುವವರ ಜನರ ಪ್ರಮಾಣವು ರಾಜ್ಯದಿಂದ ರಾಜ್ಯಕ್ಕೆ ವ್ಯಾಪಕ ವ್ಯತ್ಯಾಸ ಹೊಂದುತ್ತದೆಂಬ ಸಂಗತಿಯನ್ನು ಮರೆಮಾಚುತ್ತದೆ. ಯುಆರ್‌ಪಿ ಆಧಾರಿತ ಅಂದಾಜುಗಳ ಪ್ರಕಾರ ಬಡತನದ ಅನುಪಾತವು ಜಮ್ಮು ಕಾಶ್ಮೀರದಲ್ಲಿ ಅತ್ಯಂತ ಕಡಿಮೆ ಇರುತ್ತದೆ. (ಇಲ್ಲಿ ಶೇ.5.4ರಷ್ಟು ಮಾತ್ರ ಬಡವರಿರುತ್ತಾರೆ). ಶೇ. 20ಕ್ಕಿಂತ ಕಡಿಮೆ ಅನುಪಾತ ಹೊಂದಿರುವ ದೊಡ್ಡ ರಾಜ್ಯಗಳೆಂದರೆ ಆಂಧ್ರಪ್ರದೇಶ (ಶೇ.15.8) ಅಸ್ಸಾಂ ಶೇ19.7) ಗುಜರಾತ್ (ಶೇ. 16.8) ಹರಿಯಾಣ (ಶೇ. 14) ಹಿಮಾಚಲ ಪ್ರದೇಶ (ಶೇ.10) ಕೇರಳ (ಶೇ. 15) ಮತ್ತು ಪಂಜಾಬ್ (ಶೇ.8.4) ಅತ್ಯಂತ ಬಡರಾಜ್ಯವೆಂಬ ಅಪಕೀರ್ತಿಯುಳ್ಳ ರಾಜ್ಯವೆಂದರೆ ಒರಿಸ್ಸಾ. ಇಲ್ಲಿ ಶೇ. 46.4 ರಷ್ಟು ಮಂದಿ ಬಡವರಿರುತ್ತಾರೆ. ಜನಸಂಖ್ಯೆಯ ಮೂರನೇ ಒಂದು ಭಾಗಕಿಂತ ಹೆಚ್ಚು ಬಡವರ ಸಂಖ್ಯೆಯಿರುವ ರಾಜ್ಯಗಳೆಂದರೆ ಮಧ್ಯಪ್ರದೇಶ (ಶೇ,38.3) ಉತ್ತರ ಖಂಡ (ಶೇ. 39.6) ಜಾರ್ಖಂಡ್ (ಶೇ. 40.3) ಚತ್ತೀಸ್‌ಘಡ (ಶೇ. 40.9) ಮತ್ತು ಬಿಹಾರ (ಶೇ. 41.4). ಉತ್ತರ ಪ್ರದೇಶವು ಶೇ. 32.8 ರಷ್ಟು ಬಡತನ ಅನುಪಾತವನ್ನು ಹೊಂದಿದೆ. ಆರ್ಥಿಕ ದಾರಿದ್ರ್ಯವು ಆರೋಗ್ಯ ಮತ್ತು ಶೈಕ್ಷಣಿಕ ದಾರಿದ್ರ್ಯಕ್ಕೆ ತಳುಕು ಹಾಕಿಕೊಂಡಿದೆ. ಇವು ಮೂರೂ ಆಯಾಮಗಳು ಒಟ್ಟುಗೂಡಿ 'ಮಾನವ ಬಡತನ ಸೂಚಕ' (ಮಾ ಬ ಸೂ) ಎಂದು ಕರೆಯಲ್ಪಡುತ್ತದೆ. 2001ರ ರಾಷ್ಟ್ರೀಯ ಮಾನವಾಭಿವೃದ್ಧಿ ವರದಿಯ ಪ್ರಕಾರ ಭಾರತದಲ್ಲಿ ಬಡತನ ಸೂಚಕವು ಎಂಬತ್ತರ ಆರಂಭದಲ್ಲಿ ದ್ದ ಶೇ. 47ರಿಂದ ತೊಂಬತ್ತರ ಆರಂಭದ ದಶಕದಲ್ಲಿ ಶೇ. 39ಕ್ಕೆ ತಗ್ಗಿರುವುದು ತೋರಿಸುತ್ತದೆ. ಆದಾಗ್ಯೂ ಮಾನವ ಬಡತನವು ರಾಜ್ಯದಿಂದ ರಾಜ್ಯಕ್ಕೆ ಇರುವ ವ್ಯತ್ಯಾಸವು

ಎದ್ದು ಕಾಣುತ್ತದೆ. ಎಂಬತ್ತರ ದಶಕದಾರಂಭದಲ್ಲಿ ಅತಿ ಕೆಟ್ಟ ರಾಜ್ಯಗಳಾದ ಒರಿಸ್ಸಾ,ಬಿಹಾರ,ಅರುಣಾಚಲ ಪ್ರದೇಶ,ಅಸ್ಸಾಂ ಮತ್ತು ಉತ್ತರ ಪ್ರದೇಶಗಳಲ್ಲಿ ಇದು ಶೇ. 55–60ರ ವ್ಯಾಪ್ತಿಯಲ್ಲಿದ್ದು ಸ್ವಲ್ಪ ಉತ್ತಮ ರಾಜ್ಯಗಳೆನಿಸುವ ಕೇರಳ ಪಂಜಾಬ್ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಇದು ಶೇ. 32–35ರ ವ್ಯಾಪ್ತಿಯಲ್ಲಿತ್ತು. ಎಲ್ಲ ರಾಜ್ಯಗಳಲ್ಲಿಯೂ ತೊಂಬತ್ತರ ದಶಕಾರಂಭದಲ್ಲಿ ಮಾನವ ಬಡತನ ಸೂಚಿಯು ಇಳಿಕೆಯಾಗಿತ್ತು. ಆದಾಗ್ಯೂ ವಿಭಿನ್ನ ರಾಜ್ಯಗಳಲ್ಲಿನ ಸ್ಥಿತಿಗತಿಯು ಈ ಹಿಂದಿನಂತೆಯೇ ಇತ್ತು. ಹಿಮಾಚಲ ಪ್ರದೇಶ, ಜಮ್ಮು ಮತ್ತು ಕಾಶ್ಮೀರ, ಕರ್ನಾಟಕ, ತಮಿಳುನಾಡು ಮತ್ತು ಕೇರಳಗಳಲ್ಲಿ ಇಳಿಕೆಯು ಗಣನೀಯವಾಗಿತ್ತು. ಬಿಹಾರ, ಉತ್ತರ ಪ್ರದಾಶ ಮತ್ತು ರಾಜಾಸ್ಥಾನಗಳಲ್ಲಿ ಇಳಿಕೆಯು ಅಲ್ಪವಾಗಿತ್ತು.




**ರಾಜ್ಯಗಳ ಬಡತನ ಮಟ್ಟವನ್ನು ಅಂದಾಜಿಸುವ ಪ್ರಮುಖ ಲಕ್ಷಣಗಳು**

1. ಅಸ್ಸಾಂನ ಬಡತನ ಅನುಪಾತವನ್ನು ಸಿಕ್ಕಿಂ, ಅರುಣಾಚಲ ಪ್ರದೇಶ, ಮೇಘಾಲಯ,ಮಿಝೋರಾಂ, ಮಣಿಪುರ, ನಾಗಾಲ್ಯಾಂಡ್ ಮತ್ತು ತ್ರಿಪುರಗಳಿಗೆ ಬಳಸಲಾಗಿದೆ.
2. ತಮಿಳುನಾಡಿನ ಬಡತನ ಅನುಪಾತವನ್ನು ಪಾಂಡಿಚೆರಿ ಮತ್ತು ಅಂಡಮಾನ್–ನಿಕೋಬಾರ್ ದ್ವೀಪಗಳಿಗೆ ಬಳಸಲಾಗಿದೆ.
3. ಕೇರಳದ ಬಡತನ ಅನುಪಾತವನ್ನು ಲಕ್ಷದ್ವೀಪಕ್ಕೂ, ಗೋವಾದನ್ನು ಡಾಮನ್ ಮತ್ತು ದಿಯೂಗೂ ಬಳಸಲಾಗಿದೆ.
4. ಮಹಾರಾಷ್ಟ್ರದ ಬಡತನ ರೇಖೆಯನ್ನು ಮತ್ತು ಗೋವಾದ ವೆಚ್ಚದ ವಿತರಣೆಯನ್ನು ಗೋವಾದ ಬಡತನ ಅನುಪಾತದ ಅಂದಾಜಿಗೆ ಬಳಸಲಾಗಿದೆ.
5. ಪಂಜಾಬಿನ ನಗರ ಬಡತನ ಅನುಪಾತವನ್ನು ಚಂಡೀಘಡದ ಗ್ರಾಮೀಣ ಮತ್ತು ನಗರದ ಬಡತನಕ್ಕೂ ಬಳಸಲಾಗಿದೆ.
6. ಮಹಾರಾಷ್ಟ್ರದ ಬಡತನ ರೇಖೆಯನ್ನು ಮತ್ತು ದಾದ್ರಾ ಮತ್ತು ನಗರ್ ಹವೇಲಿಯ ವೆಚ್ಚ ವಿತರಣೆಯನ್ನು ದಾದ್ರಾ ಮತ್ತು ನಗರ್ ಹವೇಲಿಯ ಬಡತನ ಅನುಪಾತವನ್ನು ಅಂದಾಜಿಸಲು ಬಳಸಲಾಗಿದೆ; ಹಿಮಾಚಲ ಪ್ರದೇಶದ ಬಡತನ ಅನುಪಾತವನ್ನು ಜಮ್ಮು ಮತ್ತು ಕಾಶ್ಮೀರಕ್ಕೆ ಬಳಸಲಾಗಿದೆ.
7. ರಾಜಾಸ್ಥಾನದ ನಗರ ಬಡತನವನ್ನು ತಾತ್ಕಾಲಿಕವೆಂದು ಪರಿಗಣಿಸಬಹುದು.
8. ಬಡತನ ರೇಖೆ ಎಂದರೆ ತಲವಾರು, ತಲಾಮಾಸಿಕ ರೂಪಾಯಿಗಳಲ್ಲಿ ಲೆಕ್ಕ ಹಾಕಿದೆ. ಒಂದು ಲಕ್ಷವೆಂದರೆ 100000.

## ಕೋಷ್ಟಕ. 1.2 : ಸೂಚಕ ಸಂ. 1ಎ

### ಯು ಆರ್ ಪಿ ಆಧಾರಿತ ಅಂದಾಜುಗಳ ಮೇರೆಗೆ ಬಡತನ ರೇಖೆಯ ಕೆಳಗಿರುವ ಜನ ಸಂಖ್ಯೆಯ ಪ್ರಮಾಣ

| | | 1987–88 | | | 1993–94 | | | 2004–05 | |
|---|---|---|---|---|---|---|---|---|---|
| ರಾಜ್ಯಗಳು / ಕೇಂ.ಶಾಪ್ರ | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ | ಒಟ್ಟು |
| ಆಂಧ್ರ ಪ್ರದೇಶ | 20.92 | 40.11 | 25.86 | 15.20 | 38.33 | 22.19 | 11.20 | 28.00 | 15.80 |
| ಅರುಣಾಚಲ ಪ್ರದೇಶ | 39.35 | 9.94 | 36.22 | 45.01 | 7.73 | 39.35 | 22.30 | 3.30 | 17.60 |
| ಅಸ್ಸಾಂ | 39.35 | 9.54 | 36.21 | 45.01 | 7.73 | 40.86 | 22.30 | 3.30 | 19.70 |
| ಬಿಹಾರ್ | 52.63 | 48.73 | 52.13 | 58.31 | 34.50 | 54.96 | 42.10 | 34.60 | 41.40 |
| ಚತ್ತೀಸ್‌ಘಡ್ | | | | | | | 40.80 | 41.20 | 40.90 |
| ದೆಹಲಿ | 1.29 | 13.56 | 12.41 | 1.90 | 16.03 | 14.69 | 6.90 | 15.20 | 14.70 |
| ಗೋವ | 17.64 | 35.48 | 24.52 | 5.34 | 27.03 | 14.92 | 5.40 | 21.30 | 13.8 |
| ಗುಜರಾತ್ | 28.67 | 37.26 | 31.54 | 22.18 | 27.89 | 24.21 | 19.10 | 13.00 | 16.80 |
| ಹರಿಯಾಣ | 16.22 | 17.99 | 16.64 | 28.02 | 16.38 | 25.05 | 13.60 | 15.10 | 14.00 |
| ಹಿಮಾಚಲ ಪ್ರದೇಶ | 16.28 | 6.29 | 15.45 | 30.34 | 9.18 | 28.44 | 10.70 | 3.40 | 10.00 |
| ಜಮ್ಮು ಮತ್ತು ಕಾಶ್ಮೀರ | 25.70 | 17.47 | 23.82 | 30.34 | 9.18 | 25.17 | 4.60 | 7.90 | 5.40 |
| ಜಾರ್ಖಂಡ್ | | | | | | | 46.30 | 20.20 | 40.30 |
| ಕರ್ನಾಟಕ | 35.82 | 48.42 | 37.53 | 29.88 | 40.14 | 33.16 | 20.80 | 32.60 | 25.00 |
| ಕೇರಳ | 29.10 | 40.33 | 31.79 | 25.76 | 24.55 | 25.43 | 13.20 | 20.20 | 15.00 |
| ಮಧ್ಯಪ್ರದೇಶ | 41.92 | 47.09 | 43.07 | 40.64 | 48.38 | 42.52 | 36.90 | 42.10 | 38.30 |
| ಮಹಾರಾಷ್ಟ್ರ | 40.78 | 39.78 | 40.41 | 37.93 | 35.15 | 36.86 | 29.60 | 32.20 | 30.70 |
| ಮಣೀಪುರ | 39.35 | 9.94 | 31.35 | 45.01 | 7.73 | 33.78 | 22.30 | 3.30 | 17.30 |
| ಮೇಘಾಲಯ | 39.35 | 9.94 | 33.92 | 45.01 | 7.73 | 37.92 | 22.30 | 3.30 | 18.50 |
| ಮಿಝೋರಾಂ | 39.35 | 9.94 | 27.52 | 54.01 | 7.73 | 25.66 | 22.30 | 3.30 | 12.60 |
| ನಾಗಾಲ್ಯಾಂಡ್ | 39.35 | 9.94 | 34.43 | 45.01 | 7.73 | 37.92 | 22.30 | 3.30 | 19.00 |
| ಒರಿಸ್ಸಾ | 57.64 | 41.63 | 55.58 | 49.72 | 41.64 | 48.56 | 46.80 | 44.30 | 46.40 |
| ಪಂಜಾಬ್ | 12.60 | 14.67 | 13.20 | 11.95 | 11.35 | 11.77 | 9.10 | 7.10 | 8.40 |
| ರಾಜಾಸ್ಥಾನ್ | 33.21 | 41.92 | 35.15 | 26.46 | 30.49 | 27.41 | 18.70 | 32.90 | 22.10 |
| ಸಿಕ್ಕಿಂ | 39.35 | 9.94 | 36.06 | 45.01 | 7.73 | 41.43 | 22.30 | 3.30 | 20.10 |
| ತಮಿಳುನಾಡು | 45.80 | 38.64 | 43.39 | 32.48 | 39.77 | 35.03 | 22.80 | 22.20 | 22.50 |
| ತ್ರಿಪುರ | 39.35 | 9.94 | 35.23 | 45.01 | 7.73 | 39.01 | 22.30 | 3.30 | 18.90 |
| ಉತ್ತರ ಪ್ರದೇಶ | 41.10 | 42.96 | 41.46 | 42.28 | 35.39 | 40.85 | 33.40 | 30.60 | 32.80 |
| ಉತ್ತರೆ ಖಂಡ್ | | | | | | | 40.80 | 36.50 | 39.60 |
| ಪಶ್ಚಿಮ ಬಂಗಾಳ | 48.30 | 35.08 | 44.72 | 40.80 | 22.41 | 35.66 | 28.50 | 14.80 | 24.70 |
| ಅಡಮಾನ್-ನಿಕೋಬಾರ್ ದ್ವೀಪ | 45.80 | 38.64 | 43.89 | 32.46 | 39.77 | 34.47 | 22.90 | 22.20 | 22.60 |
| ಚಂಡೀಘರ್ | 14.67 | 14.67 | 14.67 | 11.35 | 11.35 | 11.35 | 7.10 | 7.10 | 7.10 |

| | | | | | | | | | |
|---|---|---|---|---|---|---|---|---|---|
| ದಾದ್ರಾ ಮತ್ತು ನಗರ್ ಹವೇಲಿ | 67.11 | | 67.11 | 51.95 | 39.93 | 50.84 | 39.80 | 19.10 | 33.20 |
| ದಾಮನ್ ಮತ್ತು ದಿಯು | | | | 5.34 | 27.03 | 15.80 | 5.40 | 21.20 | 10.50 |
| ಲಕ್ಷ ದ್ವೀಪ | 29.10 | 40.33 | 34.95 | 25.76 | 24.55 | 25.04 | 13.30 | 20.20 | 15.00 |
| ಪಾಂಡಿಚರಿ | 45.80 | 38.64 | 41.46 | 32.48 | 39.77 | 37.40 | 22.90 | 22.20 | 22.40 |
| ಸಣ್ಣ ರಾಜ್ಯಗಳುಮತ್ತು ಕೇಶಾಪ್ರ | | | | | | | | | |
| ಭಾರತ | 39.09 | 38.20 | 38.86 | 37.27 | 32.36 | 35.97 | 28.30 | 25.70 | 27.50 |

(ಮೂಲ: ಯೋಜನಾ ಆಯೋಗ, ಭಾರತ ಸರ್ಕಾರ)

## ಅತೀ ಬಡತನ ಮತ್ತು ಹಸಿವಿನ ನಿರ್ಮೂಲನ

### ಕೋಷ್ಟಕ– 1.3 : ಸೂಚಕ ಸಂ. 1ಎ

### ಎಂ ಆರ್ ಪಿ ಆಧಾರಿತ ಅಂದಾಜುಗಳ ಮೇರೆಗೆ ಬಡತನ ರೇಖೆಯ ಕೆಳಗಿನ ಜನಸಂಖ್ಯೆಯ ಪ್ರಮಾಣ

| | 1999–2000 | | | 2004–2005 | | |
|---|---|---|---|---|---|---|
| ರಾಜ್ಯಗಳು / ಕೇಂ.ಶಾಪ್ರ | ಗ್ರಾಮೀಣ | ನಗರ | ಒಟ್ಟು | ಗ್ರಾಮೀಣ | ನಗರ | ಒಟ್ಟು |
| ಆಂದ್ರ ಪ್ರದೇಶ | 11.05 | 26.63 | 15.77 | 7.50 | 20.70 | 11.10 |
| ಅರುಣಾಚಲ ಪ್ರದೇಶ | 40.04 | 7.47 | 33.47 | 17.00 | 2.40 | 13.40 |
| ಅಸ್ಸಾಂ | 40.04 | 7.47 | 36.09 | 17.00 | 2.40 | 15.00 |
| ಬಿಹಾರ್ | 44.30 | 32.91 | 42.60 | 32.90 | 28.90 | 32.50 |
| ಚತ್ತೀಸ್‌ಘಡ್ | | | | 31.20 | 34.70 | 32.00 |
| ದೆಹಲಿ | 0.40 | 9.42 | 8.23 | 0.10 | 10.80 | 10.20 |
| ಗೋವ | 1.35 | 7.52 | 4.40 | 1.90 | 20.90 | 12.00 |
| ಗುಜರಾತ್ | 13.17 | 15.59 | 14.07 | 13.90 | 10.10 | 12.50 |
| ಹರಿಯಾಣ | 8.27 | 9.99 | 8.74 | 9.20 | 11.30 | 9.90 |
| ಹಿಮಾಚಲ ಪ್ರದೇಶ | 7.94 | 4.63 | 7.63 | 7.20 | 2.60 | 6.70 |
| ಜಮ್ಮು ಮತ್ತು ಕಾಶ್ಮೀರ | 3.97 | 1.98 | 3.48 | 2.70 | 8.50 | 4.20 |
| ಜಾರ್ಖಂಡ್ | | | | 40.20 | 16.30 | 34.80 |
| ಕರ್ನಾಟಕ | 17.38 | 25.25 | 20.04 | 12.00 | 27.20 | 17.40 |
| ಕೇರಳ | 9.38 | 20.27 | 12.72 | 9.60 | 16.40 | 11.40 |
| ಮಧ್ಯಪ್ರದೇಶ | 37.06 | 38.44 | 37.43 | 29.80 | 39.30 | 32.40 |
| ಮಹಾರಾಷ್ಟ್ರ | 23.72 | 26.81 | 25.02 | 22.20 | 29.00 | 25.20 |
| ಮಣೀಪುರ | 40.04 | 7.47 | 28.54 | 17.00 | 2.40 | 14.10 |
| ಮೇಘಾಲಯ | 40.04 | 7.47 | 33.87 | 17.00 | 2.40 | 13.20 |

| | | | | | | |
|---|---|---|---|---|---|---|
| ಮಿಜೋರರಾಂ | 40.04 | 7.47 | 19.47 | 17.00 | 2.40 | 14.10 |
| ನಾಗಾಲ್ಯಾಂಡ್ | 40.04 | 7.47 | 32.67 | 17.00 | 2.40 | 9.50 |
| ಒರಿಸ್ಸಾ | 48.01 | 42.83 | 47.15 | 39.80 | 40.30 | 39.90 |
| ಪಂಜಾಬ್ | 6.35 | 5.75 | 6.16 | 5.90 | 3.80 | 5.20 |
| ರಾಜಾಸ್ಥಾನ್ | 13.74 | 19.85 | 15.28 | 14.30 | 28.10 | 17.50 |
| ಸಿಕ್ಕಿಂ | 40.04 | 7.47 | 36.55 | 17.00 | 2.40 | 14.40 |
| ತಮಿಳುನಾಡು | 20.55 | 22.11 | 21.12 | 16.90 | 18.80 | 17.80 |
| ತ್ರಿಪುರ | 40.04 | 7.47 | 34.44 | 17.00 | 2.40 | 14.40 |
| ಉತ್ತರ ಪ್ರದೇಶ | 31.22 | 30.89 | 31.15 | 25.30 | 26.30 | 25.50 |
| ಉತ್ತರೆ ಖಂಡ್ | | | | 31.70 | 32.00 | 31.80 |
| ಪಶ್ಚಿಮ ಬಂಗಾಳ | 31.85 | 14.86 | 27.02 | 24.20 | 11.20 | 20.60 |
| ಅಡಮಾನ್ – ನಿಕೋಬಾರ್ ದ್ವೀಪ | 20.55 | 22.11 | 20.99 | 16.90 | 18.80 | 17.60 |
| ಚಂಡೀಘರ್ | 5.75 | 5.75 | 5.75 | 3.80 | 3.80 | 3.80 |
| ದಾದ್ರಾ ಮತ್ತು ನಗರ್ ಹವೇಲಿ | 17.57 | 13.52 | 17.14 | 36.00 | 19.20 | 30.60 |
| ದಾಮನ್ ಮತ್ತು ದಿಯು | 1.35 | 7.52 | 4.44 | 1.90 | 20.80 | 8.00 |
| ಲಕ್ಷ ದ್ವೀಪ | 9.38 | 20.27 | 15.60 | 9.60 | 16.40 | 12.30 |
| ಪಾಂಡಿಚರಿ | 20.55 | 22.11 | 21.67 | 16.90 | 18.80 | 15.20 |
| ಭಾರತ | 27.09 | 23.62 | 26.10 | 21.80 | 21.70 | 21.80 |

(ಮೂಲ :ಯೋಜನಾ ಆಯೋಗ ಭಾರತ ಸರ್ಕಾರ)

**1.7** ಉಪರಾಷ್ಟ್ರ ಮಟ್ಟದಲ್ಲಿ ಬಡತನ ರೇಖೆಗಳನ್ನು ಗುರುತಿಸುವ ಕಾರ್ಯವನ್ನು ಮಾಡಿರುವ ಅತಿ ಕೆಲವೇ ದೇಶಗಳಲ್ಲಿ ಭಾರತವೂ ಸಹ ಒಂದೆಂಬುದನ್ನು ಎತ್ತಿ ಹೇಳುವ ಅಗತ್ಯವಿದೆ. ದೇಶದ ವಿವಿಧ ರಾಜ್ಯಗಳಲ್ಲಿನ ಬಡತನ ಅನುಪಾತವನ್ನು ಅಂದಾಜು ಮಾಡಲಾಗಿದೆ ಮತ್ತು ನಿರ್ದಿಷ್ಟ ರಾಜ್ಯಗಳಲ್ಲಿ ಗ್ರಾಮೀಣ ಮತ್ತು ನಗರ ಪ್ರದೇಶಗಳಿಗೆ ಪ್ರತ್ಯೇಕವಾದ ಬಡತನ ರೇಖೆಗಳನ್ನು ಹೊಂದಿದೆ. ಇಂತಹ ನಿರ್ದಿಷ್ಟ ರಾಜ್ಯ ಬಡತನ ರೇಖೆಗಳು ಮೂಲತಃ ದೇಶದ ವಿವಿಧ ರಾಜ್ಯಗಳಲ್ಲಿನ ಜೀವನ ವೆಚ್ಚದಲ್ಲಿನ ವ್ಯತ್ಯಾಸಗಳನ್ನು ಪ್ರತಿಬಿಂಬಿಸುತ್ತದೆ. ಇದರ ಫಲಿತವಾಗಿ ದೇಶದಲ್ಲಿನ ರಾಜ್ಯಗಳ ನಡುವೆಯೇ ಹಾಗು ಗ್ರಾಮೀಣ ಮತ್ತು ನಗರ ಪ್ರದೇಶಗಳ ನಡುವೆಯೇ ಬಡತನ ರೇಖೆಗಳಲ್ಲಿ ವ್ಯತ್ಯಾಸವಿರುವುದು ಕಂಡುಬರುತ್ತದೆ. ಇದಕ್ಕೆ ಮುಖ್ಯ ಕಾರಣ ರಾಜ್ಯ ರಾಜ್ಯಗಳಲ್ಲಿರುವ ಮತ್ತು ಗ್ರಾಮ ಮತ್ತು ನಗರಗಳಲ್ಲಿರುವ ಬೆಲೆ ವ್ಯತ್ಯಾಸಗಳು. 2004–05 ನೇ ಸಾಲಿಗೆ ನಗರ ಪ್ರದೇಶಗಳಲ್ಲಿ ಅಖಿಲ ಭಾರತ ರೇಖೆಯು ಗ್ರಾಮೀಣ ಪ್ರದೇಶಗಳಿಗಿಂತ ಶೇ 5ರಷ್ಟು ಅಧಿಕವಿರುತ್ತದೆ. 2004–05ನೇ ಸಾಲಿಗೆ ಗ್ರಾಮೀಣ ಪ್ರದೇಶಗಳಿಗೆ ಸಂಬಂಧಿಸಿದಂತೆ ಬಡತನ ರೇಖೆಯು ಉತ್ತರಖಂಡದಲ್ಲಿ ಅತ್ಯಂತ ಹೆಚ್ಚಿರುತ್ತದೆ. ಇದು ಅತ್ಯಂತ ಕಡಿಮೆ ಬಡತನ ರೇಖೆಯಿರುವ ಆಂಧ್ರಪ್ರದೇಶಕಿಂತ ಶೇ.63ರಷ್ಟು ಅಧಿಕವಿರುತ್ತದೆ. ಭಾರತ ಒಕ್ಕೂಟದ ಎಲ್ಲ ರಾಜ್ಯಗಳಲ್ಲಿಯೂ ಲಭ್ಯವಿರುವ ವಸ್ತುಗಳು, ಸೇವೆಗಳು ಒಂದೇ ಆಗಿದ್ದರೂ ಅತಿ ಹೆಚ್ಚು ಬೆಲೆಯಿರುವ ರಾಜ್ಯದಲ್ಲಿನ ಬಡತನ ರೇಖೆಯು ಅತಿ ಕಡಿಮೆ ಬೆಲೆಗಳಿರುವ ರಾಜ್ಯಕ್ಕಿಂತಲೂ ಶೇ 57ರಷ್ಟು ಅಧಿಕವಿರುತ್ತದೆ.

**1.8** ಬಡತನ ರೇಖೆಗಳಲ್ಲಿನ ಈ ಪ್ರಾದೇಶಿಕ ವ್ಯತ್ಯಾಸಗಳ ಪ್ರಾಮುಖ್ಯಕ್ಕೆ ಅತಿಯಾದ ಒತ್ತುಕೊಡುವ ಅವಶ್ಯಕತೆಯಿಲ್ಲದಿರಬಹುದು.ದೇಶಕ್ಕೆ ಒಟ್ಟಾರೆಯಾಗಿ ಒಂದು ಬಡತನ ರೇಖೆಯನ್ನು ಅನ್ವಯಿಸಿದಲ್ಲಿ ನಗರ ಪ್ರದೇಶಗಳಲ್ಲಿನ ಬಡತನ ಮಟ್ಟಗಳನ್ನು ಅಂದಾಜು ಮಾಡುವುದರಲ್ಲಿ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅಂತಹ ಮಟ್ಟಗಳನ್ನು ಮೇಲಂದಾಜು ಮಾಡಿದಂತಾಗುತ್ತದೆ. ಅಲ್ಲದೆ ವಿವಿಧ ರಾಜ್ಯಗಳಲ್ಲಿನ ಬಡತನದ ಮಾಪನವನ್ನು ವಿಕೃತಗೊಳಿಸಿದಂತಾಗುತ್ತದೆ. ನೀತಿಯ ದೃಷ್ಟಿಯಿಂದ ಇಲ್ಲಿ ಹೆಚ್ಚಿನ ಉದ್ದೇಶ ಸಾಧಿಸಿದಂತಾಗುವುದಿಲ್ಲ. ಅಲ್ಲದೆ ವಾಸ್ತವ ಸಂಗತಿ ಏನೆಂದರೆ ನೀತಿಯ ಕಾರ್ಯತಂತ್ರಗಳ ಅಳವಡಿಕೆಯಲ್ಲಿ ಅತಿಯಾದ ಲೋಪಗಳು ಕಾಣಿಸಿಕೊಳ್ಳಬಹುದು. ಬಡತನದಲ್ಲಿ ಬದುಕುವವರ ಜನರ ಪ್ರಮಾಣವನ್ನು ಅಂದಾಜಿಸಲು ಅಮೇರಿಕೆಯ ತಲಾ ದಿನವೊಂದಕ್ಕೆ 1 ಡಾಲರ್ (ಪಿಪಿಪಿ) ಎಂಬ ಏಕರೀತಿಯ ಅಂತರಾಷ್ಟ್ರೀಯ ಬಡತನ ರೇಖೆಯನ್ನು ಅನ್ವಯಿಸಿದಲ್ಲಿ ಚಿತ್ರವು ಮತ್ತೂ ವಿರೂಪಗೊಳ್ಳುತ್ತದೆ.

**1.9** ಯೋಜನಾ ಆಯೋಗವು ಹತ್ತನೆ ಯೋಜನೆಯಲ್ಲಿ (2002–07) 2007ರ ವೇಳೆಗೆ ಶೇ. 5ರ ಅಂಶಗಳಷ್ಟು ಮತ್ತು 2012 ರ ವೇಳೆಗೆ ಶೇ.15ರ ಅಂಶಗಳಷ್ಟು ಬಡತನದ ಅನುಪಾತದಲ್ಲಿ ಇಳಿಕೆ ತರುವ ಗುರಿಯನ್ನು ಇರಿಸಿಕೊಂಡಿದೆ. 20076ವೇಳೆಗೆ ಒಟ್ಟಾರೆ ದೇಶದ ಬಡತನ ಅನುಪಾತವನ್ನು ಶೇ 19.3 ರಷ್ಟು ಅಂದರೆ ಗ್ರಾಮೀಣ ಭಾಗದಲ್ಲಿ ಶೇ.21.1ರಷ್ಟು ಮತ್ತು ನಗರ ಪ್ರದೇಶಗಳಲ್ಲಿ ಶೇ.15.1 ರಷ್ಟು ಬಡತನ ಅನುಪಾತವನ್ನು ಸಾಧಿಸುವ ಗುರಿಯನ್ನು ಹೊಂದಿದೆ. ಈ ಗುರಿಗಳನ್ನು 1999–2000ರ ಅಂದಾಜುಗಳನ್ನು ಪರಿಗಣಿಸಿ ಇರಿಸಿಕೊಳ್ಳಲಾಗಿದೆ. ವಾಸ್ತವ ಅಂಕಿಸಂಖ್ಯೆಗಳಲ್ಲಿ ಹೇಳುವುದಾದರೆ ಬಡವರ ಸಂಖ್ಯೆಯು 1999–2000ದಲ್ಲಿ 260 ದಶಲಕ್ಷ ಇದ್ದದ್ದು 2007ರ ವೇಳೆಗೆ 220 ದಶಲಕ್ಷಕ್ಕೆ ಇಳಿಯುತ್ತದೆ. ಇದರಲ್ಲಿ ಗ್ರಾಮೀಣ ಬಡತನ 170 ದಶಲಕ್ಷಕ್ಕೂ ನಗರ ಬಡತನ 50 ದಶಲಕ್ಷಕ್ಕೂ ಇಳಿವ ನರೀಕ್ಷೆ ಇದೆ. 2004–05ರ ಎಂ ಆರ್ ಪಿ ಆಧಾರಿತ ಅಂದಾಜುಗಳನ್ನು 1999–2000ರ ಅಂದಾಜುಗಳಿಗೆ ಹೋಲಿಕೆ ಮಾಡಿ ಹೇಳುವುದಾದರೆ ಹತ್ತನೆ ಯೋಜನೆಯ ಗುರಿಗಳು ಗ್ರಾಮೀಣ ಪ್ರದೇಶಗಳಲ್ಲಿ ಸಾಧಿತವಾಗುವುದಷ್ಟೇ ಅಲ್ಲ ಇನ್ನೂ ಉತ್ತಮಗೊಳ್ಳಬಹುದು. ನಗರ ಪ್ರದೇಶಗಳಲ್ಲಿ ಇದು ಗುರಿಯನ್ನು ಸ್ವಲ್ಪದರಲ್ಲಿಯೇ ತಪ್ಪಿಸಿಕೊಳ್ಳಬಹುದು.

**1.10** ಬಡವರಲ್ಲಿ ಕಡು ಬಡವರ ಸ್ಥಿತಿಯನ್ನು ಸುಧಾರಿಸುವುದೇ ಯೋಜನೆಯ ಉದ್ದೇಶ. ಇದ್ದಾಗ್ಯೂ ಗೊತ್ತುಪಡಿಸಿದ ಕಾಲಾವಧಿಯೊಳಗೆ ಹೆಚ್ಚು ವಂಚಿತರಾದವರು ಬಡತನ ರೇಖೆಯಿಂದ ಮೇಲೆ ಬರುವ ಸಂಭಾವ್ಯತೆ ಇಲ್ಲದಿರಬಹುದು. ಆದಾಗ್ಯೂ ಈ ವರ್ಗದ ದುಸ್ಥಿತಿಯ ನಿವಾರಣೆಯೇ ಸಾರ್ವಜನಕ ನೀತಿಯ ಕೇಂದ್ರ ಬಿಂದುವಾಗಬೇಕು. ಈ ಹಿನ್ನಲಯಲ್ಲಿಯೇ **ಬಡತನ ಅಂತರ ಅನುಪಾತವು** (ಬಅಅ) (ಪಿಜಿಆರ್) ಪ್ರಮುಖವಾಗುವುದು. ಈ ಬಅಅ ಅಥವಾ ಪಿಜಿಆರ್ ಬಡವರ ಬಳಕೆ ಪರಿಣಾಮವು ಶ್ಥಾಪಿತ ಬಡತನ ರೇಖೆಯ ಕೆಳಗೆ ಇರುವುದರ ಮಟ್ಟವನ್ನು ಪ್ರತಿಬಿಂಬಿಸುತ್ತದೆ. ಇದು ಬಡತನದ ಗಾಢತೆಯನ್ನು ಸೂಚಿಸುತ್ತದೆ. ದೇಶದ ಪಿಜಿಆರ್ 1993–94 ಮತ್ತು 2004–05ರ ಅವಧಿಯಲ್ಲಿ ಭಾರತದ ಗ್ರಾಮೀಣ ಪ್ರದೇಶಗಳಲ್ಲಿ ಶೇ8.5ರಿಂದ 5.7ಕ್ಕೂ ನಗರ ಪ್ರದೇಶಗಳಲ್ಲಿ ಶೇ 8.1ರಿಂದ 6.1ಕ್ಕೂ ಇಳಿಕೆಯಾಗಿದೆ. ಈ ಅವಧಿಯಲ್ಲಿನ ಪಿಜಿಆರ್ ನಲ್ಲಿನ ಇಳಿಕೆಯು ದೇಶದಲ್ಲಿನ ಗ್ರಾಮೀಣ ಮತ್ತು ನಗರ ಎರಡೂ ಭಾಗಗಳಲ್ಲಿ ಆರ್ಥಿಕ ಸ್ಥಿತಿಯು ಉತ್ತಮ ಮತ್ತು ಸುಧಾರಿತವಾಗುತ್ತಿರುವುದನ್ನು ಸೂಚಿಸುತ್ತದೆ. ಬಡತನ ವಿರೋಧಿ ಕಾರ್ಯಕ್ರಮಗಳು ದೇಶದಲ್ಲಿನ ಬಡತನದ ಗಾಢತೆಯನ್ನು ಮತ್ತು ತೀವ್ರತೆಯನ್ನು ಕಡಿಮೆ ಮಾಡುವುದರಲ್ಲಿ ನೆರವಾಗಿದೆ.

**1.11** ಒಟ್ಟಾರೆ ಬಳಕೆ ಪ್ರಮಾಣದಲ್ಲಿ (ಜನಸಂಖ್ಯೆಯಲ್ಲಿನ ಐದನೇ ಒಂದು ಭಾಗದ ಬಡಜನತೆಯ ಬಳಕೆ ಪ್ರಮಾಣ) ಈ ಕೋಟ್ಯಾಂತರ ಕಡು ಬಡವರ ಸಂಖ್ಯೆಯ ಪಾಲು ಗ್ರಾಮೀಣ ಪ್ರದೇಶಗಳಲ್ಲಿ ಯುಆರ್ಪಿ

ಆಧಾರದ ಮೇಲೆ ಹೇಳುವುದಾದರೆ 1993–04 ರಲ್ಲಿ ಶೇ 9.6 ಇದ್ದದ್ದು 2004–05 ರ ವೇಳೆಗೆ ಶೇ.9.5ಕ್ಕೆ ಇಳಿದಿರುತ್ತದೆ. ಇದು ನಗರ ಪ್ರದೇಶಗಳಲ್ಲಿ ಇನ್ನೂ ಅಧಿಕವಾಗಿತ್ತು ಇಲ್ಲಿಯ ಅನುಪಾತವು ಶೇ.8ರಿಂದ 7.3ಕ್ಕೆ ಇಳಿದಿರುತ್ತದೆ. ಕೋಟ್ಯಾಂತರ ಕಡು ಬಡವರ ಬಳಕೆಯ ಪ್ರಮಾಣದಲ್ಲಿನ ಈ ಇಳಿಕೆಯು ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಅಸಮತೆಗಳಿಗೆ ಒಂದು ಕಾರಣವಾಗಿರಬಹುದು.

**1.12** 61ನೇ ಸುತ್ತಿನ ರಾಷ್ಟ್ರೀಯ ಮಾದರಿ ಸರ್ವೇಕ್ಷಣದ 2004–05ನೇ ಸಾಲಿನ ಬಳಕೆದಾರರ ವೆಚ್ಚಗಳ ಮಟ್ಟ ಮತ್ತು ರೂಪುರೇಖೆ' ವರದಿಯ ಆಧಾರದ ಮೇರೆಗೆ ಗ್ರಾಮೀಣ ಜನಸಂಖ್ಯೆಯ ಶೇ.30ರಷ್ಟು ಮಂದಿಯ ತಲಾ ಮಾಸಿಕ ಬಳಕೆಯ ವೆಚ್ಚದ ಮಟ್ಟವಾದ ರೂ365ಕ್ಕಿಂತ ಕಡಿಮೆ ಇತ್ತು. ಶೇ. ಹತ್ತರಷ್ಟು ಮಂದಿತಲಾ ಮಾಸಿಕ ಬಳಕೆಯ ವೆಚ್ಚ ರೂ 270ರ ಮಟ್ಟಕಿಂತ ಕಡಿಮೆ ಇತ್ತು. ಅಖಿಲ ಭಾರತ ಮಟ್ಟದಲ್ಲಿ ಶೇ 30 ಇದ್ದು ಛತ್ತೀಸ್‌ಗಡದಲ್ಲಿ ಶೇ.55.57ರಷ್ಟು ಗ್ರಾಮೀಣ ಜನರು ತಲಾ ಮಾಸಿಕ ಬಳಕೆಯ ವೆಚ್ಚವಾದ ರೂ 365 (ದಿನವೊಂದಕ್ಕೆ ರೂ12) ಕಿಂತ ಕಡಿಮೆ ಖರ್ಚಿನಲ್ಲಿ ಬದುಕುತ್ತಿದ್ದರು. ಮಧ್ಯಪ್ರದೇಶ ,ಬಿಹಾರ ಮತ್ತು ಜಾರ್ಖಂಡ್‌ಗಳಲ್ಲಿ ಅಂತಹ ಮಂದಿಯ ಸಂಖ್ಯೆ ಶೇ 46–47 ಇತ್ತು. ಓರಿಸ್ಸಾದ ಶೇ 31ರಷ್ಟು ಮಂದಿ ಮತ್ತು ಚತ್ತೀಸ್‌ಗಢ ಮತ್ತು ಮಧ್ಯಪ್ರದೇಶಗಳಲ್ಲಿ ಶೇ20ಕ್ಕೂ ಹೆಚ್ಚು ಮಂದಿ ರೂ 270 ತಲಾ ಮಾಸಿಕ ವೆಚ್ಚದಲ್ಲಿ (ದಿನವೊಂದಕ್ಕೆ ರೂ9) ಬದುಕುತ್ತಿದ್ದಾರೆ (ಅಖಿಲ ಭಾರತ ಮಟ್ಟದಲ್ಲಿ ಇದು ಶೇ 10 ಇದೆ.

| | ಪ್ರದೇಶಗಳು | 1993 – 94 | 2004 –2005 ಯುಆರ್‌ಪಿ |
|---|---|---|---|
| ಬಡತನ ಅನುಪಾತ ಅಂತರ | ಗ್ರಾಮೀಣ – ನಗರ | 8.5<br>8.1 | 5.7<br>6.1 |
| ರಾಷ್ಟ್ರೀಯ ಬಳಕೆಯಲ್ಲಿ ಕಡು ಬಡಿ ಕೋಟೆ ವರ್ಗದ ಪಾಲು | ಗ್ರಾಮೀಣ – ನಗರ | 9.6<br>9.5 | 8.0<br>7.3 |

**1.13** ಭಾರತದ ನಗರ ಭಾಗಗಳಲ್ಲಿ ತಲಾ ಮಾಸಿಕ ಬಳಕೆಯ ವೆಚ್ಚವಾದ ರೂ580ಕ್ಕಿಂತ ಕಡಿಮೆ ವೆಚ್ಚದಲ್ಲಿ ಶೇ. 30 ಮಂದಿ ಬದುಕುತ್ತಿದ್ದರೆ. ಶೇ.10 ಮಂದಿ ತಲಾ ಮಾಸಿಕ ಬಳಕೆಯ ವೆಚ್ಚ ರೂ395ಕಿಂತ ಕಡಿಮೆ ಮಟ್ಟದಲ್ಲಿ ಬದುಕುತ್ತಿದ್ದರು. ಓರಿಸ್ಸಾ ನಗರಭಾಗದ ಶೇ>55 ಮತ್ತು ಬಿಹಾರದ ಶೇ.5ಒರಷ್ಟು ಮಂದಿ– ತಮಬವೆ ರೂ 580 ಕ್ಕಿಂತ ಕಡಿಮೆ (ದಿನವೊಂದಕ್ಕೆ ರೂ.19) ವೆಚ್ಚದಲ್ಲಿ ಬದುಕುತ್ತಿದ್ದರು. ತಮಾಬವೆ ರೂ 395ಅಂದರೆ ದಿನವೊಂದಕ್ಕೆ 13ರಂತೆ ಕೆಳಗಿನ ಮಟ್ಟದಲ್ಲಿ ಬದುಕುವ ಮಂದಿಯ ಪ್ರಮಾಣ ಬಿಹಾರದ ನಗರಗಳಲ್ಲಿ ಶೇ28 ಮತ್ತು ಓರಿಸ್ಸಾದಲ್ಲಿ ಶೇ.25 ಇತ್ತು.

**1.14** ಗ್ರಾಮೀಣ ಜನಸಂಖ್ಯೆಯಲ್ಲಿ ತಮಾಬವೆ ದ ಮೇಲಿನ ಶ್ರೇಣಿಗಳ ವಿತರಣೆಯಲ್ಲಿ ಅಂದರೆ ಹೋಲಿಕೆಯಲ್ಲಿ ಸ್ವಲ್ಪ ಸಿರಿವಂತರಾದ ಜನವರ್ಗದಲ್ಲಿ (ರೂ 690 ಮತ್ತು ರೂ 890) ಅಖಿಲ ಭಾರತದಮಟ್ಟದ ಶೇ ಕಡಾವಾರು ಅನುಕ್ರಮವಾಗಿ 80 ಮತ್ತು 90 ಇರುತ್ತದೆ. ಬೇರೆ ಮಾತಿನಲ್ಲಿ ಹೇಳುವುದಾದರೆ 2004–05ನೇ ಸಾಲಿನಲ್ಲಿ ಭಾರತದ ಗ್ರಾಮೀಣ ಜನಸಂಖ್ಯೆಯಲ್ಲಿ ಅನುಕ್ರಮವಾಗಿ ಶೇ20 ಮತ್ತು ಶೇ10ರಷ್ಟು ಮಂದಿ ತಮಾಬವೆ ರೂ 690 ಮತ್ತು 890ರ ಮಟ್ಟಗಳಲ್ಲಿ ಬದುಕುತ್ತಿದ್ದಾರೆ. ಇದೇ ಬಗೆಯಲ್ಲಿ ಇದೇ ಸಾಲಿಗೆ ನಗರ ಜನಸಂಖ್ಯೆಯಲ್ಲಿ ರೂ 1380 ಮತ್ತು ರೂ.1880 ಕ್ಕೆ ಮೇಲ್ಪಟ್ಟಂತೆ ಮಾತಬವೆ ದ ಮಟ್ಟಗಳಲ್ಲಿ ಶೇ20 ಮತ್ತು ಶೇ10ರಷ್ಟು ಮಂದಿ ಬದುಕುತ್ತಿದ್ದಾರೆ.

## ನಗರ ಪ್ರದೇಶಗಳಲ್ಲಿ ಬಡತನ ತಗ್ಗಿಸುವಿಕೆ

**1.15** ಬಹುತೇಕ ನಗರ ಬಡತನ ತಗ್ಗಿಸುವಿಕೆಯ ಕಾರ್ಯಕ್ರಮಗಳು ನಗರ ಕೊಳಗೇರಿಗಳ ಮೇಲೆ ಕೇಂದ್ರೀಕರಿಸಿದೆ. ಏಕೆಂದರೆ ಈ ಪ್ರದೇಶಗಳಲ್ಲಿ ನಗರದ ಬಹುಪಾಲು ಬಡವರು ವಾಸಮಾಡುತ್ತಾರೆ.. ಈ ಕಾರ್ಯಕ್ರಮಗಳ ಪ್ರಮುಖ ಉದ್ದೇಶವು ಮನೆ, ಮೂಲಸೌಕರ್ಯಗಳು ಮತ್ತು ಅವರಿಗೆ ಉದ್ಯೋಗಾವಕಾಶಗಳನ್ನು ಒದಗಿಸುವುದಾಗಿರುತ್ತದೆ.

## ಜವಹರಲಾಲ್ ನೆಹರು ರಾಷ್ಟ್ರೀಯ ಪುನರ್ನವೀಕರಣ ಅಭಿಯಾನ

**1.16** ಭಾರತದಲ್ಲಿ ಕೊಳೆಗೇರಿಗಳಲ್ಲಿ ವಾಸಮಾಡುತ್ತಿರುವವರ ಸಂಖ್ಯೆ ಹೆಚ್ಚುತ್ತ ಹೋಗುತ್ತಿರುವುದರಿಂದ ನಗರ ಮೂಲ ಸೌಕರ್ಯಗಳ ನಮೇಲೆ ಮತ್ತು ಮೂಲ ಅಡಿರಚನೆಯ ಮೇಲೆ ತೀವ್ರ ಇತ್ತಡ ಬೀಳುತ್ತಿದೆ. ನಗರಗಳ ತೀವ್ರ ಬೆಳವಣಿಗೆಯಿಂದ ಉದ್ಭವಿಸಿದ ಅಗಾಧ ಸಮಸ್ಯೆಗಳನ್ನು ನಿಭಾಯಿಸಲು ಆಯ್ದ ನಗರಗಳಲ್ಲಿ ಅಭಿಯಾನ ರೂಪದಲ್ಲಿ ಪ್ರಾಯೋಜನೆಗಳನ್ನು ಅನುಷ್ಠಾನಕ್ಕೆ ತರುವ ಒಂದು ಸುಸಂಬದ್ಧ ನಗರೀಕರಣ ಕಾರ್ಯತಂತ್ರವನ್ನು ಯೋಜಿಸುವ ಅಗತ್ಯತೆ ಕಂಡು ಬಂದಿತು. ಸನ್ಮಾನ ಪ್ರಧಾನಮಂತ್ರಿಗಳು 2005 ಡಿಸೆಂಬರ್ 3ರಂದು ಜವಹರಲಾಲ್ ನೆಹರು ರಾಷ್ಟ್ರೀಯ ಪುನರ್ನವೀಕರಣ ಅಭಿಯಾನ (ಜೆಎಸ್‌ಎನ್‌ಯುಆರ್‌ಎಂ) ಉದ್ಘಾಟಿಸಿದರು. ಇದು 7ವರ್ಷಗಳ 2005–12 ಒಂದು ಅಭಿಯಾನ ಆಗಿದ್ದು 63 ಆಯ್ದ ನಗರಗಳಲ್ಲಿ ಸುಧಾರಣಾ ಪ್ರೇರಿತ ಶೀಘ್ರಗಾಮಿಯಾದ ನಗರದ ಮೂಲ ಅಡಿರಚನೆ, ಸೇವೆಗಳು,ಪೂರೈಕೆ ವ್ಯವಸ್ಥೆ, ಸಮುದಾಯ ಭಾಗೀದಾರಿಕೆ ಮತ್ತು ನಗರ ಸ್ಥಳೀಯ ನಿಕಾಯಗಳು (ಯುಎಲ್‌ಬಿಗಳು) ತನ್ನ ಪ್ರಜೆಗಳಿಗೆ ಉತ್ತರದಾಯಿಯಾಗಿರುವಂತೆ ಕೇಂದ್ರ ಗಮನವನ್ನೊಳಗೊಂಡ ಯೋಜನೆಯ ಅಭಿವೃದ್ಧಿಯನ್ನು ಕೈಗೊಳ್ಳುವುದಿದ್ದು ಸ್ಥಿರ ಅಭಿವೃದ್ಧಿಯನ್ನೂ ಗುರಿಯಾಗಿ ಹೊಂದಿದೆ. ಈ ಅಭಿಯಾನವು ಸ್ವತ್ತಿನ ಸೃಷ್ಟಿ, ಸ್ವತ್ತಿನ ನಿರ್ವಹಣೆ ಎರಡರ ನಡುವೆ ಪರಿಣಾಮಕಾರಿಯಾದ ಸಂಪರ್ಕಕೊಂಡಿ ಏರ್ಪಡಿಸಲು ಯತ್ನಿಸುತ್ತದೆ. ಇದರಿಂದ ನಗರಗಳಲ್ಲಿ ಸೃಷ್ಟಿಯಾದ ಮೂಲ ಅಡಿರಚನೆಯ ಸೇವೆಗಳು ನಿರ್ವಹಣೆಯಾಗುವುದಲ್ಲದೆ ದೀರ್ಘಕಾಲದಲ್ಲಿ ಸ್ವಾವಲಂಬಿಯಾಗುವಂತೆ ಮಾಡುವುದು.

**1.17 ಈ ಅಭಿಯಾನವು ಎರಡು ಉಪಅಭಿಯಾನಗಳನ್ನು ಹೊಂದಿದೆ**

(1) ನಗರ ಮೂಲ ಅಡಿರಚನೆ ಮತ್ತು ಆಡಳಿತದ ಉಪಅಭಿಯಾನ. ಇದರಲ್ಲಿ ನೈರ್ಮಲ್ಯ, ಒಳಚರಂಡಿ, ಘನತ್ಯಾಜ್ಯ ನಿರ್ವಹಣೆಯೂ ಒಳಗೊಂಡಂತೆ ನೀರು ಸರಬರಾಜು,ರಸ್ತೆಜಾಲ,ನಗರ ಸಾರಿಗೆ ಮತ್ತು ನಗರ ಪುನರ್ನವೀಕರಣಅಂದರೆ ಒಳ(ಹಳೆಯ) ನಗರ ಪ್ರದೇಶದ ಪುನರಭಿವೃದ್ಧಿ ಇವುಗಳಿಗೆ ಸಂಬಂಧಿಸಿದಂತೆ ಪ್ರಮುಖ ಮೂಲ ಅಡಿರಚನೆಯ ಪ್ರಾಯೋಜನೆಗಳ ಮೇಲೆ ಹೆಚ್ಚು ಒತ್ತುಕೊಡಲಾಗುತ್ತದೆ.

(2) ನಗರದ ಬಡವರಿಗೆ ಮೂಲ ಸೌಕರ್ಯಗಳ ಸಂಬಂಧಿ ಉಪಅಭಿಯಾನ :

ಇದರಲ್ಲಿ ನಗರದ ಬಡವರಿಗೆ ಮೂಲ ಸೌಕರ್ಯಗಳನ್ನು ಒದಗಿಸುವ ಗುರಿ ಹೊಂದಿದೆ. ಇದರಲ್ಲಿ ಕೈಗೆಟಕುವ ಬೆಲೆಯಲ್ಲಿ ವಸತಿಯ ಭದ್ರತೆ, ಸುಧಾರಿತ ಮನೆ, ನೀರು ಸರಬರಾಜು ನೈರ್ಮಲ್ಯ ಮತ್ತು ಶಿಕ್ಷಣ, ಆರೋಗ್ಯ ಮತ್ತು ಸಾಮಾಜಿಕ ಭದ್ರತೆಗೆ ಸಂಬಂಧಿಸಿದಂತೆ ಈಗಾಗಲೇ ಇರುವ ಸಾರ್ವಜನಕ ಸೇವೆಗಳು ಏಕೀಕೃತವಾಗಿ ಒದಗುವಂತೆ ಮಾಡುವುದು ಇವೂ ಒಳಗೊಂಡಿದೆ.

## ಸಮಗ್ರ ಗೃಹ ಮತ್ತು ಕೊಳಗೇರಿಯ ಅಭಿವೃದ್ಧಿ ಕಾರ್ಯಕ್ರಮ (ಐಹೆಚ್‌ಎಸ್‌ಡಿಪಿ):

**1.18** ಈ ಕಾರ್ಯಯೋಜನೆಯನ್ನು ಸನ್ಮಾನ್ಯ ಪ್ರಧಾನ ಮಂತ್ರಿಗಳು ಜವಹರಲಾಲ್ ನೆಹರು ರಾಷ್ಟ್ರೀಯ ನಗರ ಪುನರ್ನವೀಕರಣ ಅಭಿಯಾನದ (ಜೆಎನ್‌ಎನ್‌ಯುಆರ್‌ಎಂ) ಜೊತೆಗೆ 2005ರ ಡಿಸೆಂಬರ್ 3ರಂದು

ಉದ್ಘಾಟಿಸಿದರು.ಇದು ಹಾಲಿ ಇರುವ ವಾಂಬೆ(ವಿಎಎಂಬಿಎವೈ) ಮತ್ತು ರಾಷ್ಟ್ರೀಯ ಕೊಳಗೇರಿ ಅಭಿವೃದ್ಧಿ ಕಾರ್ಯಕ್ರಮ (ಎನ್‌ಎಸ್‌ಡಿಪಿ) ಎರಡನ್ನೂ ಒಟ್ಟುಗೂಡಿಸಿದೆ. ಇದು ಜೆಎನ್‌ಎನ್‌ಯುಆರ್‌ಎಂ ವ್ಯಾಪ್ತಿಗೆ ಬರುವ ನಗರಗಳು।ಪಟ್ಟಣಗಳನ್ನು ಹೊರತುಪಡಿಸಿ ಎಲ್ಲ ನಗರಗಳು।ಪಟ್ಟಣಗಳಲ್ಲಿ ಸಾಕಷ್ಟು ಆಶ್ರಯವಿಲ್ಲದೆ, ಮತ್ತು ದುಸ್ಥಿತಿಯ ಮನೆಗಳಲ್ಲಿ ವಾಸಮಾಡುವ ನಗರಕೊಳಗೇರಿ ವಾಸಿಗಳ ಸ್ಥಿತಿಯನ್ನು ಉತ್ತಮಪಡಿಸುವ ಗುರಿಯ ಸಮಗ್ರ ನಡೆಯನ್ನು ಹೊಂದಿದೆ.

## ಸಣ್ಣ ಮತ್ತು ಮಧ್ಯಮ ಪಟ್ಟಣಗಳ ನಗರ ಮೂಲ ಸೌಕರ್ಯಗಳ ಅಭಿವೃದ್ಧಿ ಕಾರ್ಯಯೋಜನೆ (ಯುಐಡಿಎಸ್‌ಎಂಟಿಯು)

### 1.19 ಈ ಕಾರ್ಯಯೋಜನೆಯು

ಒಂದು ಯೋಜಿತ ರೀತಿಯಲ್ಲಿ ಪಟ್ಟಣಗಳಲ್ಲಿ ಮತ್ತು ನಗರಗಳಲ್ಲಿ ಮೂಲ ಸೌಕರ್ಯಗಳಸುಧಾರಣೆ ಮಾಡುವ ಗುರಿಯನ್ನು ಹೊಂದಿದೆ. ಇದು ಹಾಲಿ ಇರುವ ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ (ಐಡಿಎಸ್‌ಎಂಟಿ) ಮತ್ತು ತ್ವರಿತ ನಗರ ನೀರು ಸರಬರಾಜು ಕಾರ್ಯಕ್ರಮ (ಎಯುಡಬ್ಲ್ಯುಎಸ್‌ಪಿ) ಇವುಗಳನ್ನು ತನ್ನೊಳಗೆ ಸೇರಿಸಿಕೊಂಡಿದೆ. ಈ ಕಾರ್ಯಯೋಜನೆಯು ನಗರಗಳಲ್ಲಿ ಮತ್ತು ಪಟ್ಟಣಗಳಲ್ಲಿ ಮೂಲ ಸೌಕರ್ಯಗಳ ಸುಧಾರಣೆ ಮತ್ತು ಗುಣ ಮಟ್ಟದ ಸೇವೆಗಳನ್ನು ಒದಗಿಸುವುದನ್ನು ಮುಖ್ಯ ಉದ್ದೇಶವನ್ನಾಗಿ ಹೊಂದಿದೆ.

## ಸ್ವರ್ಣಜಯಂತಿ ಶಹರಿ ರೋಜ್‌ಗಾರ್ ಯೋಜನೆ (ಎಸ್‌ಜೆಎಸ್‌ಆರ್‌ವೈ) :

ಈ ಕಾರ್ಯಯೋಜನೆಯನ್ನು ಡಿಸೆಂಬರ್ 1997ರಲ್ಲಿ ಪ್ರಾರಂಭ ಮಾಡಲಾಯಿತು. ಇದರ ಉದ್ದೇಶ ನಗರ ಸ್ಥಳೀಯ ಬಡವರನ್ನು ನಗರ ಮುಖ್ಯ ಜನಸಂಖ್ಯಾವಾಹಿನಿಯೊಳಗೆ ತರುವುದು. ಇದರ ಜೊತೆಗೆ ನಗರದ ಬಡವರಿಗೆ ಸ್ವಉದ್ಯೋಗ ಮತ್ತು ವೇತನದ ಉಧ್ಯೋಗವನ್ನು ಒದಗಿಸುವ ಮುಖಾಂತರ ಅವರು ಲಾಭದಾಯಕ ಉದ್ಯೋಗಗಳಲ್ಲಿ ತೊಡಗುವಂತೆ ಮಾಡುವುದು. ಈ ಕಾರ್ಯಯೋಜನೆಯು ನಗರಸ್ಥಳೀಯ ನಿಕಾಯಗಳಮೂಲಕ ಸೂಕ್ತ ಸಮುದಾಯ ಸೌಕರ್ಯಗಳ ಸೃಷ್ಟನೆ ಮತ್ತು ಹೂಡುವಳಿಗಳ ಪೂರೈಕೆಯನ್ನು ಅವಲಂಬಿಸಿತ್ತು. ಆದಾಗ್ಯೂ ಕಾರ್ಯಯೋಜನೆಯ ಅನುಷ್ಠಾನದಲ್ಲಿ ಅಪಾರ ಸಮಸ್ಯೆಗಳು ಉಂಟಾದವು. ಈ ಕಾರಣ ಈಕಾರ್ಯಯೋಜನೆ ಯ ಸಮರ್ಪ್ಗ ಮೌಲ್ಯಮಾಪನವನ್ನು ಮಾಡಲಾಯಿತು. ನಗರ ಪ್ರದೇಶಗಳಲ್ಲಿ ಹೊಸ ಕೌಶಲಗಳ ಅಗತ್ಯತೆಯ ಬೇಡಿಕೆ ಬೆಳೆದಿದೆ. ಈ ಸಂಗತಿಯನ್ನು ಗಮನದಲ್ಲಿಟ್ಟುಕೊಂಡು ಈಗ ಈ ಕಾರ್ಯ ಯೋಜನೆಯಲ್ಲಿ ಹೊಸ ಆಯಾಮವನ್ನು ತರಲು ಪ್ರಸ್ತಾವಿಸಲಾಗಿದೆ. 43 ಹೊಸ ವೃತ್ತಿಗಳನ್ನು ಸಾಮರ್ಥ್ಯವರ್ಧನೆಗೆ ಗುರುತಿಸಲಾಗಿದೆ. ಇದರಿಂದ ನಗರಗಳಲ್ಲಿನ 30 ದಶಲಕ್ಷ ಬಡವರಿಗೆ ಉದ್ಯೋಗದ ಅವಕಾಶಗಳು ಸೃಷ್ಟಿಯಾಗುತ್ತದೆ.

## ಕಡಿಮೆ ವೆಚ್ಚದ ನೈರ್ಮಲ್ಯ ಕಾರ್ಯಯೋಜನೆ

ಭಾರತ ಸರ್ಕಾರ ಪ್ರಾಯೋಜಿತ ಈ ಕಾರ್ಯಯೋಜನೆಯು 2007 ರ ವೇಳೆಗೆ ಮಾನವ ಮಲಹೊರುವ ಪದ್ಧತಿಯ ಸಂಪೂರ್ಣನಿರ್ಮೂಲನದ ರಾಷ್ಟ್ರೀಯ ಕ್ರಿಯಾಯೋಜನೆ (ಎನ್ ಎಪಿ) ಯ ಒಂದು ಅಂಗಾಂಶವಾಗಿದೆ. ಈ ಕಾರ್ಯಯೋಜನೆಯು ಈ ಮೊದಲು ಸರಿಯಾಗಿ ಕಾರ್ಯನಿರ್ವಹಿಸಲಿಲ್ಲ. ಈ ಹಿಂದಿನ ಲೋಪವನ್ನು ಸರಿಪಡಿಸುವ ಮೂಲಕ ಈ ಕಾರ್ಯಯೋಜನೆಯನ್ನು

ಪರಿಷ್ಕರಿಸಲುಪ್ರಸ್ತಾವಿಸಲಾಗಿದೆ. ಇದು ಪರಿಷ್ಕೃತ ರೂಪದಲ್ಲಿ 'ಇಡೀ ಪಟ್ಟಣಾಧಾರದ' ಮೇಲೆ 6 ಲಕ್ಷ ಶುಷ್ಕ ಶೋಚಾಲಯಗಳನ್ನು ಕಡಿಮೆ ವೆಚ್ಚದ ಎರಡು ಗುಂಡಿಯ ಕಕ್ಕಸುಗಳಾಗಿ ಪರಿವರ್ತಿಸುವ ಯೋಜನೆಯನ್ನು ಹೊಂದಿದೆ. ಇದನ್ನು ಗೃಹ ಮತ್ತು ನಗರ ಅಭಿವೃದ್ಧಿ ಸಂಸ್ಥೆ (ಹುಡ್ಕೊ) ಮತ್ತು ಎನ್ ಜಿಓಗಳ ಮೂಲಕ ಕಾರ್ಯಾಚರಣೆಗೆ ತರಲಾಗುತ್ತದೆ. ಕೇಂದ್ರ ಸರ್ಕಾರದ ಸಹಾಯ ಧನ ಮತ್ತು ಹುಡ್ಕೋದಿಂದ ಸಾಲ ಇವುಗಳ ಮೇಳೈಕೆಯೂ ಇಲ್ಲಿ ಇದೆ.

## 1990 ಮತ್ತು 2015 ರ ಅವಧಿಯಲ್ಲಿ ಹಸಿವಿನಿಂದ ನರಳುವ ಜನರ ಪ್ರಮಾಣವನ್ನು ಅರ್ಧದಷ್ಟು ಕಡಿಮೆ ಮಾಡುವುದು

**1.20** 61ನೇ ಸುತ್ತಿನ ರಾಷ್ಟ್ರೀಯ ಮಾದರಿ ಸಮೀಕ್ಷೆಯು ಬಹಿರಂಗ ಪಡಿಸಿದ ಮೇರೆಗೆ 2004–05ನೇ ಸಾಲಿನಲ್ಲಿ ಒಂದು ಸರಾಸರಿ ಗ್ರಾಮೀಣ ಕುಟುಂಬವು ವಿವಿಧ ವಸ್ತುಗಳ ಮತ್ತು ಸೇವೆಗಳ ಬಳಕೆಗಾಗಿ ವೆಚ್ಚ ಮಾಡಿದ ಪ್ರತಿಯೊಂದು ರುಪಾಯಿಯಲ್ಲಿ 55 ಪೈಸೆಯು ಆಹಾರಕ್ಕಾಗಿ ವೆಚ್ಚವಾಗಿದೆ. ಇದರಲ್ಲಿ 18 ಪೈಸೆಗಳು ಕಾಳುಗಳು ಮತ್ತು ಕಾಳುಗಳ ಪರ್ಯಾಯಗಳು , 8 ಪೈಸೆಗೆ ಹಾಲು ಮತ್ತು ಹಾಲಿನ ಉತ್ಪನ್ನಗಳು, 6 ಪೈಸೆ ತರಕಾರಿ, 5ಪೈಸೆ ಖಾದ್ಯತೈಲ, 5ಪೈಸೆ ಸಕ್ಕರೆ, ಉಪ್ಪು ಮತ್ತು ಸಾಂಬಾರ ಹಾಗು 5 ಪೈಸೆ ಪಾನೀಯ, ಉಪಹಾರ ಮತ್ತು ಸಂಸ್ಕರಿತ ಆಹಾರಕ್ಕಾಗಿ ವೆಚ್ಚವಾಗಿರುತ್ತದೆ.

**1.21** ಮಾತಬವೆ ದ ಮಟ್ಟದಲ್ಲಿ ಏರಿಕೆ ಕಂಡು ಬಂದಂತೆಲ್ಲ ಆಹಾರ ಮತ್ತು ಕಾಳುಗಳ ಪಾಲುಎರಡೂ ಗಣನೀಯವಾಗಿ ಇಳಿಯುತ್ತಾ ಹೋಗುತ್ತದೆ. ಒಟ್ಟಾರೆ ಭಾರತದ ಗ್ರಾಮೀಣಭಾಗದಲ್ಲಿ ಕನಿಷ್ಠತಮ ಮಾತಬವೆ ದ ವರ್ಗ (ರೂ.0–235)ದಲ್ಲಿ ಆಹಾರದ ಪಾಲು ಶೇ 68ಕ್ಕೂ ಮೇಲ್ಪಟ್ಟಂತೆ ಗರಿಷ್ಠತಮ ಮಾತಬವೆ ದ (ರೂ. 1155ಕ್ಕೂ ಹೆಚ್ಚು ) ವರ್ಗದಲ್ಲಿ ಶೇ 34ಕ್ಕೂ ಕೆಳಗೆ ಇಳಿದಿರುವುದು ಕಂಡು ಬಂದಿರುತ್ತದೆ. ಭಾರತದ ನಗರ ಭಾಗಗಳಲ್ಲಿ ಈ ಆಹಾರದ ಪಾಲಿನ ಇಳಿಕೆಯು ಇನ್ನೂ ಅಧಿಕವಾಗಿದೆ. ಇದು ಕನಿಷ್ಠತಮ ವೆಚ್ಚದ ವರ್ಗದಲ್ಲಿ ಶೇ 65 ಹಾಗು ಗರಿಷ್ಠತಮದಲ್ಲಿ ಶೇ 24ಕ್ಕೂ ಕಡಿಮೆ ಇರುತ್ತದೆ. ಒಟ್ಟು ಬಳಕೆಯ ವೆಚ್ಚದಲ್ಲಿ ಬೇಳೆಕಾಳುಗಳ ಪಾಲೂ ಇಳಿದಿದೆ. ಇದು ಗ್ರಾಮೀಣ ಪ್ರದೇಶಗಳಲ್ಲಿ ಕನಿಷ್ಠತಮ ಮಾತಬವೆ ದ ವರ್ಗದಲ್ಲಿ ಶೇ 34ಕ್ಕೂ ಹೆಚ್ಚು ಮತ್ತು ಗರಿಷ್ಠತಮ ವರ್ಗದಲ್ಲಿ ಶೇ 7ಕ್ಕೂ ಕಡಿಮೆ ಇರುತ್ತದೆ. ಭಾರತದ ನಗರ ಭಾಗಗಳಲ್ಲಿ ಬೇಳೆಕಾಳುಗಳ ಪಾಲು ಮಾತಬವೆ ಕನಷ್ಠತಮ ವರ್ಗದಲ್ಲಿ ಶೇ 26 ಮತ್ತು ಗರಿಷ್ಠತಮ ವರ್ಗದಲ್ಲಿ ಶೇ 3ರಷ್ಟು ಇಳಿದಿರುವುದು ಕಂಡು ಬಂದಿದೆ.

## 1.22 ಕಡಿಮೆ ತೂಕದ (ಸಾಧಾರಣದಿಂದ ತೀವ್ರದವರೆಗೆ) ಮಕ್ಕಳಿರುವುದು:–

ಎಂಡಿಜಿ ಯ ನಗದಿತ ಸೂಚಕವು ಐದು ವರ್ಷದ ಕೆಳಗೆ ಇರುವ ಮಕ್ಕಳ ತೂಕವು 0.59 ತಿಂಗಳ ವಯೋಮಾನದ ಅಂತರಾಷ್ಟ್ರೀಯ ಜನಸಂಖ್ಯಾ ಉಲ್ಲೇಖದ ಮಧ್ಯಮದ ಅಂಕಿಗಿಂತ ಎರಡು ಕಡಿಮೆ ಪ್ರಮಾಣಿತ ಅಂತರಗಳು ಇರುವ ಮಕ್ಕಳ ಪ್ರಮಾಣವನ್ನು ಶೇಕಡಾವಾರು ಹೇಳುತ್ತದೆ. ಭಾರತದ ಸಂದರ್ಭ – ಸನ್ನಿವೇಶದಲ್ಲಿ ಈ ಸೂಚಕಕ್ಕೆ ಸಂಬಂಧಿಸಿದ ದತ್ತಾಂಶವು ಲಭ್ಯವಿರುವುದಿಲ್ಲ. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯು (ಎನ್‌ಎಫ್‌ಹೆಚ್‌ಎಸ್) ಮೂರು ವರ್ಷಗಳ ಕೆಳಗೆ ಇರುವ ಮಕ್ಕಳಲ್ಲಿ ಕಡಿಮೆ ತೂಕ ಇರುವ ಮಕ್ಕಳ ಪ್ರಮಾಣದ ದತ್ತಾಂಶವನ್ನು ಸಂಗ್ರಹಿಸಿದೆ. 2005–06 ರ ಸಾಲಿನಲ್ಲಿ ರಾಷ್ಟ್ರೀಯ ಮಟ್ಟದಲ್ಲಿ ಮೂರು ವರ್ಷದ ಕೆಳಗೆ ಇರುವ ಮಕ್ಕಳಲ್ಲಿ ಶೇ 46 ರಷ್ಟು ಮಕ್ಕಳು ತೂಕದಲ್ಲಿ ತೀವ್ರವಾಗಿ ಕಡಿಮೆ ಇರುವುದು ಕಂಡು ಬರುತ್ತದೆ. ಇದು 1998–99ನೇ ಸಾಲಿನಲ್ಲಿ ಶೇ 47 ಇದ್ದಿತು. ಆದಾಗ್ಯೂ 1992–93 ನೇ ಸಾಲಿನಲ್ಲಿ ನಾಲ್ಕುವರ್ಷದ ಕೆಳಗಿನ ಮಕ್ಕಳಲ್ಲಿ ಶೇ 51.1 ರಷ್ಟು ಮಕ್ಕಳು ಕಡಿಮೆ ತೂಕ ವುಳ್ಳವರಾಗಿರುತ್ತಾರೆ.

**ಕೋಷ್ಟಕ 1.5 ಮಕ್ಕಳ ಅಪೌಷ್ಟಿಕತೆಯ ಮಾಪನಗಳು**

| ಸೂಚಕ | 1992–93 | 1998–99 | 2005–06 |
|---|---|---|---|
| 1. ಕಡಿಮೆ ತೂಕವುಳ್ಳ (<3ವರ್ಷ) ಮಕ್ಕಳ ಶೇ. | 55.5 * | 47.0 | 45.9 |
| 2. ವ್ಯರ್ಥವಾದ (<3ವರ್ಷ) ಮಕ್ಕಳ ಶೇ. | ಲಭ್ಯವಿಲ್ಲ | 15.5 | 19.1 |
| 3. ಬೆಳವಣಿಗೆಯಾಗದ (<3 ವರ್ಷ)ಮಕ್ಕಳ ಶೇ. | ಲಭ್ಯವಿಲ್ಲ | 45.5 | 38.4 |
| 6–9 ತಿಂಗಳ ಘನ ಮತ್ತು ಅರೆಘನ ಆಹಾರ ಮತ್ತು ಎದೆ ಹಾಲು ಪಡೆಯುತ್ತಿರುವ ಮಕ್ಕಳ ಶೇ. | ಲಭ್ಯವಿಲ್ಲ | ಲಭ್ಯವಿಲ್ಲ | 55.8 |

(ಮೂಲ : ಎನ್ ಎಫ್ ಹೆಚ್ ಎಸ್)

## ಲಿಂಗ ಮತ್ತು ಬಡತನ

1. ಜಗತ್ತಿನಲ್ಲಿ 100 ಕೋಟಿಗಿಂತಲೂ ಹೆಚ್ಚು ಮಂದಿ ಬಡತನದಲ್ಲಿ ಬದುಕುತ್ತಿದ್ದಾರೆ. ಅವರಲ್ಲಿ ಬಹುತೇಕ ಮಂದಿ ಮಹಿಳೆಯರು. ಮಹಿಳೆಯರ ಬಡತನವು, ಅವರ ಆರೋಗ್ಯ, ಸ್ವಾಸ್ಥ್ಯ, ಆಹಾರ, ಸಾಕಷ್ಟು ಆಶ್ರಯ, ಸುರಕ್ಷಿತ ಮತ್ತು ಆರೋಗ್ಯಕರ ಬದುಕಿನ ಪರಿಸರ, ಸಾಮಾಜಿಕ ಭದ್ರತೆ, ಉದ್ಯೋಗ ಮತ್ತು ಅಭಿವೃದ್ಧಿಗೆ ಸಂಬಂಧಿಸಿದ ಮಾನವ ಹಕ್ಕುಗಳ ಉಲ್ಲಂಘನೆ.ಮಹಿಳೆಯರಿಗೆ ಉದ್ಯೋಗಗಳ ಅವಕಾಶಗಳ ವಂಚನೆ, ಸಮಾನ ಕೆಲಸಕ್ಕೆ ಪುರುಷರಿಗಿಂತ ಕಡಿಮೆ ವೇತನ, ಕಾಯಿದೆ ಅಥವಾ ಸಂಪ್ರದಾಯಗಳ ಕಾರಣವಾಗಿ ಜಮೀನು ಹೊಂದಲು ತಡೆದಿರುವುದು, ಅಥವಾ ಶಾರೀರಿಕ ಮತ್ತು ಲೈಂಗಿಕ ದುರುಪಯೋಗಕ್ಕೆ ಮಹಿಳೆಯರು ಒಳಗಾದಾಗ ಇವೆಲ್ಲವೂ ಮಾನವ ಹಕ್ಕುಗಳ ಉಲ್ಲಂಘನಗಳೇ. ಇವುಗಳ ಕಾರಣಗಳಿಂದಲೂ ಮಹಿಳೆಯರಲ್ಲಿ ಬಡತನ ಉಂಟಾಗಿರಬಹುದು. ಅವರಿಗೆ ಸಮಾನ ಶಿಕ್ಷಣ ಲಭ್ಯವಿರದಿದ್ದಾಗ ಅವರಿಗೆ ಮಕ್ಕಳ ಸಂಖ್ಯೆ ಮತ್ತು ನಡುವಣ ಅಂತರವನ್ನು ಕಾಯ್ದುಕೊಳ್ಳುವ ಬಗ್ಗೆ ನಿರ್ಣಯಮಾಡಲು ಹಕ್ಕಿಲ್ಲದಿದ್ದಾಗ ಅಥವಾ ಮಕ್ಕಳನ್ನು ಬೆಳಸುವುದರಲ್ಲಿ ಅವರ ಮೇಲೆ ಅಸಮಾನ ಹೊರೆ ಬಿದ್ದಾಗ ಆದಾಯವನ್ನು ಗಳಿಸುವ ಮತ್ತು ಬಡತನದಿಂದ ರಕ್ಷಣೆ ಪಡೆಯುವ ಅವರ ಸಾಮರ್ಥ್ಯಕ್ಕೆ ಧಕ್ಕೆಉಂಟಾಗುತ್ತದೆ. ಮಹಿಳೆಯರು ಬಡತನಕ್ಕೆ ಈಡಾಗುವ ಸಂಭವ ಹೆಚ್ಚು. ಏಕೆಂದರೆ ಲಿಂಗ ತಾರತಮ್ಯವು ಆದಾಯದ ಹಂಚಿಕೆಯನ್ನು, ಸಾಲ, ಸ್ವತ್ತಿನ ಮೇಲೆ ಪ್ರಭುತ್ವ ಅಥವಾ ಗಳಿಸಿದ ಆದಾಯದ ಮೇಲಿನ ನಿಯಂತ್ರಣ ಮತ್ತು ಉದ್ಯೋಗ ಮಾರುಕಟ್ಟೆಯಲ್ಲಿನ ಪ್ರವೇಶ ಈ ಮುಂತಾದ ಉತ್ಪತ್ತಿ ರೂಪದ ಸಂಪನ್ಮೂಲಗಳ ಲಭ್ಯತೆಯನ್ನು ಏರುಪೇರು ಮಾಡುತ್ತದೆ. ಇದರ ಜೊತೆಗೆ ಮಹಿಳೆಯರಿಗೆ ಸದಾ ತಮ್ಮದೇ ಮೂಲ ಸ್ವತ್ತಾದ ತಮ್ಮ ಶ್ರಮದ ಮೇಲೂ ಪೂರ್ಣ ನಿಯಂತ್ರಣವಾಗಲಿ, ಪ್ರಭುತ್ವವಾಗಲಿ ಇರುವುದಿಲ್ಲ. ಕಳದ ದಶಕದಲ್ಲಿ ಬಡತನ ನಿರ್ಮೂಲನದ ಕುರಿತಂತೆ ನೀತಿಗಳಲ್ಲಿನ ಬದಲಾವಣೆಯೂ ಒಳಗೊಂಡಂತೆ ಬಡತನ ಕುರಿತಂತೆ ಕ್ರಮ ಕೈಗೊಳ್ಳುವಲ್ಲಿ ಹಲವಾರು ಬದಲಾವಣೆಗಳಾಗಿವೆ. ಈ ಬದಲಾವಣೆಗಳು ಮೂಲ ಭೌತಿಕ ಮತ್ತು ಮಾನಸಿಕ ಅಗತ್ಯತೆ ಗಳನ್ನು ಪೂರೈಸುವಲ್ಲಿನ ವೈಫಲ್ಯದ ಮೇಲೆ ಕೇಂದ್ರೀಕರಿಸುವ ಮಾನಸಿಕ ಅಪಹರಣದ ಮಾದರಿಯನ್ನು ಬಿಟ್ಟು ಸ್ವಯಂ ನಿರ್ಧಾರ, ಗೌರವ ಮತ್ತು ಶಕ್ತಿ ಹೀನತೆಯಂತಹ ಅಂಶಗಳ ಮೇಲೆ ಕೇಂದ್ರೀಕರಿಸುವ ಸಾಮಾಜಿಕ ಅಪಹರಣ ಮಾದರಿ ಕೈಗೆತ್ತಿಕೊಂಡಿರುವುದರಲ್ಲಿ ಕಾಣುತ್ತವೆ.

**1.23** ಸ್ವಸಹಾಯ ಗುಂಪುಗಳ (ಎಸ್ ಹೆಚ್ ಜಿ) ಮೂಲಕ ಸಣ್ಣ ಸಾಲಗಳ ಉಪಕ್ರಮಗಳ ಯಶಸ್ಸು ಬಡತನ ಮತ್ತು ನಿರುದ್ಯೋಗದ ಬಗ್ಗೆ ಕ್ರಮ ಕೈಗೊಳ್ಳುವಲ್ಲಿ ಇದನ್ನು ಸಾಧನವಾಗಿ ಬಳಸಲು ಸರ್ಕಾರಕ್ಕೆ ಪ್ರೋತ್ಸಾಹ ನೀಡಿದೆ. ಮಹಿಳೆಯರ ಸ್ವಸಹಾಯ ಗುಂಪುಗಳು ಬಹು ಸಂಖ್ಯೆಯಲ್ಲಿ ಅಭಿವೃದ್ಧಿ ಉಪಕ್ರಮಗಳನ್ನು

ಅನುಷ್ಠಾನ ಗೊಳಿಸುತ್ತಿವೆ; ಉಳಿತಾಯ ಮತ್ತು ಸಾಲ ವ್ಯವಸ್ಥೆ , ಸಣ್ಣ ಸಾಲ ಯೋಜನೆಗಳ ಮೂಲಕ ಸಾಲಸಂಸ್ಥೆಗಳು ದೊರಕುವಂತೆ ಮಾಡುತ್ತಿದೆ. ರಾಷ್ಟ್ರೀಯ ಮಹಿಳಾ ಕೋಶವು ( ಮಹಿಳೆಯರ ಸಾಲನಿಧಿ) ಬಡಮಹಿಳೆಯರಿಗೆ ಜೀವನ ನಿರ್ವಹಣೆಗಾಗಿ ಮತ್ತು ತತ್ಸಂಬಂಧಿ ಚಟುವಟಿಕೆಗಳಿಗೆ ಸಾಲ ನೀಡುತ್ತಿದೆ. ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಮಹಿಳೆಯರ ಸರ್ವಾಂಗೀಣ ಸಶಕ್ತತೆಗಾಗಿ ಮಹಿಳೆಯರಿಗೆ ತರಬೇತಿ ಮತ್ತು ಉದ್ಯೋಗ ಬೆಂಬಲ ಕಾರ್ಯಕ್ರಮ (ಸ್ಟೆಪ್) ಸ್ವಾವಲಂಬನ ಕಾರ್ಯಕ್ರಮ, ಸ್ವಯಂಸಿದ್ಧ ಪ್ರಾಯೋಜನೆ ಮತ್ತು ಸ್ವಶಕ್ತಿ ಪ್ರಾಯೋಜನೆ ಇವುಗಳನ್ನು ಅನುಷ್ಠಾನಗೊಳಿಸುತ್ತಿದೆ. ಸಂಪೂರ್ಣ ಗ್ರಾಮೀಣ ರೋಜ್ಗಾರ್ ಯೋಜನೆ, ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ಗಾರ್ ಯೋಜನೆ ( ಈ ಕಾರ್ಯಕ್ರಮದಲ್ಲಿ ಶೇ 40ರಷ್ಟು ಪ್ರಯೋಜನಗಳು ಮಹಿಳೆಯರಿಗಾಗಿ ಮೀಸಲಿರಿಸಿದೆ) ಸ್ವರ್ಣ ಜಯಂತಿ ಶಹರಿ ಸ್ವರೋಜ್ಗಾರ್ ಯೋಜನೆ,ನಗರ ಪ್ರದೇಶಗಳಲ್ಲಿ ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ (ಡ್ವಾಕ್ವಾ) ಇತ್ಯಾದಿ ಕಾರ್ಯಕ್ರಮಗಳು ಮಹಿಳೆಯರ ಆದಾಯ ಗಳಿಕಾ ಸಾಮರ್ಥ್ಯವನ್ನು ಮತ್ತು ಭದ್ರತೆಯನ್ನು ವರ್ಧಿಸಿದೆ. ಸಣ್ಣ ಹಣಕಾಸು ಸಾಲ ಸಂಸ್ಥೆಗಳು ತಮ್ಮ ವ್ಯಾಪ್ತಿಯನ್ನು ಅಧಿಕಗೊಳಿಸಿದೆ. ಸರ್ಕಾರೇತರ ಸಂಸ್ಥೆಗಳು ಸ್ವಸಹಾಯ ಗುಂಪುಗಳನ್ನು ಗ್ರಾಮ ಮಟ್ಟದಲ್ಲಿ ಪ್ರವರ್ತಿಸುವುದರ ಜೊತೆಗೆ ಅವುಗಳಿಗೂ ಬ್ಯಾಂಕುಗಳ ಸಂಪರ್ಕವನ್ನು ಕಲ್ಪಿಸುತ್ತಾರೆ. ಮಹಿಳೆಯರಿಗೆ ಅದರಲ್ಲಿಯೂ ವಿಶೇಷವಾಗಿ ಅತಿ ಸಣ್ಣ ಮತ್ತು ಸಣ್ಣ ಕೈಗಾರಿಕಾ ಕ್ಷೇತ್ರದಲ್ಲಿನ (ಎಸ್ ಎಸ್ ಐ) ಮಹಿಳೆಯರಿಗೆ ಸಾಲ ಪೂರೈಕೆಯನ್ನು ಬಲಪಡಿಸುವುದಕ್ಕಾಗಿ 14 ಅಂಶಗಳ ಒಂದು ಕ್ರಿಯಾ ಯೋಜನೆಯನ್ನು ರೋಪಿಸಲಾಗಿದೆ. ಸಾರ್ವಜನಿಕ ಬ್ಯಾಂಕುಗಳು ತಮ್ಮ ನಿವ್ವಳ ಸಾಲ ನೀಡಿಕೆಯಲ್ಲಿ ಶೇ5ನ್ನು ಮಹಿಳೆಯರಿಗೆ ನೀಡಲು ಮೀಸಲಿರಿಸಿವೆ. 2004ರ ಡಿಸೆಂಬರ್ನಲ್ಲಿ ಒಟ್ಟು ಸಾಲ ನೀಡಿಕೆಯು ಶೇ 5.47 ಆಗಿತ್ತು.

**1.24** ಮಹಿಳೆ ಮತ್ತು ಆರ್ಥಿಕತೆಯ ನಡುವಣ ಜಟಿಲ ಪರಸ್ಪರ ಸಂಬಂಧವನ್ನು ಪರಿಗಣಿಸಿ ಮೂಲ ಸೌಕರ್ಯ, ಮಾರುಕಟ್ಟೆಯಲ್ಲಿ ಮಹಿಳೆಯರ ಸಾಮರ್ಥ್ಯವರ್ಧನೆ, ಔದ್ಯಮಿಕ ಕೌಶಲಗಳ ಅಭಿವೃದ್ಧಿ ಇವುಗಳ ಮೇಲೆ ಗಮನ ಹೆಚ್ಚಾಗಿ ಕೆಂದ್ರೀಕರಿಸಲಾಗಿದೆ. ಇವು ನಿಜಕ್ಕೂ ಮಹಿಳೆಯರನ್ನೂ ಕೆಲಸಗಾರರನ್ನಾಗಿಯೂ,ಉದ್ಯಮಶೀಲರನ್ನಾಗಿ ಮಾಡುವಲ್ಲಿ ಪ್ರಯೋಜನಕ್ಕೆ ಬರುತ್ತದೆ. ಕೆಲಸಗಾರರ ಜೀವನ ನಿರ್ವಹಣೆಯನ್ನು ಆಧರಿಸಿ ಅದಕ್ಕನುಗುಣವಾಗಿ ಕನಿಷ್ಠವೇತನವನ್ನು ನಿಗದಿ ಪಡಿಸುವುದರ ಮೂಲಕ ಶೋಷಣೆ ಮತ್ತು ಗುತ್ತಿಗೆ ಕಾರ್ಮಿಕರನ್ನು ತಡೆಯುವ ನಟ್ಟಿನಲ್ಲಿನ ಪ್ರವೇಶಗಳು ಸಹ ಇವೆ. ಸಣ್ಣಸಾಲ ಮತ್ತು ಸಣ್ಣಸಾಲಯೋಜನೆಗಳಂತಹ ಸಾಮೂಹಿಕ ಸಂಘಟನಾ ಕ್ರಮಗಳು, ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತಾಯೋಜನೆ , ಸಾರ್ವತ್ರಿಕ ವಿಶ್ವ ಆರೋಗ್ಯ ವಿಮಾಯೋಜನೆ ಮತ್ತು ರಾಷ್ಟ್ರೀಯ ಸಾಮಾಜಿಕ ನೆರವು ಕಾರ್ಯಕ್ರಮ ಇವೇ ಮುಂತಾದ ಸಾಮಾಜಿಕ ಭದ್ರತಾ ಕಾರ್ಯಕ್ರಮಗಳು ಇವುಗಳ ಮೇಲೂ ಗಮನ ಕೇಂದ್ರೀಕರಿಸಲಾಗಿದೆ. ಇವು ಈಗಾಗಲೇ ಮಹಿಳೆಯರ ಆದಾಯದ ಮೇಲೆ ಮತ್ತು ಅವರ ಕೆಲಸದ ಸ್ಥಿತಿಗತಿಗಳ ಮೇಲೆ ಉತ್ತಮ ಫಲದಾಯ ಕತೆಯನ್ನು ತಂದಿದೆಯಲ್ಲದೆ ಮಹಿಳೆಯರ ಮೇಲೆ ಬಡತನದ ದುಷ್ಪರಿಣಾಮವನ್ನೂ ಕಡಿಮೆ ಮಾಡಿದೆ.

**1.25** ಭಾರತದಲ್ಲಿ ಜಮೀನು ಕುರಿತಂತೆ ಪರಿಣಾಮಕಾರಿ ಹಕ್ಕು ಹೊಂದಿರುವುದು ಆರ್ಥಿಕ ಮತ್ತು ಸಾಮಾಜಿಕ ಸ್ಥಾನಮಾನದ ಬಗೆಗೆ ಒಂದು ಏಕೈಕ ಮಹತ್ವದ ನಿರ್ಧಾರಣಾಂಶವಾಗಿರುತ್ತದೆ. ಭೂಮಿಯ ಮೇಲೆ ಮಹಿಳೆಯರಿಗೆ ಇರುವ ಅಸಮಾನ ಹಕ್ಕುಗಳ ಕಾರಣವಾಗಿಯೇ ಅವರ ಕೀಳು ಸ್ಥಾನ ಮಾನದ ಅತ್ಯಂತ ಪ್ರಮುಖ ಕಾರಣವಾಗಿರುತ್ತದೆ. ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಜಮೀನಿನಲ್ಲಿ

ಅಧಿಕ ನೇರ ಹಕ್ಕಿರುವಂತೆ ನೋಡಿಕೊಳ್ಳುವುದು ಆಹಾರ ಮತ್ತುಜೀವನಭದ್ರತೆಯ ಸುಧಾರಣೆ, ಮಹಿಳಾ ಸಬಲೀಕರಣ ಇಂತಹ ರಾಷ್ಟ್ರೀಯ ಗುರಿಗಳನ್ನು ಮುಟ್ಟುವಲ್ಲಿ ಅತಿ ಪ್ರಮುಖವಾಗಿರುತ್ತದೆ.

**1.26** ಮಹಿಳೆಯರಿಗೆ ಭೂಮಿಯ ಮೇಲೆ, ಮನೆಯ ಮೇಲೆ ಮಾಲೀಕತ್ವದ ಸಮಾನ ಹಕ್ಕುಗಳನ್ನು ನೀಡುವುದರ ನಿಟ್ಟಿನಲ್ಲಿ ಹೊಸ ಶಾಸನವನ್ನು ತರುವುದರ ಪ್ರಾಮುಖ್ಯದ ಬಗ್ಗೆ ಒತ್ತು ಕೊಡಲಾಗಿರುತ್ತದೆ. ಹಿಂದೂ ಉತ್ತರಾಧಿಕಾರ ಅಧಿನಿಯಮಕ್ಕೆ ಇತ್ತೀಚೆಗೆ ತಂದ ತಿದ್ದುಪಡಿಯು ಪಿತ್ರಾರ್ಜಿತ ಸ್ವತ್ತಿನಲ್ಲಿ ಹೆಣ್ಣು ಮಕ್ಕಳಿಗೂ ಸಮಾನ ಹಕ್ಕನ್ನು ಕೊಟ್ಟಿದೆ.

**1.27** ಗಂಡ ಮತ್ತು ಹೆಂಡತಿ ಉಭಯರ ಹೆಸರಿಗೂ ಮತ್ತು ಮಹಿಳೆಗೆ ಮಾತ್ರವೇ ಭೂಮಿಯ ಹಕ್ಕನ್ನು ನೀಡುವಂತೆ ಸರ್ಕಾರದ ನೀತಿ ನಿರ್ದೇಶನಗಳು ಉತ್ತಮ ಫಲವನ್ನು ಕೊಟ್ಟಿದೆ. ನಮ್ಮ ಒಕ್ಕೂಟ ರಾಜ್ಯ ವ್ಯವಸ್ಥೆಯಲ್ಲಿ ಭೂಮಿಯ ವಿಷಯವು ರಾಜ್ಯಾಂಗದಲ್ಲಿ ರಾಜ್ಯ ವಿಷಯದ ಪಟ್ಟಿಯಲ್ಲಿ ಬರುತ್ತದೆ. ಮಹಿಳೆಯರಿಗೆ ಭೂಮಿಯ ಹಕ್ಕಿನ ವರ್ಗಾವಣೆಯು ದೇಶಾದ್ಯಂತ ಏಕರೂಪದಲ್ಲಿರುವುದಿಲ್ಲ. ಸರ್ಕಾರೀ ಜಮೀನನ್ನು ಮತ್ತು ಖರಾಬು ಜಮೀನನ್ನು ಮತ್ತು ರಾಜ್ಯ ಕೃಷಿ ತೋಟಗಳನ್ನು ಮಹಿಳಾ ಗುಂಪುಗಳಿಗೆ ಹಂಚಿಕೆ ಮಾಡಿದರೆ ಮಹಿಳೆಯರು ಕೃಷಿ ಮತ್ತು ತತ್ಸಂಬಂಧಿ ಚಟುವಟಿಕೆಗಳನ್ನು ಕೈಗೆತ್ತಿಕೊಳ್ಳಬಹುದೆಂಬುದನ್ನು ಗುರುತಿಸಲಾಗಿದೆ.

**1.28** ಮಹಿಳೆಯರಿಗೆ ಪ್ರತ್ಯೇಕವಾಗಿರುವ ಕಾರ್ಯಕ್ರಮಗಳು ಮತ್ತು ಕಾರ್ಯಕ್ರಮಗಳ ಜೊತೆಗೆ ಲಿಂಗಧಾರಿತ ಆಯವ್ಯಯವನ್ನು ಮಹಿಳಾ ವಿಶೇಷ ಯೋಜನೆ (ಡಬ್ಲಯು ಸಿಪಿ) ಇವೂ ಸಹ ದೇಶದಲ್ಲಿ ಲಿಂಗ ಸಮಾನತೆ ಮತ್ತು ಸಬಲೀಕರಣವನ್ನು ಮುಂದಕ್ಕೊಯ್ಯುವ ಎರಡು ಪ್ರಮುಖ ಸಾಧನಗಳು.

**1.29** ಸರ್ಕಾರದ ಮೇಲ್ಕಂಡ ನೀತಿಗಳು ಮತ್ತು ಕಾರ್ಯತಂತ್ರಗಳು ಮತ್ತು ಗ್ರಾಮೀಣ ಬಡವರಿಗೆ ವಿಮೆ ಮತ್ತು ಆದಾಯ ಭದ್ರತೆಯನ್ನು ಒದಗಿಸುವ ಉದ್ಯೋಗ ಖಾತ್ರಿ ಅಧಿನಿಯಮ ಇವೇ ಮುಂತಾದ ಕ್ರಮಗಳು ಬಡತನವನ್ನು ಕಡಿಮೆ ಮಾಡುವ ಪ್ರಕ್ರಿಯೆಯನ್ನು ತ್ವರಿತಗೊಳಿಸುತ್ತದೆ ಮತ್ತು ಸಹಸ್ರಮಾನದ ಅಭಿವೃದ್ಧಿ ಗುರಿಗಳನ್ನು ಸಾಧಿಸಲು ನೆರವಾಗುತ್ತದೆ ಎಂಬುದು ಸ್ವಯಂವೇದ್ಯವಿರುತ್ತದೆ.

# ಅಧ್ಯಾಯ–2–3

# ನಗರಕೊಳೆಗೇರಿಗಳು– ಒಂದು ಮೇಲ್ನೋಟ

## 8.1 ಕೊಳೆಗೇರಿಗಳ ಸಂಖ್ಯೆ ಮತ್ತು ಅದರ ಬೆಳವಣಿಗೆ

ಸಮಾಜದ ಅತ್ಯಂತ ಅನುಕೂಲ ರಹಿತ ವರ್ಗವು ಅಥವಾ ಗ್ರಾಮೀಣ ಜನರು ಉದ್ಯೋಗ ಅಥವಾ ಉತ್ತಮ ಜೀವನ ಪರಿಸ್ಥಿತಿ ಹುಡುಕಿಕೊಂಡು ನಗರ ಪ್ರದೇಶಗಳಿಗೆ ವಲಸೆ ಬರುತ್ತಾರೆ. ಬದುಕಲು ಆಶ್ರಯ ಸಿಗದೆ ಕೊನೆಯದಾಗಿ ನಗರಗಳಲ್ಲಿನ ಅಕ್ರಮ ವಸತಿ ಪ್ರದೇಶಗಳಲ್ಲಿ ಅಥವಾ ಅನಾರೋಗ್ಯಕರ ಮನೆಗಳ ಸಂಕೀರ್ಣಗಳಲ್ಲಿ ನೆಲೆಸುತ್ತಾರೆ. ಈ ಸಂಕೀರ್ಣಗಳಲ್ಲಿ ಆರೋಗ್ಯ, ಶೌಚಗೃಹ. ಕುಡಿಯುವ ನೀರು, ನೈರ್ಮಲ್ಯ ಮುಂತಾದ ಸೌಕರ್ಯಗಳು ಸರಿಯಾಗಿ ಇರದ ಕಾರಣ ಇವುಗಳನ್ನು ಕೊಳೆಗೇರಿಗಳೆಂದು ಕರೆಯುತ್ತಾರೆ. ಕಳೆದ ಕೆಲವು ವರ್ಷಗಳಲ್ಲಿ ನಗರ ಪ್ರದೇಶಗಳಲ್ಲಿ ಅದರಲ್ಲಿಯೂ ವಿಶೇಷವಾಗಿ ದೊಡ್ಡ ನಗರಗಳಲ್ಲಿ ಕೊಳೆಗೇರಿಗಳ ಬೆಳವಣಿಗೆಯು ಯೋಜನಾಕಾರರಿಗೆ ಮತ್ತು ನೀತಿರಚಕರಿಗೆ ಒಂದು ಪ್ರಮುಖ ಸಮಸ್ಯೆಯಾಗಿ ಪರಿಣಮಿಸಿದೆ. ಕೊಳೆಗೇರಿಗಳಲ್ಲಿನ ಸಮಸ್ಯೆಗಳ ಕಲ್ಪನೆ ಇರಬೇಕಾದರೆ ಯೋಜನಾಕಾರರು ಮತ್ತು ನೀತಿರಚಕರ ಬಳಿ  ಯಥೋಚಿತ ದತ್ತಾಂಶ ಲಭ್ಯವಿರಬೇಕು.

ನಗರದ ಕೊಳೆಗೇರಿಗಳಿಗೆ ಸಂಬಂಧಿಸಿದ ದತ್ತಾಂಶವು ಮಹಾ ನಿಬಂಧಕರು ಮತ್ತು ಜನಗಣತಿ ಆಯುಕ್ತರು, ಭಾರತ  ಇವರ ಬಳಿ ಮತ್ತು ರಾಷ್ಟ್ರೀಯ ಮಾದರಿ ಸಮೀಕ್ಷೆ ಸಂಸ್ಥೆ ಇವರ ಬಳಿ ಇರುತ್ತದೆ. ಮಹಾ ನಿಬಂಧಕರು ಮೊದಲಬಾರಿಗೆ 2001 ರ ಜನಗಣತಿಯ ವೇಳೆಯಲ್ಲಿ ಕೊಳೆಗೇರಿಗಳ ಮಾಹಿತಿಯನ್ನು ಸಂಗ್ರಹಿಸಲು ಪ್ರಯತ್ನಿಸಿ 50,000ಕ್ಕೂ ಹೆಚ್ಚು ನಗರ ಜನಸಂಖ್ಯೆ ಇರುವ ನಗರಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಒದಗಿಸಿರುತ್ತಾರೆ. ಇತ್ತೀಚೆಗೆ 20,000–50,000 ವರೆಗಿನ ಸಂಖ್ಯೆಯ ಗಾತ್ರದ ನಗರಗಳು ಪಟ್ಟಣಗಳಿಗೂ ಸಂಬಂಧಿಸಿದಂತೆ  ಕೊಳೆಗೇರಿಗಳ ಜನಗಣತಿಯನ್ನು ಕೈಗೊಳ್ಳಲು ಮಹಾನಿಬಂಧಕರ ಕಚೇರಿಯನ್ನು ಕೋರಿಕೊಳ್ಳಲಾಗಿದೆ. ರಾಮಾಸಸಂ ಯು ಭಾರತದಲ್ಲಿ ಮನೆಗಳ ಪರಿಸ್ಥಿತಿಯ ಬಗ್ಗೆ ದತ್ತಾಂಶ ಸಂಗ್ರಹಣೆಯ ಕಾರ್ಯಾಧ್ಯಯನದ ಭಾಗವಾಗಿ ಕೊಳೆಗೇರಿಗಳಿಗೆ ಸಂಬಂಧಿಸಿದಂತೆ ಐದು ವರ್ಷಗಳಿಗೊಮ್ಮೆ ಮಾದರಿ ಸಮೀಕ್ಷೆ ನಡೆಸುತ್ತದೆ. ರಾಮಾಸಸಂ ಯು ಇಂತಹ ಎರಡು ಸಮೀಕ್ಷೆಗಳನ್ನು 1993 ಮತ್ತು 2002 ರಲ್ಲಿ ನಡೆಸಿ ಫಲಿತಾಂಶಗಳನ್ನು ಒದಗಿಸಿದೆ. ಇವುಗಳನ್ನು ಬಿಟ್ಟು ಬೆಸಿಪಿ ಸಂಸ್ಥೆಯೂ ಸಹ 1991ರ ಜನಗಣತಿ ದತ್ತಾಂಶದ ಆಧಾರದ ಮೇಲೆ 2001ರ ವೇಳೆಯ ಕೊಳೆಗೇರಿಯ ಸಂಖ್ಯೆಯ ಅಂದಾಜನ್ನು ಮಾಡಿದೆ. ರಾಮಾಸಸಂ ಯ ಮೇರೆಗೆ 1993ರಲ್ಲಿ ಇದ್ದ  56311 ನಗರ ಕೊಳೆಗೇರಿ ಸಂಖ್ಯೆಯು 2002ರಲ್ಲಿ 51686 ಇಳಿದಿದೆ. 1993ರಲ್ಲಿ ಶೇ.36ರಷ್ಟು ನಗರ ಕೊಳೆಗೇರಿಗಳು "ಘೋಷಿತ ಕೊಳೆಗೇರಿಗಳು ಆಗಿದ್ದು 2002ರಲ್ಲಿ ಶೇ 50.6 ರಷ್ಟು ಕೊಳೆಗೇರಿಗಳು "ಅಧಿಸೂಚಿತ ಕೊಳೆಗೇರಿಗಳೆಂದು ಘೋಷಿತವಾಗಿತ್ತು. 1993ರಲ್ಲಿ ಕೊಳೆಗೇರಿಗಳಲ್ಲಿ ವಾಸಿಸುವ ಶೇ 43.92 ರಷ್ಟು ಕುಟುಂಬಗಳು ಘೋಷಿತ ಕೊಳೆಗೇರಿಗಳಲ್ಲಿ ವಾಸಿಸುತ್ತಿದ್ದಾರೆ. 2002ರಲ್ಲಿ ಶೇ 65.1  ರಷ್ಟು ಕುಟುಂಬಗಳು ಅಧಿಸೂಚಿತ ಕೊಳಗೇರಿಗಳಲ್ಲಿ ವಾಸಿಸುತ್ತಿದ್ದರು. ಕೊಳೆಗೇರಿಗಳಲ್ಲಿ ವಾಸಿಸುವ ಒಟ್ಟು ಕುಟುಂಬಗಳ ಸಂಖ್ಯೆಯು 1993ರಲ್ಲಿ 5.93 ದಶಲಕ್ಷ ಇದ್ದದ್ದು 2002ರಲ್ಲಿ 8.23 ದಶಲಕ್ಷಕ್ಕೆ ಹೆಚ್ಚಿದೆ. ರಾಮಾಸಸಂ ಸಮೀಕ್ಷೆಯಲ್ಲಿ ಅಖಿಲ ಭಾರತ ಮಟ್ಟದಲ್ಲಿ ಶೇ.35 ರಷ್ಟು ಕೊಳೆಗೇರಿಗಳು ಖಾಸಗಿ ಜಮೀನಿನಲ್ಲಿದ್ದರೆ ಶೇ.63ರಷ್ಟು ಕೊಳೆಗೇರಿಗಳು ಸಾರ್ವಜನಕ ಜಮೀನಿನಲ್ಲಿರುವುದು ಸಹ ಕಂಡು ಬಂದಿರುತ್ತದೆ.

2001 ರ ಜನಗಣತಿ ಮೇರೆಗೆ 26ರಾಜ್ಯಗಳು ಕೇಶಾಪ್ರ ಗಳಲ್ಲಿ ಹರಡಿ ಹೋಗಿರುವ 640 ಪಟ್ಟಣಗಳಲ್ಲಿ ಕೊಳೆಗೇರಿಗಳು ಇರುವುದು ವರದಿಯಾಗಿದೆ. ಈ ಪಟ್ಟಣಗಳಲ್ಲಿ 8.2 ದಶಲಕ್ಷ ಕುಟುಂಬಗಳ 42.6 ದಶಲಕ್ಷ ಮಂದಿ ಕೊಳೆಗೇರಿಗಳಲ್ಲಿ ವಾಸಮಾಡುತ್ತಿದ್ದಾರೆ. ಒಂಬತ್ತು ರಾಜ್ಯಗಳು / ಕೇಶಾಪ್ರಗಳಲ್ಲಿ ಯಾವುದೇ ಕೊಳೆಗೇರಿ ಇರುವುದನ್ನು ಗುರುತಿಸಿಲ್ಲ, 2002ರಲ್ಲಿ ರಾಮಾಸಸಂ ಮತ್ತು 2001 ರ ಭಾರತ ಜನಗಣತಿ ಎರಡೂ ಸಹ ನಗರದಲ್ಲಿನ ಪ್ರತಿ ಏಳನೇ ವ್ಯಕ್ತಿಯು ಕೊಳೆಗೇರಿ ವಾಸಿಯಾಗಿದ್ದಾನೆಂದು ಕಂಡು ಕೊಂಡಿರುವುದು ಒಂದು ಕಾಕತಾಳೀಯ. ಭಾರತದ ಜನಗಣತಿಯು ಶೇ. 17 ರಷ್ಟು (7.4 ದಶಲಕ್ಷ) ಪರಿಶಿಷ್ಟ ಜಾತಿ ಮತ್ತು ಶೇ. 2.4 ರಷ್ಟು ಪರಿಶಿಷ್ಟವರ್ಗದ ಮಂದಿ ಭಾರತದಲ್ಲಿ ಗುರುತಿಸಲ್ಪಟ್ಟ ಕೊಳೆಗೇರಿಗಳಲ್ಲಿ ವಾಸ ಮಾಡುತ್ತಿದ್ದಾರೆಂಬುದನ್ನೂ ಗುರುತಿಸಿದೆ. ದೇಶದ ಕೊಳೆಗೇರಿಗಳಲ್ಲಿನ ಪರಿಶಿಷ್ಟ ಜಾತಿಯ ಪ್ರಮಾಣವು ಶೇ.11.8 ಇದ್ದು ಇದು ಕೊಳೆಗೇರಿಯೇತರ ಪ್ರದೇಶ ಮತ್ತು ನಗರ ಪ್ರದೇಶಗಳ ಪ್ರಮಾಣಕ್ಕಿಂತ (ಶೇ. 10.8) ಹೆಚ್ಚಾಗಿರುತ್ತದೆ.

## ಭಾರತದ ಕೊಳಚೆ ಪ್ರದೇಶದ ಗಣತಿ–2001

ಭಾರತದಲ್ಲಿ ಮೊದಲನೆಯ ಬಾರಿಗೆ ಕೊಳಚೆ ಪ್ರದೇಶದ ಗಣತಿ 1991 ರ ಗಣತಿಯ ಪ್ರಕಾರ 50,000 ಅಥವಾ ಹೆಚ್ಚು ಜನಸಂಖ್ಯೆ ಇರುವ ನಗರಗಳಲ್ಲಿ ನಡೆಸಲಾಯಿತು. ಈ ಗಣತಿಯ ಪ್ರಕಾರ 607 ನಗರಗಳಲ್ಲಿ 40,297,341(40 ಮಿಲಿಯನ್) ಜನರು ಕೊಳಚೆ ಪ್ರದೇಶದಲ್ಲಿ ವಸಿಸುತ್ತಾರೆ ಎಂದು ತಿಳಿದುಬರುತ್ತದೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಶೇಕಡಾ 4% ರಷ್ಟು ಮತ್ತು ನಗರದ ಜನಸಂಖ್ಯೆಯಲ್ಲಿ ಶೇಕಡಾ 22% ರಷ್ಟು ಕೊಳಚೆ ಪ್ರದೇಶದ ವಾಸಿಗಳು, ಅಂದರೆ ನಗರದ ಬಹುತೇಕ 25% (1/4 ಭಾಗ) ಜನಸಂಖ್ಯೆ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಶೋಚನಿಯ ವಿಷಯವೆಂದರೆ ಈ ವಾಸಿಗಳಲ್ಲಿ 5,531,062 (5 ಮಿಲಿಯನ್) ವಾಸಿಗಳು 0–6 ವಯಸ್ಸಿನ ಮಕ್ಕಳ್ಳು ವಾಸಿಸುತ್ತಿದ್ದಾರೆ.

ಭಾರತದ ಅತಿ ಶ್ರೀಮಂತ ರಾಜ್ಯ ಮಹಾರಾಷ್ಟ್ರದಲ್ಲಿ ಶೇಕಡಾ 32% ರಷ್ಟು ಕೊಳಚೆ ಪ್ರದೇಶದ ವಾಸಿಗಳು. ಭಾರತದ ಆರ್ಥಿಕ ರಾಜಧಾನಿ ಮುಂಬೈನಲ್ಲಿ ಶೇಕಡಾ 49% ರಷ್ಟು ಜನರು ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಾರೆ. ಹಳ್ಳಿಯ ಜನರು ತಮ್ಮ ಜಾನುವಾರಗಳನ್ನು ಕೊಳಚೆಪ್ರದೇಶದಲ್ಲಿಡಲು ಒಪ್ಪದಿರುವಾಗ, ನಗರದ ಜನರು ಹೇಗೆ ವಾಸಿಸುತ್ತಿದಾರೆ? ಕಾರಣವೇನು? ಎಂಬ ಪ್ರಶ್ನೆಗಳು ಉದ್ಭವಿಸುತ್ತವೆ.

## 2001 ರ ಜನಗಣತಿಯ ಪ್ರಕಾರ ಕೊಳಚೆ ಪ್ರದೇಶದ ಅರ್ಥ

1. ರಾಜ್ಯ/ ಸ್ಥಳೀಯ ಸರ್ಕಾರ ಮತ್ತು ಕೇಂದ್ರ ಸಂಸ್ಥಾನಗಳಿಂದ ಯಾವುದಾದರು ಅಧಿನಿಯಮದಲ್ಲಿ ಕೊಳಚೆ ಪ್ರದೇಶ ಎಂದು ಗುರುತಿಸಿದ ಪ್ರದೇಶಗಳು.
2. ರಾಜ್ಯ/ ಸ್ಥಳೀಯ ಸರ್ಕಾರ ಮತ್ತು ಕೇಂದ್ರ ಸಂಸ್ಥಾನಗಳಿಂದ ಯಾವುದೇ ಅಧಿನಿಯಮದಲ್ಲಿ ಇಲ್ಲದಿದ್ದರೂ ಕೊಳಚೆ ಪ್ರದೇಶ ಎಂದು ಗುರುತಿಸಿದ ಪ್ರದೇಶಗಳು.
3. ಸಣ್ಣ ವಿಸ್ತೀರ್ಣ ಪ್ರದೇಶದಲ್ಲಿ ಕನಿಷ್ಟ 300 ಜನಸಂಖ್ಯೆ ಅಥವಾ 60–70 ಮನೆಗಳು ಮೂಲ ಸೌಲಭ್ಯವಿಲ್ಲದೆ, ಅಸಮಾನ್ಯ ಆರೋಗ್ಯಕರ ಸ್ಥಿತಿ ಇರುವ ಪ್ರದೇಶಗಳು.

ರಾಜ್ಯ ಸ್ಥಳೀಯ ಪ್ರಾಧಿಕಾರದಲ್ಲಿರುವ ಜನಗಣತಿ ಆಯೋಗವು 1991 ಇಸವಿಯ ಪ್ರಕಾರ 50000 ಅಥವಾ ಹೆಚ್ಚು ಜನಸಂಖ್ಯೆ ಇರುವ ಮುನ್ಸಿಪಲ್ ನಗರಗಳಲ್ಲಿ ಕೊಳಚೆ ಪ್ರದೇಶಗಲನ್ನು ಗುರುತಿಸಲು ತಿಳಿಸಲಾಯಿತು. ಈ ಕಾರ್ಯಕ್ರಮದಲ್ಲಿ ಮುನ್ಸಿಪಲ್ ಇಲ್ಲದ ನಗರಗಳಲ್ಲಿಯೂ ಕೊಳಚೆ ಪ್ರದೇಶಗಳು ಇರುವುದು ತಿಳಿದು ಬಂದಿತು. ಭಾರತದ ಒಟ್ಟು ರಾಜ್ಯಗಳು/ಕೇಂದ್ರ ಸಂಸ್ಥೆಗಳಲ್ಲಿ 9 ರಾಜ್ಯ ಮತ್ತು ಕೇಂದ್ರ ಸಂಸ್ಥೆಗಳು ಪ್ರಮುಖವಾಗಿ ಹಿಮಾಚಲ ಪ್ರದೇಶ, ನಾಗಾಲ್ಯಾಂಡ, ಮಿಜೋರಮ್, ಸಿಕ್ಕಿಮ್, ಅರುಣಾಚಲಪ್ರದೇಶ,

ಮಣಿಪುರ, ದಾದರ ಮತ್ತು ನಾಗರಹವೇಲಿ, ದಮನ ಮತ್ತು ಡಿಂಯು ಮತ್ತು ಲಕ್ಷದ್ವೀಪಗಳಲ್ಲಿ ಯಾವುದೇ ಕೊಳಚೆ ಪ್ರದೇಶಗಳು ಇರುವುದಿಲ್ಲ.

**2001 ನೇ ಇಸವಿಯ ಪ್ರಕಾರ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿರುವ ಕೊಳಚೆ ಪ್ರದೇಶಗಳು**

| ಕ್ರ ಸಂ | ರಾಜ್ಯಗಳು/ ಕೇಂದ್ರಾಡಳಿತ ಪ್ರದೇಶಗಳು | ಒಟ್ಟು ಕೋಳಚೆ ಪ್ರದೇಶಗಳು | ಒಟ್ಟು ಜನಸಂಖ್ಯೆ ಜನಸಂಖ್ಯೆ | ಒಟ್ಟು ಜನಸಂಖ್ಯೆ ಪುರುಷರು | ಒಟ್ಟು ಜನಸಂಖ್ಯೆ ಮಹಿಳೆಯರು | ಕೊಳಚೆ ಪ್ರದೇಶಗಳಲ್ಲಿ ಜನಸಂಖ್ಯೆ | ಕೊಳಚೆ ಪ್ರದೇಶಗಳಲ್ಲಿ ಪುರುಷರು | ಕೊಳಚೆ ಪ್ರದೇಶಗಳಲ್ಲಿ ಮಹಿಳೆಯರು |
|---|---|---|---|---|---|---|---|---|
| | **ಭಾರತ** | 607 | 178393941 | 94354914 | 84039027 | 40297341 | 21489015 | 18808326 |
| 01 | ಜಮ್ಮು & ಕಾಶ್ಮೀರ | 05 | 1451995 | 785036 | 666959 | 270084 | 142290 | 127794 |
| 02 | ಪಂಜಾಬ್ | 27 | 5652211 | 3076891 | 2575320 | 1151864 | 625729 | 526135 |
| 03 | ಚಂದಿಘಡ್ | 1 | 808796 | 451387 | 357409 | 107098 | 62747 | 44351 |
| 04 | ಉತ್ತರಾಂಚಲ್ | 6 | 1030720 | 547813 | 482907 | 195604 | 103980 | 91624 |
| 05 | ಹರ್‍ಯಾಣ | 22 | 4300013 | 2331614 | 1968399 | 1421839 | 779663 | 642176 |
| 06 | ದೆಹಲಿ | 14 | 10979341 | 6021568 | 4957773 | 2025890 | 1138063 | 887827 |
| 07 | ರಾಜಸ್ತಾನ | 25 | 7453084 | 3951335 | 3501749 | 1206123 | 634848 | 571275 |
| 08 | ಉತ್ತರಪ್ರದೇಶ | 65 | 18791750 | 10023729 | 8768021 | 4156020 | 2226070 | 1929950 |
| 09 | ಬಿಹಾರ | 23 | 4817624 | 2586618 | 2231006 | 507383 | 269155 | 238228 |
| 10 | ತ್ರಿಪುರಾ | 1 | 189327 | 94398 | 94929 | 29378 | 14777 | 14601 |
| 11 | ಮೇಘಾಲಯ | 1 | 267881 | 134416 | 133465 | 110714 | 55437 | 55277 |
| 12 | ಆಸ್ಸಾಮ | 7 | 1347111 | 726986 | 620125 | 84644 | 44870 | 39774 |
| 13 | ಪಶ್ಚಿಮಬಂಗಾಳ | 51 | 14250720 | 7595740 | 6654980 | 3822309 | 2066223 | 1756086 |
| 14 | ಜಾರ್ಖಂಡ | 11 | 2418755 | 1286171 | 1132584 | 309557 | 163192 | 146365 |
| 15 | ಓರಿಸ್ಸಾ | 15 | 2818455 | 1502986 | 1315469 | 635150 | 332534 | 302616 |
| 16 | ಚತ್ತಿಸಗಡ್ | 12 | 2692612 | 1397854 | 1294758 | 788127 | 407228 | 380899 |
| 17 | ಮಧ್ಯಪ್ರದೇಶ | 42 | 9823309 | 5173811 | 4649498 | 2388517 | 1254657 | 133860 |
| 18 | ಗುಜರಾತ | 28 | 11427259 | 6103900 | 5323359 | 1346709 | 743686 | 603023 |
| 19 | ಮಹಾರಾಷ್ಟ್ರ | 62 | 33624960 | 18025493 | 15599467 | 10644605 | 5820715 | 4823890 |
| 20 | ಆಂದ್ರಪ್ರದೇಶ | 76 | 15752946 | 8024314 | 7728632 | 5149272 | 2607775 | 2541497 |
| 21 | ಕರ್ನಾಟಕ | 35 | 11021192 | 5686521 | 5334671 | 1267759 | 645289 | 622470 |
| 22 | ಗೋವಾ | 2 | 175478 | 91361 | 84117 | 14529 | 7503 | 7026 |
| 23 | ಕೇರಳ | 9 | 2509719 | 1230946 | 1278773 | 45337 | 22342 | 22995 |
| 24 | ತಮಿಳನಾಡು | 63 | 14175792 | 7192334 | 6983458 | 2530289 | 1275812 | 1254477 |
| 25 | ಪಾಂಡಿಚೇರಿ | 3 | 512705 | 256185 | 256520 | 72275 | 35564 | 36711 |
| 26 | ಅಂಡಮಾನ/ನಿಕೋಬಾರ | 1 | 100186 | 55507 | 44679 | 16265 | 8866 | 7399 |

ಕಳೆದ ಎರಡು ದಶಕಗಳಲ್ಲಿ, ಭಾರತದಲ್ಲಿ ಕೊಳಚೆಪ್ರದೇಶಗಳ ಸಂಖ್ಯೆಯು ದ್ವಿಗುಣ ಗೊಂಡಿವೆ. ನಮ್ಮ ದೇಶದ ಕೊಳಚೆ ಪ್ರದೇಶದ ಜನಸಂಖ್ಯೆಯು ಬ್ರಿಟನ್ ದೇಶದ ಒಟ್ಟು ಜನಸಂಖ್ಯೆಯನ್ನು ಮೀರುತ್ತದೆ ಎಂದು ಸರ್ಕಾರವು ಘೋಷಿಸಿದೆ. ಭಾರತದ ನಗರದ ಬಡತನ ನಿರ್ಮೂಲನಾ ಮಂಡಳಿಯ ಮಂತ್ರಿಗಳಾದ ಕುಮಾರಿ ಸೆಲ್ವ ರವರ ಪ್ರಕಾರ 1981 ರಲ್ಲಿ 27.9 ಮಿಲಿಯನ್ ಇದ್ದ ಕೊಳಚೆ ಪ್ರದೇಶದ ಜನಸಂಖ್ಯೆ 2001 ರಲ್ಲಿ 61.8 ಮಿಲಿಯನ್‌ಗೆ ಏರಿದೆ. ಭಾರತವು ಆರ್ಥಿಕವಾಗಿ ಕಳೆದ ನಾಲ್ಕು ವರ್ಷಗಳಲ್ಲಿ ಶೇಕಡಾ 8% ರಷ್ಟು ಏಳಿಗೆಯನ್ನು ಪಡೆದಿದೆ.

ಆದರೂ ದೇಶದ 1/4 ಭಾಗ ಜನಸಂಖ್ಯೆಯು ಒಂದು ದಿನಕ್ಕೆ 50 ಪೈಸೆಗಿಂತಲೂ ಕಡಿಮೆ ಆದಾಯವನ್ನು ಪಡೆಯುತ್ತಿದ್ದಾರೆ. ನಮ್ಮ ದೇಶದಲ್ಲಿ ಕೊಳಚೆ ಪ್ರದೇಶದ ಬೆಳವಣಿಗೆಗೆ ಜನಸಂಖ್ಯಾ ಸ್ಫೋಟವು ಮುಖ್ಯ ಕಾರಣವಾಗಿದೆ. ಕೃಷಿಯಿಂದ ಬರುವ ಆದಾಯದಿಂದ ತೃಪ್ತನಾಗದ ರೈತನು ನಗರಗಳಿಗೆ ವಲಸೆ ಬರುತ್ತಿರುವುದು ಕೊಳಚೆ ಪ್ರದೇಶಗಳನ್ನು ನಿರ್ಮಿಸುತ್ತಿದೆ. ಭಾರತದಲ್ಲಿ ಏರುತ್ತಿರುವ ಕೊಳಚೆ ಪ್ರದೇಶಗಳು ಜನತೆಗೆ ಗೃಹ ನಿರ್ಮಿಸಲು ಸರ್ಕಾರದ ವೈಫಲ್ಯತೆಯನ್ನು ತೋರಿಸುತ್ತದೆ. ಭಾರತದ ಆರ್ಥಿಕ ರಾಜಧಾನಿ ಮತ್ತು ಚಲನಚಿತ್ರ ರಾಜಧಾನಿಯಾದ ಮುಂಬೈನಗರದ ಜನಸಂಖ್ಯೆಯು 6.5 ಮಿಲಿಯನ್ ಇರುತ್ತದೆ. ನಗರದ ಅರ್ಧದಷ್ಟು ಜನರು ಕೊಳಚೆ ಪ್ರದೇಶಗಳಲ್ಲಿ ವಾಸಿಸುತ್ತಿದ್ದಾರೆ. ಏಷ್ಯಾದ ಅತೀ ದೊಡ್ಡ ಕೊಳಚೆ ಪ್ರದೇಶವು "ಧಾರಾವಿ" ಒಂದು ಮಿಲಿಯನ್ ಜನಸಂಖ್ಯೆ ಹೊಂದಿರುವ ಪ್ರದೇಶ ಮುಂಬೈ ನಗರದಲ್ಲಿದೆ.

ಭಾರತದ ರಾಜಧಾನಿಯಾದ ದೆಹಲಿ ಕೊಳಚೆ ಪ್ರದೇಶದ ಜನಸಂಖ್ಯೆ (1.8 ಮಿಲಿಯನ್) ದೇಶದಲ್ಲಿ ಎರಡನೇಯ ಸ್ಥಾನ ಪಡೆದಿದೆ. ಕೊಲ್ಕತ್ತ ಪ್ರದೇಶದ ಜನಸಂಖ್ಯೆ (1.5 ಮಿಲಿಯನ್) ಮೂರನೇಯ ಸ್ಥಾನ ಪಡೆದಿದೆ. ಕುಮಾರಿ ಸೆಲ್ವ ರವರ ಪ್ರಕಾರ, ಭಾರತ ಕೊಳಚೆ ಪ್ರದೇಶದ ನಿವಾಸಿಗಳಿಗೆ 24 ಗೃಹ ಘಟಕಗಳನ್ನು ನಿರ್ಮಿಸಲು ನಾಲ್ಕು ಟ್ರಿಲಿಯನ್ ರೂಪಾಯಿಗಳು ವೆಚ್ಚವಾಗುತ್ತವೆ. ಇದಕ್ಕಾಗಿ ಇವರು ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳಿಗೆ ಜಂಟಿಯಾಗಿ ಈ ಕಾರ್ಯ ನಡೆಸಲು ಕರೆ ನೀಡಿದ್ದಾರೆ. ಇದಲ್ಲದೆ ಹಲವಾರು ಯೋಜನೆಗಳನ್ನು ಹಾಕಿದ್ದಾರೆ. ಆದರೆ ಪೌರ ಹಕ್ಕುಗಳ ಸಂಸ್ಥೆಗಳು ಸರ್ಕಾರವನ್ನು ಕೊಳಚೆ ಪ್ರದೇಶದ ನಿರ್ಮೂಲನೆಯಲ್ಲಿ ನಿರ್ಲಕ್ಷ್ಯವಾಗಿದೆ ಎಂದು ದೂಷಿಸುತ್ತವೆ.

ನಗರದ ಬಡವರ ಜೊತೆ ಕಾರ್ಯ ನಿರ್ವಹಿಸುತ್ತಿರುವ "ಯುವ ಅರ್ಬನ್" ಸಂಸ್ಥೆಯ ಮಂಜ್ ವರ್ಗಿಸ್ ರವರು ಸರ್ಕಾರವು ಭೂಮಿ ಮತ್ತು ಮನೆಗಳ ಬೆಲೆ ಸರ್ಕಾರ ಸಾಮಾನ್ಯ ಮನುಷ್ಯನಿಗೆ ಎಟುಕದಂತೆ ಏರಿಸಿರುವುದರಿಂದ ಕೊಳಚೆಪ್ರದೇಶಗಳು ಬೆಳೆಯುತ್ತವೆ ಎಂದಿದ್ದಾರೆ.

## ಭಾರತದಲ್ಲಿರುವ ಬೃಹತ್ ನಗರಗಳ ಜೀವನ

ಭಾರತವು ಜನಸಂಖ್ಯೆಯಲ್ಲಿ ವಿಶ್ವದಲ್ಲಿಯೇ ಎರಡನೇಯ ಸ್ಥಾನ ಪಡೆದಿದೆ. ಮೊದಲ ಸ್ಥಾನ ಚೀನಾ ಪಡೆದಿದೆ. ವಿಶ್ವಸಂಸ್ಥೆಯ ಪ್ರಕಾರ 2050 ರವರಗೆ ಭಾರತವು ಚೀನಾವನ್ನು ಮೀರಿಸಿ ಮೊದಲನೇಯ ಸ್ಥಾನ ಗಳಿಸುತ್ತದೆ. ವಾರ್ಷಿಕವಾಗಿ ಶೇಕಡಾ 27% ರಂತೆ ಬೆಳೆದು ಭಾರತ ವಿಶ್ವದ ಶೇಕಡಾ 16.7% ರಷ್ಟು ಜನಸಂಖ್ಯೆಯನ್ನು ಹೊಂದಿದೆ. ಚೀನಾವು ವಾರ್ಷಿಕವಾಗಿ ಶೇಕಡಾ 1% ರಂತೆ ಬೆಳೆಯುತ್ತಿದೆ ಮತ್ತು ವಿಶ್ವವು ಶೇಕಡಾ 1.4% ರಂತೆ ಬೆಳೆಯುತ್ತಿದೆ. ನಗರದ ಕೊಳಚೆಪ್ರದೇಶಗಳಲ್ಲಿ 40 ಮಿಲಿಯನ್ ಜನಸಂಖ್ಯೆಯಿದೆ. ಭಾರತದಲ್ಲಿ 600ಕ್ಕೂ ಹೆಚ್ಚು ನಗರಗಳಲ್ಲಿ ಕೊಳಚೆಪ್ರದೇಶಗಳು ಕಂಡು ಬರುತ್ತವೆ. ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ಕೊಳಚೆಪ್ರದೇಶ ಮುಂಬೈನಲ್ಲಿದ್ದರೆ(48.9%)  ಅತೀ ಕಡಿಮೆ ಜನಸಂಖ್ಯೆ ಪಟ್ನಾ(0.25%) ದಲ್ಲಿದ್ದೆ.

## 2001 ನೇ ಇಸವಿಯ ಪ್ರಕಾರ ದೇಶದಲ್ಲಿರುವ ಬೃಹತ್ ನಗರ ಪ್ರದೇಶಗಳು

| ಕ್ರಮಸಂಖ್ಯೆ | ನಗರ/ನಗರ ಪ್ರದೇಶಗಳು | ಜನಸಂಖ್ಯೆ |
|---|---|---|
| 1 | ಮುಂಬೈ | 16368000 |
| 2 | ಕೊಲ್ಕತ್ತ | 13217000 |
| 3 | ದೆಹಲಿ | 12791000 |
| 4 | ಚನ್ನೈ | 6425000 |
| 5 | ಬೆಂಗಳೂರು | 5687000 |
| 6 | ಹೈದ್ರಾಬಾದ್ | 5534000 |
| 7 | ಅಹಮದಾಬಾದ್ | 4519000 |
| 8 | ಪುಣೆ | 3756000 |
| 9 | ಸೂರತ್ | 2811000 |
| 10 | ಕಾನ್ಪುರ್ | 2690000 |
| 11 | ಜೈಪುರ | 2324000 |
| 12 | ಲಖ್ನೊ | 2267000 |
| 13 | ನಾಗಪುರ | 2123000 |
| 14 | ಪಟ್ನಾ | 1707000 |
| 15 | ಇಂದೋರ್ | 1639044 |
| 16 | ವಡೊದರಾ | 1492000 |
| 17 | ಭೊಪಾಲ್ | 1455000 |
| 18 | ಕೊಯಿಮುತ್ತುರ್ | 1446000 |
| 19 | ಲುಧಿಯಾನ | 1395000 |
| 20 | ಕೊಚ್ಚಿ | 1355000 |
| 21 | ವಿಶಾಖಪಟ್ಟಣಂ | 1329000 |
| 22 | ಆಗ್ರಾ | 1321000 |
| 23 | ವಾರಣಾಸಿ | 1212000 |
| 24 | ಮದುರೈ | 1195000 |
| 25 | ಮಿರಟ್ | 1167000 |
| 26 | ನಾಶಿಕ | 1152000 |
| 27 | ಜಬ್ಬಲಪುರ | 1117000 |
| 28 | ಜಮಶೆಡಪುರ | 1102000 |
| 29 | ಅಸನಸೊಲ್ | 1090000 |
| 30 | ಧನಬಾದ್ | 1064000 |
| 31 | ಫರಿದಾಬಾದ್ | 1055000 |
| 32 | ಅಲಹಾಬಾದ್ | 1050000 |
| 33 | ಅಮೃತಸರ್ | 1011000 |
| 34 | ವಿಜಯವಾಡ | 1011000 |
| 35 | ರಾಜಕೋಟ್ | 1002000 |

## ವಿಶ್ವಸಂಸ್ಥೆಯ ವರದಿಯ ಮುಖ್ಯಾಂಶಗಳು

ಮುಂದುವರೆಯಿತ್ತಿರುವ ರಾಷ್ಟ್ರಗಳ ಶೇಕಡಾ 43% ಜನರು ಕೊಳಚೆಪ್ರದೇಶದ ವಾಸಿಗಳು ಕಡಿಮೆ ಮುಂದುವರಿದ ರಾಷ್ಟ್ರಗಳಲ್ಲಿ 78.2% ಮತ್ತು ಮುಂದುವರೆದ ರಾಷ್ಟ್ರಗಳಲ್ಲಿ 6%. 1990 ನೇ ಇಸವಿಯಿಂದ ವಿಶ್ವದ ಒಟ್ಟು ಕೊಳಚೆ ಪ್ರದೇಶದ ಜನಸಂಖ್ಯೆಯು 2 ಬಿಲಿಯನ್ ನಷ್ಟು ಏರುವ ಸಾಧ್ಯತೆ ಇದೆ. ಕೊಲ್ಕತ್ತದ ಶೇಕಡಾ 41% ಕೊಳಚೆ ಪ್ರದೇಶದ ನವಾಸಿಗಳು 30 ವರ್ಷಗಳಿಗೂ ಹೆಚ್ಚಿನ ಕಾಲ ಕೊಳಚೆ ಪ್ರದೇಶದಲ್ಲಿ ವಾಸಿಸುತ್ತಿದ್ದಾರೆ. ಆಫ್ರೀಕಾದ ನಗರದ ಶೇಕಡಾ 40%–70% ಜನಸಂಖ್ಯೆ ಕೊಳಚೆಪ್ರದೇಶಗಳಲ್ಲಿ ವಾಸಿಸುತ್ತಾರೆ. ಇದು ಇನ್ನೂ ಎರಡು ದಶಕಗಳಲ್ಲಿ ದ್ವಿಗುಣವಾಗಲಿದೆ. ಭಾರತದ ಪುಣೆ ಮತ್ತು ನೈಜೇರಿಯಾದ ಇಬಾದನ್‌ನಲ್ಲಿ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳು, ಪ್ರಾಧ್ಯಾಪಕರು, ಸರ್ಕಾರಿ ನೌಕರರು, ಖಾಸಗಿ ಸಂಸ್ಥೆ ನೌಕರರು ಕೊಳಚೆಪ್ರದೇಶದ ನವಾಸಿಗಳಾಗಿರುತ್ತಾರೆ. ಬ್ಯಾಂಕಾಕ್‌ನ ಕೊಳಚೆಪ್ರದೇಶದ ಪ್ರತಿಯೊಂದು ಮನೆಗಳಲ್ಲಿ ಕಲರ್ ಟಿವಿ ಇರುತ್ತದೆ. ಕೊಳಚೆ ಪ್ರದೇಶಗಳಲ್ಲಿ ಮಿಶ್ರಸಂಸ್ಕೃತಿಗಳ ಹೊಂದಾಣಿಕೆಯ ಕಾರಣದಿಂದ ಹೊಸ ಕಲಾತ್ಮಕ ಸಂಗೀತ ಮತ್ತು ನೃತ್ಯ ಶೈಲಿಗಳು ಹುಟ್ಟಿಕೊಂಡಿವೆ. ಉದಾಹರಣೆಗೆ:– ಜಾಜ್, ರಾಕ್ ಆಂಡ್ ರೋಲ್, ಫಂಕ್, ಹಿಪಾಪ್, ಬ್ರೇಕ್ ಡ್ಯಾನ್ಸ್ ಇತ್ಯಾದಿಗಳು.

# ಅಧ್ಯಾಯ

## ಸಂವಿಧಾನದ ಅನುಚ್ಛೇದ 243 ಜೆಡ್‌ಎ (74ರ) ಅಧಿನಿಯಮ 1992.

ಸಂವಿಧಾನದ 74ನೇ ತಿದ್ದುಪಡಿ ಅಧಿನಿಯಮದ ಮತ್ತೊಂದು ಮುಖ್ಯ ಲಕ್ಷಣವೆಂದರೆ ನಗರ ಸ್ಥಳೀಯ ನಕಾಯಗಳಿಗೆ ಚುನಾವಣೆಗಳನ್ನು ನಡೆಸಲು ಶಾಸನಬದ್ಧ ಪ್ರಾಧಿಕಾರದ ನೇಮಕಾತಿ ಅಧಿನಿಯಮವು ಎಲ್ಲ ಪುರಸಭೆಗಳ ಚುನಾವಣೆಗಳ ಮತದಾರರ ಪಟ್ಟಿಯ ಸಿದ್ಧತೆ, ಮತ್ತು ಚುನಾವಣೆ ನಡೆಸುವಿಕೆಯ ಮೇಲ್ವಿಚಾರಣೆ, ನಿರ್ದೇಶನ ಮತ್ತು ನಿಯಂತ್ರಣಕ್ಕಾಗಿ ಒಂದು ಸ್ವತಂತ್ರ ರಾಜ್ಯ ಚುನಾವಣಾ ಆಯೋಗವನ್ನು ರಚಿಸಲು ಅವಕಾಶ ಒದಗಿಸುತ್ತದೆ. ಆಯೋಗದಲ್ಲಿ ರಾಜ್ಯಪಾಲರಿಂದ ನೇಮಿತರಾದ ರಾಜ್ಯ ಚುನಾವಣಾ ಆಯುಕ್ತರಿರುತ್ತಾರೆ. ಸಂವಿಧಾನದ ಮೇರೆಗೆ ರಾಜ್ಯ ಚುನಾವಣಾ ಆಯುಕ್ತರ ನೇಮಕಾತಿಯ ಅಧಿಕಾರವನ್ನು ಸಂಬಂಧಪಟ್ಟ ರಾಜ್ಯದ ರಾಜ್ಯಪಾಲರಿಗೆ ನೀಡಲಾಗಿದೆ. ರಾಜ್ಯ ಚುನಾವಣಾ ಆಯುಕ್ತರ ಸೇವಾವಧಿ ಮತ್ತು ಸೇವಾಷರತ್ತುಗಳ ಕುರಿತಂತೆ ಶಾಸನದ ಉಪಬಂಧಗಳನ್ನು ರಚಿಸಲು ರಾಜ್ಯದ ಶಾಸಕಾಂಗಕ್ಕೆ ಅಧಿಕಾರ ನೀಡಲಾಗಿದೆ. ಇದು ರಾಜ್ಯ ಸರ್ಕಾರದ ನಿಯಂತ್ರಣವನ್ನು ಕಡಿಮೆ ಮಾಡುತ್ತದೆ ಮತ್ತು ಚುನಾವಣಾ ವ್ಯವಸ್ಥೆಯಲ್ಲಿ ನಿಷ್ಪಕ್ಷಪಾತ ಮತ್ತು ಸ್ವಾತಂತ್ರ್ಯವನ್ನು ತರುತ್ತದೆ. ರಾಜ್ಯ ಚುನಾವಣಾ ಆಯೋಗಗಳು ನಿಯತವಾಗಿ ಚುನಾವಣೆಗಳನ್ನು ನಡೆಸುವ ಜವಾಬ್ದಾರಿ ಹೊತ್ತಿರುತ್ತವೆ. ನಗರ ಸ್ಥಳೀಯ ನಕಾಯಗಳ ರದ್ಧಿಯಾತಿಗೆ ಅವಕಾಶವನ್ನು ಕಡಿಮೆ ಮಾಡಲಾಗಿದೆ.

### ನಗರ ಸ್ಥಳೀಯ ನಿಕಾಯಗಳ ಪ್ರಕಾರ್ಯ ವ್ಯಾಪ್ತಿ (ಅನುಚ್ಛೇದ 243 ಡಬ್ಲ್ಯು)

ಸಂವಿಧಾನದ 74ನೇ ತಿದ್ದುಪಡಿ ಅಧಿನಯಮ 1992 ರ 12ನೇ ಪರಿಶಿಷ್ಟವು ಸಂಬಂಧಪಟ್ಟ ರಾಜ್ಯಗಳಲ್ಲಿನ ನಗರಸ್ಥಳೀಯ ನಿಕಾಯಗಳಿಗೆ ಪ್ರಕಾರ್ಯಗಳನ್ನು ವಹಿಸಿಕೊಡಲು ರಾಜ್ಯ ಶಾಸಕಾಂಗಗಳಿಗೆ ಒಂದು ಆಧಾರವನ್ನು ಒದಗಿಸುತ್ತದೆ. 12ನೇ ಪರಿಶಿಷ್ಟದ ಮೇರೆಗೆ ಹದಿನೆಂಟು ಕಾರ್ಯಖಂಡಗಳನ್ನು ಗೊತ್ತು ಪಡಿಸಿ ನಗರ ಸ್ಥಳೀಯ ನಿಕಾಯಗಳ ಪ್ರಕಾರ್ಯವ್ಯಾಪ್ತಿಗೆ ತಂದು ಅದರ ಕಾರ್ಯಸೂಚಿಯನ್ನಾಗಿ ಮಾಡಲಾಗಿದೆ. ಅನುಚ್ಛೇದ 243 ಡಬ್ಲ್ಯು ಮೇರೆಗೆ ಒಂದು ರಾಜ್ಯ ಶಾಸಕಾಂಗವು ನಗರ ಸಭೆಗಳಿಗೆ 12ನೇ ಪರಿಶಿಷ್ಟದಲ್ಲಿ ಪಟ್ಟಿ ಮಾಡಿದ ಪ್ರಕಾರ್ಯಗಳ ಉಲ್ಲೇಖವನ್ನು ಒಳಗೊಂಡಂತೆ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಯೋಜನೆಗಳ ಸಿದ್ಧತೆ ಮಾಡುವ ಕುರಿತಂತೆ ಮತ್ತು ಅವರಿಗೆ ವಹಿಸಿಕೊಡಲಾದ ಪ್ರಕಾರ್ಯಗಳ ಕಾರ್ಯನಿರ್ವಹಣೆ ಮತ್ತು ಕಾರ್ಯ ಯೋಜನೆಗಳ ಅನುಷ್ಠಾನದ ಅಧಿಕಾರ ಮತ್ತು ಜವಾಬ್ದಾರಿಗಳನ್ನೂ ಸಹ ಕೊಡಬಹುದು.

### ಸಂವಿಧಾನದ 74ನೇ ತಿದ್ದುಪಡಿ ಅಧಿನಿಯಮ 1992 ರ ಮೇರೆಗಿನ ಪ್ರಕಾರ್ಯಗಳು (ಅನುಚ್ಛೇದ 243 –ಡಬ್ಲ್ಯು)

- ಪಟ್ಟಣ ಯೋಜನೆಯೂ ಒಳಗೊಂಡಂತೆ ನಗರ ಯೋಜನೆ.
- ಭೂಬಳಕೆಯ ಮತ್ತು ಕಟ್ಟಡ ನಿರ್ಮಾಣಗಳ ವಿನಿಯಮನ.
- ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಯ ಯೋಜನೆ.
- ರಸ್ತೆಗಳು ಮತ್ತು ಸೇತುವೆಗಳು.
- ಗೃಹ, ಕೈಗಾರಿಕೆ ಮತ್ತು ವಾಣಿಜ್ಯ ಉದ್ದೇಶಗಳಿಗಾಗಿ ನೀರು ಸರಬರಾಜು.

- ಸಾರ್ವಜನಕ ಆರೋಗ್ಯ , ನೈರ್ಮಲ್ಯ ರಕ್ಷಣೆ ಮತ್ತು ಘನತ್ಯಾಜ್ಯ ನಿರ್ವಹಣೆ.
- ಅಗ್ನಿಶಾಮಕ ಸೇವೆಗಳು.
- ನಗರ ಅರಣ್ಯ, ಪರಿಸರ ಸಂರಕ್ಷಣೆ ಮತ್ತು ಪರಿಸರ ವಿಜ್ಞಾನ ಸಂಬಂಧಿ ಅಂಶಗಳ ಉತ್ತೇಜನ:
- ಅಂಗವಿಕಲರು ಮತ್ತು ಬುದ್ಧಿಮಾಂದ್ಯರೂ ಒಳಗೊಂಡಂತೆ ಸಮಾಜದ ದುರ್ಬಲ ವರ್ಗಗಳ ಹಿತಾಸಕ್ತಿಗಳನ್ನು ಸಂರಕ್ಷಿಸುವುದು.
- ಕೊಳೆಗೇರಿಗಳ ಸುಧಾರಣೆ ಮತ್ತು ಮೇಲ್ದರ್ಜೆಗೇರಿಸುವುದು.
- ನಗರ ಬಡತನ ತಗ್ಗಿಸುವುದು.
- ಉದ್ಯಾನಗಳು, ಉದ್ಯಾನವನಗಳು, ಆಟದ ಮೈದಾನಗಳು ಇವೇ ಮುಂತಾದ ಸಾರ್ವಜನಕ ಸೌಕರ್ಯಗಳು ಮತ್ತು ಸೌಲಭ್ಯಗಳ ಉಪಬಂಧ ಕಲ್ಪಿಸುವುದು.
- ಸಾಂಸ್ಕೃತಿಕ, ಶೈಕ್ಷಣಿಕ ಮತ್ತು ಸೌಂದರ್ಯದ ಅಂಶಗಳಿಗೆ ಉತ್ತೇಜನ ನೀಡುವುದು.
- ಹೂಳುವುದು ಮತ್ತು ಸ್ಮಶಾನಗಳು, ದಹನ ಮತ್ತು ಚಿತಾಗಾರಗಳು ಹಾಗೂ ವಿದ್ಯುಚ್ಛಕ್ತಿ ಚಿತಾಗಾರಗಳು.
- ದನಗಳ ತೊಟ್ಟಿ ಮತ್ತು ಪ್ರಾಣಿಗಳ ಮೇಲೆ ಕ್ರೌರ್ಯವನ್ನು ತಡೆಗಟ್ಟುವುದು.
- ಜನನ ಮತ್ತು ಮರಣಗಳ ನೋಂದಣಿಯೂ ಒಳಗೊಂಡಂತೆ ಮುಖ್ಯ ಅಂಕಿ ಅಂಶಗಳು.
- ಬೀದಿ ದೀಪ, ವಾಹನ ನಿಲುಗಡೆ, ಬಸ್ ನಲುಗಡೆ ಒಳಗೊಂಡಂತೆ ಸಾರ್ವಜನಿಕ ಸೌಕರ್ಯಗಳು ಮತ್ತು ಸಾರ್ವಜನಿಕ ಅನುಕೂಲಗಳು.
- ಕಸಾಯಿಖಾನೆಗಳ ಮತ್ತು ಚರ್ಮಖಾನೆಗಳ ವಿನಿಯಮನ.

ಇದರನುಸಾರವಾಗಿ ರಾಜ್ಯ ಸರ್ಕಾರಗಳು ಅಧಿನಯಮ ಪಾಲನೆಯ ವೇಳೆಯಲ್ಲಿ ಶಾಸನವನ್ನು ತಿದ್ದುಪಡಿಮಾಡುವಾಗ ನಗರ ಸಭೆಗಳ ಈ ಹಿಂದಿನ ಪ್ರಕಾರ್ಯಗಳನ್ನು ಪುನರೀಕ್ಷಿಸಿ ಹೊಸ ಪ್ರಕಾರ್ಯಗಳ ಸಮುಚ್ಛಯವನ್ನು ರೂಪಿಸಬೇಕೆಂದು ನರೀಕ್ಷಿಸಲಾಗಿದ್ದಿತು. ರಾಜ್ಯವು ನಿರ್ಧರಿಸಿದ ಅಗತ್ಯತೆಗಳಿಗನುಸಾರವಾಗಿ ಪ್ರತಿಯೊಂದು ಪ್ರಕಾರ್ಯವನ್ನೂ ಕಡ್ಡಾಯ ಅಥವಾ ವಿವೇಚನೆ ಎಂದು ನಿರ್ದಿಷ್ಟ ಪಡಿಸಲಾಗಿದೆ.

## ನಗರಸ್ಥಳೀಯ ನಿಕಾಯಗಳ ಪಾತ್ರ ಮತ್ತು ಪ್ರಕಾರ್ಯಗಳನ್ನು ವ್ಯಾಪ್ತಿಯನ್ನು ಗುರುತಿಸುವುದು.

ಪುರಸಭಾ ಪ್ರಕಾರ್ಯಗಳಲ್ಲಿ ಎರಡು ಸ್ಥೂಲ ವರ್ಗಗಳಿವೆ. ಕ್ರಿಯಾಶೀಲ ಮತ್ತು ನಿಭಾವಣೆಯದು. ಕ್ರಿಯಾಶೀಲ ಪಾತ್ರವು ನಗರದ ಬೆಳವಣಿಗೆಯ ವೇಳೆಯಲ್ಲಿ ಸ್ಥಳೀಯ ಸರ್ಕಾರವು ಸೇವೆಗಳಿಗೆ ಸಂಬಂಧಿಸಿದಂತೆ ಪೂರ್ವನಿರ್ಬಂಧ ಮತ್ತು ಯೋಜನೆ ಮಾಡುವ ಸಲುವಾಗಿ ಮುಂದಾಳತ್ವ ವಹಿಸಬೇಕಾದಂತಹ ಪ್ರಕಾರ್ಯಗಳನ್ನು ಒಳಗೊಂಡಿರುತ್ತದೆ. ನಿಭಾವಣೆಯ ಪಾತ್ರವು ಒಂದು ಸ್ಥಳೀಯ ನೀಕಾಯವು ಮಾಮೂಲಿಯಾಗಿ ಸೇವೆಗಳ ಉಪಬಂಧ ಮತ್ತು ನಿರ್ವಹಣೆಯ ಪೂರೈಕೆಗಾಗಿ ಕೈಗೊಳ್ಳಬೇಕಾಗದ ಪ್ರಕಾರ್ಯಗಳನ್ನು ಒಳಗೊಳ್ಳುತ್ತದೆ. ಸಂವಿಧಾನದ 74ನೇ ತಿದ್ದುಪಡಿ ಅಧಿನಿಯಮದಲ್ಲಿ ಹನ್ನೆರಡನೇ ಪರಿಶಿಷ್ಟವನ್ನು ಸೇರಿಸಿರುವುದರ ಉದ್ದೇಶ ತತ್ಸಂಬಂಧಿ ಕ್ಷೇತ್ರಗಳಲ್ಲಿ ಸ್ಥಳೀಯ ಪ್ರಾಧಿಕಾರಗಳ ಸ್ವಯಮಾಧಿಕಾರವನ್ನು ಕಾಯ್ದುಕೊಳ್ಳುವ ಸಲುವಾಗಿ ಪ್ರಕಾರ್ಯಗಳನ್ನು ಗೊತ್ತು ಪಡಿಸಲು ಮತ್ತು ನಿರ್ದಿಷ್ಟ ಪಡಿಸಲು.ಇದಕ್ಕಿಂತ ಹೆಚ್ಚು ಮುಖ್ಯವಾಗಿ ಸ್ಥಳೀಯ ಪ್ರಾಧಿಕಾರಗಳು ಒಂದು ಕ್ರಿಯಾಶೀಲ ಪಾತ್ರವನ್ನು ವಹಿಸುವಂತೆ ಅನುವುಮಾಡುವಂತಹ ಪ್ರಕಾರ್ಯಗಳನ್ನೂ ಸಹ ಸೇರಿಸಲಾಗಿದೆ. ಇದು ವಿಶೇಷತಃ ಹೊಸದಾಗಿ ನಗರೀಕರಣಗೊಂಡ ಮತ್ತು ನಗರವಾಗುತ್ತಿರುವ ಪ್ರದೇಶಗಳಿಗೆ ಅಂದರೆ ಉನ್ನತಮಟ್ಟದ ನಗರಬಡತನ ಎದುರಿಸುತ್ತಿರುವ ಸಣ್ಣ ಪಟ್ಟಣಗಳು ಮತ್ತು ನಗರಗಳಿಗೆ ಉಪಯುಕ್ತವೆನಸಿರುತ್ತದೆ. ಪ್ರತಿಯೊಂದು ಸ್ಥಳೀಯ ನಿಕಾಯವೂ ತಮ್ಮ ತಮ್ಮ ನಿರ್ದಿಷ್ಟ ಹಿತಾಸಕ್ತಿ ಮತ್ತು ಅಗತ್ಯತೆಗಳಿಗೆ ಅನುಸಾರವಾಗಿ ಈ ಪ್ರಕಾರ್ಯಗಳಲ್ಲಿ

ಕೆಲವನ್ನು ಆದ್ಯತೆಯಾಗಿಟ್ಟುಕೊಳ್ಳಬಹುದು. ಉದಾಹರಣೆಗೆ ನಗರ ಸ್ಥಳೀಯ ನಿಕಾಯಗಳ ಒಂದು ಪ್ರಕಾರ್ಯವಾದ ಬಡತನ ತಗ್ಗಿಸುವಿಕೆಯು ಕೇರಳದಲ್ಲಿ ಕಡ್ಡಾಯ ಪ್ರಕಾರ್ಯವಾಗಿದೆ.

ಈ ಹಿಂದೆ ಹೇಳಿದಂತೆ ಸಂವಿಧಾನ 74ನೇ ತಿದ್ದುಪಡಿ ಅಧಿನಿಯಮ 1992ರ ಮೇರೆಗೆ ನಗರ ಸ್ಥಳೀಯ ನಿಕಾಯಗಳ ಪಾತ್ರ ಮತ್ತು ಜವಾಬ್ದಾರಿಗಳನ್ನು ವಿಸ್ತರಿಸಲಾಗಿದೆ ಮತ್ತು 12ನೇ ಪರಿಶಿಷ್ಟದ ಮೇರೆಗೆ ಅವುಗಳ ಚಟುವಟಿಕೆಗಳಿಗೆ ಹೊಸ ಪ್ರಕಾರ್ಯಗಳನ್ನು ಸೇರಿಸಲಾಗಿದೆ. ಪ್ರಕಾರ್ಯಗಳನ್ನು ವಹಿಸುಕೊಡುವುದಕ್ಕೆ ಸಂಬಂಧಿಸಿದಂತೆ ಆರ್ಥಿಕ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದ ಯೋಜನೆಯು ಸಂವಿಧಾನದ 74ನೇ ತಿದ್ದುಪಡಿ ಅಧಿನಿಯಮದ ಮೇರೆಗೆ ಪೌರನಿಕಾಯದ ಒಂದು ಪ್ರಮುಖ ಜವಾಬ್ದಾರಿಯೆಂದು ಗುರುತಿಸಲಾಗಿದೆ. ನಗರ ಅರಣ್ಯೀಕರಣ, ಪರಿಸರ ರಕ್ಷಣೆ ಮತ್ತು ಪರಿಸರ ವಿಜ್ಞಾನ ಸಂಬಂಧಿ ಅಂಶಗಳು ಇವುಗಳನ್ನು ಪೌರನಕಾಯಗಳ ಜವಾಬ್ದಾರಿ ಎಂದು 12ನೇ ಪರಿಶಿಷ್ಟದಲ್ಲಿ ನಿರ್ದಿಷ್ಟತಃ ಉಲ್ಲೇಖಿಸಲಾಗಿದೆ. ಈ ಅಧಿನಿಯಮವು ಜಾರಿಗೆ ಬಂದಿರುವುದರಿಂದ ಸ್ಥಳೀಯಮಟ್ಟದಲ್ಲಿ ನಗರ ಪರಿಸರದ ನಿಭಾವಣೆಯು, ವಿಶೇಷತಃ ವಿವಿಧ ಪಣಧಾರಿಗಳ ಭಾಗಿದಾರಿಕೆಯೊಂದಿಗೆ ಕೈಗೆತ್ತಿಕೊಂಡಲ್ಲಿ ಹೆಚ್ಚು ಪರಿಣಾಮಕಾರಿಯಾಗುವುದೆಂದು ನಿರೀಕ್ಷಿಸಲಾಗಿದೆ.

ಪರಿಸರೀಯ ಸ್ಥಿತಿಗತಿಯ ವರದಿ (ಇಎಸ್‌ಆರ್)ಯನ್ನು ರೂಪಿಸುವ ಅಗತ್ಯತೆಯನ್ನು 12ನೇ ಪರಿಶಿಷ್ಟದ ಪಟ್ಟಿಯ ಚಟುವಟಿಕೆಗಳಲ್ಲಿ ಸೇರಿಸಿರುವುದನ್ನು ಶಾಸನಬದ್ಧ ಕಡ್ಡಾಯ ಚಟುವಟಿಕೆಯೆಂಬ ದೃಷ್ಟಿಕೋನದಿಂದ ಮಾತ್ರವೇ ನೋಡಬಾರದು. ಇದನ್ನು ಎಲ್ಲ ಚುನಾಯಿತ ಪೌರ ಪ್ರತಿನಿಧಿಗಳೂ, ಪೌರಸಿಬ್ಬಂದಿಯೂ ಮತ್ತು ಇತರ ಪಣಧಾರಿಗಳೂ ನಗರ ಮತ್ತು ಅದರ ಪ್ರಜೆಗಳ ಉಳಿವಿನ ಖಾತ್ರಿಯಸಲುವಾಗಿ ನಗರ ಪರಿಸರದ ಅಗತ್ಯತೆಗಳು ಪೂರೈಕೆಯಾಗಬೇಕೆಂಬುದನ್ನು ಅಂತರ್ಗತ ಮಾಡಿಕೊಳ್ಳಬೇಕಾಗಿದೆ. ಸ್ಥಳೀಯನಿಕಾಯವು ಈ ಪರಿಕಲ್ಪನೆಗಳನ್ನು ಪರಿಹರಿಸಲು ಸೂಕ್ತ ನೀತಿಗಳ ಮೂಲಕ ಒಂದು ಯುಕ್ತವಾದ ಮತ್ತು ಸ್ಥಿರವಾದ ಚೌಕಟ್ಟನ್ನು ವೃದ್ಧಿಪಡಿಸುವ ಅಗತ್ಯವಿದೆ; ತನ್ಮೂಲಕ ನಗರ ಪರಿಸರ ನಭಾವಣೆಯನ್ನು ಅನುಷ್ಠಾನ ಮಾಡಬಹುದಾಗಿದೆ. ವಿಕೇಂದ್ರಿಕರಣ ಮತ್ತು ನಗರ ಪ್ರಜೆಗಳ ಜೀವನ ಗುಣಮಟ್ಟವನ್ನು ಬಲಪಡಿಸುವಸಲುವಾಗಿ ನಗರಾಳ್ವಿಕೆಯು ಪರಿಸರ ನಿಭಾವಣೆಯ ಒಂದು ನಿರ್ದಿಷ್ಟ ಚೌಕಟ್ಟನ್ನು ಹೊಂದಿರಬೇಕಾದ ಅಗತ್ಯವಿದೆ.

ನಗರ ಬಡತನ ತಗ್ಗಿಸುವಿಕೆಯು ನಗರ ಸ್ಥಳೀಯ ನಿಕಾಯದ ಪ್ರತಿಸ್ಪಂದನ ಮತ್ತು ಕಾರ್ಯನಿರ್ವಹಣೆ ಮತ್ತು ನಗರ ಸೇವೆಗಳ ಗುಣಮಟ್ಟಕ್ಕೆ ನೇರ ಸಂಪರ್ಕ ಹೊಂದಿದೆ. 12ನೇ ಪರಿಶಿಷ್ಟವು ಬಡತನ ತಗ್ಗಿಸುವಿಕೆಯನ್ನು ನಗರ ಸ್ಥಳೀಯ ನಿಕಾಯಗಳ ಪ್ರಕಾರ್ಯವ್ಯಾಪ್ತಿಯ ಪಟ್ಟಿಯಲ್ಲಿ ತಂದಿರುತ್ತದೆ.

ಈ ಪ್ರಕಾರ್ಯಗಳನ್ನು ರಾಜ್ಯದ ಅನುಪಾಲನಾ ಶಾಸನ ಮತ್ತು ರಾಜ್ಯದೊಳಗೆ ಸ್ಥಳೀಯ ನಕಾಯಗಳ ನಿಯಂತ್ರಕದ ನರ್ದಿಷ್ಟ ಶಾಸನ ರೂಪಕ್ಕೆ ಪರಿವರ್ತಿಸಲಾಗಿದೆ. ಪ್ರತಿಯೊಂದು ಪ್ರಕಾರ್ಯವನ್ನು ರಾಜ್ಯವು ನಿರ್ಧರಿಸಿದ ಆದ್ಯತೆಗಳನುಸಾರವಾಗಿ ಕಡ್ಡಾಯ ಅಥವಾ ವಿವೇಚನೆಯ ಪ್ರಕಾರ್ಯವೆಂದು ನಿರ್ದಿಷ್ಟಪಡಿಸಲಾಗಿದೆ. ಉದಾಹರಣೆಗೆ ನಗರ ಸ್ಥಳೀಯ ನಕಾಯಗಳ ಒಂದು ಪ್ರಕಾರ್ಯವಾಗಿರುವ ಬಡತನ ತಗ್ಗಿಸುವಿಕೆಯು ಕೇರಳದಲ್ಲಿ ಕಡ್ಡಾಯ ಪ್ರಕಾರ್ಯವಾಗಿದ್ದರೆ ತಮಿಳುನಾಡಿನಲ್ಲಿ ಇದು ವಿವೇಚನೆಯ ಪ್ರಕಾರ್ಯವಾಗಿರುತ್ತದೆ.

ಮಹಾರಾಷ್ಟ್ರ ಮತ್ತು ಗುಜರಾತ್ ರಾಜ್ಯಗಳಲ್ಲಿ ಹಿಂದಿನ ಪೌರಶಾಸನಗಳು ಕಡ್ಡಾಯ ಪ್ರಕಾರ್ಯಗಳ ಪಟ್ಟಿ ಮಾಡಿದ್ದವು. ಸಂವಿಧಾನ ತಿದ್ದುಪಡಿಯಾದ ಮೇಲೆ ಸಮಾಜೋ–ಆರ್ಥಿಕ ಯೋಜನೆ, ಪರಿಸರ ರಕ್ಷಣೆ ಇವೇ ಮುಂತಾದಂತಹ ಪ್ರಕಾರ್ಯಗಳನ್ನು ಸೇರಿಸಲಾಯಿತು. ಪೌರ ಪ್ರಕಾರ್ಯಗಳು ಮತ್ತು ಜವಾಬ್ದಾರಿಗಳಿಗೆ ಸಂಬಂಧಿಸಿದಂತಹ ಮುಖ್ಯ ಉಪಬಂಧಗಳು ಹಿಂದಿನಂತೆಯೇ ಉಳಿದವು. ದುರದೃಷ್ಟವಶಾತ್, ಅನೇಕ ಇತರ ರಾಜ್ಯಗಳಲ್ಲಿ ಪುರಸಭೆಗಳ ಪ್ರಕಾರ್ಯವ್ಯಾಪ್ತಿಯನ್ನು ಕುರಿತು ಗೊಂದಲವಿರುವಂತೆ ತೋರುತ್ತದೆ.

ಏಕೆಂದರೆ ಈ ರಾಜ್ಯಗಳಲ್ಲಿ ಅನುಪಾಲನಾಶಾಶನವು ಸಂವಿಧಾನವು ಅಗತ್ಯಪಡಿಸಿದಂತೆ ಚುನಾವಣೆಗಳು, ಮೀಸಲಾತಿಗಳು ಮುಂತಾದ ಕೆಲವು ಅತ್ಯವಶ್ಯ ಅಂಶಗಳಿಗಷ್ಟೇ ಪರಿಮಿತವಾಗಿತ್ತು. ಕೆಲವು ರಾಜ್ಯಗಳ ಶಾಸನಗಳನ್ನು ನೋಡಿದರೆ 12ನೇ ಪರಿಶಿಷ್ಟದಲ್ಲಿ ಹಂಚಿಕೆ ಮಾಡಿದ ಬಹುತೇಕ ಪ್ರಕಾರ್ಯಗಳು ರಾಜ್ಯಶಾಸನಗಳಲ್ಲಿ ಒಳಗೊಂಡಿರುವುದನ್ನು ಕಾಣಬಹುದಾಗಿದೆ.

ಸಂವಿಧಾನದಲ್ಲಿ 12ನೇ ಪರಿಶಿಷ್ಟವನ್ನು ಸೇರಿಸಿದ್ದನ್ನು ಅನುಸರಿಸಿ ಬಹುತೇಕ ರಾಜ್ಯಸರ್ಕಾರಗಳು 12ನೇ ಪರಿಶಿಷ್ಟದಲ್ಲಿ ಉಲ್ಲೇಖಿಸಿದ ಪ್ರಕಾರ್ಯಗಳನ್ನು ರಾಜ್ಯದ ಪೌರಶಾಸನಗಳಲ್ಲಿ ಅಳವಡಿಸಿಕೊಂಡಿರುತ್ತಾರೆ. ಆದಾಗ್ಯೂ ಈ ಪ್ರಕಾರ್ಯಗಳನ್ನು ನಿಜ ಅರ್ಥದಲ್ಲಿ ಪೌರನಿಕಾಯಗಳಿಗೆ ವಹಿಸಿಕೊಡಲಾಗಿದೆಯೇ ಎಂಬ ಬಗ್ಗೆ ಸಂದಿಗ್ಧತೆ ಇನ್ನೂ ಇದೆ. ಹಾಗೆ ವಹಿಸಿಕೊಟ್ಟಿದ್ದಲ್ಲಿ ಪೌರನಿಕಾಯಗಳು ಇವುಗಳ ಕಾರ್ಯನಿರ್ವಹಣೆ ಮಾಡುತ್ತಿದೆಯೆ? ಬಹುತೇಕ ರಾಜ್ಯಗಳಲ್ಲಿ ಈಗಲೂ ಅರೆರಾಜ್ಯ ಸಂಸ್ಥೆಗಳು ಪ್ರಕಾರ್ಯಗಳನ್ನು ನಿರ್ವಹಿಸುತ್ತಿವೆ. 1992ರ ಸಂವಿಧಾನ 74ನೇ ತಿದ್ದುಪಡಿ ಅಧಿನಯವು ಈ ಕ್ಷೇತ್ರವನ್ನು ರಾಜ್ಯಗಳ ವಿವೇಚನೆಗೆ ಬಿಟ್ಟಿತ್ತು. ಏಕೆಂದರೆ 12ನೇ ಪರಿಶಿಷ್ಟವು ಕಡ್ಡಾಯ ರೂಪದ್ದಲ್ಲ ಕೇವಲ ಸಲಹಾರೂಪದ್ದು. ಇದೇ ರೀತಿಯಲ್ಲಿ ತತ್ಸಮಾನವಾಗಿ ಸಂಪನ್ಮೂಲಗಳನ್ನು ಮತ್ತು ಆದಾಯೋತ್ಪನ್ನ ಮೂಲಗಳನ್ನು ವಹಿಸಿಕೊಡದೆ ಪ್ರಕಾರ್ಯಗಳನ್ನು ಮಾತ್ರ ವಹಿಸಿಕೊಡುವುದರಿಂದ ಪುರಸಭೆ ಮಟ್ಟದಲ್ಲಿ ಯಾವುದೇ ಧನಾತ್ಮಕ ಫಲಿತಾಂಶ ಕಾಣಲಾರದು.

1992ರ ಸಂವಿಧಾನದ 74ನೇ ತಿದ್ದುಪಡಿ ಅಧಿನಿಯಮವು ನಗರಸ್ಥಳೀಯ ನಿಕಾಯಗಳ ಕಾರ್ಯನಿರ್ವಹಣೆಯಲ್ಲಿ ಕೈಗೆತ್ತಿ ಕೊಳ್ಳಬೇಕಾದ ಹದಿನೆಂಟು ಪೌರಪ್ರಕಾರ್ಯಗಳ ಸಮಗ್ರ ಪಟ್ಟಿಯನ್ನು ಸುಸ್ಪಷ್ಟವಾಗಿ ಒತ್ತಿ ಹೇಳಿರುವುದನ್ನು ಕಾಣಬಹುದಾಗಿದೆ. ಆರ್ಥಿಕ ಮತ್ತು ಸಾಮಾಜಿಕ ದುರ್ಬಲವರ್ಗಗಳ ಸಂರಕ್ಷಣೆ ಮತ್ತು ನಗರ ಬಡತನ ತಗ್ಗಿಸುವಿಕೆ ಇವುಗಳಿಗೆ ಅಗಾಧ ಒತ್ತು ಕೊಡಲಾಗಿದೆ.

**ಆದಾಗ್ಯೂ ಇಲ್ಲಿ ಹಲವಾರು ಅಂಶಗಳನ್ನು ಚರ್ಚಿಸುವ ಅಗತ್ಯವಿದೆ:**

- 12ನೇ ಪರಿಶಿಷ್ಟದಲ್ಲಿ ಪಟ್ಟಿ ಮಾಡಲಾದ ಎಲ್ಲ ಪ್ರಕಾರ್ಯಗಳನ್ನು ನಗರ ಸ್ಥಳೀಯ ನಿಕಾಯಗಳಿಗೆ ವಹಿಸಕೊಡಬೇಕೆ? ಹಾಗಿದ್ದಲ್ಲಿ ಪುರಸಭೆಯ ಮಟ್ಟದಲ್ಲಿ ಯಾವ ಬಗೆಯ ಮತ್ತು ಸ್ವರೂಪದ ಸಾಂಸ್ಥಿಕ ಸುಧಾರಣೆಯು ಆಗಬೇಕಾಗಿದೆ?
- ಪೌರನಿಕಾಯಗಳು ಮತ್ತು ಇತರೆ ಕಾರ್ಯನರ್ವಹಣಾ ಸಂಸ್ಥೆಗಳ ನಡುವೆ ಯಾವ ರೀತಿ ಪ್ರಕಾರ್ಯಗಳ ಹಂಚಿಕೆ ಮಾಡಬೇಕಾಗಿದೆ?
- ಎಲ್ಲ ನಗರ ಸ್ಥಳೀಯ ನಕಾಯಗಳಿಗೆ ವಹಿಸಿಕೊಡಬಹುದಾದ ಬೀಜೋಪಾದಿಯ ಪ್ರಕಾರ್ಯಗಳು ಯಾವುವು? ನಗರ ಸ್ಥಳೀಯ ನಕಾಯದ ಗಾತ್ರ ಮತ್ತು ಅದರ ಪ್ರಕಾರ್ಯದ ವ್ಯಾಪ್ತಿಯ ನಡುವೆ ತಾಳೆಯಾಗುವ ಸಂಬಂಧ ಇರಬೇಕೆ?
- ಪೌರನಿಕಾಯಗಳಿಗೆ ವಹಿಸಿಕೊಡಲಾದ ಪ್ರಕಾರ್ಯಗಳು ಮತ್ತು ಅವುಗಳ ಹಣಕಾಸು ಸ್ಥಿತಿ ಇವುಗಳ ನಡುವೆ ಸೂಕ್ತವಾದ ಸಮತೋಲವನ್ನು ಖಾತ್ರಿ ಪಡಿಸುವುದರ ಮಾರ್ಗ ಯಾವುದು?
- ನಗರ ಸ್ಥಳೀಯ ನಿಕಾಯಕ್ಕೆ ತಾಂತ್ರಿಕ ಮತ್ತು ಯೋಜನಾ ನೆರವು ಹೂಡುವಳಿಯನ್ನು ಒದಗಿಸುವ ಸಾಂಸ್ಥಿಕ ಏರ್ಪಾಡುಗಳು/ಸಾಧನ ವ್ಯವಸ್ಥೆ ಏನಿರಬೇಕು?

**ಹಣಕಾಸು**

ಪ್ರಕಾರ್ಯಗಳನ್ನು ವಹಿಸಿಕೊಟ್ಟು ಆದಾಯ ಮೂಲಗಳನ್ನು ವಹಿಸಿ ಕೊಡದಿದ್ದಲ್ಲಿ ಯಾವುದೇ ಧನಾತ್ಮಕ ಫಲಿತಾಂಶ ಬರುವುದಿಲ್ಲ. ತಿದ್ದುಪಡಿಯು ಈ ಮಹತ್ವದ ಕ್ಷೇತ್ರವನ್ನು ಅಲಕ್ಷ್ಯ ಮಾಡಿದಂತಿದೆ, ಅವುಗಳು ವಿಧಿಸಿ ಪಡೆಯಬಹುದಾದ ತೆರಿಗೆಗಳು, ಕರಗಳು, ಸುಂಕಗಳು, ಶುಲ್ಕಗಳು ಮತ್ತು ಅವುಗಳಿಗೆ

ಕೊಡಬೇಕಾದ ಅನುದಾನಗಳು ಇವುಗಳನ್ನು ರಾಜ್ಯ ಸರ್ಕಾರಗಳ ವಿವೇಚನೆಗೆ ಬಿಡಲಾಗಿದೆ. ಪೌರ ನಿಕಾಯಗಳಿಗೆ ಸಾಕಷ್ಟು ತೆರಿಗೆ ವಿಧಿಸುವ ಮತ್ತು ಇತರ ಆದಾಯ ಮೂಲಗಳ ವಿಷಯಗಳಿಗೆ ಸಂಬಂಧಿಸಿದಂತೆ ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಳ್ಳುವ ಅಧಿಕಾರ ಇರಬೇಕು. ಆದಾಯವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಉಪಯೋಗಿಸುವ ಮಾರ್ಗವಿರಬೇಕು. ಇದರಿಂದ ನಗರದ ಅಗತ್ಯತೆಗಳಿಗೆ ತಕ್ಕಂತೆ ಹಲವಾರು ಸೇವೆಗಳನ್ನು ಒದಗಿಸಲು ಅವರಿಗೆ ಸಾಧ್ಯವಾಗುತ್ತದೆ. ಈ ಸಂಗತಿಯನ್ನು ರಾಜ್ಯ ಸರ್ಕಾರಗಳು ಸಂವಿಧಾನದ 74ನೇ ತಿದ್ದುಪಡಿ ಅಧಿನಿಯಮ 1992ರ ಅನುಪಾಲನಾ ಶಾಸನಗಳನ್ನು ಮಾಡುವಾಗ ಗಮನಕ್ಕೆ ತಂದುಕೊಂಡಂತಿಲ್ಲ. ಪೌರನಿಕಾಯಗಳ ಹಣಕಾಸು ಸ್ಥಿತಿಯನ್ನು ಸೂಕ್ತ ಸಂಪನ್ಮೂಲಗಳನ್ನು ಗರಿಷ್ಠ ಕ್ರೋಡೀಕರಿಸಿ ಹೊಸ ಮಾರ್ಗಗಳನ್ನು ಹುಡುಕುವುದರ ಮೂಲಕ ಸುಧಾರಣೆ ಮಾಡಬಹುದಾಗಿದೆ.

ಹಣಕಾಸು ಕ್ಷೇತ್ರಕ್ಕೆ ಸಂಬಂಧಿಸಿದಂತೆ ಸಂವಿಧಾನದ 74ನೇ ತಿದ್ದುಪಡಿಯಲ್ಲಿನ ಒಂದು ಪರಿಹಾರಾತ್ಮಕ ಲಕ್ಷಣವೆಂದರೆ ಐದು ವರ್ಷಗಳಿಗೊಮ್ಮೆ ರಾಜ್ಯ ಸರ್ಕಾರಗಳು ಹಣಕಾಸು ಆಯೋಗವನ್ನು ಕಡ್ಡಾಯವಾಗಿ ರಚನೆಮಾಡಬೇಕಾಗಿರುವುದು. ಈ ಆಯೋಗವು ಆಳ್ವಿಕೆಯ ತತ್ವಗಳು, ರಾಜ್ಯದ ತೆರಿಗೆಗಳು, ಕರಗಳು, ಸುಂಕಗಳು ಮತ್ತು ಶುಲ್ಕಗಳನ್ನು ರಾಜ್ಯ ಸರ್ಕಾರ ಮತ್ತು ಪುರಸಭೆಗಳ ನಡುವೆ ಮತ್ತು ಪುರಸಭೆಗಳ ನಡುವೆ ಹಂಚಿಕೆ ಮಾಡಿಕೊಳ್ಳುವುದಕ್ಕೆ ಸಂಬಂಧಿಸಿದಂತೆ ಸಿಫಾರಸುಗಳನ್ನು ಮಾಡುತ್ತದೆ. ರಾಜ್ಯ ಹಣಕಾಸು ಆಯೋಗವು (ಎಸ್‌ಎಫ್‌ಸಿ) ಪುರಸಭಾ ಪ್ರಾಧಿಕಾರಗಳಿಗೆ ವಹಿಸಿಕೊಡಬೇಕಾದ ತೆರಿಗೆಗಳು, ಕರಗಳು, ಸುಂಕಗಳು ಮತ್ತು ಶುಲ್ಕಗಳ ನಿರ್ಧರಣೆ ಕುರಿತಂತೆ ಮತ್ತು ರಾಜ್ಯ ಸಂಚಿತ ನಿಧಿಯಿಂದ ಅವುಗಳಿಗೆ ಕೊಡಬೇಕಾದ ಅನುದಾನ ಕುರಿತಂತೆ ತತ್ವಗಳನ್ನು ಸಹ ಸಲಹೆ ಮಾಡುತ್ತದೆ. ಜೊತೆಗೆ ಪುರಸಭಾ ಪ್ರಾಧಿಕಾರಗಳ ಹಣಕಾಸು ಸ್ಥಿತಿಯನ್ನು ಸುಧಾರಿಸಲು ಸಾಧನೋಪಾಯಗಳನ್ನು ಸಲಹೆ ಮಾಡುವ ಅಧಿಕಾರವನ್ನೂ ಸಹ ಹೊಂದಿದೆ. ರಾಜ್ಯ ಹಣಕಾಸು ಆಯೋಗದ ಸಿಫಾರಸುಗಳನ್ನು ರಾಜ್ಯಪಾಲರು ಅವುಗಳ ಬಗ್ಗೆ ಯಾವ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುವ ವಿವರಣೆಯ ಜ್ಞಾಪನದ ಜೊತೆಗೆ ರಾಜ್ಯ ಶಾಸಕಾಂಗದ ಮುಂದೆ ಮಂಡಿಸಬೇಕಾಗಿರುತ್ತದೆ. ಇದರಿಂದ ರಾಜ್ಯ ಹಣಕಾಸು ಆಯೋಗದ ಸಲಹೆಗಳನ್ನು ಮತ್ತು ಅಭಿಪ್ರಾಯೋಕ್ತಿಗಳನ್ನು ರಾಜ್ಯ ಸರ್ಕಾರಗಳು ಗಮನಕ್ಕೆ ತೆಗೆದುಕೊಳ್ಳಬೇಕಾಗುತ್ತದೆ. ಸಂವಿಧಾನದ 74ನೇ ತಿದ್ದುಪಡಿಯಲ್ಲಿ ಇದು ಒಂದು ಅತ್ಯಂತ ಮುಖ್ಯವಾದ ಅಂಶವಾಗಿರುತ್ತದೆ. 1992ರ ಸಂವಿಧಾನದ 74ನೇ ತಿದ್ದುಪಡಿ ಅಧಿನಯಮವು ಕೇಂದ್ರಹಣಕಾಸು ಆಯೋಗದ (ಸಿಎಫ್‌ಸಿ) ರೀತಿಯಲ್ಲಿಯೇ ಪ್ರತಿ ಐದು ವರ್ಷಗಳಿಗೊಮ್ಮೆ ರಾಜ್ಯ ಹಣಕಾಸು ಆಯೋಗವನ್ನು ರಚಿಸಲು ಉಪಬಂಧ ಕಲ್ಪಿಸುತ್ತದೆ. ಈ ಆಯೋಗವು ರಾಜ್ಯದಲ್ಲಿರುವ ಪೌರನಿಕಾಯಗಳ ಹಣಕಾಸು ವಿಷಯಗಳನ್ನು ಪರೀಕ್ಷಿಸಿ ಅವುಗಳನ್ನು ಪರಿಹರಿಸಲು ಸೂಕ್ತ ಸುಧಾರಣೆಗಳನ್ನು ಮತ್ತು ಕ್ರಮಗಳನ್ನು ಸಿಫಾರಸು ಮಾಡುತ್ತದೆ. ಇಲ್ಲಿನ ಅತ್ಯಂತ ಪ್ರಮುಖ ವಿಷಯವೆಂದರೆ ರಾಜ್ಯ ಹಣಕಾಸು ಆಯೋಗದ ಸಿಫಾರಸ್ಸುಗಳೆಲ್ಲವನ್ನು ರಾಜ್ಯ ಸರ್ಕಾರಗಳು ಒಪ್ಪಿಕೊಂಡು ಅವುಗಳನ್ನು ಅನುಷ್ಠಾನಕ್ಕೆ ತರುವ ಕಾಯಿದೆಬದ್ಧತೆಗೆ ಸಂಬಂಧಿಸಿದ ಸಿಂಧುತ್ವದ ಪ್ರಶ್ನೆ. ಈ ಬಗೆಗೆ ಸಂವಿಧಾನದ 74ನೇ ತಿದ್ದುಪಡಿಯು ಮೌನವಾಗಿದೆ.

ರಾಜ್ಯ ಸರ್ಕಾರಗಳು ಹೇಳುವ ಒಂದು ಪ್ರಮುಖ ಸಮಸ್ಯೆ ಏನೆಂದರೆ ತೆರಿಗೆಯ ವ್ಯವಸ್ಥೆಯಲ್ಲಿ ಬದಲಾವಣೆ, ನಗರ ಸ್ಥಳೀಯ ನಿಕಾಯಗಳಿಗೆ ಪ್ರಕಾರ್ಯಸಂಬಂಧಿ ಮತ್ತು ಹಣಕಾಸು ಸಂಬಂಧಿ ಆಧಿಕಾರಗಳನ್ನು ವರ್ಗಾಯಿಸುವುದು, ಹೊಸ ಲೆಕ್ಕ ಪದ್ಧತಿಯನ್ನು ಜಾರಿಗೆ ತರುವುದು ಇವೇ ಮುಂತಾದಂತಹ ಸಿಫಾರಸುಗಳು ಸಾಕಷ್ಟು ಜಟಿಲವಿದ್ದು ಕಾಯಿದೆಗಳು, ನಿಯಮಗಳು ಮತ್ತು ವಿನಿಯಮಗಳಲ್ಲಿ ಬದಲಾವಣೆ ಮಾಡುವುದನ್ನು ಒಳಗೊಂಡಿರುತ್ತದೆ. ಇದಕ್ಕೆ ಪುರಸಭಾಮಟ್ಟದಲ್ಲಿ ಗಣನೀಯ ಸಾಮರ್ಥ್ಯವರ್ಧನೆಯ ಶ್ರಮ ಅಗತ್ಯವಿರುತ್ತದೆ. ಇದು ಒಂದು ದೀರ್ಘಕಾಲ ಹಿಡಿಯುವ ಪ್ರಕ್ರಿಯೆ.

ರಾಜ್ಯ ಹಣಕಾಸು ಆಯೋಗದ ಸಿಫಾರಸುಗಳನ್ನು ಸಂಬಂಧಪಟ್ಟ ರಾಜ್ಯ ಸರ್ಕಾರವು ಅನುಷ್ಠಾನಗೊಳಿಸಲು ಒಂದು ನಿಗದಿತ ವೇಳಾಪಟ್ಟಿಯನ್ನು ಇಟ್ಟುಕೊಳ್ಳದಿರುವುದು ಒಂದು ಮುಖ್ಯ ವಿಷಯ. ರಾಜ್ಯಗಳಲ್ಲಿ ಅಧಿನಿಯಮಗಳಿಲ್ಲದಿರುವುದರಿಂದ ಸಿಫಾರಸುಗಳ ಅನುಷ್ಠಾನವನ್ನು ಸಂಬಂಧಪಟ್ಟ ರಾಜ್ಯ ಸರ್ಕಾರಗಳ ವಿವೇಚನೆಗೆ ಬಿಡಲಾಗಿದೆ. ಇದರಿಂದ ರಾಜ್ಯ ಹಣಕಾಸು ಆಯೋಗದ ಸಿಫಾರಸುಗಳ ಅನುಷ್ಠಾನವು ತೀರಾ ನಿಧಾನವಾಗಿದೆ. ಆದಾಯದ ಮೂಲಗಳನ್ನು ರಾಜ್ಯ ಸರ್ಕಾರದ ವಿವೇಚನೆಗೆ ಬಿಟ್ಟಿರುವುದರಿಂದ ಪುರಸಭಾ ಹಣಕಾಸು ಸ್ಥಿತಿಯನ್ನು ಮೇಲೆತ್ತುವುದಕ್ಕೆ ರಾಹಆ ವ್ಯವಸ್ಥೆಯೊಂದೆ ಭರವಸೆಯಾಗಿ ಉಳಿದಿರುತ್ತದೆ. ರಾಹಆ ದ ಸಿಫಾರಸುಗಳು ಈ ಶೂನ್ಯವನ್ನು ತುಂಬುತ್ತದೆ. ಏಕೆಂದರೆ ಅದಕ್ಕೆ ಪೌರ ಪ್ರಾಧಿಕಾರಗಳಿಗೆ ವಹಿಸಿಕೊಡಬೇಕಾದ ತೆರಿಗೆಗಳು, ಸುಂಕಗಳು ಮತ್ತು ಶುಲ್ಕಗಳ ಕುರಿತಂತೆ ಸಲಹೆ ಕೊಡುವ ಕಾಯಿದೆಯ ಆಧಿಕಾರವಿರುತ್ತದೆ.

ಎಲ್ಲ ರಾಜ್ಯಗಳೂ ರಾಹಆ ಗಳನ್ನು ಸ್ಥಾಪಿಸಿವೆ. ಮಾರ್ಚ್ 1997ರ ವೇಳೆಗೆ ರಾಹಆ ಗಳು ಸಂಬಂಧಪಟ್ಟ ಸರ್ಕಾರಗಳಿಗೆ ವರದಿಗಳನ್ನು ಸಲ್ಲಿಸಿರುತ್ತವೆ. ಆದಾಗ್ಯೂ ರಾಹಆ ದ ವರದಿಯ ಸಲ್ಲಿಕೆ ಮತ್ತು ರಾಜ್ಯ ಶಾಸಕಾಂಗದಲ್ಲಿ ಅದರ ಮಂಡನೆ ಇವೆರಡರ ನಡುವೆ ಸಾಕಷ್ಟು ಕಾಲದ ಅಂತರ ಇರುತ್ತದೆ.

ಪೌರಪ್ರಾಧಿಕಾರದ ಹಣಕಾಸು ಸಾಮರ್ಥ್ಯವನ್ನು ಬಲಪಡಿಸುವ ನಿಟ್ಟಿನಲ್ಲಿ ಮಹತ್ವದ ಪರಿಣಾಮಗಳನ್ನು ಬೀರುವ ತಿದ್ದುಪಡಿಯ ಇನ್ನೊಂದು ಉಪಬಂಧವಿದೆ. ಅದೇ ಸಂವಿಧಾನದ ಅನುಚ್ಛೇದ 280ರ ತಿದ್ದುಪಡಿ. ಇದು ಕೇಂದ್ರ ಹಣಕಾಸು ಆಯೋಗದ ಪರ್ಯಾಲೋಚನಾಂಶಗಳಿಗೆ (ಟರ್ಮ್ಸ್ ಆಫ್ ರೆಫರೆನ್ಸ್) ಸಂಬಂಧಪಟ್ಟಿರುತ್ತದೆ. ಈ ಹೊಸ ಉಪಬಂಧವು ರಾಹಆ ದ ಸಿಫಾರಸುಗಳ ಆಧಾರದ ಮೇಲೆ ರಾಜ್ಯದಲ್ಲಿರುವ ಪುರಸಭೆಗಳ ಸಂಪನ್ಮೂಲಗಳನ್ನು ಪೂರಕಗೊಳಿಸುವ ಸಲುವಾಗಿ ರಾಜ್ಯ ಸಂಚಿತ ನಿಧಿಯನ್ನು ಹೆಚ್ಚುಗೊಳಿಸಲು ಅಗತ್ಯವಾದ ಕ್ರಮಗಳನ್ನು ಸಲಹೆ ಮಾಡ ಕೇಂಹಆ ವನ್ನು ಅಗತ್ಯ ಪಡಿಸುತ್ತದೆ. ಈ ರೀತಿಯಲ್ಲಿ ಈಗ ಪುರಸಭೆಗಳ ಯೋಜನೇತರ ಹಣದ ಅಗತ್ಯತೆಯನ್ನು ಕೇಂಹಆ ವೂ ಸಹ ಪರಿಶೀಲಿಸಬೇಕಾಗಿರುತ್ತದೆ. ಇದೊಂದು ದೂರಗಾಮಿ ಪ್ರಾಮುಖ್ಯದ ತಿದ್ದುಪಡಿಯಾಗಿರುತ್ತದೆ.

ಇದರೊಂದಿಗೆ ಪುರಸಭೆಗಳು ತಮಗೆ ವಹಿಸಿಕೊಟ್ಟ ಪ್ರಕಾರ್ಯಗಳನ್ನು ನಿರ್ವಹಿಸುವಲ್ಲಿ ಮತ್ತು ಆದಾಯೋತ್ಪನ್ನ ಆಧಿಕಾರಗಳನ್ನು ಬಳಸುವಲ್ಲಿ ಅವುಗಳ ದಕ್ಷತೆಯನ್ನು ಪ್ರವರ್ಧಿಸುವುದರ ಬಗೆಗೊ ನಾವು ಕೇಂದ್ರೀಕರಿಸಬೇಕಾಗಿದೆ. ಪೌರನಿಕಾಯಗಳ ಹಣಕಾಸು ಮೂಲಾಧಾರವನ್ನು ಬಲಪಡಿಸುವ ಅವಶ್ಯಕತೆಯಿದೆ. ಇದನ್ನು ಯಾವ ರೀತಿಮಾಡಬೇಕೆಂದರೆ ಇಲ್ಲಿ ಪ್ರಕಾರ್ಯಸಂಬಂಧಿ ಜವಾಬ್ದಾರಿಗಳು ಮತ್ತು ಹಣಕಾಸು ಇವೆರಡರ ನಡುವೆ ಒಂದು ಸಮತೋಲ ಕಾಯ್ದುಕೊಳ್ಳಬೇಕು. ಪೌರ ನಿಕಾಯಗಳ ಲೆಕ್ಕ ಪತ್ರ, ಆಯವ್ಯಯ ಮತ್ತು ತೆರಿಗೆಯ ವಿಷಯಗಳ ಬಗ್ಗೆಯೂ ಸಹ ತುರ್ತಿನ ಗಮನ ಅಗತ್ಯವಿದೆ.

ಭಾರದಲ್ಲಿನ ನಗರ ಸ್ಥಳೀಯ ನಿಕಾಯಗಳ ವಿತ್ತೀಯ ವ್ಯಾಪ್ತಿಯಲ್ಲಿ ತೆರಿಗೆಂ ಮತ್ತು ತೆರಿಗೆಯೇತರ ಮೂಲದ ಒಂದು ದೊಡ್ಡ ಸಾಲೇ ಇದೆ. ಇದರ ಜೊತೆಗೆ ಅವುಗಳು ರಾಜ್ಯಸರ್ಕಾರಗಳಿಂದ ಅನುದಾನದ ರೂಪದಲ್ಲಿ ಮತ್ತು ರಾಜ್ಯ ಸರ್ಕಾರಗಳು ಸಂಗ್ರಹಿಸಿದೆ ತೆರಿಗೆಯಲ್ಲಿ ಒಂದು ಪಾಲನ್ನು ಸಹ ಪಡೆಯುತ್ತವೆ. ಪುರಸಭೆಯ ಹಣಕಾಸಿಗೆ ಸಂಬಂಧಿಸಿದಂತೆ, ರಾಜ್ಯ ಹಣಕಾಸು ಆಯೋಗದ ರಚನೆ ಮತ್ತು ಅದರ ಸಿಫಾರಸುಗಳನ್ನು ಶಾಸನ ಸಭೆಯಲ್ಲಿ ಮಂಡನೆ ಇವುಗಳನ್ನು ಕಾಯಿದೆಬದ್ಧ ಮಾಡಿರುವುದನ್ನು ಹೊರತು ಪಡಿಸಿ ಉಳಿದೆಲ್ಲವನ್ನು ರಾಜ್ಯಗಳ ವಿವೇಚನೆಗೆ ಬಿಡಲಾಗಿದೆ.

ಬಹುತೇಕ ರಾಜ್ಯಗಳು ಮತ್ತು ನಗರ ಸ್ಥಳೀಯ ನಕಾಯಗಳು ತೆರಿಗೆಗಳನ್ನು ವಿಧಿಸಲು ಅಥವಾ ಹೇರಲು ಹೊಸಮಾರ್ಗಗಳನ್ನು ಇಲ್ಲಿಯವರೆಗೆ ಶೋಧಿಸಿಲ್ಲ. ಕೆಲವು ಪ್ರಕರಣಗಳಲ್ಲಿ ಸಂಪನ್ಮೂಲ ಕ್ರೋಡೀಕರಣಕ್ಕಾಗಿ ಪೌರ ಅಧಿನಯಮಗಳಲ್ಲಿ ಹಾಲಿ ಇರುವ ಉಪಬಂಧಗಳನ್ನು ಸಹ ಪೂರ್ಣವಾಗಿ

ಉಪಯೋಗಿಸಿಕೊಂಡಿರುವುದಿಲ್ಲ. ರಾಹ ಆಗಳ ಕೆಲವು ವರದಿಗಳನ್ನು ಅಧ್ಯಯನ ಮಾಡಿದಾಗ ಕೆಲವು ರಾಜ್ಯಗಳು ಹೆಚ್ಚಿನ ವಿವರವಾದ ಪರಿಶೀಲನೆಗಾಗಿ ಈ ಮುಂದಿನ ಕೆಲವು ಅಂಶಗಳನ್ನು ಸೂಚಿಸಿವೆ.

- ನಗರ ಸ್ಥಳೀಯ ನಿಕಾಯಗಳಿಗೆ ಅನುದಾನ ನೀಡುವಲ್ಲಿ ಇರಬೇಕಾದ ನಿಯಂತ್ರಕ ತತ್ವ ಯಾವುದು?
- ರಾಜ್ಯ ಸರ್ಕಾರದ ಆದಾಯವನ್ನು ಹಂಚಿಕೆ ಮಾಡಿಕೊಳ್ಳಬೇಕಾದಲ್ಲಿ ಇರಬೇಕಾದ ಮಾರ್ಗದರ್ಶಿ ತತ್ವ ಯಾವುದು? ನಗರ ಸ್ಥಳೀಯ ನಿಕಾಯಗಳಿಗೆ ಹೆಚ್ಚು ತೆರಿಗೆ ವಹಿಕೊಡಬೇಕೆ ಅಥವಾ ಹಾಲಿ ರಾಜ್ಯ ತೆರಿಗೆಗಳ ಹಂಚಿಕೆಯನ್ನೇ ಅನುಸರಿಸಬೇಕೆ?
- ನಗರ ಸ್ಥಳೀಯ ನಿಕಾಯಗಳು ತಮ್ಮ ಆದಾಯಗಳನ್ನು ಕ್ರೋಡೀಕರಣ ಮಾಡಬೇಕಾದರೆ ಯಾವ ನಾವೀನ್ಯದ ನಡೆಗಳನ್ನು ಅನುಸರಿಸಬೇಕು?
- ಪೌರಲೆಕ್ಕಪತ್ರ ಪದ್ಧತಿಯನ್ನು ಪರಿಣಾಮಕಾರಿ, ಸರಳ ಮತ್ತು ಪಾರದರ್ಶಕವಾಗಿ ಮಾಡಲು ಯಾವ ವ್ಯವಸ್ಥೆಯನ್ನು ತರಬೇಕು?
- ನಗರ ಸ್ಥಳೀಯ ನಕಾಯಗಳಲ್ಲಿ ನಿಯತವಾಗಿ ಲೆಕ್ಕ ಪರಿಶೋಧನೆ ಆಗುವುದನ್ನು ಮತ್ತು ಲೆಕ್ಕ ಪರಿಶೋಧನೆಯ ವರದಿಗಳನ್ನು ಪರಿಣಾಮಕಾರಿಯಾಗಿ ಅನುಪಾಲನ ಮಾಡುವುದನ್ನು ಖಾತ್ರಿಪಡಿಸಿಕೊಳ್ಳಲು ಯಾವ ಸಾಂಸ್ಥಿಕ ಏರ್ಪಾಡುಗಳು ಆಗಬೇಕು?
- ನಗರ ಸ್ಥಳೀಯ ನಕಾಯಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆಯನ್ನು ಜಾರಿಗೆ ತರಲು ಯಾವ ಕ್ರಮಗಳು ಆವಶ್ಯಕ?

ಕೆಲವು ರಾಜ್ಯಗಳು (ಉದಾ: ಕೇರಳ ಮತ್ತು ಪಶ್ಚಿಮ ಬಂಗಾಳ) ನಗರ ಮತ್ತು ಗ್ರಾಮೀಣ ಸ್ಥಳೀಯ ನಿಕಾಯಗಳು ತಮ್ಮ ಕಾರ್ಯಯೋಜನೆಗಳನ್ನು ತಾವೇ ರೂಪಿಸಿಕೊಂಡು ಅನುಷ್ಠಾನ ಮಾಡಲು ಅವುಗಳಿಗೆ ರಾಜ್ಯದ ಯೋಜನೆಯಲ್ಲಿ ಶೇ ನಲವತ್ತರಿಂದ ಐವತ್ತರಷ್ಟು ಹಂಚಿಕೆ ಮಾಡಿಕೊಟ್ಟಿವೆ. ನಗರ ಸ್ಥಳೀಯ ನಿಕಾಯಗಳ ಸಂದರ್ಭದಲ್ಲಿ ಪರ್ಯಾಲೋಚನಾಂಶಗಳು, ಕೇಂದ್ರ ಹಣಕಾಸು ಆಯೋಗವು ರಾಹ ಆಗಳ ಸಿಫಾರಸುಗಳನ್ನು ಗಣನೆಗೆ ತೆಗೆದುಕೊಳ್ಳಬೇಕೆಂದೂ ಹಾಗು ಒಂದು ವೇಳೆ ರಾಹಆ ದ ವರದಿಗಳು ಲಭ್ಯವಿಲ್ಲದಿದ್ದಲ್ಲಿ ಆಯೋಗವು  ರಾಜ್ಯ ಸಂಚಿತ ನಿಧಿಯನ್ನು ಹೆಚ್ಚು ಮಾಡುವ ಕುರಿತಂತೆ ರೀತಿ ನೀತಿಯನ್ನು ಮತ್ತು ವ್ಯಾಪ್ತಿಯನ್ನು ತಾನೇ ನಿರ್ಧರಿಸಬೇಕೆಂದು ವಿಧಿಸುತ್ತದೆ. ಅನುಚ್ಛೇದ 243–ಜ಼ೆಡ್ ಮೇರೆಗೆ ಪೌರನಿಕಾಯಗಳ ಲೆಕ್ಕಪತ್ರ ನಿರ್ವಹಣೆ ಮತ್ತು ಅದರ ಲೆಕ್ಕಪರಿಶೋಧನೆ ಈ ವಿಷಯವನ್ನು ರಾಜ್ಯ ಸರ್ಕಾರದ ವಿವೇಚನೆಗೆ ಬಿಟ್ಟಿದೆ. ಉತ್ತರದಾಯಿತ್ವ ಮತ್ತು ಪಾರದರ್ಶಕತೆಯನ್ನು ಖಾತ್ರಿ ಪಡಿಸಿಕೊಳ್ಳಲು ನಗರ ಸ್ಥಳೀಯ ನಕಾಯಗಳಲ್ಲಿ ಸಾಮಾಜಿಕ ಲೆಕ್ಕ ಪರಿಶೋಧನೆ ಪದ್ಧತಿಯನ್ನು ಜಾರಿಗೆ ತರುವುದು ಆವಶ್ಯಕ.

## ನಗರ ಬಡತನದ ಲಿಂಗಸಂಬಂಧಿ ಆಯಾಮಗಳು

**ಪ್ರೀತಿ ರುಸ್ತೋಗಿ, ಸಂದೀಪ್ ಸರ್ಕಾರ್, ಪಿನಾಕಿ ಜೊದ್ದರ್**

ಈ ಅಧ್ಯಾಯವು ಶಿಕ್ಷಣ ಮತ್ತು ಕೆಲಸದಲ್ಲಿ ನಗರ ಬಡಮಹಿಳೆಯರು ಯಾವ ರೀತಿ ತಾರತಮ್ಯ ಮತ್ತು ಅಸಮತೆಗಳನ್ನು ಎದುರಿಸುತ್ತಿದ್ದಾರೆ ಎಂಬುದನ್ನು ಖಚಿತಪಡಿಸುವುದರ ಜೊತೆಗೆ ನಗರ ಬಡತನವು ಮಹಿಳೆಯರನ್ನು ಯಾವ ಪ್ರಮಾಣದಲ್ಲಿ ಮತ್ತು ತೀವ್ರತೆಯಲ್ಲಿ ಕಾಡುತ್ತಿದೆ ಎಂಬುದರ ಬಗ್ಗೆ ಕೇಂದ್ರೀಕರಿಸುತ್ತದೆ.

ನಗರ ಮಹಿಳೆಯರನ್ನು ಕಾಡುತ್ತಿರುವ ನಗರ ಬಡತನಕ್ಕೆ ಹಲವಾರು ಆಯಾಮಗಳಿವೆ. ಮಹಿಳೆಯರು ದೊಡ್ಡವರ್ಗವೇ ಆಗುತ್ತಾರೆ. ಅವರಿಗೆ ಅವರದೇ ಆದ ವೈಲಕ್ಷಣ್ಯಗಳಿವೆ. ಇದರ ಬಗ್ಗೆ ಹೆಚ್ಚಿನ ಶೋಧನೆ

ಅಗತ್ಯವಿದೆ. ಆದಾಗ್ಯೂ ಒಂಟಿ ಮಹಿಳೆ, ಅವಿವಾಹಿತೆ, ವಿಚ್ಛೇದಿತೆ, ಪ್ರತ್ಯೇಕಗೊಂಡಾಕೆ ಮತ್ತು ವಿಧವೆಯರು ಗೃಹ ಕುಟುಂಬಗಳಲ್ಲಿ ಹೆಚ್ಚು ದುರ್ಬಲರಾಗಿರುತ್ತಾರೆ. ಇದಕ್ಕೂ ಮುಖ್ಯವಾಗಿ ಆದಾಯ ಮತ್ತು ಬಳಕೆಯ ಅಗತ್ಯತೆಗಳಿಗಿಂತ ಹೆಚ್ಚಾಗಿ ಇತರ ಆಯಾಮಗಳು ನಗರ ಬಡತನವನ್ನು ಗುರುತಿಸಲು ಮುಖ್ಯ ಸಾಧನವಾಗಬಹುದು. ಕಾಲಾಂತರದಲ್ಲಿ ಮಹಿಳೆಯವರ ಉದ್ಯೋಗವು ಹೆಚ್ಚುತ್ತಿದೆ.

ಇದರ ಜೊತೆಗೆ ಅವರ ಮಾನವ ಬಂಡವಾಳ ಆದಾನವು ಉತ್ತಮಿಸದಿದ್ದಲ್ಲಿ ಕಾರ್ಮಿಕ ಮಾರುಕಟ್ಟೆ ಭಾಗಿದಾರಿಕೆಯು ಅಸುರಕ್ಷಿತವಾಗಿಯೂ ಮತ್ತು ತೀರಾ ದುರ್ಬಲವಾಗಿಯೂ ಉಳಿಯುವ ಸಂಭವವಿದೆ. ಶಿಕ್ಷಣದ ಲಭ್ಯತೆ ಮತ್ತು ಆದಾಯಗಳಿಕೆಯ ವರ್ಗಗಳಲ್ಲಿನ ಅಂತರಗಳಿಗೆ ಸಂಬಂಧಿಸಿದಂತೆ ಕಡಿಮೆ ಮಾನವ ಬಂಡವಾಳ ಆದಾನವು ಕಾರ್ಯಸಾಧುವೆನಿಸುವ ಅವರ ಕಾರ್ಯಕ್ಕೆ ಮಾರುಕಟ್ಟೆ ಭಾಗಿದಾರಿಕೆಯ ಸ್ವರೂಪದ ಮೇಲೂ ಬಡಮಹಿಳೆಯರ ಅದಾಯಗಳ ಮೇಲೂ ಬಹುತೇಕ ಪ್ರಕರಣಗಳಲ್ಲಿ ನೇರ ಪರಿಣಾಮ ಬೀರುತ್ತದೆ.

ಕೆಲವು ಕಾರ್ಯಗಳು / ಕಾರ್ಯಖಂಡಗಳಲ್ಲಿ ಮಹಿಳೆಯರು ಕೇಂದ್ರೀಕರಿಸಿಕೊಂಡಿರುವುದು, ಪಡೆಯುತ್ತಿರುವ ವೇತನ ಮತ್ತು ತೆರೆಯಲ್ಪಟ್ಟ ಕೆಲವು ಹೊಸ ಉದ್ಯೋಗಾವಕಾಶಗಳಲ್ಲಿ ಮಹಿಳೆಯರ ಪ್ರವೇಶಕ್ಕೆ ಇರುವ ಅಡಚಣೆಗಳ ಕುರಿತಂತೆ ಸಾಹಿತ್ಯದ ಒಳನೋಟಗಳನ್ನು ಇಲ್ಲಿ ವಿಶದ ಪಡಿಸಲಾಗುತ್ತದೆ. ಬಡಕುಟುಂಬಗಳಲ್ಲಿ ಮಹಿಳೆಯರ ಶ್ರಮ ಆಧಾರಿತ ಕೊಡುಗೆಗಳ ಮಹತ್ವದ ಹಿನ್ನೆಲೆಯಲ್ಲಿ ಅವರ ಶೈಕ್ಷಣಿಕ ಮತ್ತು ಕೌಶಲ ವೃದ್ಧಿಯು ಬಡತನ ನಿವಾರಣೆಯಲ್ಲಿ ಅಪಾರ ಪ್ರಾಮುಖ್ಯವನ್ನು ಪಡೆಯುತ್ತದೆ.

ಕೇಂದ್ರೀಕರಿಸಬೇಕಾದ ಇತರ ಅಂಶಗಳು ಕನಿಷ್ಠ ಎರಡು ಸ್ಥೂಲ ಶೀರ್ಷಿಕೆಗಳಿಗೆ ಸಂಬಂಧಿಪಟ್ಟಿದೆ: ಮೊದಲನೆಯದಾಗಿ ಬಡಮಹಿಳೆಯರ ಜೀವನ ಸ್ಥಿತಿಗತಿಯನ್ನು ಮತ್ತು ಸ್ವಾಸ್ಥ್ಯವನ್ನು ಸುಧಾರಿಸುವ ಸಲುವಾಗಿ ನೀರು, ಇಂಧನ, ಶೌಚಗೃಹಗಳು, ನೈರ್ಮಲ್ಯ, ವಿದ್ಯುಚ್ಛಕ್ತಿ ಇವೇ ಮುಂತಾದ ಮೂಲ ಸೌಕರ್ಯಗಳು ಮತ್ತು ಸಾರ್ವಜನಕ ಉಪಬಂಧಗಳು ಅವರಿಗೆ ಉತ್ತಮ ರೀತಿಯಲ್ಲಿ ಲಭ್ಯವಾಗುವಂತೆ ಮಾಡುವುದು. ಎರಡನೆಯದಾಗಿ ಬಡ ಮಹಿಳೆಯರ ಜೀವನ ಮಟ್ಟವನ್ನು ಸುಧಾರಿಸುವ ಮತ್ತು ನಗರ ಕಾರ್ಮಿಕ ಮಾರುಕಟ್ಟೆಯಲ್ಲಿ ಅವರ ಭಾಗಿದಾರಿಕೆಗೆ ಅನುಕೂಲ ಕಲ್ಪಿಸುವಂತಹ ಬಾಹ್ಯ ಪರಿಸರಗಳಾದ ಆಶ್ರಯ ತಾಣಗಳು, ಸಾರಿಗೆ , ಒಟ್ಟಾರೆ ಭದ್ರತೆಯ ಮಟ್ಟ ಈ ಅಂಶಗಳು ಒಳಗೊಂಡಿದ್ದು ಇವುಗಳಿಗೆ ಗಮನ ನೀಡಬೇಕಾಗಿರುತ್ತದೆ.

ನಗರ ಪ್ರದೇಶಗಳಲ್ಲಿನ ಬಹುತೇಕ ಬಡಕುಟುಂಬಗಳಿಗೆ ಈ ಬೆಂಬಲದ ವ್ಯವಸ್ಥೆ ಕಡಿಮೆ ಮಟ್ಟದಲ್ಲಿ ಇರುವುದು ಗ್ರಾಮೀಣ ಪ್ರದೇಶಗಳಿಗೆ ಹೋಲಿಸಿದರೆ ನಗರ ಪ್ರದೇಶಗಳಲ್ಲಿ ಅತಿಯಾಗಿ ಹಣ ಚಲಾವಣೆಯಲ್ಲಿರುವುದು, ಬಡಕುಟುಂಬಗಳ ಆಹಾರ ಭದ್ರತೆಯ ಮೇಲಣ ಪರಿಣಾಮ, ಆರೋಗ್ಯ ರಕ್ಷಣೆಯ ಲಭ್ಯತೆ, ವಿಶೇಷವಾಗಿ ಮಕ್ಕಳ ರಕ್ಷಣೆ ಮತ್ತು ಸಾಲಾರ್ಹತೆ ಅಥವಾ ಸ್ವತ್ತಿನ ಮಾಲಿಕತ್ವ ಇವೆಲ್ಲವೂ ಮಹಿಳೆಯ ಗಳಿಕೆಯ ಸಾಮರ್ಥ್ಯಕ್ಕೆ ಮತ್ತು ಉತ್ಪಾದಕತೆಗೆ ಸಹ ಒಂದಕ್ಕೊಂದು ಬೆಸೆದು ಕೊಂಡಿರುತ್ತವೆ.

ಅಸಂಘಟಿತ ಕೆಲಸಗಾರರ ಸಾಮಾಜಿಕ ಭದ್ರತೆ ಕಲ್ಪಿಸುವ ಕ್ರಮಗಳ ನಿಟ್ಟಿನಲ್ಲಿನ ನೀತಿಗಳ ಜಾರಿಯು,ಬಡಮಹಿಳಾ ಕೆಲಸಗಾರಳ ಹಕ್ಕುಗಳು, ಹೆರಿಗೆ ಸೌಲಭ್ಯಗಳು, ಶೌಚಗೃಹಗಳು, ದಬ್ಬಾಳಿಕೆ ರೂಪದ ಉದ್ಯೋಗದಿಂದ ರಕ್ಷಣೆ, ಹಿಂಸೆ ಮತ್ತು ಲೈಂಗಿಕ ಕಿರುಕುಳದಿಂದ ರಕ್ಷಣೆ ಮತ್ತು ನ್ಯಾಯ ಒದಗಿಸುವಲ್ಲಿನ ವ್ಯವಸ್ಥೆಯ ಸುಧಾರಣೆ ಇವುಗಳಿಗೆ ವಿಶೇಷ ಒತ್ತು ನೀಡುತ್ತದೆ. ಒಟ್ಟಾರೆ ಮಹಿಳೆಯರ ಸಂಬಂಧದ ಅಂಕಿ ಅಂಶಗಳ ಸಂಗ್ರಹಣೆಯಲ್ಲಿ ಸುಧಾರಣೆ, ದತ್ತಾಂಶದಲ್ಲಿನ ಕೊರತೆಗಳನ್ನು ಗುರುತಿಸುವುದು ಮತ್ತು ಲಿಂಗವಾರು ಪ್ರತ್ಯೇಕಿಸಿ ಕ್ರೋಡೀಕರಿಸಿದ ದತ್ತಾಂಶ ಪದ್ಧತಿಯನ್ನು ಹುಟ್ಟು ಹಾಕುವುದು ಒಂದು ವಿಶೇಷ ಅಗತ್ಯತೆಯಾಗಿದೆ.

## ಮೂಲಸೌಕರ್ಯಗಳು ಮತ್ತು ನಗರ ಭಧ್ರತೆಯಲಭ್ಯತೆ: ನಗರಗಳ ಸಾಮಾಜಿಕ ಸ್ಥಿರತೆಯ ಮೇಲೆ ಕೇಂದ್ರೀಕರಿಸಿದ ಒಂದು ಅಂತರ್ರಾಜ್ಯ ವಿಶ್ಲೇಷಣೆ

**ಅಮಿತಾಭ್ ಕುಂಡು**

ಈ ಅಧ್ಯಾಯವು ಭಾರತದಲ್ಲಿನ ಎಲ್ಲ ರಾಜ್ಯಗಳಲ್ಲಿ ನಗರದ ಬಡವರಿಗೆ ಮೂಲ ಸೌಕರ್ಯಗಳ ಲಭ್ಯತೆ ಕುರಿತಂತೆ ಒಂದು ಮೇಲ್ನೋಟವನ್ನು ಕೊಡುತ್ತದೆ. ಹೀಗೆ ಮಾಡುವಲ್ಲಿ ಸಾಮಾಜಿಕ ಭದ್ರತೆಯ ಸಮಸ್ಯೆಯನ್ನು ನಗರದ ಬಡವರು ಮನೆ ಮತ್ತು ಮೂಲ ಸೌಕರ್ಯಗಳಿಂದ ವಂಚಿತವಾಗಿರುವುದು ಮತ್ತು ತತ್ಪರಿಣಾಮವಾಗಿ ಸಮುದಾಯ ಬಾಂಧವ್ಯದಲ್ಲಿ ಒತ್ತಡಗಳು ಉಂಟಾಗಿರುವುದು ಮತ್ತು ಕೆಳಮಟ್ಟದ ಪರಿಸರದಲ್ಲಿ ಕ್ಷೋಭೆ ಇವುಗಳಿಗೆ ಸಂಬಂಧಿಸಿದಂತೆ ನೋಡುತ್ತದೆ.

ಈ ಅಧ್ಯಾಯವು **ಮನೆಗಳ ಪರಿಸ್ಥಿತಿ ಮತ್ತು ಮೂಲ ಸೌಕರ್ಯಗಳ ಮಟ್ಟ– ವ್ಯಾಪಕ ಮಟ್ಟದ ದೃಶ್ಯ.** ಈ ಭಾಗದಿಂದ ಪ್ರಾರಂಭವಾಗುತ್ತದೆ. ಇಲ್ಲಿ ದತ್ತಾಂಶವನ್ನು ಜನಗಣತಿ ಮತ್ತು ರಾಷ್ಟ್ರೀಯ ಮಾದರಿ ಸಮೀಕ್ಷೆಯಿಂದ ಬಳಸಿಕೊಳ್ಳಲಾಗಿದೆ. ಮೂಲ ಸೌಕರ್ಯಗಳ ಲಭ್ಯತೆಗೆ ಸಂಬಂಧಿಸಿದಂತೆ 1981 ಮತ್ತು 1991 ರ ಅವಧಿಯಲ್ಲಿ ನಗರ ಪ್ರದೇಶಗಳಲ್ಲಿ ಸುರಕ್ಷಿತ ಕುಡಿಯುವ ನೀರಿನ ಲಭ್ಯತೆಯು ಶೇ. 6.34ರಷ್ಟು ಅಧಿಕವಾಗಿದೆಯೆಂದು ಗಣತಿಯ ದತ್ತಾಂಶವು ತೋರಿಸುತ್ತದೆ. ಆದಾಗ್ಯೂ ಇದೇ ವೇಳೆಯಲ್ಲಿ ಮುಖ್ಯ ನೀರು ಸರಬರಾಜಿನ ಮೂಲವಾಗಿ ನಲ್ಲಿಯನ್ನು ಬಳಸುತ್ತಿರುವ ಕುಟುಂಬಗಳ ಸಂಖ್ಯೆಯು 1988–89ರಲ್ಲಿ ಶೇ.72 ಇದ್ದದ್ದು 1998ರಲ್ಲಿ ಶೇ. 70ಕ್ಕೆ ಇಳಿದಿರುತ್ತದೆ. ವಿದ್ಯುಚ್ಛಕ್ತಿ ಬಳಕೆಗೆ ಸಂಬಂಧಿಸಿದಂತೆ ನಗರ ಕುಟುಂಬಗಳ ಸಂಖ್ಯೆಯು 1981ರಲ್ಲಿ ಶೇ.62.5 ಇದ್ದದ್ದು 2001 ರಲ್ಲಿ ಶೇ 87.6ಕ್ಕೆ ಏರಿಕೆಯಾಗಿರುತ್ತದೆ. (ಗಣತಿ ಅಂಕಿ ಅಂಶಗಳು) ಆದರೂ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಗಣತಿಯ ರಾಮಾಸ ಯ ಅಂಕಿ ಅಂಶಕ್ಕೂ ವ್ಯತ್ಯಾಸತೋರುತ್ತದೆ. 1981–2001 ರ ಅವಧಿಯಲ್ಲಿ ಶೇ. 15.5ರಷ್ಟು ಅಧಿಕವಾಗಿರುವುದೆಂದು ಗಣತಿಯ ಮತ್ತು ಅಂಕಿ ಅಂಶಗಳು ತೋರಿಸುತ್ತಿದ್ದರೆ ರಾಮಾಸ ಯ ಅಂಕಿ ಅಂಶಗಳು 1983ರಿಂದ 10 ವರ್ಷಗಳ ಕಾಲ ಒಂದು ಸ್ಥಿರ 31.1 ರಷ್ಟು ಮಂದಿಗೆ ಶೌಚಾಲಯದ ಲಭ್ಯತೆ ಇಲ್ಲದಿರುವುದನ್ನು ತೋರಿಸುತ್ತದೆ.

ಮುಂದಿನ ಭಾಗವು **ಮನೆ ಮತ್ತು ಮೂಲಸೌಕರ್ಯಗಳಿಂದ ವಂಚಿತರಾಗಿರುವುದು– ಒಂದು ಅಂತರ್ರಾಜ್ಯ ವಿಶ್ಲೇಷಣೆ,** ಇದಕ್ಕೆ ಸಂಬಂಧಿಸಿರುತ್ತದೆ. ಇಲ್ಲಿನ ಲೇಖಕರು ಆರ್ಥಿಕ ಅಭಿವೃದ್ಧಿಯ ಮಟ್ಟ ಮತ್ತು ಮನೆಗಳ ಗುಣಮಟ್ಟ ಅಥವಾ ಮೂಲ ಸೌಕಯಗಳ ಲಭ್ಯತೆ ಇವುಗಳ ನಡುವಣ ಬಾಂಧವ್ಯವನ್ನು ಧನಾತ್ಮಕವಾಗಿ (ಬಹಳಗಣನೀಯವಲ್ಲದಿದ್ದಾಗ್ಯೂ) ವರದಿಸುತ್ತಾರೆ. ಇದೇ ರೀತಿಯ ಪ್ರವೃತ್ತಿಗಳನ್ನು ನೀರು ಸರಬರಾಜಿಗೆ ಸಂಬಂಧಿಸಿದಂತೆ ಲೇಖಕರು ವರದಿಸುತ್ತಾರೆ. ಈ ವಿಷಯದಲ್ಲಿ ಬಡರಾಜ್ಯಗಳಾದ ಬಿಹಾರ, ಓರಿಸ್ಸಾ ,ಮಧ್ಯ ಪ್ರದೇಶವು ಸುರಕ್ಷಿತ ಕುಡಿಯುವ ನೀರಿನ ಲಭ್ಯತೆ ಇರುವ ಕುಟುಂಬಗಳ ಶೇಕಡಾವಾರು ಕಡಿಮೆ ಇರುವುದನ್ನು ತೋರಿಸಿದೆ. ಇದಕ್ಕೆ ತದ್ವಿರುದ್ಧವಾಗಿ ಹರಿಯಾಣ, ಗುಜರಾತ್, ಅಷ್ಟೇಕೆ ಮಹಾರಾಷ್ಟ್ರ ದಲ್ಲಿ ಸಹ ತಲಾವಾರು ಹೆಚ್ಚಿರುವುದನ್ನು ನಿಜವೆಂದು ವರದಿಸಿದೆ.

## ಬಡತನ, ದುರ್ಬಲತೆ ಮತ್ತು ಸಾಮಾಜಿಕ ಭದ್ರತೆ ಸಂಬಂಧಿ ಅಂಶಗಳು

ಎಂಬ ಶೀರ್ಷಿಕೆಯುಳ್ಳ ವಿಭಾಗದಲ್ಲಿ ನಗರದ ಕೆಲವು ಜನ ವರ್ಗಳು ಮೂಲ ಸೌಕರ್ಯಗಳಿಂದ ವಂಚಿತರಾಗಿದ್ದು ತತ್ಸಂಬಂಧವಾಗಿ ಆ ನಗರ ಜನ ವರ್ಗದಲ್ಲಿ ದುರ್ಬಲತೆ ಮತ್ತು ಅಭದ್ರತೆಯ ಸಮಸ್ಯೆಗಳು ತಲೆದೋರಿರುವುದನ್ನು ಅರ್ಥಮಾಡಿಕೊಳ್ಳಲು ಯತ್ನಿಸಲಾಗಿದೆ. ಇದಕ್ಕಾಗಿ ಪ್ರಾಥಮಿಕ ಮತ್ತು ದ್ವಿತಿಯ ದತ್ತಾಂಶವನ್ನು ಬಳಸಿಕೊಳ್ಳಲಾಗಿದೆ. ಈ ದತ್ತಾಂಶ ಆಧಾರದ ಮೇಲೆ ಲೇಖಕರು ಸಾರ್ವಜನಕ ನೀತಿಯಲ್ಲಿ

ಸರ್ವೆಸಾಮಾನ್ಯವಾಗಿ ಕಂಡು ಬರುವ ಈ ಮುಂದಿನಂತಹ ಊಹೆಗಳ ವಿರುದ್ಧ ಎಚ್ಚರಿಕೆ ನೀಡುತ್ತಾರೆ. ಮೊದಲನೆಯದಾಗಿ ಎಲ್ಲ ಕೊಳೆಗೇರಿಗಳು ಖಾಸಗಿ ಜಮೀನಿನ ಮೇಲಿದೆ ಎಂದು ಊಹೆಮಾಡುವುದು ತಪ್ಪು. ಸಾರ್ವಜನಕ ಜಮೀನಿನಲ್ಲಿರುವ ಕೊಳೆಗೇರಿಗಳಿಲ್ಲಿ ಶೇ13 ರಷ್ಟು ಭಾರತೀಯ ರೈಲ್ವೆಯ ಜಮೀನಿನಲ್ಲಿದ್ದರೆ, ಶೇ.53 ಕ್ಕೂ ಹೆಚ್ಚು ಪುರಸಭೆಯ ಜಮೀನಿನಲ್ಲಿರುತ್ತದೆ. ಇದರ ಹಕ್ಕು ಪತ್ರದ ಅಧಿಕಾರವು ಪುರಸಭೆಗಳಿಗಿರುತ್ತದೆ. ಎರಡನೆಯದಾಗಿ ನಗರದ ಬಡವರು ಪಕ್ಕಾ ಅಲ್ಲದ ಮನೆಗಳಲ್ಲಿ ವಾಸಮಾಡುತ್ತಾರೆಂದು ಊಹೆಮಾಡುವುದು ತಪ್ಪು.

ನೀರಿಗೆ ಸಂಬಂಧಿಸಿದಂತೆ ಹೇಳುವುದಾದರೆ ಸಾರ್ವಜನಿಕ ಸಂಸ್ಥೆಗಳು ಒದಗಿಸಿದ ಇದರ ಪ್ರಯೋಜನದ ಗಣನೀಯ ಭಾಗವನ್ನು ಮಧ್ಯಮ ಮತ್ತು ಮೇಲ್ಮಧ್ಯಮ ಆದಾಯಗಳ ಕುಟುಂಬಗಳು ಪಡೆದಿರುತ್ತವೆಂಬುದನ್ನು ಕಾಣಬಹುದಾಗಿದೆ. ಬಡವರು ತಮಗೆ ಬೇಕಾದ ನೀರನ್ನು ಸಾರ್ವಜನಿಕ ಕೊಳಾಯಿಗಳಿಂದ ಸಂಗ್ರಹಿಸುತ್ತಾತರೆಂಬುದನು ಕ್ಷೇತ್ರ ಅಧ್ಯಯನಗಳು ಮತ್ತೂ ತಿಳಿಸುತ್ತವೆ. ಇಂತಹ ಸಂದರ್ಭದಲ್ಲಿ ಅಂತಹ ನೀರಿನ ಗುಣಮಟ್ಟವು ಅಸಮರ್ಪಕವಾಗಿದ್ದು ನೀರಿನ ಕಾಯಿಲೆಗಳು ಮತ್ತು ಕೆಲವು ವೇಳೆ ಸಾಂಕ್ರಾಮಿಕ ರೋಗಕ್ಕೆ ಕಾರಣವಾಗುತ್ತದೆ. ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಶೌಚಾಲಯದ ಸೌಲಭ್ಯ ಇಲ್ಲದ ನಗರ ಕುಟುಂಬಗಳ ಸಂಖ್ಯೆ ಶೇ. 31 ಇದ್ದರೆ ಸಂವಾದಿಯಾಗಿ ಕೊಳಗೇರಿಗಳಲ್ಲಿ ಶೇ. 54 ರಷ್ಟು ಜಾಸ್ತಿ ಇದೆ. ರಾಜ್ಯ ಸರ್ಕಾರ ಅಥವಾ ಸ್ಥಳೀಯ ನಿಕಾಯಗಳು ನಿರ್ಮಾಣ ಮಾಡಿದ ಉಚಿತ ಸಮುದಾಯ ಶೌಚಾಲಯಗಳು ನಿರ್ವಹಣೆ ಇಲ್ಲದ ಕಾರಣ ನಿರುಪಯೋಗಿಯಾಗಿರುವುದನ್ನು ಕಾಣಬಹುದಾಗಿದೆ. ಜೊತೆಗೆ ಮಹತ್ವದ ಅಂಶವೇನೆಂದರೆ ಶೇ. 80 ರಷ್ಟು ಕೊಳೆಗೇರಿಗಳು ಹೊಲಸಿನ ವಿಲೇವಾರಿಗಾಗಿ ಪೌರನಿಕಾಯಗಳನ್ನು ಅವಲಂಬಿಸಿದ್ದರೆ ಉಳಿದ ಶೇ.20 ಕ್ಕೆ ಹೊಲಸಿನ ವಿಲೇವಾರಿಗೆ ಅವಕಾಶವೇ ಇಲ್ಲ. ಇದನ್ನು ಸೂಚಿಸುವುದರ ಮೂಲಕ ಲೇಖಕರು ಇಂತಹ ಮೂಲ ಸೇವೆಗಳನ್ನು ಒದಗಿಸಬಹುದಾದಂತಹ ಕ್ಷೇತ್ರಗಳಲ್ಲಿ ಸರ್ಕಾರೇತರ ಸಂಸ್ಥೆಗಳ ಭಾಗವಹಿಸುವಿಕೆಯತ್ತ ಗಮನ ಸೆಳೆಯಲು ಬಯಸುತ್ತಾರೆ.

ಅಂತಿಮ ಭಾಗವಾದ **ನಗರದ ಬಡವರಿಗೆ ಆಶ್ರಯ ಮತ್ತು ಮೂಲ ಸೌಕರ್ಯಗಳನ್ನು ಕಲ್ಪಸಿಕೊಡುವುದು: ಬದಲಾಗುತ್ತಿರುವ ಕಾರ್ಯಕ್ರಮಗಳು ಮತ್ತು ದೃಷ್ಟಿ ಕೋನಗಳು,** ಇದರಲ್ಲಿ ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಸ್ಥಳೀಯ ಸರ್ಕಾರಗಳು ಕೈಗೆತ್ತಿಕೊಂಡ ಬಡತನ ವಿರೋಧಿ ಕಾರ್ಯಕ್ರಮಗಳು, ಅದರಲ್ಲಿಯೂ ವಿಶೇಷವಾಗಿ ನಗರದ ಬಡವರಿಗೆ ಮೂಲ ಸೌಕರ್ಯ ಒದಗಿಸುವ ಕಾರ್ಯಕ್ರಮಗಳ ಒಂದು ವಿಶ್ಲೇಷಣೆ ಇರುತ್ತದೆ. ಪ್ರಸ್ತುತದ ಬಹುತೇಕ ಬಡತನ ವಿರೋಧಿ ಕಾರ್ಯಕ್ರಮಗಳು ಸ್ಥಳೀಯ ನಿಕಾಯಗಳು, ಖಾಸಗಿ ಸಂಸ್ಥೆಗಳು ಮತ್ತು ಸರ್ಕಾರೇತರ ಸಂಘಟನೆಗಳು ಮತ್ತು ಸಮುದಾಯಗಳ ತೊಡಗಿಸಿ ಕೊಳ್ಳುವಿಕೆಯನ್ನು ಕಲ್ಪಿಸಿಕೊಳ್ಳುತ್ತವೆ. ಒಟ್ಟು ಸಂಪನ್ಮೂಲದಲ್ಲಿ ಸರ್ಕಾರದ ಮೊಬಲಗು ಒಂದು ಭಾಗವಷ್ಟೇ ಆಗಿರುತ್ತದೆ. ಉಳಿದದ್ದು ಸಾಂಸ್ಥಿಕ ಮೂಲಗಳಿಂದ, ಖಾಸಗಿ ಉದ್ದಿಮೆದಾರರಿಂದ, ಮತ್ತು ಪಟ್ಟಣದ ಅಥವಾ ಸ್ಥಳೀಯ ನಿವಾಸಿಗಳಿಂದ ಬರಬೇಕೆಂದು ನಿರೀಕ್ಷಿಸಲಾಗಿರುತ್ತದೆ. ವಿಕೇಂದ್ರೀಕರಣದ ಚೌಕಟ್ಟಿನಲ್ಲಿ ನಗರದ ಬಡವರು ತಮ್ಮ ಶ್ರಮವನ್ನಷ್ಟೇ ಕೊಡುಗೆಯನ್ನಾಗಿ ನೀಡಬಲ್ಲರು. ಪ್ರಾಯೋಜನೆ ವಿವರಗಳನ್ನು ರೂಪಿಸಿರುವುದರಲ್ಲಿ ಅಥವಾ ಪ್ರಾಯೋಜನೆಯ ಅನುಷ್ಠಾನದಲ್ಲಿ ಅವರ ನುಡಿಯು ಏನೂ ಇರುವುದಿಲ್ಲ.

ಮುಕ್ತಾಯದಲ್ಲಿ ವಿಶ್ಲೇಷಣೆಯಿಂದ ಈ ಕೆಳಕಂಡ ನೀತಿ ಮಾರ್ಗದರ್ಶನಗಳು ಹೊರಹೊಮ್ಮುತ್ತವೆ.

1. ಅಂತರ ರಾಜ್ಯ ಮತ್ತು ಅಂತರ ನಗರದ ನಡುವಣ ಅಸಮತೆಗಳು ಗಾಬರಿಹುಟ್ಟಿಸುವಂತಹ ಪ್ರಮಾಣದಲ್ಲಿರುವುದರಿಂದ ಮೂಲ ಸೇವೆಗಳ ಉಪಬಂಧದಲ್ಲಿ ಹೆಚ್ಚಿನ ಸಮತೆ ಇರಬೇಕು.
2. ಸಣ್ಣ ಮತ್ತು ಮಧ್ಯಮ ಪಟ್ಟಣಗಳು ಅದರಲ್ಲಿಯೂ ಹಿಂದುಳಿದ ರಾಜ್ಯಗಳಲ್ಲಿರುವಂತಹುದು, ಸಾಕಷ್ಟು ಸಂಪನ್ಮೂಲಗಳನ್ನು ಹುಟ್ಟುಹಾಕಲು ಅವುಗಳ ಆರ್ಥಿಕ ಮೂಲಾಧಾರವು ಸಾಕಷ್ಟು ಬಲಿಷ್ಠವಾಗಿಲ್ಲದ ಕಾರಣ ಅವುಗಳು ಕೇಂದ್ರ, ರಾಜ್ಯ ಸರ್ಕಾರದಿಂದ ವಿಶೇಷನೆರವನ್ನು ಪಡೆಯಬಹುದು.

3. ವಿಕೇಂದ್ರೀಕರಣ ಸಂಬಂಧದ ಸಂವಿಧಾನದ ತಿದ್ದುಪಡಿಗಳ ಹಿಂದೆಯೇ ಬೆಂಬಲವಾಗಿ ಪೌರನಿಕಾಯಗಳಿಗೆ ವಾಸ್ತವಿಕವಾಗಿ ಅಧಿಕಾರಗಳು ಮತ್ತು ಜವಾಬ್ದಾರಿಗಳನ್ನು ವಹಿಸಿಕೊಟ್ಟು ಅವುಗಳ ಬಳಕೆಗೂ ಅವಕಾಶ ಮಾಡಿಕೊಡಬೇಕು.
4. ಪ್ರತಿಯೊಂದು ರಾಜ್ಯದಲ್ಲಿ ಅಭಿವೃದ್ಧಿಯ ಸಂಭಾವ್ಯತೆ ಇರುವ ಪರಿಮಿತ ಸಂಖ್ಯೆಯ ಪಟ್ಟಣಗಳನ್ನು ಗುರುತಿಸಬೇಕು, ಹಾಗು ಇವುಗಳಿಗೆ ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಗೆ ಸಂಪರ್ಕ ಕಲ್ಪಿಸಲು ಯತ್ನಿಸಬೇಕು.
5. ಸಹಾಯಧನೋಪೇತ ಸೌಕರ್ಯಗಳು ಬಹುತೇಕ ಉನ್ನತ ಮತ್ತು ಮಧ್ಯಮ ಆದಾಯವುಳ್ಳ ಬಡಾವಣೆಗಳಿಗೆ ಹೋಗಿರುವುದರಿಂದ ಕಟ್ಟುನಿಟ್ಟಾದ ನಬಂಧನೆಗಳ ದ್ವಾರಾ ಸಹಾಯಧನಗಳ ಜನ ಸಂಖ್ಯೆಯ ದುರ್ಬಲ ವರ್ಗಗಳಿಗೆ ಮಾತ್ರವೇ ಮುಟ್ಟುವಂತೆ ಸ್ಪಷ್ಟವಾಗಿಸುವುದನ್ನು ಖಾತ್ರಿ ಪಡಿಸಿಕೊಳ್ಳಲು ಈ ಕಾರ್ಯಕ್ರಮಗಳನ್ನು ಮತ್ತು ಕಾರ್ಯಯೋಜನೆಗಳನ್ನು ಪುನರ್ರಚಿಸುವ ಅಗತ್ಯವಿದೆ.

# ಲಿಂಗಾಧಾರಿತ ಆಯ–ವ್ಯಯ

## ಲಿಂಗಾಧಾರಿತ ಆಯವ್ಯಯ

11\. 1.1. ಲಿಂಗಾಧಾರಿತ ಆಯವ್ಯಯವು ಮಹಿಳೆಯರ ಸಲುವಾಗಿ ಪ್ರತ್ಯೇಕ ಆಯವ್ಯವಲ್ಲ; ಬದಲಾಗಿ ಇದು ಸರ್ಕಾರದ ಆಯವ್ಯಯವನ್ನು ಅದರ ಲಿಂಗ್ಯವ್ಯತ್ಯಾಸದ ಪರಿಣಾಮಗಳು ಏನು ಎಂಬುದನ್ನು ಸ್ಥಾಪಿಸಲು ಮತ್ತು ಲಿಂಗಾಧಾರಿತ ಬದ್ಧತೆಗಳನ್ನು ಆಯವ್ಯಯದ ಬದ್ಧತೆಗಳನ್ನಾಗಿ ಪರಿವರ್ತಿಸಲು ಮಾಡಿದ ಒಂದು ವಿಭಜನೆ. ಲಿಂಗ ಸಂವೇಧಿ ಆಯವ್ಯಯದ ಮುಖ್ಯ ಉದ್ದೇಶವೇನೆಂದರೆ ಆಯವ್ಯಯಕಾರ್ಯದ ವಿಶ್ಲೇಷಣೆಯನ್ನು ಸುಧಾರಿಸುವುದು, ಸಾರ್ವಜನಕ ವೆಚ್ಚದ ಗುರಿಯಲ್ಲಿ ಹೆಚ್ಚು ಪರಿಣಾಮಕಾರಿತೆಯನ್ನು ತರುವುದು ಮತ್ತು ಹಿಂದಿನ ಆಯವ್ಯಯ ಕ್ರಮಗಳಿಂದಾದ ಯಾವುದೇ ಅನಪೇಕ್ಷಿತ ಲಿಂಗನಿರ್ಧಿಷ್ಟ ಪರಿಣಾಮಗಳನ್ನು ಸರಿದೂಗಿಸುವುದು.

11\. 1.2. ಪ್ರಸ್ತುತ ಆರ್ಥಿಕ ನೀತಿಯ ರಚನೆಯನ್ನು ಹುಟ್ಟು ಹಾಕುವ ಸಾಧನವಾಗಿ ಲಿಂಗಾಧಾರಿತ ಆಯವ್ಯಯವು ಹೆಚ್ಚು ಹೆಚ್ಚು ಅಂಗೀಕೃತವಾಗುತ್ತಿದೆ. ಬೀಜಿಂಗ್‌ನಲ್ಲಿ 1995ರ ಸೆಪ್ಟೆಂಬರ್‌ನಲ್ಲಿ ನಡೆದ ನಾಲ್ಕನೇ ವಿಶ್ವ ಮಹಿಳಾ ಸಮ್ಮೇಳನ ಮತ್ತು ಅದು ಅಳವಡಿಸಿಕೊಂಡ ಕಾರ್ಯವೇದಿಕೆಯು ಎಲ್ಲ ವಿಸ್ತೃತ ಆರ್ಥಿಕ ನೀತಿಗಳಲ್ಲಿಯೂ ಮತ್ತು ಅವುಗಳ ಆಯವ್ಯಯ ಆಯಾಮಗಳಲ್ಲಿಯೂ ಲಿಂಗಾಧಾರಿತ ದೃಷ್ಟಿಕೋನವನ್ನು ಇಟ್ಟು ಕೊಳ್ಳಬೇಕೆಂದು ಕರೆನೀಡಿತು. ಜೂನ್ 2000ದಲ್ಲಿ ನಡೆದ ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಮಹಿಳಾ ವಿಶೇಷ ಅಧಿವೇಶನದ ಫಲಿತಾಂಶದ ಧಾಖಲೆಯು ಸಹ ಎಲ್ಲ ಪ್ರಮುಖ ವಿಸ್ತೃತ ಆರ್ಥಿಕ ನೀತಿಗಳಲ್ಲಿ ಸಾಮಾಜಿಕ ಅಭಿವೃದ್ಧಿ ನೀತಿಗಳಲ್ಲಿ ಮತ್ತು ರಾಷ್ಟ್ರೀಯ ಅಭಿವೃಧಿ ಕಾರ್ಯಕ್ರಮಗಳಲ್ಲಿ ಲಿಂಗಾಧಾರಿತ ದೃಷ್ಟಿಕೋನವನ್ನು ಮುಖ್ಯವಾಹಿನಿಯಲ್ಲಿ ತರಬೇಕೆಂದು ಎಲ್ಲ ರಾಷ್ಟ್ರಗಳಿಗೂ ಕರೆಕೊಟ್ಟಿತು, ಏಪ್ರಿಲ್ 2000 ದಲ್ಲಿ ನವದೆಹಲಿಯಲ್ಲಿ ನಡೆದ ಆರನೇ ಮಹಿಳಾ ವ್ಯವಹಾರಗಳ ಕಾಮನ್ ವೆಲ್ತ್ ಸಚಿವರ ಸಮ್ಮೇಳನದಲ್ಲಿಯೂ ಸಹ ಲಿಂಗಾಧಾರಿತ ಆಯವ್ಯಯದ ಮೇಲೆ ಹೆಚ್ಚು ಒತ್ತು ನೀಡಲಾಯಿತು.

11\. 1.3. ಲಿಂಗಸಂವೇದಿ ಆಯವ್ಯಯವನ್ನು ಮೊದಲ ಬಾರಿಗೆ ರೂಪಿಸಿದ್ದು ಆಸ್ಟ್ರೇಲಿಯ ದೇಶ. ಅಲ್ಲಿನ ಒಕ್ಕೂಟ ಸರ್ಕಾರವು ಸರ್ಕಾರದ ಆಯವ್ಯಯವು ಮಹಿಳೆಯರು ಮತ್ತು ಹುಡುಗಿಯರ ಮೇಲೆ ಯಾವ ಪರಿಣಮ ಉಂಟು ಮಾಡಿದೆ ಎಂಬುದರ ಕುರಿತಂತೆ ಒಂದುಸಮಗ್ರ ಲೆಕ್ಕಪರಿಶೋಧನೆ ವರದಿಯನ್ನು 1984ರಲ್ಲಿ ಪ್ರಕಟಪಡಿಸಿತು. 1980 ಮತ್ತು 1990 ರ ದಶಕಗಳಲ್ಲಿ ವಿವಿಧ ಕಾಲಗಳಲ್ಲಿ ಆಸ್ಟ್ರೇಲಿಯಾದ ಪ್ರತಿಯೊಂದು ರಾಜ್ಯ ಮತ್ತು ಪ್ರಾದೇಶಿಕ ಸರ್ಕಾರಗಳು ಮಹಿಳೆಯರ ಆಯವ್ಯಯ ರಚನಾಭ್ಯಾಸಗಳನ್ನು ಕೈಗೆತ್ತಿಕೊಂಡಿತ್ತು. ತರುವಾಯ ದಕ್ಷಿಣ ಆಫ್ರಿಕದ ಸರದಿ. ಅದು 1995ರಲ್ಲಿ ಸಂಸತ್ಸದಸ್ಯರು ಮತ್ತು ಸರ್ಕಾರೇತರ ಸಂಸ್ಥೆಗಳು ತೊಡಗಿಕೊಂಡು ಭಾಗಿದಾರಿಕೆ ಪ್ರಕ್ರಿಯೆ ಮೂಲಕ ಲಿಂಗ ಸಂವೇದಿ ಆಯವ್ಯಯ ರಚನೆ ಮಾಡಲು ಉಪಕ್ರಮಿಸಿತು. ರಾಷ್ಟ್ರೀಯ ಆಯವ್ಯಯ ಪ್ರಕ್ರಿಯೆಗಳಲ್ಲಿ ಲಿಂಗ ವಿಷಯವನ್ನು ಅಳವಡಿಸಿಕೊಳ್ಳುವ ಕುರಿತಂತೆ ಕಾಮನ್ ವೆಲ್ತ್‌ನ ಯತ್ನೋಪಕ್ರಮವು 197ರಲ್ಲಿ ದಕ್ಷಿಣ ಆಫ್ರಿಕವನ್ನು ಬಿಟ್ಟು ಇತರ ನಾಲ್ಕು ದೇಶಗಳಲ್ಲಿ ಪ್ರಾರಂಭವಾಯಿತು. ಅವೆಂದರೆ ಫಿಜಿ, ಸೇಟ್‌ಕಿಟ್ಸ್ ಮತ್ತು ನವೀಸ್ ಬಾರ್ಬಡಾಸ್ ಮತ್ತು ಶ್ರೀಲಂಕಾ, ಇತರ ಹಲವಾರು ರಾಷ್ಟ್ರಗಳು ಸಹ ತಮ್ಮ ರಾಷ್ಟ್ರೀಯ ಆಯವ್ಯಯದಲ್ಲಿ ಲಿಂಗಾಂಶವನ್ನು ಸೇರಿಸುವ ಬಗ್ಗೆ ಕ್ರಮಗಳನ್ನು ಕೈಗೊಂಡಿದೆ. (ಕೆನಡಾ, ಇಂಗ್ಲೇಡ್, ಮೊಜ಼ಾಂಬಿಕ್, ನಮೀಬಿಯ, ತಾನ್ಸಾನಿಯಾ ಮತ್ತು ಉಗಾಂಡ) ಲಿಂಗಾಧಾರಿತ ಆಯವ್ಯಯ ಉಪಕ್ರಮವನ್ನು ಪ್ರಸ್ತುತ 35 ದೇಶಗಳಲ್ಲಿ ಈ ಚಟುವಟಿಕೆಯನ್ನು

ಕೈಗೊಳ್ಳುವ ಪ್ರಕ್ರಿಯೆ ಮತ್ತು ತೊಡಗಿಸಕೊಳ್ಳುವಭಾಗಿದಾರರಲ್ಲಿ ವಿಭಿನ್ನವಾದ ನಡೆಗಳನ್ನು ಅನುಸರಿಸಿ ಪ್ರಯತ್ನಿಸಲಾಗುತ್ತಿದೆ.

## ಭಾರತದಲ್ಲಿ ಲಿಂಗಾಧಾರಿತ ಆಯವ್ಯಯ

11.2.1 ಭಾರತದಲ್ಲಿ ಸಾರ್ವಜನಿಕ ವೆಚ್ಚದಲ್ಲಿ ಲಿಂಗ ದೃಷ್ಟಿಕೋನವು 1974 ರಲ್ಲಿ ಮಹಿಳೆಯರ ಸ್ಥಾನಮಾನ ಕುರಿತ ಸಮಿತಿಯ ವರದಿಯು ಪ್ರಕಟವಾದ ತರುವಾಯ ತನ್ನ ನೆಲೆಯನ್ನು ಕಂಡು ಕೊಳ್ಳುತ್ತಿದೆ. ಎಂಟನೇ ಪಂಚವಾರ್ಷಿಕ ಯೋಜನೆಯು ಮೊದಲಬಾರಿಗೆ ಸಾಮಾನ್ಯ ಅಭಿವೃದ್ಧಿಯ ಕ್ಷೇತ್ರಗಳಿಂದ ಒಂದು ಖಚಿತ ಮೊಬಲಗು ಮಹಿಳೆಯರಿಗೆ ಬಳಕೆಯಾಗುವುದನ್ನು ಖಾತ್ರಿ ಪಡಿಸಿಕೊಳ್ಳುವ ಅಗತ್ಯತೆಯನ್ನು ಎತ್ತಿ ತೋರಿಸಿತು. ಯೋಜನೆಯ ದಾಖಲೆಯು ಒಂದು ಸ್ಪಷ್ಟ ಹೇಳಿಕೆಯನ್ನು ಒಳಗೊಂಡಿದ್ದಿತು. " ವಿವಿಧ ಕ್ಷೇತ್ರಗಳಲ್ಲಿನ ಅಭಿವೃದ್ಧಿಯ ಪ್ರಯೋಜನಗಳು ಮಹಿಳೆಯರುನ್ನು ಕೈಬಿಟ್ಟು ಹೋಗಬಾರದು ಹಾಗು ಸಾಮಾನ್ಯ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಪೂರಕವಾಗಿ ಮಹಿಳೆಯರಿಗೆ ವಿಶೇಷ ಕಾರ್ಯಕ್ರಮಗಳಿರಬೇಕು. ಇದರಲ್ಲಿ ಎರಡನೆಯದರಲ್ಲಿ ಹೆಚ್ಚಿನ ಲಿಂಗಸಂವೇದನೆ ಇರಬೇಕು.". ಇದ್ದಾಗ್ಯೂ ಈ ನಡೆಯು ಮಹಿಳೆಯರಿಗೆ ಸಾಕಷ್ಟು ಹಣ ಮತ್ತು ಪ್ರಯೋಜನಗಳು ಹರಿದು ಹೋಗುವುದನ್ನು ಖಾತ್ರಿ ಪಡಿಸಿಕೊಳ್ಳುವಲ್ಲಿ ಹೆಚ್ಚಿನ ಫಲಿತ ಕೊಡಲಿಲ್ಲ.

11.2.2 ಒಂಬತ್ತನೇ ಪಂಚವಾರ್ಷಿಕ ಯೋಜನೆಯು ಮೊದಲಿನ ಬದ್ಧತೆಯನ್ನು ಮರು ದೃಢಪಡಿಸುತ್ತ ಮಹಿಳಾ ವಿಶೇಷ ಯೋಜನೆಯನ್ನು ಒಂದು ಪ್ರಮುಖ ಕಾರ್ಯತಂತ್ರವಾಗಿ ಅಳವಡಿಸಿಕೊಂಡು "ನಿಧಿಗಳ/ ಪ್ರಯೋಜನಗಳ ಶೇ. 30 ಕ್ಕಿಂತ ಕಡಿಮೆಯಿಲ್ಲದಷ್ಟು ಭಾಗವನ್ನು ಎಲ್ಲ ಮಹಿಳಾ ಸಂಬಂಧಿ ಕ್ಷೇತ್ರಗಳಲ್ಲಿಯೂ ಮೀಸಲಿರಿಸಿರುವುದನ್ನು" ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ಎರಡಕ್ಕೂ ನಿರ್ದೇಶನ ನೀಡಿತು. ಅಲ್ಲದೆ ಮಹಿಳೆಯರನ್ನು ಸಬಲೀಕರಣಗೊಳಿಸುವ ನಿಟ್ಟಿನಲ್ಲಿ ಪ್ರಸ್ತಾವಿತ ಕಾರ್ಯತಂತ್ರವು ಒಂದು ಸರ್ವಾಂಗೀಣ ನಡೆಯನ್ನು ಹೊಂದಿರುತ್ತದೆಂಬುದನ್ನು ಖಾತ್ರಿ ಪಡಿಸಿಕೊಳ್ಳಲು ಒಂದು ಪರಿಣಾಮಕಾರಿ ಸಾಧನ ವ್ಯವಸ್ಥೆಯ ಮೂಲಕ ಮೀಸಲಿರಿಸಿದ ನಿಧಿಗಳು ಪ್ರಯೋಜನಗಳ ಹರಿವಿನ ಬಗೆಗೆ ವಿಶೇಷ ನಿಗಾವನ್ನು ಇರಿಸಬೇಕೆಂದೂ ಸಹ ಅದು ನಿರ್ದೇಶನ ನೀಡಿತು.

11.2.3 ಸಾರ್ವಜನಕ ವೆಚ್ಚದ ವಿಶ್ಲೇಷಣೆಯಲ್ಲಿ ಒಂದು ಪ್ರಮುಖ ತೊಡಕು ಏನೆಂದರೆ ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ ಲಿಂಗ ಪ್ರತ್ಯೇಕಿತ ಕ್ರೊಢೀಕರಣದ ದತ್ತಾಂಶದ ಲಭ್ಯತೆ ಇಲ್ಲದಿರುವುದು. ಆದ್ದರಿಂದ ಇಲಾಖೆಯು 18 ವಿವಿಧ ಸೂಚಕಗಳಿಗೆ ಸಂಬಂಧಿಸಿದಂತೆ ದೇಶಾದ್ಯಂತ ಅಂತಹ ದತ್ತಾಂಶವನ್ನು ಹುಟ್ಟು ಹಾಕಲು ಉಪಕ್ರಮಿಸಿತು. ಮಹಿಳಾ ಸಬಲೀಕರಣದ ರಾಷ್ಟ್ರೀಯ ನೀತಿಯು ಲಿಂಗಾಧಾರಿತ ಅಭಿವೃದ್ಧಿಯ ಮಾನ ಸೂಚಕಗಳನ್ನು ತಜ್ಞಸಂಸ್ಥೆಯೊಂದಿಗೆ ಅಂತರ್ಜಾಲ ನಿರ್ಮಿಸುವ ಮೂಲಕ ವೃದ್ಧಿಪಡಿಸಬೇಕೆಂಬ ಬದ್ಧತೆಯನ್ನು ಪ್ರಕಟಪಡಿಸಿತು.

## ಲಿಂಗಾಧಾರಿತ ಅಭಿವೃದ್ಧಿ ಮಾನಸೂಚಗಳು

"ಉತ್ತಮ ಯೋಜನೆ ಮತ್ತು ಕಾರ್ಯಕ್ರಮದ ರೂಪಿಕೆಯನ್ನು ಹಾಗು ಸಾಕಷ್ಟು ಸಂಪನ್ಮೂಲವನ್ನು ಹಂಚಿಕೆ ಮಾಡುವುದನ್ನು ಬೆಂಬಲಿಸುವ ಸಲುವಾಗಿ ತಜ್ಞ ಸಂಸ್ಥೆಯೊಂದಿಗೆ ಅಂತರ್ಜಾಲ ನಿರ್ಮಿಸುವ ಮೂಲಕ ಲಿಂಗಾಧಾರಿತ ಅಭಿವೃದ್ಧಿ ಮಾನಸೂಚಕಗಳನ್ನು (ಲಿಂಮಾ) ವೃದ್ಧಿ ಪಡಿಸಲಗುತ್ತದೆ. ಇದರ ಜೊತೆಗೆ ಲಿಂಗಾಧಾರಿತ ಲೆಕ್ಕ ಪರಿಶೋಧನೆ ಮತ್ತು ಮೌಲಮಾಪನದ ಸಾಧನವ್ಯವಸ್ಥೆಯನ್ನೂ ಸಹ

ವೃದ್ಧಿಪಡಿಸುವುದನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಾಗೂ ಸಾರ್ವಜನಿಕ ಮತ್ತು ಖಾಸಗಿ ಸಂಶೋಧನೆ ಮತ್ತು ಶೈಕ್ಷಣಿಕ ಸಂಸ್ಥೆಗಳ ಎಲ್ಲ ಪ್ರಾರ್ಥಮಿಕ ದತ್ತಾಂಶ ಸಂಗ್ರಹ ಸಂಸ್ಥೆಗಳೂ ಲಿಂಗ ಪ್ರತ್ಯೇಕಿತ ದತ್ತಾಂಶವನ್ನು ಸಂಗ್ರಹಿಸುವುದನ್ನು ಕೈಗೆತ್ತಿಕೊಳ್ಳಲಾಗುತ್ತದೆ. ಮುಖ್ಯ ಕ್ಷೇತ್ರಗಳಲ್ಲಿ ಮಹಿಳೆಯರ ಸ್ಥಾನ ಮಾನವನ್ನು ಪ್ರತಿಬಿಂಬಿಸುವದರಲ್ಲಿ ಇರುವ ದತ್ತಾಂಶ ಮತ್ತು ಮಾಹಿತಿ ಕೊರತೆಗಳನ್ನು ಗುರುತಿಸಿ ಭರ್ತಿಮಾಡಲಾಗುತ್ತದೆ. ಸಚಿವಾಲಯಗಳು, ಕಾರ್ಪೋರೇಶನ್ನುಗಳು, ಬ್ಯಾಂಕುಗಳು ಎಲ್ಲರಿಗೂ ಕಾರ್ಯಕ್ರಮಗಳು ಮತ್ತು ಪ್ರಯೋಜನಗಳಿಗೆ ಸಂಬಂಧಿಸಿದಂತೆ ದತ್ತಾಂಶದ ಸಂಗ್ರಹಣೆ, ತಾಳೆ ಮತ್ತು ಪ್ರಸರಣೆಯನ್ನು ಲಿಂಗಾಧಾರಿತ ಕ್ರೂಢೀಕರಣದ ಆಧಾರದ ಮೇಲೆ ಮಾಡಬೇಕೆಂದು ಸಲಹೆ ನೀಡಲಾಗುತ್ತದೆ. ಇದು ಒಂದು ಅರ್ಥಪೂರ್ಣ ಯೋಜನೆ ಮತ್ತು ನೀತಿಗಳ ಮೌಲ್ಯ ಮಾಪನದಲ್ಲಿ ನೆರವಾಗುತ್ತದೆ".

## ಮಹಿಳಾ ಸಬಲೀಕರಣದ ರಾಷ್ಟ್ರೀಯ ನೀತಿ 2001

11.2.4 ಭಾರತದಲ್ಲಿ ಲಿಂಗಾಧಾರಿತ ಆಯವ್ಯಯ ರಚನೋಪಕ್ರಮವು ನವದೆಹಲಿಯಲ್ಲಿ ಯೂನಿಫೆಮ್ ಸಹಯೋಗದೊಂದಿಗೆ ಜುಲೈ 2000ದಲ್ಲಿ ದಕ್ಷಿಣ ಏಷ್ಯಾ ಪ್ರದೇಶದಲ್ಲಿ ರಾಷ್ಟ್ರೀಯ ಆಯವ್ಯಯಗಳನ್ನು ಲಿಂಗಾಧಾರಿತ ಮಾಡುವುದು" ಮೇಲಣ ಕಾರ್ಯಾಗಾರವು ನಡೆದಾಗ ಪ್ರಾರಂಭವಾಯಿತು. ಇದರಲ್ಲಿ ದಕ್ಷಿಣ ಏಷ್ಯಾ ಪ್ರದೇಶದ ಸರ್ಕಾರಗಳ ಪ್ರತಿನಿಧಿಗಳು ವಿಶ್ವಸಂಸ್ಥೆ ಏಜೆನ್ಸಿಗಳು, ಮಾಧ್ಯಮದವರು, ಸಂಶೋಧನಾ ಸಂಸ್ಥೆಗಳು, ನಾಗರಿಕ ಸಮಾಜ ಮತ್ತು ಯೋಜನಾ ಆಯೋಗದ ಸದಸ್ಯರು ಭಾಗವಹಿಸಿದ್ದರು. ಹೆಸರಾಂತ ಲಿಂಗಾಧಾರಿತ ಲೆಕ್ಕ ಪರಿಶೋಧನೆಯ ವೃತ್ತಿ ತಜ್ಞೆ ಪ್ರೊಫೆಸರ್ ಡಯಾನ ಎಲ್ಸನ್ ಅವರು ಪರಸ್ಪರ ಕ್ರಿಯೆಪ್ರತಿಕ್ರಿಯೆಯ ಅಧಿವೇಶನದ ಮೂಲಕ ಲಿಂಗಾಧಾರಿತ ಆಯವ್ಯಯಕ್ಕೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಹಂಚಿಕೊಂಡರು. ಲಿಂಗ ಸಂಬಂಧಿ ಆರ್ಥಿಕ ನೀತಿಯ ಅಂಶಗಳನ್ನು ಅಧ್ಯಯನ ಮಾಡುವಸಲುವಾಗಿ ಸಾರ್ವಜನಿಕ ಹಣಕಾಸು ಮತ್ತು ನೀತಿಯ ರಾಷ್ಟ್ರೀಯ ಸಂಸ್ಥೆಯನ್ನು (ಎನ್‌ಐಪಿಎಫ್ ಅಂಡ್ ಪಿ) ಪ್ರಾರಂಭ ಮಾಡಲಾಯಿತು. ಅಧ್ಯಯನದಲ್ಲಿ ತತ್ಸಂಬಂಧಿಯಾದ ವಿಸ್ತೃತ ದತ್ತಾಂಶವನ್ನು ಲಿಂಗಾಧಾರಿತವಾಗಿ ಪ್ರತ್ಯೇಕಿಸುವುದು, ಅರ್ಥವ್ಯವಸ್ಥೆಯಲ್ಲಿ ಮಹಿಳೆಯರ ಕೊಡುಗೆಯ ಪ್ರಮಾಣ ನಿರ್ಧರಣೆ , ಮಹಿಳೆಯರ ಮೇಲೆ ಸರ್ಕಾರದ ಆಯವ್ಯಯದ ಪರಿಣಾಮದ ಮೌಲ್ಯ ನಿರ್ಧರಣೆ, ಸಾರ್ವಜನಕ ಸೇವೆಗಳ ಪೂರೈಕೆಯ ಸಾಂಸ್ಥಿಕ ಚೌಕಟನ್ನು ಸುಧಾರಿಸುವುದರಲ್ಲಿ ಮಹಿಳೆಯ ಪಾತ್ರ ಹಾಗೂ ಒಂದು ಲಿಂಗಸಂವೇದಿಯಾದ ರಾಷ್ಟ್ರೀಯ ಆಯವ್ಯಯ ಪ್ರಕ್ರಿಯೆಯನ್ನು ನಿರ್ಮಿಸುವಲ್ಲಿ ಪರ್ಯಾಯ ನೀತಿಗಳು ಇವುಗಳು ಒಳಗೊಂಡಿದ್ದವು.

## ಕೇಂದ್ರ ಆಯವ್ಯಯ 2001–02ರ ಲಿಂಗಾಧಾರಿತ ವಿಶ್ಲೇಷಣೆ

ಸಾರ್ವಜನಕ ಹಣಕಾಸು ಮತ್ತು ನೀತಿಯ ರಾಷ್ಟ್ರೀಯ ಸಂಸ್ಥೆಯು "ಭಾರತದಲ್ಲಿ ಮಹಿಳೆಯರ ಸ್ಥಾನಮಾನ ಮತ್ತು ಅರ್ಥವ್ಯವಸ್ಥೆಯಲ್ಲಿ ಅವರ ಪಾತ್ರ" ಕುರಿತಂತೆ ತನ್ನ ಮಧ್ಯಂತರದ ವರಿದಿಯನ್ನು 2001ರ ಜನವರಿಯಲ್ಲಿ ಸಲ್ಲಿಸಿತು. ಈ ಸಮೀಕ್ಷಯಲ್ಲಿ ಮೊಟ್ಟ ಮೊದಲ ಬಾರಿಗೆ ಸಾಮಾಜಿಕ ಕ್ಷೇತ್ರದ ಅಧ್ಯಾಯದಲ್ಲಿ ಲಿಂಗ ಅಸಮತೆ ಕುರಿತಂತೆ ಒಂದು ವಿಭಾಗವನ್ನು ಸೇರಿಸಲಾಯಿತು. ಎನ್‌ಐಪಿಎಫ್ ಅಂಡ್ ಪಿ ನ 2001 ಆಗಸ್ಟ್ ನಲ್ಲಿ ಸಲ್ಲಿಸಿದ ಎರಡನೆ ವರದಿಯಲ್ಲಿ "ಕೇಂದ್ರ ಆಯವ್ಯಯ 2001–02ರ ಆಯವ್ಯಯೋತ್ತರ ಮೌಲ್ಯನಿರ್ಧರಣೆ"ಯನ್ನು ಮಾಡಲಾಯಿತು. ವರದಿಯು ಸಾರ್ವಜನಿಕ ವೆಚ್ಚವನ್ನು ಮೂರು ಮುಖ್ಯ ಬಗೆಗಳಾಗಿ ವರ್ಗೀಕರಿಸಿತು, i) ವಿಶೇಷತಃ ಮಹಿಳೆ ಮತ್ತು ಹುಡುಗಿರನ್ನು ಲಕ್ಷ್ಯವಾಗಿರಿಸಿಕೊಂಡ ಮಹಿಳಾ ವಿಶಿಷ್ಟ ಹಂಚಿಕೆಗಳು ii) ಮಹಿಳಾಭಾಗಾಂಶ ಇರುವ ಸಂಮಿಶ್ರ ವೆಚ್ಚಗಳ ಕಾರ್ಯಯೋಜನೆಗಳ ಮಹಿಳಾ ಪರ ಹಂಚಿಕೆಗಳು iii) ಲಿಂಗಭಿನ್ನತೆ ಯ ಪರಿಣಾಮವುಳ್ಳ ಮುಖ್ಯವಾಹಿನಯ ಸಾರ್ವಜನಕ ವೆಚ್ಚ.

11.3.2 ಮಹಿಳಾ ವಿಶಿಷ್ಟ ಹಂಚಿಕೆಗಳು ಗುರುತಿಸಲು ಮತ್ತು ಲೆಕ್ಕ ಹಾಕಲು ಸುಲಭವಾಗಿದ್ದರೆ ಮಹಿಳಾ ಪರ ಹಂಚಿಕೆಯ ವಿಂಗಡನೆಯು ಹೆಚ್ಚಿನ ವೈಧಾನಕ ಸವಾಲುಗಳನ್ನು ಒಡ್ಡುತ್ತವೆ. ಸಾರ್ವಜನಿಕ ಹಣಕಾಸು ಮತ್ತು ನೀತಿಯ ರಾಷ್ಟ್ರೀಯ ಸಂಸ್ಥೆಯು (ಎನ್ಐಪಿಎಫ್ ಅಂಡ್ ಪಿ) ತನ್ನ ವಿಧಾನವನ್ನು ಅನುಸರಿಸಿದೆ. ಇದು ಪರಿಷ್ಕೃತವಾಗಬೇಕಿದೆ ಮತ್ತು ಸಪ್ರಮಾಣೀಕರಣವಾಗಬೇಕಿದೆ.

11.3.3 ಸಾಹ ಮತ್ತು ನೀರಾಸಂ ದ ಅಧ್ಯಯನದ ಮುಖ್ಯ ಶೋಧನಾಂಶಗಳು ಈ ರೀತಿ ಇವೆ: 2001 –02 ರ ಕೇಂದ್ರ ಆಯವ್ಯಯದಲ್ಲಿ ವಿಶೇಷತಃ ಮಹಿಳಾ ಲಕ್ಷ್ಯವುಳ್ಳ ಕಾರ್ಯಕ್ರಮಗಳ ಒಟ್ಟಾರೆ ಮೊಬಲಗು ರೂ. 3258.50 ಕೋಟಿಗಳು. ಇದು 2000–01ರಲ್ಲಿನ ಆಯವ್ಯಯ ವೆಚ್ಚದ ಹಂಚಿಕೆ ರೂ 2969.00 ಕೋಟಿ ಮತ್ತು ರಾಜಸ್ವವೆಚ್ಚವಾದ ರೂ. 2541.70 ಕೋಟಿಗಳಿಗಿಂತ ಅಧಿಕವಾಗಿರುತ್ತದೆ.

- 2001–02 ರ ಆಯವ್ಯಯದಲ್ಲಿ ಮಹಿಳಾ ವಿಶಿಷ್ಟ ಕಾರ್ಯಕ್ರಮಗಳಿಗಾಗಿ ಲೆಕ್ಕ ಹಾಕಿ ಒಟ್ಟು ಯೋಜನಾ ಹಂಚಿಕೆಯು ಒಟ್ಟು ಮೊಬಲಗಾದ ರೂ. 375223 ಕೋಟಿಗಳಲ್ಲಿ ಶೇ. 0.85 ಆಗುತ್ತದೆ. ರಾವೆ ಕ್ಕೆ ಹೋಲಿಸಿಕೊಂಡಾಗ ಇದು ಶೇ. 0.76 ಆಗುತ್ತದೆ. 2000–01 ಸಾಲಿನಲ್ಲಿ ಮಹಿಳೆಯರಿಗಾಗಿ ನೇರ ಹಂಚಿಕೆಯು ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಶೇ. 0.12 ಆಗಿತ್ತು. ಇದು 2001–02ನೇ ಸಾಲಿನಲ್ಲಿ ಶೇ. 0.17 ಕ್ಕೆ ಏರಿಕೆ ಆಯಿತು.
- ವಿವಿಧ ಸಚಿವಾಲಯಗಳೆಲ್ಲವೂ ಸೇರಿದರೆ ವಿಶೇಷತಃ ಮಹಿಳೆಯರು ಮತ್ತು ಹುಡುಗಿಯರನ್ನು ಲಕ್ಷ್ಯದಲ್ಲಿಟ್ಟುಕೊಂಡು ಮಾಡಿದ ನೇರ ಹಂಚಿಕೆಗಳ ಒಟ್ಟು ಮೊಬಲಗು 2000–01 ರ ಆಯವ್ಯಯ ವೆಚ್ಚದಲ್ಲಿ 2969.00 ಕೋಟಿ ಇದ್ದದ್ದು 2001–02ನೇ ಸಾಲಿನ ರಾಜಸ್ವವೆಚ್ಚದಲ್ಲಿ ರೂ.2541.70 ಆಗಿ ಗಣನೀಯವಾಗಿ ಇಳಿಕೆಯಾಗಿದೆ.
- ಕೆಲವು ಸಾರ್ವಜನಿಕವೆಚ್ಚದ ಕಾರ್ಯಕ್ರಮಗಳು ಮಹಿಳೆಯರನ್ನು ಪ್ರತ್ಯೇಕವಾಗಿ ಲಕ್ಷ್ಯದಲ್ಲಿಟ್ಟು ಕೊಳ್ಳದಿದ್ದರೂ ಮಹಿಳಾ ಪರ ಹಂಚಿಕೆಗಳನ್ನು ಹೊಂದಿದೆ. ಉದಾಹರಣೆಗೆ ಸ್ವರ್ಣ ಜಯಂತಿ ಸ್ವರೋಜ್‌ಗಾರ್ ಯೋಜನೆ, ಸಮಗ್ರ ಮಕ್ಕಳ ಅಭಿವೃದ್ಧಿ ಕಾರ್ಯಯೋಜನೆ, ರಾಷ್ಟ್ರೀಯ ಶಿಕ್ಷಣ ಕಾರ್ಯಕ್ರಮ, ಸರ್ವಶಿಕ್ಷಾ ಅಭಿಯಾನ್ , ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿಪಿಇಪಿ) ಇತ್ಯಾದಿ.
- ಲಿಂಗಪ್ರತ್ಯೇಕಿತ ಪ್ರಯೋಜನ ಕಾರ್ಯಗಳಲ್ಲಿನ ಸಾರ್ವಜನಕ ವೆಚ್ಚದ ವಿಶ್ಲೇಷಣೆಯು ಆಯವ್ಯಯ ನೀತಿಗಳ ನುಸಾರದ ಹಂಚಿಕೆಯ ಪರಿಣಾಮವನ್ನು ತೋರಿಸುತ್ತದೆ. ಮೂಲ ಶಿಕ್ಷಣದ ಆಯವ್ಯಯದಲ್ಲಿ ಹುಡುಗಿಯರ ತಲಾವಾರು ಪಾಲಿನಲ್ಲಿ ಹೆಚ್ಚುವರಿಯಾಗುತ್ತಿರುವುದನ್ನು ಲೆಕ್ಕಾಚಾರಗಳು ತೋರಿಸುತ್ತದೆ. 1996–97ರಲ್ಲಿ 115 ಕೋಟಿ ಇದ್ದದ್ದು 2001–02 ಕ್ಕೆ ರೂ. 286 ಕೋಟಿ ಆಗಿರುತ್ತದೆ. ಈ ಹೆಚ್ಚುವರಿಯು ಬಹುತೇಕ ಜಿಲ್ಲಾ ಪ್ರಾಥಮಿಕ ಶಿಕ್ಷಣಕಾರ್ಯಕ್ರಮ ಮತ್ತು ಮಧ್ಯಾಹ್ನದ ಊಟದ ಮೂಲಕ ಪೌಷ್ಠಿಕ ಬೆಂಬಲ ಕೊಡುವ ಕಾರ್ಯಕ್ರಮದಲ್ಲಿ ಮಾಡಲಾದ ತಲಾವಾರು ಹಂಚಿಕೆಯಲ್ಲಿನ ಪರಿಮಾಣದ ಜಿಗಿತವೇ ಕಾರಣವಾಗಿರುತ್ತದೆ. ಮಧ್ಯಾಹ್ನದ ಊಟದ ಮೂಲಕ ಪೌಷ್ಠಿಕ ಬೆಂಬಲದ ತಲಾವಾರು ಹಂಚಿಕೆಯು 1999–2000ದಲ್ಲಿ ರೂ.112 ಇದ್ದದ್ದು 2001–02 ರಲ್ಲಿ ರೂ. 70ಕ್ಕೆ ಇಳಿದಿರುತ್ತದೆ. ಆದರೆ ಅನೌಪಚಾರಿಕ ಶಿಕ್ಷಣ ದಲ್ಲಿನ ತಲಾವಾರು ಹಂಚಿಕೆಯು ರೂ. 12 ಇದ್ದದ್ದು 2001–02ರಲ್ಲಿ ರೂ. 30ಕ್ಕೆ ಗಣನೀಯವಾಗಿ ಏರಿದೆ.
- ಮೂಲ ಶಿಕ್ಷಣ ಆಯವ್ಯಯದ ಲಿಂಗ ಪ್ರತ್ಯೇಕಿತ ಮೂಲ ಶಿಕ್ಷಣದ ಒಟ್ಟು ಸಾರ್ವಜನಿಕ ವೆಚ್ಚದಲ್ಲಿ ಹುಡುಗಿಯರು ಸುಮಾರು ಶೇ. 40 ರಷ್ಟು ಪಡೆದಿರುತ್ತಾರೆಂಬುದನ್ನು ತೋರಿಸುತ್ತದೆ. ತಲಾವಾರು

ಆಧಾರದ ಮೇಲೆ ಇದು ಹುಡುಗರಿಗೆ ಪ್ರಾಥಮಿಕ ಶಾಲೆಯ ಮಟ್ಟದಲ್ಲಿ ತಲಾ ರೂ. 344 ಮತ್ತು ಹುಡುಗಿಯರಿಗೆ ತಲಾ ರೂ. 286 ಆಗಿರುತ್ತದೆ.

11.3.4 ಸಾರ್ವಜನಿಕ ಲಿಂಗವಾರು ಪ್ರಯೋಜನಗಳನ್ನು ಪ್ರಮಾಣ ಬದ್ಧವಾಗಿ ನಿಷ್ಕೃಷ್ಟ ರೀತಿಯಲ್ಲಿ ಮಾಪನ ಮಾಡುವುದು ಕಷ್ಟವೆಂದು ಅಧ್ಯಯನವು ನಿರ್ಣಯಕ್ಕೆ ಬಂದಿರುತ್ತದೆ. ಏಕೆಂದರೆ ಸಾರ್ವಜನಕ ವೆಚ್ಚದ ಬಹುಭಾಗವು ಮೂಲತಃ ಸಾರ್ವಜನಿಕ ಸ್ವರೂಪದವಾಗಿದ್ದು ಅವು ಸೇವೆಗಳನ್ನು ಒದಗಿಸುವ ಉದ್ದೇಶ ಹೊಂದಿರುತ್ತದೆ. ಉದಾಹರಣೆಗೆ ರಕ್ಷಣೆ, ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆ ಮತ್ತು ನ್ಯಾಯದಾನ ಇವುಗಳ ಪ್ರಯೋಜನವನ್ನು ಜಾತಿ, ಧರ್ಮ ಲಿಂಗಭೇದ ಎಲ್ಲದೆ ಎಲ್ಲ ಪ್ರಜೆಗಳೂ ಅನುಭವಿಸುತ್ತಾರೆ. ಆದಾಗ್ಯೂ ಪುರುಷ ಪ್ರಧಾನ ಸಮಾಜದಲ್ಲಿ ನಿಹಿತವಾಗಿರುವ ಲಿಂಗ ಪಕ್ಷಪಾತತೆಯನ್ನು ಪರಿಗಣಿಸಿದಲ್ಲಿ ನಿರ್ದಿಷ್ಟವಾಗಿ ಮಹಿಳೆಯರ ಪ್ರಯೋಜನಕ್ಕೆಂದು ಏಷ್ಟು ಮೊಬಲಗನ್ನು ಮೀಸಲಿರಿಸಲಾಗಿದೆ ಎಂಬುದರ ಬಗ್ಗೆ ಆಯವ್ಯಯವು ಒಂದು ಕಲ್ಪನೆಯನ್ನು ಕೊಡಬೇಕಾಗಿರುತ್ತದೆ. ಈ ಸಲಹೆಯು ಎಲ್ಲ ಸರ್ಕಾರಿ ವೆಚ್ಚಗಳಲ್ಲಿಯೂ ಲಿಂಗವಾರು ವಿಂಗಡಣೆಯ ವಿವರ ಕೊಡಬೇಕೆಂದಲ್ಲ' ಆದರೆ ಪ್ರಾಥಮಿಕವಾಗಿ ಮಹಿಳೆಯರಿಗೇ ಮಾಡುವ ವೆಚ್ಚಗಳು ಎಂಬುದನ್ನು ಪ್ರತ್ಯೇಕವಾಗಿ ತೋರಿಸಬೇಕು. ಆಯವ್ಯಯದ ಸಾಮಾಜಿಕ ಮತ್ತು ಆರ್ಥಿಕ ಶೀರ್ಷಿಕೆಗಳಿಲ್ಲಿ ಅಂತಹ ವೆಚ್ಚಗಳನ್ನು ಪ್ರತ್ಯೇಕಿಸಲು ಸಾಧ್ಯವಾಗುವುದರಿಂದ ವಿವರಗಳನ್ನು ಆಯವ್ಯಯದಿಂದ ಸುಲಭವಾಗಿ ಎತ್ತಿಕೊಳ್ಳಬಹುದಾಗಿರುತ್ತದೆ. ಈ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ವರದಿಯು ಲಿಂಗ ಸಂವೇದಿ ಆಯವ್ಯಯರಚನೆಗೆ ಈ ಮುಂದಿನ ಆದ್ಯತಾ ಕ್ರಮಗಳನ್ನು ಸಿಫಾರಸು ಮಾಡಿರುತ್ತದೆ:

- ಸುಸಂಗತವಾದ ಲಿಂಗವಾರು ಅಂಕಿ ಅಂಶಗಳ ದತ್ತಾಂಶ , ಲಕ್ಷ್ಯಗಳು ಮತ್ತು ಸೂಚಕಗಳನ್ನು ಪಡೆಯುವುದಕ್ಕಾಗಿ ಸಂಬಂಧಪಟ್ಟ ಇಲಾಖೆಗಳಿಂದ ಬಂದ ಲಿಂಗ ಪ್ರತ್ಯೇಕಿತ ದತ್ತಾಂಶವನ್ನು ತಾಳೆನೋಡಲು ಒಂದು ಸಾಧನವ್ಯವಸ್ಥೆಯನ್ನು ರೂಪಿಸಬೇಕು.
- ಮಹಿಳಾ ಪರ ಹಂಚಿಕೆ ಇರುವ ವಿವಿಧ ಸಚಿವಾಲಯಗಳ ಯೋಜನೆಗಳು, ನೀತಿಗಳು ಮತುತ ಕಾರ್ಯ ಕ್ರಮಗಳು ಲಿಂಗಾಧಾರಿತ ಲೆಕ್ಕ ಪರಿಶೋಧನೆಯನ್ನು ನಡೆಸಬೇಕು.
- ಶಿಕ್ಷಣ, ಆರೋಗ್ಯ ಮತ್ತು ಗ್ರಾಮೀಣ ಅಭಿವೃದ್ಧಿ ಇತ್ಯಾದಿಯಲ್ಲಿನ ಸಂಮಿಶ್ರ ಕಾರ್ಯಕ್ರಮಗಳಲ್ಲಿ ಮಹಿಳೆಯರಿಗೆ ಮಾಡಿದ ಹಂಚಿಕೆಯು ಇತರ ಉದ್ದೇಶಗಳಿಗಾಗಿ ಮರುವಿನಿಯೋಗವಾಗುವುದನ್ನು ತಡೆಯಲು ಅದನ್ನು ಪ್ರತ್ಯೇಕಿಸಬೇಕು.

**ರಾಜ್ಯ ಆಯವ್ಯಯಗಳ ಲಿಂಗಾಧಾರಿತ ವಿಶ್ಲೇಷಣೆ**

ಸಾರ್ವಜನಿಕ ಹಣಕಾಸು ಮತ್ತು ನೀತಿಯ ರಾಷ್ಟ್ರೀಯ ಸಂಸ್ಥೆಯ ಅಧ್ಯಯನದ ಶೋಧನಾಂಶಗಳನ್ನು 3 ಮತ್ತು 4 ಅಕ್ಟೋಬರ್ 2001 ರಲ್ಲಿ ನಡೆದ ಕಾರ್ಯಾಗಾರದಲ್ಲಿ ಚರ್ಚಿಸಲಾಯಿತು. ಇದರಲ್ಲಿ ಹಣಕಾಸು ಸಚಿವಾಲಯ, ಜನಗಣತಿ, ರಾಜ್ಯಸರ್ಕಾರಗಳು, ವಿಶ್ವ ಸಂಸ್ಥೆಯ ಏಜೆನ್ಸಿಗಳ ಪ್ರತಿನಿಧಿಗಳು ಮತ್ತು ಲಿಂಗವಿಷಯ ತಜ್ಞರು ಮತ್ತು ಕಾರ್ಯಕರ್ತರು ಭಾಗವಹಿಸಿದ್ದರು. ರಾಜ್ಯ ಆಯವ್ಯಯಗಳ ಲಿಂಗಾಧಾರಿತ ವಿಶ್ಲೇಷಣೆಯ ಮತ್ತೊಂದು ಕಾರ್ಯಗಾರವನ್ನು ಡಿಸೆಂಬರ್ 6 ರಂದು ನಡೆಸಲಾಯಿತು. ಇದರಲ್ಲಿ ರಾಜ್ಯಸರ್ಕಾರದ ಕಾರ್ಯದರ್ಶಿಗಳು ಮಹಿಳೆಯರ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ನಿರ್ದೇಶಕರುಗಳು ಭಾಗವಹಿಸಿದ್ದರು. ರಾಜ್ಯ ಆಯವ್ಯಯಗಳನ್ನು ಲಿಂಗ ದೃಷ್ಟಿ ಕೋನದಿಂದ ವಿಶ್ಲೇಷಣೆ ಮಾಡುವ ಅಗತ್ಯತೆವಿದೆಯೆಂದು ಕಾರ್ಯಾಗಾರವು ನಿರ್ಣಯಕ್ಕೆ ಬಂದಿತು. ಏಕೆಂದರೆ ಮಹಿಳೆಯರ ಕಲ್ಯಾಣ, ಅಭಿವೃದ್ಧಿ ಮತ್ತು ಸಬಲೀಕರಣದ ಮೇಲೆ ಪ್ರಭಾವ ಬೀರುವ ಸಾಮಾಜಿಕ ಕ್ಷೇತ್ರದ ಬಹುಭಾಗದ ವೆಚ್ಚವನ್ನು ರಾಜ್ಯಗಳು / ಕೇಶಾಪ್ರಿಗಳೇ ಮಾಡುತ್ತವೆ. ಲಿಂಗ ಪ್ರತ್ಯೇಕಿತದ ಪರಿಣಾಮ ಮತ್ತು ಆಯವ್ಯಯ ಪ್ರಕ್ರಿಯೆ ಮತ್ತು ನೀತಿಗಳ ಜಾಡು

ಹಿಡಿಯಲು ರಾಜ್ಯ ಆಯವ್ಯಯಗಳ ವಿಶ್ಲೇಷಣ ಕ್ರಿಯೆಯನ್ನು ಮಾರ್ಗದರ್ಶಿಸಲು ದೇಶಾದ್ಯಂತ ಸಂಶೋಧನಾ ಸಂಸ್ಥೆಗಳ ಜಾಲವನ್ನು ಮತ್ತು ಲಿಂಗವಿಷಯ ತಜ್ಞರನ್ನು ಆಯ್ಕೆ ಮಾಡಲಾಯಿತು. ಕಾರ್ಯಾಗಾರವು ರಾಜ್ಯ ಮಟ್ಟದ ಲಿಂಗಾಧಾರಿತ ಆಯವ್ಯಯ ವಿಶ್ಲೇಷಣೆ ಯನ್ನು ಸಹ ಕೈಗೆತ್ತಿಕೊಳ್ಳಲು ಒಂದು ಚೌಕಟ್ಟನ್ನು ಕುರಿತಂತೆ ಒಪ್ಪಂದಕ್ಕೆ ಬಂದಿತು. ಈ ಮುಂದಿನ ಕಾರ್ಯಯೋಜನೆಗಳ ಮತ್ತು ಕಾರ್ಯಕ್ರಮಗಳ ವರ್ಗವನ್ನು ಗುರುತಿಸಲು ರಾಜ್ಯ ಆಯವ್ಯಯ ದಾಖಲೆಗಳ ಶೀಘ್ರವಿಶ್ಲೇಷಣೆಯನ್ನು ಮಾಡಲು ನಿರ್ಧರಿಸಲಾಯಿತು:

**ಮಹಿಳಾ ನಿರ್ದಿಷ್ಟ ಕಾರ್ಯಯೋಜನೆಗಳು** – ಇಲ್ಲಿಯ ಶೇ. 100ರಷ್ಟು ಹಂಚಿಕೆಯನ್ನು ಮಹಿಳೆಯರಿಗೇ ಮೀಸಲಾಗಿರಿಸಲಾಗಿದೆಯೆಂದು ಪರಿಭಾಷಿಸಿದೆ;

**ಮಹಿಳಾಪರ ಕಾರ್ಯಯೋಜನೆಗಳು–** ಕನಿಷ್ಠ ಶೇ. 30 ರಷ್ಟು ಮಹಿಳೆಯರಿಗೆ ಹಂಚಿಕೆಯಾಗುವುದನ್ನು ಅಥವಾ ಮಹಿಳೆಯರಿಗೆ ಗಣನೀಯವಾದ ಪ್ರಯೋಜನ ದೊರಕುವುದನ್ನು ಅಳವಡಿಸಿಕೊಂಡಿರುವ ಕಾರ್ಯಯೋಜನೆಗಳೆಂದು ಪರಿಭಾಷಿಸಿದೆ;

ಲಿಂಗ ನಿರಪೇಕ್ಷಿಕಾರ್ಯಯೋಜನೆಗಳು – ಒಟ್ಟಾರೆ ಸಮುದಾಯಕ್ಕಾಗಿ ಇರುವಂತಹವು

11.4.2 ಈ ಕಾರ್ಯಕ್ರಮಗಳನ್ನು ಮಹಿಳೆಯರ ಸಾಮಾಜಿಕ ಸ್ಥಾನದ ಮೇಲೆ ಅವುಗಳ ಸಂಭಾವ್ಯ ಪರಿಣಾಮದ ಆಧಾರದ ಮೇಲೆ ಮತ್ತು ನಾಲ್ಕು ವರ್ಗಗಳಾಗಿ ವರ್ಗೀಕರಿಸಿದೆ;

- ಸಂರಕ್ಷಣಾತ್ಮಕ ಸೇವೆಗಳು – ಮಹಿಳೆಯರ ಮನೆಗಳು ಮತ್ತು ರಕ್ಷಣೆಯ ಸಂಸ್ಥೆಗಳು, ದೌರ್ಜನ್ಯಕೊಳಗಾದ ಮಹಿಳೆಯರ ಪುನರ್ವಸತಿ ಕಾರ್ಯಯೋಜನೆಗಳು, ವಿಧವೆಯರಿಗೆ ಮತ್ತು ನಿರ್ಗತಿಕ ಮಹಿಳಿಯರಿಗೆ ವೇತನ ಇವುಗಳಿಗೆ ಮಾಡಿದ ಹಂಚಿಕೆಗಳು. ಇವುಗಳು ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಪರಾಧೀನತೆಯ ಪರಿಣಾಮಗಳನ್ನು ಶಮನಗೊಳಿಸುವ ಗುರಿಯನ್ನು ಹೊಂದಿರುತ್ತದೆಯೇ ವಿನಾ ಈ ಪರಾಧೀನತೆಯ ಮೂಲ ಕಾರಣಗಳನ್ನು ಪರಿಹರಿಸಲು ಹೋಗುವುದಿಲ್ಲ.
- **ಸಾಮಾಜಿಕ ಸೇವೆಗಳು–** ಮಹಿಳೆಯ ಸಾಮರ್ಥ್ಯಗಳನ್ನು ಬೆಳೆಸುವ ಮತ್ತು ಅವರ ಭೌತಿಕ ಸ್ವಾಸ್ಥ್ಯವನ್ನು ಖಾತ್ರಿಪಡಿಸುವ ಮೂಲಕ ಪ್ರತ್ಯಕ್ಷವಾಗಿ ಅಥವಾ ಅವರ ಮನೆಚಾಕರಿಯ ಹೊರೆಯನ್ನು ಕಡಿಮೆ ಮಾಡುವ ಮೂಲಕ ಪರೋಕ್ಷವಾಗಿ ಮಹಿಳೆಯ ಸಬಲೀಕರಣಕ್ಕೆ ಗಣನೀಯ ಕೊಡುಗೆ ನೀಡುವ ಮಹಿಳೆಯರ ಶಿಕ್ಷಣ ಮತ್ತು ಆರೋಗ್ಯ ಕಾರ್ಯಯೋಜನೆಗಳು, ಶಿಶುಕೇಂದ್ರ ಮತ್ತು ವಸತಿ ನಿಲಯಗಳಂತಹ ಬೆಂಬಲ ಸೇವೆಗಳು ಇವೇ ಮುಂತಾದಂತಹ ಕಾರ್ಯಯೋಜನೆಗಳು.
- **ಆರ್ಥಿಕ ಸೇವೆಗಳು–** ಮಹಿಳೆಯರ ಆರ್ಥಿಕ ಸ್ವಾತಂತ್ರ್ಯ ಮತ್ತು ಸ್ವಯಮಾಧಿಕಾರಕ್ಕೆ ಮಹತ್ವವಾಗಿರುವ ತರಬೇತಿ ಮತ್ತು ಕೌಶಲ ಅಭಿವೃದ್ಧಿ, ಸಾಲದ ಸೌಲಭ್ಯ, ಮೂಲರಚನೆ , ಮಾರುಕಟ್ಟೆ ಸೌಲಭ್ಯ ಇವೇ ಮುಂತಾದಂತಹ ಕಾರ್ಯಯೋಜನೆಗಳು.
- ನಿಯಂತ್ರಕ ಸೇವೆಗಳು– ಇದರಲ್ಲಿ ಮಹಿಳೆಯರ ಸಬಲೀಕರಣಕ್ಕಾಗಿ ಸಾಂಸ್ಥಿಕ ಅನುಕೂಲ ಮತ್ತು ಅವಕಾಶಗಳನ್ನು ಒದಗಿಸುವ ರಾಜ್ಯಮಹಿಳಾ ಆಯೋಗಗಳು, ಪೋಲಿಸು ಠಾಣೆಗಳಲ್ಲಿ ಮಹಿಳಾ ಸಿಬ್ಬಂದಿಕೋಶ , ಜಾಗೃತಿ ಮೂಡಿಕೆಯ ಕಾರ್ಯಕ್ರಮಗಳು ಇವೇ ಮುಂತಾದಂತಹ ಸಾಂಸ್ಥಿಕ ಸಾಧನ ವ್ಯವಸ್ಥೆಗಳೂ ಒಳಗೊಳ್ಳುತ್ತವೆ.

11.4.3 ಈ ಕೆಳಕಂಡವುಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರ ಸಂಗ್ರಹಣೆ ಮಾಡಲಾಗುತ್ತದೆ:

- ಯೋಜನೆ ಮತ್ತು ಯೋಜನೆಯೇತರ ಎರಡೂ ಶೀರ್ಷಿಕೆಗಳಡಿಯಲ್ಲಿ ಕಾರ್ಯ ಯೋಜನೆವಾರು/ ಕ್ಷೇತ್ರವಾರು/ವರ್ಷವಾರು/ಆಯವ್ಯಯ ಅಂದಾಜು/ರಾಜಸ್ವ ಅಂದಾಜುಗಳ ವಾಸ್ತವಿಕ ವೆಚ್ಚ.

- ಯೋಜನೆ ಮತ್ತು ಯೋಜನೇತರ ಎರಡೂ ಶೀರ್ಷಿಕೆಗಳಿಗೆ ಸಂಬಂಧಿಸಿದಂತೆ ಮತ್ತು ಯೋಜನೆ ಮತ್ತು ಯೋಜನೇತರ ಶೀರ್ಷಿಕೆಗಳ ಸಾಮಾಜಿಕ ಕ್ಷೇತ್ರದ ಆಯವ್ಯಯಕ್ಕೆ ಸಂಬಂಧಿಸಿದಂತೆ ಒಟ್ಟು ಆಯವ್ಯಯದಲ್ಲಿ ಆಯವ್ಯಯ ಅಂದಾಜು/ರಾಜಸ್ವ ಅಂದಾಜುಗಳಲ್ಲಿನ ವಾಸ್ತವಿಕ ವೆಚ್ಚದ ಶೇಕಡಾವಾರು;
- ಗುರುತಿಸಲ್ಪಟ್ಟ ವಿವಿಧ ಕಾರ್ಯಯೋಜನೆಗಳಲ್ಲಿ ಯೋಜನೆ ಮತ್ತು ಯೋಜನೆಯೇತರ ಎರಡೂ ಶೀರ್ಷಿಕೆಗಳಡಿಯಲ್ಲಿ ಆಯವ್ಯಯ ಅಂದಾಜು ಮತ್ತು ರಾಜಸ್ವ ಅಂದಾಜುಗಳಲ್ಲಿ ನಡುವಣ ವಾಸ್ತವಿಕ ವೆಚ್ಚದ ಅಂತರದ ಶೇಕಡಾವಾರು;

11.4.4 2001–02ಕ್ಕೆ ಸಂಬಂಧಿಸಿದ ರಾಜ್ಯ ಆಯವ್ಯಯಗಳ ಲಿಂಗಾಧಾರಿತ ವಿಶ್ಲೇಷಣೆಯ ಪ್ರಾಥಮಿಕ ಫಲಿತಾಂಶಗಳು ಕೆಲವು ಸಂಸ್ಥೆಗಳು /ಸಾಮಾಜಿಕ ವಿಜ್ಞಾನಿಗಳಿಂದ ಬಂದಿವೆ. ಆದರೆ ರಾಜ್ಯಗಳ ನಡುವಣ ಕಾರ್ಯಯೋಜನೆಗಳು ಮತ್ತು ಕಾರ್ಯಕ್ರಮಗಳ ಹೆಸರಿನಲ್ಲಿ ಭಾರಿ ವ್ಯತ್ಯಾಸಗಳ ಕಾರಣ ಮತ್ತು ಹೆಚ್ಚಿನ ಪ್ರಮಾಣೀಕರಣ ಆಗಬೇಕಾದ ದತ್ತಾಂಶ ದಲ್ಲಿ ಇರುವ ಭಾರಿ ಭಿನ್ನತೆಗಳ ಕಾರಣ ಈ ಹಂತದಲ್ಲಿ ಫಲಿತಾಂಶಗಳ ತಾಳೆ ನೋಡುವಿಕೆ ಮತ್ತು ತುಲನಾತ್ಮಕ ವಿಶ್ಲೇಷಣೆಯು ಕಷ್ಟವಾಗಿರುತ್ತದೆ. ಕಾರ್ಯಯೋಜನೆಗಳ ವರ್ಣನೆಗಳಲ್ಲಿನ ವ್ಯತ್ಯಾಸಗಳು ಒಡ್ಡಿರುವ ಸಮಸ್ಯೆಗಳನ್ನು ನಿವಾರಿಸುವ ಸಲುವಾಗಿ ಕ್ಷೇತ್ರ ಕಾರ್ಯಗಳನ್ನು ಸಂಯೋಜಿಸುವ ಮತ್ತು ಒಂದು ಏಕರೀತಿಯ ಕಾರ್ಯವಿಧಾನಗಳನ್ನು ರೂಪಿಸುವ ಕಾರ್ಯವನ್ನು ತೀವ್ರವಾಗಿ ಕೈಗೊಳ್ಳಲಾಗಿದೆ. ಈ ಪ್ರಯತ್ನವು ಜೂನ್ 2002ರ ವೇಳೆಗೆ ಮುಗಿಯುವ ನಿರೀಕ್ಷೆಯಿದೆ. 10 ರಾಜ್ಯಗಳಿಂದ ಬಂದ ಪ್ರಾಥಮಿಕ ವರದಿಗಳನ್ನು ಸಂಗ್ರಹಿಸಿ ಕ್ರೋಢೀಕರಣ ಮಾಡಲಾಗಿದೆ. ಈ ಫಲಿತಾಂಶವು ಒಂದು ಸೂಚಕವಷ್ಟೆ. ಇದನ್ನು ಹೆಚ್ಚಿನ ಸಪ್ರಮಾಣೀಕರಣಕ್ಕೆ ಒಳಗಾಗಿಸುವ ಅಗತ್ಯತೆ ಇದೆ.
ಆಧಾರ : ಕೇಂದ್ರ ಆಯವ್ಯಯ 2002–2003

**ಕೇಂದ್ರ ಆಯವ್ಯಯ 2002 –2203 ರ ಲಿಂಗಾಧಾರಿತ ವಿಶ್ಲೇಷಣೆ** – ಒಂದು ಮೊದಲ ಓರೆನೋಟ

11.5.1 ಹಾಲಿ ಇರುವ ಅಧ್ಯಯನಗಳನ್ನು ಆಧಾರವಾಗಿರಿಸಿಕೊಂಡು ಇಲಾಖೆಯು 2002–2003ರ ಕೇಂದ್ರ ಆಯವ್ಯಯದ ಒಂದು ಪ್ರಾಥಮಿಕ ವಿಶ್ಲೇಷಣೆಯನ್ನ ನಡೆಸಿದೆ. ಇದು ಈ ಕೆಳಕಂಡ ಚಿತ್ರವನ್ನು ಕೊಡುತ್ತದೆ.

- ಮಹಿಳಾ ನಿರ್ದಿಷ್ಟ ಕಾರ್ಯಯೋಜನೆಗಳಿಗೆ ಹಂಚಿಕೆಯು 2001–2002 ರಲ್ಲಿ ರೂ. 3260 ಕೋಟಿ ಇದ್ದದ್ದು 2002–2003ರ ಆಯವ್ಯಯದಲ್ಲಿ ರೂ. 3358 ಕೋಟಿಗೆ ಏರಿದೆ. ಇದು ಶೇ.ಮೂರರಷ್ಟು ಏರಿಕೆ.

ಬಹುತೇಕ ಮಹಿಳಾ ನಿರ್ದಿಷ್ಟ ಕಾರ್ಯಯೋಜನೆಗಳಿಗೆ ಹಂಚಿಕೆಯನ್ನು ಹೆಚ್ಚು ಮಾಡಲಾಗಿದೆ. ಹಂಚಿಕೆ ಕಡಿಮೆ ಆಗಿರುವ ಒಂದೇ ಒಂದು ಕಾರ್ಯಯೋಜನೆ ಎಂದರೆ ಆರೋಗ್ಯ ಇಲಾಖೆಯ ಸಂತಾನ ಮತ್ತು ಶಿಶು ಆರೋಗ್ಯ ಕಾರ್ಯಕ್ರಮ . ಇದು ಏಕೆಂದರೆ ಈ ಕಾರ್ಯಕ್ರಮವು ಪರಿಷ್ಕರಿಸಲ್ಪಟ್ಟ ಕಾರಣ ಕಾರ್ಯಕ್ರಮದ ಕೆಲವು ಅಂಗಾಂಶಗಳು ಸೋಂಕು ನಿರೋಧಕಾರ್ಯಕ್ರಮದ ಅಡಿಯಲ್ಲಿ ಸೇರಿಕೊಂಡಿವೆ. ಎರಡು ಕಾರ್ಯಯೋಜನೆಗಳನ್ನು ರಾಜ್ಯಗಳಿಗೆ ವರ್ಗಾಯಿಸಲಾಗಿದೆ. (ಬಾಲಿಕಾ ಸಮೃದ್ಧಿಯೋಜನೆ ಮತ್ತು ಹೆರಿಗೆಯೋತ್ತರ ಕಾರ್ಯಕ್ರಮಗಳು). ಕೆಲವು ಕಾರ್ಯಯೋಜನೆಗಳನ್ನು ಕೈಬಿಡಲಾಗಿದೆ. (ಮಹಿಳಾ ಸಮೃದ್ಧಿಯೋಜನೆ, ಸಮಾಜೋ–ಆರ್ಥಿಕ ಕಾರ್ಯಕ್ರಮ, ಮಹಿಳಾ ಸಬಲೀಕರಣ ವರ್ಷ)
ಆಯವ್ಯಯದಲ್ಲಿ ಮಹಿಳಾ ಪರ ಹಂಚಿಕೆಗಳು 2001 –2002ರಲ್ಲಿ 10596.37 ಕೋಟಿ ಇದ್ದದ್ದು 2002–2003 ರಲ್ಲಿ 12036.01 ಕೋಟಿಗೆ ಏರಿದೆ. ಇಲ್ಲಿ ಶೇ.23 ರಷ್ಟು ಏರಿಕೆ ಇದೆ.

## ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳ ಲಿಂಗಾಧಾರಿತ ವಿಶ್ಲೇಷಣೆ

11.6.1 ಸಮಗ್ರ ಮಕ್ಕಳ ಅಭಿವೃದ್ಧಿ ಯೋಜನೆಯು (ಐಸಿಡಿಎಸ್) ಸಾಂಪ್ರದಾಯಿಕವಾಗಿ ಮಕ್ಕಳನ್ನು ಗುರಿಯಾಗಿರಿಸಿಕೊಂಡ ಕಾರ್ಯಯೋಜನೆಯೆಂದು ಪರಿಗಣಿತವಾಗಿದೆ. 2001ರಲ್ಲಿ ಇದರ ವಾಸ್ತವಿಕ ಫಲಾನುಭವಿಗಳೆಷ್ಟು ಎಂಬುದರ ಪುನರೀಕ್ಷಣೆ ಮಾಡಿದಾಗ ಈ ಮುಂದಿನಂತೆ ಕಂಡು ಬಂದಿದೆ.

- (ಪೂರಕ ಪೌಷ್ಠಿಕ ಕಾರ್ಯಕ್ರಮದಡಿಯ (ಎಸ್‌ಎನ್‌ಪಿ) 342ಲಕ್ಷ ಫಲಾನುಭವಿಗಳಲ್ಲಿ 59.31 (ಶೇ. 17.34) ಲಕ್ಷ ಗರ್ಭಿಣಿ ಸ್ತ್ರೀಯರು ಮತ್ತು ಹಾಲೂಡಿಸುತ್ತಿರುವ ತಾಯಂದಿರು. ಇದರ ಜೊತೆಗೆ ಎಸ್‌ಎನ್‌ಪಿ ಅಡಿಯಲ್ಲಿ 13 ಲಕ್ಷ ಹೆಣ್ಣು ಮಕ್ಕಳು (0–6ವರ್ಷ) ಫಲಾನುಭವಿಗಳಾಗಿರುತ್ತಾರೆ. ಇದು ಲಕ್ಷ್ಯದ ಗುಂಪಿನ ಶೇ.40.74 ರಷ್ಟು ಭಾಗ. ಹೀಗಾಗಿ ಕಾರ್ಯಯೋಜನೆಯ ಒಟ್ಟು ಹೆಣ್ಣು ಫಲಾನುಭವಿಗಳು ಮಹಿಳೆಯರು ಮತ್ತು ಮಕ್ಕಳೂ ಎರಡೂ ಸೇರಿದಂತೆ ಶೇ. 58.08% ರಷ್ಟಿದ್ದು ಇದು ಹೆಚ್ಚಾಗಿಯೇ ಇದೆ.
- ಶಾಲಾ ಪೂರ್ವ ಶಿಕ್ಷಣದಡಿಯಲ್ಲಿ (ಪಿಎಸ್‌ಇ) 3–6 ವಯೋಮಾನದ ಹೆಣ್ಣು ಮಕ್ಕಳ ಸಂಖ್ಯೆ ಮಕ್ಕಳ ಒಟ್ಟು ಸಂಖ್ಯೆಯಲ್ಲಿ ಶೇ. 49.28.
- ಈ ಕಾರ್ಯಕ್ರಮದಡಿ ತಾಯಿ ಮತ್ತು ಹೆಣ್ಣು ಮಗುವಿಗೆ ಮಾಡುತ್ತಿರುವ ವೆಚ್ಚವು ಕ್ರಮೇಣ ಏರಿಕೆಯಾಗುತ್ತಿದೆ. 1997–98ರಲ್ಲಿ ರೂ. 433.76 ಕೋಟಿ ಇದ್ದದ್ದು 2001–2002ರಲ್ಲಿ ರೂ. 834.90ಕೋಟಿ ಆಗಿರುತ್ತದೆ. ಕಾರ್ಯಕ್ರಮದಲ್ಲಿ ಇವರ ಪಾಲು ಅನುಕ್ರಮವಾಗಿ ಶೇ. 56.93ರಿಂದ ಶೇ.58.07 ಕ್ಕೆ ಏರಿದೆ.

## ಮುಂದಿನ ಕಾರ್ಯಗುರಿ

11.7.1 ಇಲಾಖೆಯ ಲಿಂಗಾಧಾರಿತ ಆಯವ್ಯಯ ಕ್ರಮವು ದೇಶದಲ್ಲಿನ ಸಾರ್ವಜನಕ ವೆಚ್ಚದ ಸಂಶೋಧನೆ ಮತ್ತು ವಿಶ್ಲೇಷಣೆ ಕ್ಷೇತ್ರದಲ್ಲಿ ಹೊಸ ಮುನ್ನೋಟಗಳನ್ನು ತೆರಿದಿದೆ. ಹಾಗು ಅಂತಹ ವಿಶ್ಲೇಷಣೆ ಕುರಿತ ವೈಜ್ಞಿನಿಕತೆಯ ಬಗೆಗೂ ಗಂಭೀರ ಚರ್ಚೆಗಳನ್ನು ಹುಟ್ಟುಹಾಕಿದೆ. ಇದರ ಜೊತೆಗೆ ಒಂಬತ್ತನೇಯ ಪಂಚವಾರ್ಷಿಕ ಯೋಜನೆಯಲ್ಲಿ ಜಾರಿಗೆ ತಂದ ಮಹಿಳಾ ವಿಶೇಷ ಯೋಜನೆಯ ಪ್ರಗತಿಯ ಬಗೆಗೆ ನಿಗಾವಹಿಸುವ ಸಲುವಾಗಿ ವೈಜಾನಿಕ ಉಪಕರಣಗಳನ್ನು ತೀಕ್ಷ್ಣಗೊಳಿಸುವ ಅಗತ್ಯತೆಯ ತುರ್ತನ್ನೂ ಸಹ ಎತ್ತಿತೋರಿಸಿದೆ.

11.7.2 ಆಯವ್ಯಯದ ಲಿಂಗಾಧಾರಿತ ವಿಶ್ಲೇಷಣೆಯಲ್ಲಿನ ಬಹುದೊಡ್ಡ ತೊಡಕೆಂದರೆ ಮಹಿಳಾ ಪರ ಕಾರ್ಯಕ್ರಮಗಳ ಹಂಚಿಕೆ ಮತ್ತು ವೆಚ್ಚಕ್ಕೆ ಸಂಬಂಧಿಸಿದಂತೆ ಲಿಂಗಪ್ರತ್ಯೇಕಿತ ದತ್ತಾಂಶವನ್ನು ಸಂಗ್ರಹಿಸುವುದು. ಪ್ರಸ್ತುತ ಇರುವ ಆಯವ್ಯಯ ಕಾರ್ಯವಿಧಾನಗಳು ಮತ್ತು ವರದಿ ವ್ಯವಸ್ಥೆಗಳಿಂದ ಇದನ್ನು ಹುಟ್ಟುಹಾಕಲು ಸಾಧ್ಯವಾಗುತ್ತಿಲ್ಲ. ಪುನಃ ಬರಿಯ ವೆಚ್ಚದ ವಿಶ್ಲೇಷಣೆಯು ಮಹಿಳೆಯರ ಮೇಲೆ ವಾಸ್ತವಿಕವಾಗಿ ಎಂತಹ ಪರಿಣಾಮ ಬೀರಿದೆ ಎಂಬುದರ ನಿಜಚಿತ್ರವನ್ನು ಕೊಡಲಾರದು.ಇದು ಖಚಿತವಾಗಿ ಒಂದುವರ್ಷಕ್ಕಿಂತ ಹೆಚ್ಚಿನ ದೀರ್ಘಕಾಲಾವಧಿಯಲ್ಲಿ ಕ್ಷೇತ್ರದ ಅಂಶಗಳ ಆಳವಾದ ವಿಶ್ಲೇಷಣೆಗೆ ಕರೆ ನೀಡುತ್ತದೆ. ಇದರ ಜೊತೆಗೆ ಒಂದು ಏಕ ರೀತಿಯ ಮಾರ್ಗದರ್ಶನಗಳನ್ನು ಮತ್ತು ಕಾರ್ಯವಿಧಾನಗಳನ್ನು ರೂಪಿಸುವ ಆವಶ್ಯಕತೆ ಇದೆ. ಇದರಿಂದ ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಪ್ರಮಾಣಯುತವಾದ ತುಲನೆ ಮತ್ತು ಊಹೆಗಳನ್ನು ಮಾಡಬಹುದಾಗಿದೆ.

11.7.3 ಆದ್ದರಿಂದ ಮುಂದಿನ ವರ್ಷದಲ್ಲಿ ಸರ್ಕಾರದ ಆಯವ್ಯಯಗಳ ಸಮಗ್ರ ಲಿಂಗಪರಿಣಾಮಿ ಮೌಲ್ಯನಿರ್ಧರಣೆ ಕುರಿತಂತೆ ಇಲಾಖೆಯ ಕ್ರಮಗಳು ಈ ಮುಂದಿನ ನಟ್ಟಿನಲ್ಲಿರಬೇಕಾಗುತ್ತದೆ.

ಆಯವ್ಯಯಗಳ ಲಿಂಗಾಧಾರಿತೆ ವಿಶ್ಲೇಷಣೆಯ ಸಲುವಾಗಿ ವೈಧಾನಕತೆಯನ್ನು ಪರಿಷ್ಕರಿಸಲು ಕಾರ್ಯಗಾರಗಳನ್ನು ಮತ್ತು ಅಧ್ಯಯನಗಳನ್ನು ವ್ಯವಸ್ಥೆ ಮಾಡುವುದು.

- ಲಿಂಗಾಧಾರಿತ ಆಯವ್ಯಯ ಕುರಿತಂತೆ ಏಕ ರೀತಿಯ ಮಾರ್ಗದರ್ಶನಗಳನ್ನು ರೂಪಿಸುವುದು ಮತ್ತು ರಾಜ್ಯಗಳಿಗೆ ಪ್ರಚುರಪಡಿಸುವುದು, ಹಾಗೂ ಅಂತಹ ವಿಶ್ಲೇಷಣೆಗಾಗಿ ಯಥೋಚಿತ ತಂತ್ರಾಂಶವನ್ನು ವೃದ್ಧಿಪಡಿಸುವುದು.
- ಕೇಂದ್ರ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿನ ಎಲ್ಲ ಸಾರ್ವಜನಕ ವೆಚ್ಚದಲ್ಲಿ ಮಹಿಳೆಯರ ಪಾಲನ್ನು ಲೆಕ್ಕ ಹಾಕುವ ಸಲುವಾಗಿ ಅನುಬಂಧಗಳನ್ನು ಮತ್ತು ಪ್ರಪತ್ರಗಳನ್ನು ರೂಪಿಸಿ ಅಳವಡಿಸಿಕೊಳ್ಳಲು ಪ್ರಯತ್ನಿಸುವುದು;
- ದೀರ್ಘಕಾಲದ ಅವಧಿಯಲ್ಲಿ ನಿರ್ದಿಷ್ಟ ಭೌಗೋಳಿಕ ಮತ್ತು ಕ್ಷೇತ್ರ ಪ್ರದೇಶಗಳಲ್ಲಿ ಪ್ರಯೋಜನ ವಿವರದ ವಿಶ್ಲೇಷಣೆಯ ಸ್ವರೂಪ ವ್ಯಾಪ್ತಿಯನ್ನು ವಿಸ್ತರಿಸುವುದು;
- ಅಂತಹ ವಿಶ್ಲೇಷಣೆಗೆ ಸಂಶೋಧನಾ ಸಂಸ್ಥೆಗಳ ಸಾಮರ್ಥ್ಯವರ್ಧನೆಯನ್ನು ಉತ್ತೇಜಿಸುವುದು.

**ಭಾರತದಲ್ಲಿ ಗೃಹನಿರ್ಮಾಣ ಮತ್ತು ಗೃಹನೀತಿ**

1950ರಿಂದ ಈಚೆಗೆ ಭಾರತದಲ್ಲಿ ನಗರಾಭಿವೃದ್ಧಿ ಮತ್ತು ಗೃಹದ ನೀತಿಗಳು ಬಹಳ ಬದಲಾವಣೆ ಹೊಂದಿದೆ. ನಗರದ ಜನಸಂಖ್ಯೆಯ ಒತ್ತಡ, ಮನೆ ಮತ್ತು ಮೂಲ ಸೇವೆಗಳು ಇಲ್ಲದಿರುವುದು 1950ರಲ್ಲಿಯೇ ಕಂಡುಬಂದಿತ್ತು. ಕೆಲವು ನಗರಗಳಲ್ಲಿ ಪಾಕಿಸ್ತಾನದಿಂದ ಜನರು ವಲಸೆ ಬಂದ ಕಾರಣ ಈ ಸಮಸ್ಯೆ ಉಲ್ಬಣಗೊಂಡಿತ್ತು. ಆದಾಗ್ಯೂ ಭಾರತದಲ್ಲಿನ ನೀತಿರಚಕರ ದೃಷ್ಟಿಕೋನವು ಭಾರತವು ಪ್ರಧಾನವಾಗಿ ಒಂದು ಕೃಷಿ ಮತ್ತು ಗ್ರಾಮೀಣ ಅರ್ಥವ್ಯವಸ್ಥೆಯನ್ನು ಹೊಂದಿದೆ. ನಗರೀಕರಣವು ಹೆಚ್ಚಿದಲ್ಲಿ ನಗರಗಳಿಗೆ ಪೂರೈಕೆ ಮಾಡಲು ಗ್ರಾಮಪ್ರದೇಶಗಳಿಂದ ಸಂಪನ್ಮೂಲಗಳು ನಗರಗಳಿಗೆ ಹರಿದುಹೋಗುವ ಅಪಾಯಗಳ ಸಂಭವವಿದೆ ಎಂಬುದಾಗಿತ್ತು. ರಾಷ್ಟ್ರೀಯ ಆರ್ಥಿಕ ಮತ್ತು ನೀತಿಗಳ ಸಂದರ್ಭ ಸನ್ನಿವೇಶಗಳ ಹಿನ್ನೆಲೆಯಲ್ಲಿ ನಗರಗಳು ಅರ್ಥವ್ಯವಸ್ಥೆಯಬೆಳವಣಿಗೆಯ ಚಾಲನಾ ಪ್ರವರ್ತಕವೆಂಬ ಧನಾತ್ಮಕ ಅಂಶ ಅರ್ಥಮಾಡಿಕೊಂಡಿರಲಿಲ್ಲ. ಆದ್ದರಿಂದ ನಗರ ಪ್ರದೇಶಗಳ ಸಮಸ್ಯೆಗಳನ್ನು ಕಲ್ಯಾಣ ಸಂಬಂಧಿ ಸಮಸ್ಯೆಗಳೆಂದು, ಉಳಿಕೆ ಹಣದ ಹೂಡಿಕೆಯ ಜಾಗಗಳೆಂದು ಪರಿಭಾವಿಸಲಾಗಿತ್ತೇ ವಿನಾ ರಾಷ್ಟ್ರೀಯ ಆರ್ಥಿಕ ಪ್ರಾಮುಖ್ಯವುಳ್ಳ ಅಂಶಗಳೆಂದು ಪರಿಗಣಿಸಿರಲಿಲ್ಲ.

**ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ** (1951–56) ಸಂಸ್ಥೆಗಳ ನಿರ್ಮಾಣ ಮತ್ತು ಸರ್ಕಾರಿ ನೌಕರರಿಗೆ ಮತ್ತು ದುರ್ಬಲ ವರ್ಗದವರಿಗೆ ಮನೆಗಳನ್ನು ನಿರ್ಮಾಣಮಾಡುವುದಕ್ಕೆ ಒತ್ತುಕೊಡಲಾಗಿತ್ತು. ಕಾಮಗಾರಿ ಮತ್ತು ಗೃಹನಿರ್ಮಾಣಸಚಿವಾಲಯವನ್ನು ರಚಿಸಲಾಯಿತು ಹಾಗೂ ರಾಷ್ಟ್ರೀಯ ನಿರ್ಮಾಣ ಸಂಸ್ಥೆ ಮತ್ತು ನಗರ ಮತ್ತು ಪಟ್ಟಣಗಳ ಯೋಜನಾ ಸಂಸ್ಥೆಯನ್ನು ಸ್ಥಾಪಿಸಲಾಯಿತು.ಯೋಜನಾ ಮೊಬಲಗಿನ ಗಣನೀಯ ಭಾಗವನ್ನು ಪಾಕಿಸ್ತಾನದಿಂದ ಬಂದ ನಿರಾಶ್ರಿತರಿಗಾಗಿ ಮತ್ತು ಹೊಸ ಚಂಡೀಗರ್ ನಗರವನ್ನು ನಿರ್ಮಾಣ ಮಾಡಲು ವೆಚ್ಚ ಮಾಡಲಾಯಿತು. ಒಂದು ಔದ್ಯಮಿಕ ಗೃಹಗಳ ಕಾರ್ಯಯೋಜನೆಯನ್ನೂ ಸಹ ಪ್ರಾರಂಭಿಸಲಾಯಿತು. ಈ ಕಾರ್ಯ ಯೋಜನೆಯಲ್ಲಿ ಭೂಮಿಯ ಮತ್ತು ನಿರ್ಮಾಣದ ವೆಚ್ಚದಲ್ಲಿ ಶೇ 50 ಭಾಗವನ್ನು ಕೇಂದ್ರವು ಸಹಾಯಧನವಾಗಿ ನೀಡಿತು.

**ಎರಡನೇ ಯೋಜನೆಯಲ್ಲಿ (1956–61)**

ಬಡವರಿಗೆ ಮನೆಗಳ ಕಾರ್ಯಕ್ರಮದ ವ್ಯಾಪ್ತಿಯನ್ನು ವಿಸ್ತರಿಸಲಾಯಿತು. ಔದ್ಯಮಿಕ ಗೃಹಗಳ

ಕಾರ್ಯಯೋಜನೆಯನ್ನು ಎಲ್ಲ ಕೆಲಸಗಾರರಿಗೂ ಅನ್ವಯಿಸುವಂತೆ ವಿಸ್ತರಿಸಲಾಯಿತು. ಗ್ರಾಮೀಣ ಗೃಹ, ಕೊಳಗೇರಿಗಳ ನಿರ್ಮೂಲನೆ ಮತ್ತು ಕಸಗುಡಿಸುವವರಿಗೆ ಗೃಹ ಈ ಹೆಸರಿನ ಮೂರು ಹೊಸ ಕಾರ್ಯಯೋಜನೆಗಳನ್ನು ಜಾರಿಗೆ ತರಲಾಯಿತು. ಅನೇಕ ರಾಜ್ಯಗಳಲ್ಲಿ ನಗರ ಮತ್ತು ಪಟ್ಟಣಗಳ ಯೋಜನೆಯ ಕಾಯಿದೆಗಳನ್ನು ಮಾಡಲಾಯಿತು. ಮುಖ್ಯ ನಗರಗಳಿಗಾಗಿ ಬೃಹದ್ಯೋಜನೆ ತಯಾರಿಸಲು ಅವಶ್ಯಕವಿರುವ ಸಂಸ್ಥೆಗಳನ್ನು ಸ್ಥಾಪಿಸಲಾಯಿತು. ಮನೆಗಳ ಕಾರ್ಯಕ್ರಮಗಳಿಗೆ

**ಮೂರನೇ ಯೋಜನೆ** 1961–66 ಯಲ್ಲಿದ್ದ ಸಾಮಾನ್ಯ ನಿರ್ದೇಶನಗಳು ಎಲ್ಲ ಸಂಸ್ಥೆಗಳ ಕಾರ್ಯಕ್ರಮಗಳನ್ನು ಸಂಯೋಜಿಸುವುದು ಮತ್ತು ಕಡಿಮೆ ಆದಾಯದ ಗುಂಪುಗಳ ಅಗತ್ಯತೆಗಳಿಗೆ ತಕ್ಕಂತೆ ಕಾರ್ಯಕ್ರಮಗಳಲ್ಲಿ ಹೊಂದಿಕೆ ಮಾಡುವುದು ಇವು ಆಗಿತ್ತು. ಸಾಕಷ್ಟು ಸಂಖ್ಯೆಯಲ್ಲಿ ಗೃಹ ನಿವೇಶನಗಳು ಲಭ್ಯವಿರುವ ಸಲುವಾಗಿ ಬೇಕಾದ ಭೂಮಿಯ ಸ್ವಾಧೀನ ಮತ್ತು ಅಭಿವೃದ್ಧಿಗಾಗಿ ಹತ್ತು ವರ್ಷಕಾಲಾವಧಿಯ ಸಾಲಗಳನ್ನು ರಾಜ್ಯಸರ್ಕಾರಗಳಿಗೆ ಕೊಡುವ ಕಾರ್ಯಯೋಜನೆಯನ್ನು 1959ರಲ್ಲಿ ಜಾರಿಗೆ ತರಲಾಯಿತು. ಪ್ರಮುಖ ನಗರಗಳಿಗೆ ಬೃಹದ್ಯೋಜನೆಗಳನ್ನು ತಯಾರಿಸಲಾಯಿತು, ಹಾಗೂ ರಾಜ್ಯ ರಾಜಧಾನಿಗಳಾದ ಗಾಂಧಿನಗರ ಮತ್ತು ಭುವನೇಶ್ವರಗಳನ್ನು ಅಭಿವೃದ್ಧಿ ಪಡಿಸಲಾಯಿತು.

**ನಾಲ್ಕನೇ ಯೋಜನೆ** (1969–74) ಯಲ್ಲಿ ಸಮತೋಲಿತ ನಗರ ಬೆಳವಣಿಗೆಗೆ ಉನ್ನತ ಅದ್ಯತೆ ನೀಡಲಾಯಿತು. ದೊಡ್ಡನಗರಗಳ ಹೆಚ್ಚಿನ ಬೆಳವಣಿಗೆಯನ್ನು ತಡೆಯುವ ಅಗತ್ಯತೆ ಮತ್ತು ಜನದಟ್ಟಣೆ ತಪ್ಪಿಸುವುದು ಅಥವಾ ಜನಸಂಖ್ಯೆಯನ್ನು ಚದುರಿಸುವುದರ ಅಗತ್ಯತೆಯನ್ನು ಯೋಜನೆಯು ಒತ್ತಿ ಹೇಳಿತು. ಇದನ್ನು ಸಣ್ಣ ಪಟ್ಟಣಗಳ ರಚನೆ ಮತ್ತು ಆರ್ಥಿಕ ಚಟುವಟಿಕೆಗಳಿಗೆ ಸ್ಥಳ ನಿಗದಿ ಮಾಡುವುದರ ಮುಖಾಂತರ ಸಾಧಿಸಲು ಕಲ್ಪಿಸಲಾಯಿತು. ಲಾಭದಾಯಕತೆಯು ಮತ್ತು ಶೀಘ್ರ ಲಾಭದ ಭರವಸೆಯುಗೃಹನಿರ್ವಾಣ ಮತ್ತು ನಗರ ಅಭಿವೃದ್ಧಿಕಾರ್ಯಕ್ರಮಗಳಿಗಾಗಿ ಗೃಹನಿರ್ಮಾಣ ಮತ್ತು ನಗರಾಭಿವೃದ್ಧಿ ಸಂಸ್ಥೆಯನ್ನು ಸ್ಥಾಪಿಸಲಾಯಿತು. ನೀರು ಸರಬರಾಜು, ಒಳಚರಂಡಿ, ಚರಂಡಿ, ರಸ್ತೆಗಳಲ್ಲಿ ಪಾದಚಾರಿಮಾರ್ಗ ಇವೇ ಮುಂತಾದಂತಹ ಕನಿಷ್ಠ ಮಟ್ಟದ ಸೇವೆಗಳನ್ನು ಒದಗಿಸುವ ದೃಷ್ಟಿಯಿಂದ 8ಲಕ್ಷ ಮತ್ತು ಅದಕ್ಕೂ ಹೆಚ್ಚು ಜನಸಂಖ್ಯೆ ಇರುವ ನಗರಗಳಲ್ಲಿ ನಗರ ಕೊಳಗೇರಿಗಳ ಪರಿಸರ ಸುಧಾರಣೆಯ ಕಾರ್ಯಯೋಜನೆಯನ್ನು 1972–73ರಲ್ಲಿ ಕೇಂದ್ರವಲಯದಿಂದ ಕೈಗೆತ್ತಿಕೊಳ್ಳಲಾಯಿತು. ತರುವಾಯ ಈ ಕಾರ್ಯಕ್ರಮವನ್ನು ಮತ್ತು 9 ನಗರಗಳಿಗೆ ವಿಸ್ತರಿಸಲಾಯಿತು.

**ಐದನೇ ಯೋಜನೆಯು** (1974–79) ಹೆಚ್ಚುತ್ತಿರುವ ನಗರೀಕರಣದ ಒತ್ತಡವನ್ನು ಕಡಿಮೆ ಮಾಡುವ ಸಲುವಾಗಿ ಹೊಸ ನಗರಕೇಂದ್ರಗಳಲ್ಲಿ ಸಣ್ಣ ಪಟ್ಟಣಗಳನ್ನು ಉತ್ತೇಜಿಸುವ ಹಿಂದಿನ ಯೋಜನೆಗಳ ನೀತಿಗಳನ್ನೇ ಪುನರುಚ್ಚರಿಸಿತು. ಇದಕ್ಕೆ ಪೂರಕವಾಗಿ ನಗರ ಪ್ರದೇಶಗಳಲ್ಲಿ ಪೌರ ಸೇವೆಗಳನ್ನು ಹೆಚ್ಚಿಸುವ ಬಗ್ಗೆ ಕ್ರಮ ತೆಗೆದುಕೊಳ್ಳಬೇಕು, ಹಾಗು ಮಹಾನಗರಗಳಲ್ಲಿನ ಸಮಸ್ಯೆಗಳಿಗೆ ಸಮಗ್ರ ಮತ್ತು ಪ್ರಾಂತೀಯ ನಡೆಯ ಕುರಿತಂತೆ ನಿರ್ದಿಷ್ಠ ಒತ್ತು ನೀಡಬೇಕೆಂದು ಹೇಳಿತು. ಸಣ್ಣ ಮತ್ತು ಮಧ್ಯಮ ಪಟ್ಟಣಗಳ ಅಭಿವೃದ್ಧಿಗಾಗಿ ಒಂದು ಕಾರ್ಯಪಡೆಯನ್ನು ಸ್ಥಾಪಿಸಲಾಯಿತು. ನಗರಪ್ರದೇಶಗಳಲ್ಲಿ ಭೂಮಿಯ ಧಾರಣವು ಕೇಂದ್ರೀಕೃತವಾಗುವುದನ್ನು ತಡೆಯಲು ಮತ್ತು ಮಧ್ಯಮ ಮತ್ತು ಕಡಿಮೆ ಆದಾಯದ ಗುಂಪುಗಳಿಗೆ ಮನೆಗಳ ನಿರ್ಮಾಣಕ್ಕಾಗಿ ನಗರದಲ್ಲಿ ಭೂಮಿ ಲಭ್ಯವಿರುವಂತೆ ಮಾಡಲು ನಗರ ಭೂಮಿ (ಪರಿಮಿತಿಮತ್ತು ವಿನಿಮಯ) ಅಧಿನಯಮವನ್ನು ಜಾರಿಗೆ ತರಲಾಯಿತು.

**ಆರನೇ ಯೋಜನೆಯು** (1980–85) ನಗರವಾಸಿಗಳಿಗೆ ಅದರಲ್ಲಿಯೂ ಬಡವರಿಗೆ ಮನೆಗಳ ಜೊತೆಗೆ ಸಮಗ್ರ ಸೇವೆಗಳ ಉಪಬಂಧ ಕಲ್ಪಿಸುವ ಬಗ್ಗೆ ಹೆಚ್ಚಿನ ಒತ್ತು ನೀಡಿತು. ರಸ್ತೆಗಳು, ಪಾದಚಾರಿಗಳು, ಸಣ್ಣಸಿವಿಲ್ ಕಾಮಗಾರಿಗಳು, ಬಸ್‌ನಿಲ್ದಾಣಗಳು, ಮಾರುಕಟ್ಟೆಗಳು ವ್ಯಾಪಾರ ಮಳಿಗೆಗಳು ಇತ್ಯಾದಿಯನ್ನುಒದಗಿಸುವ ಸಲುವಾಗಿ ಒಂದು ಲಕ್ಷಕ್ಕೂ ಕಡಿಮೆ ಜನಸಂಖ್ಯೆ ಇರುವ ಪಟ್ಟಣಗಳಲ್ಲಿ ಸಣ್ಣ ಮಧ್ಯಮ ಪಟ್ಟಣಗಳ ಸಮಗ್ರ ಅಭಿವೃದ್ಧಿ ಯೋಜನೆಯನ್ನು ಪ್ರಾರಂಭಮಾಡಲಾಯಿತು. ಸಣ್ಣ,ಮಧ್ಯಮ ಮತ್ತು ಮಧ್ಯಮಾಂತರ ಪಟ್ಟಣಗಳಲ್ಲಿ ಹೊಸ ಉದ್ಯಮಗಳು ಮತ್ತು ವ್ಯಾಪಾರಿ ಹಾಗು ವೃತ್ತೀಯ ಸಂಸ್ಥೆಗಳನ್ನು ಸ್ಥಾಪಿಸಲು ಧನಾತ್ಮಕ ಪ್ರೇರಣೆಗಳನ್ನು ಪ್ರಸ್ತಾವಿಸಲಾಯಿತು.

**ಏಳನೇ ಯೋಜನೆಯು** (1985–90) ಗೃಹನಿರ್ಮಾಣದ ಪ್ರಮುಖ ಜವಾಬ್ದಾರಿಯನ್ನು ಖಾಸಗಿ ವಲಯಕ್ಕೆ ವಹಿಸಿಕೊಡುವ ಅಗತ್ಯತೆಗೆ ಒತ್ತು ನೀಡಿತು. ಗೃಹನಿರ್ಮಾಣಕ್ಕಾಗಿ ಸಂಪನ್ಮೂಲ ಕ್ರೋಡೀಕರಣ, ಬಡವರಿಗೆ ಸಹಾಯ ಧನಯುಕ್ತ ಮನೆಗಳನ್ನು ಒದಗಿಸುವುದು ಮತ್ತು ಭೂಮಿಯ ಸ್ವಾಧೀನ ಮತ್ತು ಅಭಿವೃದ್ಧಿ ಈ ಬಗೆಯಲ್ಲಿ ಮೂರು ರೀತಿಯ ಪಾತ್ರಗಳನ್ನು ಸಾರ್ವಜನಿಕ ಕ್ಷೇತ್ರಕ್ಕೆ ವಹಿಸಿಕೊಡಲಾಯಿತು. ಗೃಹಸಾಲದ ಮೂಲಾಧಾರವನ್ನು ಎತ್ತರಿಸಲು ರಾಷ್ಟ್ರೀಯ ಗೃಹಬ್ಯಾಂಕ್ ಸ್ಥಾಪಿಸಲಾಯಿತು. ರಾಕೃತ ಬ್ಯಾಂಕನ್ನು ಮರು ರಚನೆ ನಿರ್ಮಾಣ ಸಾಮಗ್ರಿಯ ವಾಣಿಜ್ಯ ಉತ್ಪಾದನೆಯನ್ನು ಉತ್ತೇಜಿಸಲು ನರ್ಮಾಣ ಸಾಮಗ್ರಿ ತಂತ್ರಜ್ಞಾನ ಉತ್ತೇಜನ ಪರಿಷತ್ತು (ಬಿಎಂಪಿಟಿಸಿ)ಎಂಬ ಹೆಸರಿನ ಹೊಸ ಸಂಸ್ಥೆಯೊಂದನ್ನು ಸ್ಥಾಪಿಸಲಾಯಿತು. ಈ ಯೋಜನೆಯ ಅವಧಿಯಲ್ಲಿ ನಿರ್ಮಾಣ ಕೇಂದ್ರಗಳ ಜಾಲವನ್ನೂ ಸಹ ಸ್ಥಾಪಿಸಲಾಯಿತು. ಏಳನೇ ಯೋಜನೆಯು ನಗರದ ಬಡವರ ಸಮಸ್ಯೆಗಳನ್ನು ಪ್ರಕಟವಾಗಿ ಗುರುತಿಸಿತು; ಹಾಗು ಮೊದಲಬಾರಿಗೆ ನಗರದ ಬಡವರಿಗೆ ಮೂಲ ಸೇವೆಗಳು ಎಂದು ಕರೆಯಲ್ಪಡುವ ನಗರ ಬಡತನ ನಿವಾರಣೆ ಕಾರ್ಯಯೋಜನೆಯನ್ನು ಪ್ರಾರಂಭಿಸಲಾಯಿತು. ಜಾಗತಿಕ ಆಶ್ರಯ ಕಾರ್ಯತಂತ್ರ (ಜಿಎಸ್ ಎಸ್) ದ ಅನುಸರಣೆಯ ಕ್ರಮವಾಗಿ ರಾಷ್ಟ್ರೀಯ ಗೃಹನರ್ಮಾಣನೀತಿಯನ್ನು (ಎನ್ ಹೆಚ್‌ಪಿ) 1988 ರಲ್ಲಿ ಪ್ರಕಟಿಸಲಾಯಿತು. ಗೃಹರಹಿತತೆಯನ್ನು ನಿರ್ಮೂಲನಮಾಡುವುದು ಸಾಕಷ್ಟು ಸಮರ್ಪಕವಿರದ ಮನೆಗಳ ಸ್ಥಿತಿಯನ್ನು ಸುಧಾರಿಸುವುದು ಮತ್ತು ಒಂದು ಕನಿಷ್ಠ ಮಟ್ಟದ ಮೂಲ ಸೌಕರ್ಯಗಳನ್ನು ಎಲ್ಲರಿಗೂ ಒದಗಿಸುವುದುಇವು ರಾಗ್ರನೀಯ ದೀರ್ಘ ಕಾಲೀನ ಗುರಿಯಾಗಿರುತ್ತದೆ. ಅತ್ಯಂತ ಬಡವರಿಗೆ ಮತ್ತು ದುರ್ಬಲವರ್ಗದವರಿಗೆ ಸರಬರಾಜುದಾರನಾಗಿ, ತೊಡಕುಗಳನ್ನು ನಿವಾಯಿಸುವುದರ ಮೂಲಕ ಮತ್ತು ಭೂಮಿ ಮತ್ತು ಸೇವೆಗಳನ್ನು ಹೆಚ್ಚು ಹೆಚ್ಚಾಗಿ ಒದಗಿಸುವುದರ ಮೂಲಕ ಇತರ ಆದಾಯ ಗುಂಪುಗಳಿಗೆ ಮತ್ತು ಖಾಸಗಿ ಕ್ಷೇತ್ರಕ್ಕೆ ಸೌಲಭ್ಯಕರ್ತನಾಗಿ ಸರ್ಕಾರವು ತನ್ನ ಪಾತ್ರವನ್ನು ಕಲ್ಪಿಸಿಕೊಂಡಿರುತ್ತದೆ.

ನಗರೀಕರಣದ ರಾಷ್ಟ್ರೀಯ ಆಯೋಗವು ತನ್ನ ವರದಿಯನ್ನು ಸಲ್ಲಿಸಿದೆ. ಮುಂದುವರಿಯುತ್ತಿರುವ ನಗರ ಜನಸಂಖ್ಯೆಯ ತ್ವರಿತ ಬೆಳವಣಿಗೆಯ ವಾಸ್ತವಿಕತೆಯನ್ನು, ಜೊತೆಗೆ ನಗರೀಕರಣದ ಪ್ರಮಾಣ ಮತ್ತು ತೀವ್ರತೆಯನ್ನು ಮೂಲರಚನಾ ಸೌಕರ್ಯಗಳಲ್ಲಿನ ಮಹತ್ವದ ಕೊರತೆಗಳನ್ನು, ಅಪಾರ ಸಂಖ್ಯೆಯ ಬಡವರ ಮತ್ತು ವಂಚಿತ ಮಂದಿಯ ಕೇಂದ್ರೀಕರಣ, ಗೃಹ ಮತ್ತು ಮೂಲಸೇವೆಗಳ ಲಭ್ಯತೆಯಲ್ಲಿರುವ ತೀವ್ರತೆರನಾದ ವ್ಯತ್ಯಾಸಗಳು, ಪರಿಸರದ ಗುಣಮಟ್ಟವು ಕ್ಷೀಣಿಸುತ್ತಿರುವುದು ಮತ್ತು ಉದ್ಯಮಿಗಳ ಆದಾಯ ಮತ್ತು ಉತ್ಪಾದಕತೆಯ ಮೇಲೆ ಕಳಪೆ ಆಳ್ವಿಕೆಯ ಪರಿಣಾಮ ಇವುಗಳನ್ನು ವಿಶದವಾಗಿ ಸೂಚಿಸಿದೆ.

**ಎಂಟನೆಯ ಯೋಜನೆಯು** (1992–97) ಮೊದಲಬಾರಿಗೆ ರಾಷ್ಟ್ರೀಯ ಅರ್ಥವ್ಯವಸ್ಥೆಗೆ ನಗರ ಕ್ಷೇತ್ರದ

ಪ್ರಾಮುಖ್ಯ ಮತ್ತು ಪಾತ್ರವನ್ನು ಪ್ರಕಟವಾಗಿ ಗುರುತಿಸಿತು. ನಗರ ಪ್ರದೇಶಗಳಲ್ಲಿ ಉದ್ಯೋಗದ ಬೆಳವಣಿಗೆ ದರವು ವಾರ್ಷಿಕ ಶೇ. 3.8 ಇದ್ದರೆ ಗ್ರಾಮೀಣ ಪ್ರದೇಶಗಳಲ್ಲಿ ಇದು ಶೇ. 1.6ಕ್ಕೆ ಕುಸಿಯಿತು. ಆದ್ದರಿಂದ ಹೆಚ್ಚುವರಿಯಾದ ಕಾರ್ಮಿಕ ಸಮೂಹವನ್ನು ನಗರ ಪ್ರದೇಶಗಳು ಹೀರಿಕೊಳ್ಳುವುದರ ಸಲುವಾಗಿ ನಗರಗಳನ್ನು ಸಶಕ್ತಗೊಳಿಸಬೇಕು. ಯೋಜನೆಯು ಉತ್ಪತ್ತಿಯಾಗಿರುವ ನಗರ ದೃಶ್ಯ ವಿವರದ ಪ್ರಮುಖ ಅಂಶಗಳನ್ನು ಗುರುತಿಸಿತು:

- ಮೂಲ ಸೌಕರ್ಯಗಳ ಬೇಡಿಕೆ ಮತ್ತು ಸರಬರಾಜಿನಲ್ಲಿ ಹೆಚ್ಚುತ್ತಿರುವ ಅಂತರ. ಇದು ಬಡವರಿಗೆ ಹೆಚ್ಚು ಪೆಟ್ಟು ಕೊಟ್ಟಿದೆ. ಈಗಾಗಲೇ ಕುಡಿಯುವ ನೀರು, ನೈರ್ಮಲ್ಯ, ಶಿಕ್ಷಣ ಮತ್ತು ಮೂಲ ಆರೋಗ್ಯ ಸೇವೆಗಳು ಮುಂತಾದುವುಗಳು ಕಡಿಮೆಯಾಗುತ್ತಿದೆ;
- ಕಡಿಮೆಯಾದ ನಗರ ಜನಸಂಖ್ಯೆಯ ಬೆಳವಣಿಗೆಯು ಹಿಂದಿನಿಂದ ಶೇಖರಣೆಯಾಗಿರುವ ಮನೆಗಳ ಕೊರತೆಯನ್ನು ಉಲ್ಬಣಗೊಳಿಸಿದೆ. ಫಲಿತಾಂಶವಾಗಿ ಕೊಳಗೇರಿಗಳು, ಅಕ್ರಮ ವಸತಿಗಳ ಸಂಖ್ಯಾಭಿವೃದ್ಧಿ ಆಗಿದೆ; ನಗರ ಪರಿಸರವೂ ಕೆಡುತ್ತಿದೆ.
- ಅಲ್ಪ ಉದ್ಯೋಗಿಗಳ ಸಂಖ್ಯೆ ಮತ್ತು ಬಡತನ ಹೆಚ್ಚಿದೆ. ರಾಷ್ಟ್ರೀಯ ಮಾದರಿ ಸಮೀಕ್ಷೆಯ 43ನೇ ಸುತ್ತಿನಲ್ಲಿ 41.8 ದಶಲಕ್ಷ ನಗರ ಜನರು ಬಡತನ ರೇಖೆಯ ಕೆಳಗೆ ವಾಸಿಸುತ್ತಿದ್ದಾರೆಂಬುದನ್ನು ತೋರಿಸಿದೆ.

ಈ ದೃಶ್ಯ ವಿವರಕ್ಕೆ ಪ್ರತಿಕ್ರಿಯೆಯಾಗಿ ಯೋಜನೆಯು ನಗರ ಬಡತನ ನಿವಾರಣಾ ಕಾರ್ಯಕ್ರಮ ಅಥವಾ ನೆಹರು ರೋಜಗಾರ್ ಯೋಜನೆಯನ್ನು ಪ್ರಾರಂಭಿಸದೆ.

## ಗೃಹನಿರ್ಮಾಣ ಮತ್ತು ನಗರಾಭಿವೃದ್ಧಿಕ್ಷೇತ್ರಕ್ಕೆ ಯೋಜನೆಯಲ್ಲಿನ ಮೊಬಲಗು

| ಯೋಜನೆ | ಒಟ್ಟು ಮೊಬಲಗು | ಗೃಹ ಮತ್ತು ನಗರಾಭಿವೃದ್ಧಿ ಒಟ್ಟು ಮೊಬಲಗಿನಲ್ಲಿ | ಶೇಕಡಾ ಪಾಲು ರೂ ದಶಲಕಷಗಳಲ್ಲಿ |
|---|---|---|---|
| ಮೊದಲನೇಯೋಜನೆ | 20688 | 4.88 | 2.1 |
| ಎರಡನೇಯೋಜನೆ | 48000 | 12.00 | 2.5 |
| ಮೂರನೇಯೋಜನೆ | 85765 | 12.76 | 1.5 |
| ವಾರ್ಷಿಕಯೋಜನೆ(1966–69) | 66254 | 7.33 | 1.1 |
| ನಾಲ್ಕನೇಯೋಜನೆ | 157788 | 2702 | 1.7 |
| ಐದನೇಯೋಜನೆ | 394262 | 11500 | 2.9 |
| ವಾರ್ಷಿಕಯೋಜನೆ (1977–80) | 394262 | 3688 | 3.0 |
| ಆರನೇಯೋಜನೆ | 975000 | 24884 | 2.6 |
| ಏಳನೇಯೋಜನೆ | 1800000 | 42295 | 2.3 |
| ವಾರ್ಷಿಕಯೋಜನೆ (1990–92) | 1338350 | 3001 | 2.2 |
| ಎಂಟನೇಯೋಜನೆ | 4341000 | 105000 | 2.4 |

**ನಗರಗಳ ಬೆಳವಣಿಗೆ ಆಗುತ್ತಿರುವಂತೆ ಭಾರತದ ನಗರಗಳ ಬಡಜನತೆ ನೀರಿನ ಬಿಕ್ಕಟ್ಟನ್ನು ಅನುಭವಿಸುತ್ತಿದ್ದಾರೆ:**

ಭಾರತದ ನಗರಗಳ ಬೇಳವಣಿಗೆಯನ್ನು ತಪ್ಪಿಸಲಾಗುವುದಿಲ್ಲ. ರಾಜಧಾನಿಯಲ್ಲಿ ರೈಲ್ವೆ ನಿಲ್ದಾಣ ಮತ್ತು ಬಸ್ ನಿಲ್ದಾಣಗಳಲ್ಲಿ ಪ್ರತಿನಿತ್ಯ ನೂರಾರು ಮಂದಿ ವಲಸಿಗರು ಬಂದಿಳಿಯುತ್ತಿದ್ದಾರೆ. ಎಲ್ಲ ದಿಕ್ಕುಗಳಲ್ಲಿ

ಜನದಟ್ಟಣೆಯಿಂದ ಉಬ್ಬಿಹರಿಯುತ್ತಿರುವ ಕೊಳಗೇರಿಗಳು ಕಟ್ಟಡಸಂಕೀರ್ಣಗಳು, ಶಾಪಿಂಗ್ ಮಾಲ್‌ಗಳು ಮತ್ತು ಉದ್ಯಮ ಸ್ಥಾವರಗಳ ಬಳಿ ತಲೆಯೆತ್ತುತ್ತಿವೆ. ಔದ್ಯಮೀಕರಣವು ನಡೆಯುತ್ತಿರುವಂತೆಯೆ ಹೆಚ್ಚು ಹೆಚ್ಚಾಗಿ ಗ್ರಾಮೀಣ ಜನರು ನವದೆಹಲಿಯಂತಹ ನಗರಗಳಿಗೆ ಬರುತ್ತಿದ್ದಾರೆ. ಇದರಿಂದ ಸ್ವಚ್ಛ ಮತ್ತು ಸುರಕ್ಷಿತ ಕುಡಿಯುವ ನೀರನ್ನು ಜನರಿಗೆ ಅದರಲ್ಲಿಯೂ ಬಡಜನರಿಗೆ ಒದಗಿಸುವ ಸಾಮರ್ಥ್ಯವು ಕಡಿಮೆಯಾಗುತ್ತಲಿದ್ದು ಬಿಕ್ಕಟಿನ ಸ್ಥಿತಿಯನ್ನು ಮುಟ್ಟಿದೆ. “ನೀರಿಗೆ ಹೆಚ್ಚಿದ ಬೇಡಿಕೆ, ಮನುಷ್ಯರಿಂದ ಮತ್ತು ಉದ್ಯಮಿಗಳಿಂದ ಹೆಚ್ಚಿದ ಮಾಲಿನ್ಯ ಮತ್ತು ನೀರಿನ ಕಳಪೆ ನಿರ್ವಹಣೆ ಇದು ಎಲ್ಲಕ್ಕಿಂತ ಹೆಚ್ಚಾಗಿ ದೇಶದ ಪಟ್ಟಣಗಳು ಮತ್ತು ನಗರಗಳ ಅತ್ಯಂತ ಬಡಜನರ ಮೇಲೆ ಪರಿಣಾಮ ಬೀರುತ್ತಿದೆ. “ಹೀಗೆಂದು ದೆಹಲಿಯಲ್ಲಿನ ವಿಜ್ಞಾನ ಮತ್ತು ಪರಿಸರ ಕೇಂದ್ರ (ಸಿಎಸಿ) ದ ಚಿಂತಕರ ಚಾವಡಿಯ ಸುಶ್ಮಿತಸೇನ್‌ಗುಪ್ತಾ ಅವರು ಹೇಳುತ್ತಾರೆ. “ನಗರಗಳು ಈಗಾಗಲೇ ನೀರಿನ ಒತ್ತಡ ಅನುಭವಿಸುತ್ತಿದೆ. ನಗರೀಕರಣ ಹೆಚ್ಚುತ್ತಿರುವಾಗ ಅತ್ಯವಶ್ಯಕವಾದ ಸಂಪನ್ಮೂಲಗಳ ಪೋಲನ್ನು ತಡೆಗಟ್ಟುವುದನ್ನು ಕಲಿಯುವ ಅಗತ್ಯವಿದೆ. “ಭಾರತದ ಕಳೆದ 2001ರ ಜನಗಣತಿಯ ಪ್ರಕಾರ 2030ರ ವೇಳೆಗೆ ಸರಿಸುಮಾರು 575ದಶಲಕ್ಷ ಜನರು ಅಂದರೆ ಭಾರತದ ಜನಸಂಖ್ಯೆಯ ಶೇ.40ರಷ್ಟು ಮಂದಿ ನಗರವಾಸಿಗಳಾಗಿರುತ್ತಾರೆ. ಹೀಗಿದ್ದೂ ಯಾವ ಪ್ರಮುಖ ನಗರಗಳೂ ಮತ್ತು ಪಟ್ಟಣಗಳೂ 24*7ರ ನೀರು ಸರಬರಾಜನ್ನು ಹೊಂದಿಲ್ಲ. ಬಹುತೇಕ ಕುಟುಂಬಗಳು ದಿನನಿತ್ಯ ಎರಡು ಬಾರಿ ಬೆಳಿಗ್ಗೆ ಮತ್ತು ಸಂಜೆ ನೀರು ಪಡೆಯುತ್ತದೆ. ಅನೇಕ ಮಧ್ಯಮವರ್ಗದ  ಕುಟುಂಬಗಳು ನೀರು ಸಂಗ್ರಹಣೆಗೆ ಟ್ಯಾಂಕುಗಳನ್ನು ಅವಲಂಬಿಸಿರುತ್ತವೆ. ಬಿಸಿಲಬೇಗೆಯ ಬೇಸಿಗೆಯ ತಿಂಗಳುಗಳಲ್ಲಿ ದಿನಗಟ್ಟಲೆ ನೀರಿನ ಸರಬರಾಜೇ ಇಲ್ಲದಿರುವ ಪ್ರಸಂಗಗಳು ಸರ್ವೇಸಾಮಾನ್ಯವಾಗಿದೆ. ನಗರ ಕೇಂದ್ರಗಳಲ್ಲಿ ನೀರಿಗಾಗಿ ಪ್ರತಿಭಟನೆ ಮತ್ತು ನೀರಿನ ಕೊರತೆಯ ಕಾರಣ ಹಿಂಸಾಚಾರದ ವಾದಗಳು ಹೆಚ್ಚಾಗುತ್ತಿವೆ.

**ಇನ್ನು ಕೊಳಗೇರಿಗಳು**

ಭಾರತಾದ್ಯಂತ ಇರುವ 40ದಶಲಕ್ಷ ಕೊಳಗೇರಿ ನಿವಾಸಿಗಳಲ್ಲಿ ಅನೇಕ ಮಂದಿಗೆ ಹಣಕೊಟ್ಟು ಖಾಸಗಿ ಟ್ಯಾಂಕರುಗಳಿಂದ ನೀರು ತರಿಸಿಕೊಳ್ಳಲು ಸಾಧ್ಯವಾಗದಿರುವ ಕಾರಣ ಶುದ್ಧ ನೀರು ಮತ್ತು ಶೌಚಾಲಯವು ದೂರವೇ ಉಳಿಯಿತೆಂದು ನೆರವು ಕಾರ್ಯಕರ್ತರು ಹೇಳುತ್ತಾರೆ. ಭಾರತದ ಅತ್ಯಂತ ಶೀಘ್ರ ಬೆಳವಣಿಗೆಯ ಮತ್ತು ಜನದಟ್ಟಣೆ ಇರುವ ನಗರಗಳಲ್ಲಿ ನವದೆಹಲಿಯೂ ಒಂದು. ಇಲ್ಲಿ ಪ್ರತಿ ದಿನಾ 1000 ವಲಸಿಗರು ಬರುತ್ತಾರೆ. ಬಹುತೇಕ ಮಂದಿ ಉತ್ತಮ ಜೀವನ ಅರಸಿ ನಗರದ ಸುತ್ತ ಚದುರಿಕೊಂಡಿರುವ ಕೊಳಗೇರಿಗಳ ವಸಾಹತುಗಳಿಗೆ ಹೋಗುತ್ತಾರೆ. ಅಂದಾಜು 4 ದಶಲಕ್ಷಜನ ಕೊಳಗೇರಿಗಳಲ್ಲಿ ವಾಸಿಸುತ್ತಾರೆ. ಇದು ಹೆಚ್ಚುಕಮ್ಮಿ ರಾಜಧಾನಿಯ ಒಟ್ಟು ಜನಸಂಖ್ಯೆ ಶೇ. 30ರಷ್ಟು.  ನೈರುತ್ಯ ದೆಹಲಿಯ ಮಂಗಳ ಪುರಿ ಕೊಳಗೇರಿಗಳಲ್ಲಿ ಮಹಿಳೆಯರು, ಈ ಅಧಿಕ ಜನಸಂದಣಿಯ ಜನದಟ್ಟಣೆಯ ವಸಾಹತಿನಲ್ಲಿ 2000 ನಿವಾಸಿಗಳಿಗೆ ಇರುವ ಎರಡೇ ಕಾರ್ಯ ನಿರತ ಪೈಪುಗಳಿಂದ ನೀರನ್ನು ಬಕೆಟುಗಳಿಗೆ ತುಂಬಿಸಿಕೊಳ್ಳುತ್ತಾರೆ. ಪ್ಲಾಸ್ಟಿಕ್ ಪೈಪಿನ ಮೂಲಕ ಸಣ್ಣಹನಿಯು ತಮ್ಮ ಪಾತ್ರೆಗಳಿಗೆ ಹರಿದುಬರುವುದನ್ನು ಸಹನೆಯಿಂದ ನೋಡುತ್ತಾ ಕುಳಿತಿರುತ್ತಾರೆ. “ಈ ರೀತಿಯ ಬದುಕು ನಮಗೆ ಸಾಕಾಗಿಹೋಗಿದೆ “ ಎಂದು 27 ವರ್ಷ ವಯಸ್ಸಿನ ವಾಹನ ಚಾಲಕ ಸತೀಂದರ್ ಸಿಂಗ್ ಹೇಳುತ್ತಾನೆ. “ ಕಳೆದ ನಾಲ್ಕು ದಿನಗಳಿಂದ ನಮಗೆ ನೀರೇ ಇಲ್ಲ. ನೀರು ಬಂದರೂ ನಮಗೆ ಸಿಗುವುದು ಅತಿ ಸ್ವಲ್ಪವೆ.”

ಇಲ್ಲಿಯ ಬಹುಪಾಲು ನಿವಾಸಿಗಳು ಸುಮಾರು ಆರು ಮಂದಿ ಇರುವ ಕುಟುಂಬಗಳು . ಗಲ್ಲ ಗಲ್ಲಗಟ್ಟಿಸುವ ಒಂದು ಕೋಣೆಯ ಸಣ್ಣ ಕಾಂಕ್ರೀಟ್ ಘಟಕಗಳಲ್ಲಿ ವಾಸಿಸುತ್ತಾರೆ. ತಾವು ನೀರನ್ನು ಕೊಳ್ಳಲು ಶಕ್ಯರಲ್ಲವೆಂದು ಹೇಳುತ್ತಾರೆ. ನೀರಿಗಾಗಿ ಹತ್ತಿರದಲ್ಲಿರುವ ಸಿರಿವಂತ ಮನೆಗಳ ಬಾಗಿಲುಗಳನ್ನು ತಟ್ಟಿ ಈ ಅತ್ಯವಶ್ಯಕ ಸರಕಿಗಾಗಿ ಬೇಡುತ್ತಾರೆ.

ಮಂಗಳಪುರಿಯ ನೈರ್ಮಲ್ಯ ಮಟ್ಟವೂ ಕಳಪೆಯಾಗಿದೆ. ಕೊಳೆಯುತ್ತಿರುವ ದೊಡ್ಡ ತಿಪ್ಪೆಗುಂಡಿಯ ಬಳಿಯೇ ಎರಡು ತೆರೆದನೀರಿನ ಪೈಪುಗಳಿವೆ. ತೆರೆದ ಮೋರಿಗಳಲ್ಲಿ ಹೊಲಸು, ಪ್ಲಾಸ್ಟಿಕ್ ಮತ್ತು ಕಸಕಡ್ಡಿಗಳು ತುಂಬಿಕೊಂಡಿವೆ. ಲಭ್ಯವಿರುವ ಕೆಲವೇ ಕೆಲವು ಸಾರ್ವಜನಿಕ ಶೌಚಾಲಯದ ಮಾನವ ವಿಸರ್ಜನೆಯನ್ನು ಬಳಿಯೇ ಮನೆಗಳಿಂದ 50 ಮೀಟರ್ ದೂರದಲ್ಲಿ ರಾಶಿಹಾಕುತ್ತಾರೆ. ಹಂದಿಗಳು ಹೊಲಸಿನ ಗುಂಡಿಗಳಲ್ಲಿ ಓಡಾಡಿ ಅಸಹನೀಯವಾದ ದುರ್ನಾತಕ್ಕೆ ಕಾರಣವಾಗಿದೆ. ಕಳಪೆ ನೈರ್ಮಲ್ಯವು ಅಲ್ಪಸ್ವಲ್ಪ ಇರುವ ಅಂತರ್ಜಲವನ್ನು ಕಲುಷಿತಗೊಳಿಸುತ್ತದೆಂದು ತಜ್ಞರು ಹೇಳುತ್ತಾರೆ.

ಅಂತರ್ಜಲವು ಕಲುಷಿತಗೊಳ್ಳಲು ಒಂದು ಕಾರಣವೆಂದರೆ ಮಾನವ ವಿಸರ್ಜನೆಯು ಅದರೊಳಗೆ ಶ್ರವಿಸುತ್ತದೆ; ಅದೇ ನೀರನ್ನು ಜನ ಕುಡಿಯುತ್ತಾರೆ. " ಎಂದು ನೀರನೆರವಿನ ನೀತಿ ಮತ್ತು ಭಾಗಿದಾರಿಕೆಯ ನಿರ್ದೇಶಕರಾದ ಇಂದಿರಾ ಖುರಾನ ಹೇಳುತ್ತಾರೆ. ದೇಶದ ಅನೇಕ ಭಾಗಗಳಲ್ಲಿ ಶುದ್ಧ ಕುಡಿಯುವ ನೀರಿನ ಲಭ್ಯತೆಯು ಹೆಚ್ಚಾಗಿದ್ದರೂ ಭಾರತದಲ್ಲಿ ಶೇ.21ರಷ್ಟು ಸಾಂಕ್ರಾಮಿಕ ರೋಗಗಳು ಅಸು ರಕ್ಷಿತ ನೀರಿಗೆ ಸಂಬಂಧಪಟ್ಟಿದೆಯೆಂದು ವಿಶ್ವಬ್ಯಾಂಕ್ ಅಂದಾಜಿಸಿದೆ. ಅಲ್ಲದೆ ಇದರಿಂದಪ್ರತಿದಿನವೂ 1600 ಮಂದಿಯು ಸಾವನಪ್ಪುತ್ತಿದ್ದಾರೆಂದು ವಿಶ್ವಬ್ಯಾಂಕ್ ಹೇಳುತ್ತದೆ. ಅಂತರ್ಜಲವು ಉದ್ಯಮಗಳ ರಾಸಾಯನಿಕ ಮತ್ತು ಕೃಷಿಮೂಲದ ರಸಗೊಬ್ಬರದಿಂದ , ಜೊತೆಗೆ ಅಧಿಕ ಪ್ರಮಾಣದ ಫ್ಲೂರೈಡ್ ಮತ್ತು ಆರ್ಸೆನಿಕ್‌ಗಳಿಂದ ಮಾಲಿನ್ಯಕ್ಕೀಡಾಗಿದೆಯೆಂದು ತಜ್ಞರು ಹೇಳುತ್ತಾರೆ.

## ಮಾಲಿನ್ಯ ಮತ್ತು ಪೋಲು

ಅಂತರ್ಜಲ ಮಾತ್ರ ಕಲುಷಿತಗೊಂಡಿಲ್ಲ. ಅನೇಕ ಪಟ್ಟಣ ಮತ್ತು ನಗರಗಳಿಗೆ ನೀರು ಸರಬರಾಜು ಮಾಡುವ ನದಿಗಳು, ಸರೋವರಗಳು ಮತ್ತು ಹೊಳೆಗಳು ಮುಂತಾದ ಬಹಿರ್ಜಲಗಳೂ ಸಹ ಅತೀವವಾಗಿ ಕಲುಷಿತಗೊಂಡಿದೆ.

ಈ ನೀರಿನ ಬಹುತೇಕ ಮೂಲಗಳು, ಪುರಸಭೆಗಳು ಸಂಸ್ಕರಿಸದ ಬಿಲಿಯಾಂತರ ಟನ್ನುಗಳ ಹೊಲಸನ್ನು ಈ ಮೂಲಗಳಿಗೆ ಸುರಿಯುತ್ತಿರುವುದರಿಂದ ಇವು ಚರಂಡಿಗಳಾಗಿವೆ. ಇದರಿಂದ ಅತಿ ಮುಖ್ಯವಾದ ನೀರಿನ ಸರಬರಾಜು ಮೂಲವು ನಾಶವಾಗುತ್ತಿದೆ., ತನ್ಮೂಲಕ ಈ ನೀರಿನ್ನು ಕುಡಿಯುವ ಮತ್ತು ಅದರಲ್ಲಿ ಸ್ನಾನ ಮಾಡುವ ಜನರ ಜೀವಗಳು ಗಂಡಾಂತರಕ್ಕೀಡಾಗಿದೆ. ಹೀಗೆಂದು ಪರಿಸರ ತಜ್ಞರು ಹೇಳುತ್ತಾರೆ.

ನವದೆಹಲಿಯೊಂದೇ ದಿನವೊಂದಕ್ಕೆ 3.6 ಬಿಲಿಯನ್ ಟನ್ನುಗಳಷ್ಟು ಹೊಲಸನ್ನು ಉತ್ಪಾದಿಸುತ್ತದೆ. ಕಳಪೆ ನಿರ್ವಹಣೆಯಿಂದ ಇದರಲ್ಲಿ ಅರ್ಧದಷ್ಟು ಮಾತ್ರ ಸಂಸ್ಕರಿಸಲಾಗುತ್ತಿದೆ. ಉಳಿದ ಸಂಸ್ಕರಿಸದ ತ್ಯಾಜ್ಯವನ್ನು ಯಮುನಾನದಿಗೆ ಸುರಿಯಲಾಗಿತ್ತಿದೆ. ಈ ನದಿಯು ದೆಹಲಿಗೆ ಶೇ. 86ರಷ್ಟು ನೀರನ್ನು ಪೂರೈಕೆ ಮಾಡುತ್ತದೆ. ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ಪ್ರಕಾರ ಯಮುನೆಯ ಕಾಲುಷ್ಯದ ಶೇ 70 ಭಾಗವು ಮಾನವ ಮಲಮೂತ್ರವಾಗಿರುತ್ತದೆ. ಉಳಿದದ್ದು ಉದ್ಯಮಗಳ ರೊಚ್ಚು ಮತ್ತು ಕೃಷಿಯ ಹರಿವು. ಭಾರತದಲ್ಲಿ 300ಕ್ಕೂ ಹೆಚ್ಚು ಒಳಚರಂಡಿ ನೀರಿನ ಸಂಸ್ಕರಣ ಕೇಂದ್ರಗಳಿವೆ. ಇವುಗಳಲ್ಲಿ ಬಹುಪಾಲು ಪೂರ್ಣ ಬಳಕೆಯಾಗುತ್ತಿಲ್ಲ ಹಾಗು ಒಳಚರಂಡಿ ಸ್ಥಳಗಳಿಂದ ಬಹುದೂರ ಸ್ಥಾಪಿತವಾಗಿರುತ್ತದೆ.

ಸಾಮಾನ್ಯವಾಗಿ ಸಂಸ್ಕರಿತ ತ್ಯಾಜ್ಯವನ್ನು ಸಂಸ್ಕರಿತವಾಗದ ತ್ಯಾಜ್ಯದೊಂದಿಗೆ ಮಿಶ್ರಮಾಡಿ ಪುನಃ ನದಿಗಳಿಗೆ ಸುರಿಯಲಾಗುತ್ತದೆ. ಭಾರತದ ಚರಂಡಿ ವ್ಯವಸ್ತೆಯು ಶಿಥಿಲವಾಗಿದೆ ಹಾಗು ದುರಸ್ತಿಯ ಅಗತ್ಯವಿದೆ. ಇದರಲ್ಲಿ ಅರ್ಧಕಿಂತಲೂ ಹೆಚ್ಚು ಪ್ರಸ್ತುತ ನೀರುಪಯುಕ್ತವಾಗಿದೆ. "ಕಳಪೆ ನಿರ್ವಹಣೆಯ ಕಾರಣವಾಗಿ ಅಪಾರ ನೀರು ಪೋಲಾಗುತ್ತಿದೆ ನಾವು ಮಳೆ ನೀರು ಕೊಯ್ಲು ಜೊತೆಗೆ ತ್ಯಾಜ್ಯ ನಿರ್ವಹಣೆಯನ್ನು ವಿಕೇಂದ್ರೀಕರಣಗೊಳಿಸುವತ್ತ ಕೇಂದ್ರೀಕರಿಸಬೇಕಾಗಿದೆ" ಎಂದು ಸಿಎಸ್ಇ ನ ಸುಶ್ಮಿತಾಸೇನ್ ಗುಪ್ತಾ ಹೇಳುತ್ತಾರೆ. ಹವಾಮಾನ ಬದಲಾವಣೆಯಿಂದ ಅತಿ ಮುಖ್ಯವಾದ ವರ್ಷಕಾಲದ ಮಳೆಗಳು ಕ್ರಮ ತಪ್ಪಿ ನೀರಿನ ಬಿಕ್ಕಟ್ಟು

ಉಲ್ಬಣಗೊಳ್ಳುತ್ತದೆಂದು ಪರಿಸರವಾದಿಗಳು ಹೇಳುತ್ತಾರೆ.

ಆಸ್ಟ್ರೇಲಿಯಾದ ಜುಲೈ 2009ರ ವರದಿಯು ಮುಂಬರುವ ವರ್ಷಗಳಲ್ಲಿ ಹವಾಮಾನ ಬದಲಾವಣೆಯು ಉಪಖಂಡದಲ್ಲಿ ಕೃಷಿ ಮತ್ತು ನೀರಿನ ಸರಬರಾಜಿಗಾಗಿ ನೂರುಕೋಟಿ ಗೂ ಹೆಚ್ಚು ಜನ ಅವಲಂಬಿಸಿರುವ ವರ್ಷ ಕಾಲದ ಮಳೆಗಳನ್ನು ತೀವ್ರವಾಗಿ ದುರ್ಬಲಗೊಳಿಸುತ್ತದೆ ಎಂದು ಎಚ್ಚರಿಕೆ ನೀಡಿದೆ. ಸರ್ಕಾರವು ಮೂಲ ರಚನೆಯ ಮೇಲೆ ಹೆಚ್ಚು ಹೂಡಿಕೆ ಮಾಡಬೇಕೆಂದು ತಜ್ಞರು ಮತ್ತು ಹೇಳುತ್ತಾರೆ. "ನಾವು ಸುಖಾಸುಮ್ಮನೆ ಮಾಮೂಲಿಯಾಗಿಯೇ ಇದ್ದರೆ ಮತ್ತು ಸರ್ಕಾರ ಮೂಲ ಸೌಕರ್ಯಗಳ ಮೇಲೆ ಸಾಕಷ್ಟು ವೆಚ್ಚ ಮಾಡದಿದ್ದರೆ 2030ರ ವೇಳೆಗೆ ನೀರಿನ ಬೇಡಿಕೆಯು ಸರಬರಾಜಿಗಿಂತ ಶೇ. 40ರಷ್ಟು ಅಧಿಕವಾಗುತ್ತದೆಂದು" ಅಂತರರಾಷ್ಟ್ರೀಯ ನೀರು ನಿರ್ವಹಣಾ ಸಂಸ್ಥೆಯ ನಿರ್ದೇಶಕ ಭರತ್ ಶರ್ಮ ಹೇಳುತ್ತಾರೆ.

"ನೀರನ್ನು ದಕ್ಷತೆಯಿಂದ ಬಳಸಲು ನಿಮಗೆ ಯಾವ ಉತ್ತೇಜನವೂ ಇಲ್ಲ"

**ನಗರದ ಬಡವರಿಗೆ ಮನೆಗಳನ್ನು ಒದಗಿಸಲು ಬಡ್ಡಿ ಸಹಾಯಧನ ಕಾರ್ಯ ಯೋಜನೆಯ ಮಾರ್ಗದರ್ಶನಗಳು (ಐಎಸ್‌ಹೆಚ್‌ಯುಪಿ–ಇಶುಪ್)**

**ಫೆಬ್ರವರಿ 2009 (10–11)**

## ನಗರದ ಬಡವರಿಗೆ ಮನೆಗಳನ್ನು ಒದಗಿಸಲು ಬಡ್ಡಿ ಸಹಾಯಧನದ ಕಾರ್ಯಯೋಜನೆ

### 1. ಪೀಠಿಕೆ

1.1 'ಎಲ್ಲರಿಗೂ ಕೈಗೆಟುವಂತೆ ಮನೆ" ಇದು ಭಾರತ ಸರ್ಕಾರದ ಒಂದು ಮುಖ್ಯ ನೀತಿಯ ಕಾರ್ಯಸೂಚಿ. ದೇಶದಲ್ಲಿ ಗೃಹ ನಿರ್ಮಾಣ ಕ್ಷೇತ್ರಕ್ಕೆ ಹರಿದು ಬರುವ ಸಾಲವನ್ನು ವಿಸ್ತರಿಸಲು ಮತ್ತು ಮನೆಗಳ ಒಡೆತನ ಅಧಿಕಗೊಳಿಸಲು ಸರ್ಕಾರವು ಒಂದು ಸಮರ್ಥಗೊಳಿಸುವ ಮತ್ತು ಬೆಂಬಲಿಸುವ ಪರಿಸರವನ್ನು ಸೃಷ್ಟಿಸುವ ಅಪೇಕ್ಷೆಯನ್ನು ಹೊಂದಿದೆ. ಹಲವಾರು ನೀತಿ ನಿರೂಪಣೆಗಳು ಗೃಹ ನಿರ್ಮಾಣ ಕ್ಷೇತ್ರದ ಪ್ರಾಮುಖ್ಯವನ್ನು ಮತ್ತು ಮತ್ತು ಎಲ್ಲರಿಗೂ ಆಶ್ರಯದ ಅವಕಾಶಗಳನ್ನು ಕಲ್ಪಿಸುವ ಅಗತ್ಯತೆಯನ್ನು ಬಲಗೊಳಿಸಿದೆ. ಜವಾಹರ್ ಲಾಲ್ ನೆಹರು ರಾಷ್ಟ್ರೀಯ ಪುನರ್ನವೀಕರಣ ಅಭಿಯಾನದ (ಜೆಎನ್‌ಎಸ್‌ಯುಆರ್‌ಎಂ) ಮೂಲಕ ಆರ್ಥಿಕವಾಗಿ ದುರ್ಬಲವರ್ಗಕ್ಕೆ (ಇಡಬ್ಲ್ಯುಎಸ್) ಮತ್ತು ಕಡಿಮೆ ಆದಾಯದ ಗುಂಪುಗಳಿಗೆ (ಎಲ್‌ಐಜಿ) ಮನೆಗಳನ್ನು ಒದಗಿಸಲು ಒಂದು ಪ್ರಮುಖ ಕ್ರಮವನ್ನು ಪ್ರಾರಂಭಿಸಲಾಯಿತು.

1.2 ಭಾರತ ಸರ್ಕಾರದ ಗೃಹ ನಮರ್ಾಣ ಮತ್ತು ಬಡತನ ನಿವಾರಣಾ ಮಂತ್ರಾಲಯವು (ಎಂಹೆಚ್‌ಅಂಡ್ ಯುಪಿಎ) ನಗರ ಪ್ರದೇಶಗಳಲ್ಲಿನ ಇಡಬ್ಲ್ಯುಎಸ್ ಮತ್ತು ಎಲ್‌ಐಜಿ ವರ್ಗಕ್ಕೆ ಸೇರಿದ ಜನಕ್ಕೆ ಮನೆಗಳ ಅಗತ್ಯತೆಗಳನ್ನು ಪೂರೈಕೆ ಮಾಡಲು ಒಂದು ಹೆಚ್ಚುವರಿ ಸಾಧನವಾಗಿ ಬಡ್ಡಿ ಸಹಾಯಧನ ಕಾರ್ಯಯೋಜನೆಯನ್ನು ವಿನ್ಯಾಸಿಸಿದೆ. ಈ ಕಾರ್ಯಯೋಜನೆಯು ಇಡಬ್ಲ್ಯೂಎಸ್ ಮತ್ತು ಎಲ್‌ಐಜಿ ವರ್ಗದ ಜನರಿಗೆ ಮನೆಗಳನ್ನು ಕೊಳ್ಳಲು ಅಥವಾ ನಮರ್ಾಣ ಮಾಡಲು ಸಮರ್ಥರಾಗುವಂತೆ ಅವರಿಗೆ ಬಡ್ಡಿ ಸಹಾಯಧನ ಒದಗಿಸುವುದನ್ನು ಕಲ್ಪಿಸುತ್ತದೆ.

### 2. ಕಾರ್ಯಯೋಜನೆಯ ಸ್ಥೂಲಲಕ್ಷಣಗಳು

2.1 ಉದ್ದೇಶ– ಈ ಕಾರ್ಯಯೋಜನೆಯು ಇಡಬ್ಲ್ಯೂಎಸ್ ಮತ್ತು ಎಲ್‌ಐಜಿ ಮಂದಿಗೆ ಕೇಂದ್ರ ಸರ್ಕಾರದ ಸಹಾಯಧನದೊಂದಿಗೆ ಮನೆಸಾಲ ಕಲ್ಪಿಸುತ್ತದೆ. ಇದನ್ನು ಅಂತಹ ಫಲಾನುಭವಿಯು ಮನೆಯನ್ನು ಆರ್ಜಿಸಲು ಅಥವಾ ನಿರ್ಮಿಸಲು ಕೊಡಲಾಗುತ್ತದೆ. ಸಾಲ ಪಡೆಯಲು ಫಲಾನುಭವಿಯು ತನ್ನ ಹೆಸರಿನಲ್ಲಿ ಅಥವಾ ತನ್ನ ಹೆಂಡತಿ/ಗಂಡನ ಹೆಸರಿನಲ್ಲಿ ಅಥವಾ ಯಾವುದೇ ಅವಲಂಬಿತ

ಮಕ್ಕಳ ಹೆಸರಿನಲ್ಲಿ ಮನೆಯನ್ನು ಇಟ್ಟುಕೊಂಡಿರಬಾರದು. ಯಾವುದೇ ನಗರ ಪ್ರದೇಶದಲ್ಲಿ ಭೂಮಿಹೊಂದಿದ್ದು ಆದರೆ ತನ್ನ ಅಥವಾ ತನ್ನ ಹೆಂಡತಿಯ ಗಂಡನ ಅಥವಾ ಯಾವುದೇ ಅವಲಂಬಿತ ಮಕ್ಕಳ ಹೆಸರಿನಲ್ಲಿ ಮನೆ ಇಲ್ಲದಿರುವಂತಹ ಫಲಾನುಭವಿಗಳೂ ಈ ಕಾರ್ಯಯೋಜನೆಯ ವ್ಯಾಪ್ತಿಗೆ ಬರುತ್ತಾರೆ.

**2.2** **ಅರ್ಹತೆ:** ಇಡಬ್ಲ್ಯುಎಸ್‌ನ ಆರ್ಥಿಕ ಮಾನದಂಡವನ್ನು ಸರಾಸರಿ ರೂ.3300ರ ವರೆಗಿನ ಮಾಸಿಕ ಆದಾಯವುಳ್ಳ ಕುಟುಂಬಗಳೆಂದು ಪರಿಭಾಷಿಸಲಾಗಿದೆ ಹಾಗು ಎಲ್‌ಐಜಿಯ ಆರ್ಥಿಕ ಮಾನದಂಡವನ್ನು ಸರಾಸರಿ ಮಾಸಿಕ ಆದಾಯ ರೂ 3301 ರಿಂದ 7300ರವರೆಗಿನ ಕುಟುಂಬಗಳೆಂದು ಪರಿಭಾಷಿಸಲಾಗಿದೆ. ಇದು ಚಾಲನಾ ಸಮಿತಿಯು ಕಾಲಕಾಲಕ್ಕೆ ಮಾಡುವ ಪರಿಷ್ಕರಣಕ್ಕೆ ಒಳಪಟ್ಟಿರುತ್ತದೆ.

**2.3** **ಸಾಲ ಮೊಬಲಗಿನ ಅರ್ಹತೆ** – ಈ ಕಾರ್ಯಯೋಜನೆಯು ಇಡಬ್ಲ್ಯುಎಸ್ ವ್ಯಕ್ತಿಗೆ ಕನಿಷ್ಠ 25 ಚದರ ಮೀಟರ್ ಇರುವ ಮನೆಗೆ 15–20 ವರ್ಷದ ಅವಧಿಯವರೆಗೆ ಗರಿಷ್ಠ ಮೊತ್ತ ರೂ.100000ರ ಸಹಾಯಧನಯುಕ್ತ ಸಾಲ ಕಲ್ಪಿಸುತ್ತದೆ. ಹೆಚ್ಚುವರಿ ಸಾಲಗಳು ಅಗತ್ಯವಿದ್ದಲ್ಲಿ ಸಹಾಯಧನ ರಹಿತವಾಗಿ ನೀಡಲಾಗುತ್ತದೆ.

2.4 ಒಬ್ಬ ಎಲ್‌ಐಜಿ ವ್ಯಕ್ತಿಗೆ ಕನಷ್ಠ 40 ಚ.ಮೀ. ಇರುವ ಮನೆಗೆ ಗರಿಷ್ಠ ರೂ.1,60,000 ಅರ್ಹತೆ ಇರುತ್ತದೆ. ಆದಾಗ್ಯೂ ಸಹಾಯಧನವನ್ನು ರೂ. 1 ಲಕ್ಷದವರೆಗೆ ಮಾತ್ರ ಕೊಡಲಾಗುತ್ತದೆ. ಹೆಚ್ಚುವರಿ ಸಾಲ ಅಗತ್ಯವಿದ್ದಲ್ಲಿ ಸಹಾಯಧನ ರಹಿತವಾಗಿ ನೀಡಲಾಗುತ್ತದೆ.

**ಸಾಲದ ಮತ್ತು ಸಹಾಯಧನ ಮರುಭರಣದ ನಿಬಂಧನೆಗಳು**

2.5 ಈಡಬ್ಲ್ಯುಎಸ್ ಮತ್ತು ಎಲ್‌ಐಜಿಗೆ ಹೊಸ ಮನೆಯ ನಿರ್ಮಾಣ ಅಥವಾ ಆರ್ಜನೆಗಾಗಿ ಅರ್ಹತೆಯುಳ್ಳ ಮೊಬಲಗಿನ ಮೇಲೆ ಸಾಲದ ಪೂರ್ಣವಧಿಯವರೆಗೆ ಶೇ.5ರಷ್ಟು ಬಡ್ಡಿಯನ್ನು ವಿಧಿಸಲಾಗುತ್ತದೆ. ಸಹಾಯಧನವನ್ನು ಈ ಕೆಳಕಂಡಂತೆ ಲೆಕ್ಕಹಾಕಲಾಗುತ್ತದೆ.

2.5.1 ಈ ಸಹಾಯಧನದ ನಿವ್ವಳ ಪ್ರಸ್ತುತಮೌಲ್ಯವನ್ನು(ಎನ್‌ಪಿವಿ) (ವಾರ್ಷಿಕ ಶೇ.9ರ ಕಾಲ್ಪನಿಕ ರಿಯಾಯ್ತಿ (ಸರ್ಕಾರಿ ಭದ್ರತೆ ದರಕ್ಕೆ ಸಮನಾದದ್ದು) ಆಧಾರದ ಮೇಲೆ ಮತ್ತು ಸಾಲದ ಅವಧಿಗೆ ಮತ್ತು ಸಾಲದ ಕರಾರು ಆದಾಗ ವಿಧಿಸಲ್ಪಟ್ಟ ಬಡ್ಡಿಯ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ.

2.5.2 ಸಾಲಮರುಪಾವತಿಯ ಅವಧಿಯನ್ನು ಸಾಮಾನ್ಯವಾಗಿ 15–20 ವರ್ಷಗಳವರೆಗೆ ಅನುಮತಿಸಲಾಗುತ್ತದೆ.

2.5.3 ಈ ಕಾರ್ಯಯೋಜನೆಯ ಕೇಂದ್ರಕಾರ್ಯ ಸಂಸ್ಥೆಗಳು ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ (ಎನ್‌ಹೆಚ್‌ಬಿ) ಮತ್ತು ಗೃಹ ನಿರ್ಮಾಣ ಮತ್ತು ನಗರ ಅಭಿವೃದ್ಧಿ ಸಂಸ್ಥೆ ನಿಯಮಿತ (ಹುಡ್ಕೋ) ಈ ಕೇಂದ್ರಕಾರ್ಯ ಸಂಸ್ಥೆಗಳು ಸಾಲಗಾರನಿಗೆ ನೇರವಾಗಿ ಕೊಡುವುದಿಲ್ಲ, ಬದಲಾಗಿ ಸಾಲಗರಾಗಿ ಕಾರ್ಯಯೋಜನೆಯ ಭಾಗವಾಗಲು ಒಪ್ಪಿರುವ ಬ್ಯಾಂಕುಗಳು ಅಥವಾ ಗೃಹ ನಿರ್ಮಾಣ ಹಣಕಾಸು ಕಂಪೆನಿಗಳು (ಹೆಚ್‌ಎಫ್‌ಸೀಸ್) ಇವುಗಳ ಮೂಲಕ ಕೊಡುತ್ತದೆ. ಎನ್‌ಪಿವಿ ಸಹಾಯಧನವನ್ನು ಸರ್ಕಾರವು ಕಾರ್ಯಯೋಜನೆಯಲ್ಲಿ ಸೇರಿಕೊಂಡು ಸಾಲಿಗರು ಮಂಜೂರು ಮಾಡಿದ ಗೃಹಸಾಲಗಳ ಸಂಖ್ಯೆಯನ್ನು ಆಧರಿಸಿ ತ್ರೈಮಾಸಿಕವಾಗಿ ಮುಂಗಡವಾಗಿ ಕೇಂದ್ರ ಕಾರ್ಯಸಂಸ್ಥೆಗಳಿಗೆ ಬಿಡುಗಡೆ ಮಾಡುತ್ತದೆ.

2.5.4 ಎನ್‌ಪಿವಿ ಸಾಯಾಯಧನವನ್ನು ಸರ್ಕಾರವು ತನ್ನ ಕೇಂದ್ರ ಕಾರ್ಯ ಸಂಸ್ಥೆಗಳ ಮೂಲಕ ಸಾಲಿಗರಿಗೆ ಮೊದಲು ಬಂದವರ ಮತ್ತು ತ್ರೈಮಾಸಿಕ ಆಧಾರದ ಮೇಲೆ ಬಿಡುಗಡೆ ಮಾಡುತ್ತದೆ. ಇದನ್ನು

ಸಾಲಿಗ ಸಾಲಗಾರನ ಸಾಲದ ಅಸಲು ಮೊತ್ತದಿಂದ ಸಹಾಯಧನವನ್ನು ಕಳೆದುಕೊಂಡು ನೀಡುತ್ತಾನೆ, ಹಾಗು ನಿವ್ವಳ ಸಾಲ ಮೊಬಲಗಿನ ಮೇಲೆ ಒಪ್ಪಿಕೊಂಡ ಬಡ್ಡಿ ದರವನ್ನು ವಿಧಿಸುತ್ತಾನೆ.

2.5.5 ಒಪ್ಪಿಕೊಂಡ ಬಡ್ಡಿದರವನ್ನು ಬ್ಯಾಂಕುಗಳು ರೂ. 2 ಲಕ್ಷದವರೆಗೆ ಸಾಲ ನೀಡಲು ಇರುವ ರಿಸರ್ವ್‌ಬ್ಯಾಂಕ್ ಆಫ್ ಇಂಡಿಯಾದ ಮಾರ್ಗದರ್ಶನವನ್ನು ದೃಷ್ಟಿಯಲ್ಲಿಟ್ಟುಕೊಂಡು ಸಾಲ ಕೊಡುವ ಬ್ಯಾಂಕುಗಳು ನಿಗದಿ ಪಡಿಸುತ್ತವೆ. ಕಾರ್ಯಯೋಜನೆಯ ಚಾಲನಾ ಸಮಿತಿಯು ದರವನ್ನು ಪರಿವೀಕ್ಷಿಸುತ್ತಿರುತ್ತದೆ.

2.5.6 ಕೇಂದ್ರ ಕಾರ್ಯ ಸಂಸ್ಥೆಗಳು ಈ ಕಾರ್ಯಯೋಜನೆಯ ಸಾಲಿಗರ ಪಟ್ಟಿಯನ್ನು ಪ್ರಕಟಿಸುತ್ತದೆ. ಇದನ್ನು ಸಚಿವಾಲಯವು ರಚಿಸಿದ ಚಾಲನಾ ಸಮಿತಿಯು ಅನುಮೋದಿಸುತ್ತದೆ.

2.5.7 ಫಲಾನುಭವಿ ಸಾಲಗಾರರು ಸ್ಥಿರ ಅಥವಾ ಚರದರಗಳನ್ನು (ಸಾರ್ವಜನಿಕ ಸಾಲಿಗ ಸಂಸ್ಥೆಗಳು–ಪಿಎಲ್‌ಐಗಳು ಇದರ ಪರಿಣಾಮಗಳನ್ನು ಸ್ಪಷ್ಟವಾಗಿ ವಿವರಿಸುತ್ತಾರೆ) ಆಯ್ಕೆ ಮಾಡಬಹುದು. ಸ್ಥಿರದರಗಳು ಕನಿಷ್ಠ 5 ವರ್ಷಗಳಾದ ನಂತರ ಮರು ನಿಗದಿಗೊಳಿಸಲ್ಪಡುತ್ತದೆ; ಸ್ಥಿರದರಗಳನ್ನು ವಿಸ್ತರಿಸಿದರೆ ಬ್ಯಾಂಕುಗಳಿಗೆ/ವಸತಿ ಹಣಕಾಸು ಸಂಸ್ಥೆಗಳಿಗೆ ಶೆ. 1 ರಷ್ಟು ಹೆಚ್ಚುವರಿಯನ್ನು ವಿಧಿಸಲು ಅನುಮತಿಸಲಾಗಿದೆ.

2.6 ವಸತಿ ಘಟಕವನ್ನು ಅಡಮಾನದಲ್ಲಿ ಪ್ರಾಥಮಿಕ ಭದ್ರತೆಯಾಗಿ ಅಂಗೀಕರಿಸಬಹುದಾಗಿದೆ.ಆದಾಗ್ಯೂ ರೂ. 1 ಲಕ್ಷದವರೆಗೆ ಮತ್ತು ಒಳಗೊಂಡಂತೆ ಯಾವುದೇ ಜತೆ ಭದ್ರತೆ/ಮೂರನೇ ಪಕ್ಷಕಾರರ ಖಾತ್ರಿ ಇರುವುದಿಲ್ಲ. ಪೂರ್ವಸಂದಾಯದ ಯಾವುದೇ ವೆಚ್ಚಗಳನ್ನು ಅನುಮತಿಸುವುದಿಲ್ಲ.

2.7 ಈ ಕಾರ್ಯ ಯೋಜನೆಯು 11ನೇ ಪಂಚವಾರ್ಷಿಕ ಯೋಜನೆ (2007–12)ಯ ಕೊನೆಯ ವರ್ಷ 2012 ರಲ್ಲಿ ಮುಕ್ತಾಯವಾಗುತ್ತದೆ. ಆದಾಗ್ಯೂ ಕೊನೆಯ ವರ್ಷದಲ್ಲಿ ಮಂಜೂರಾದ ಸಾಲಗಳಿಗೂ ಮರುಪಾವತಿಯ ಅವಧಿ 20 ವರ್ಷಗಳವರೆಗೆ ಇರುತ್ತದೆ.

2.8 11ನೇ ಯೋಜನೆಯ ಕೊನೆಯ ವರ್ಷದಲ್ಲಿ ಅಂದರೆ 2011–2012ರಲ್ಲಿ ಈ ಕಾರ್ಯಯೋಜನೆಯನ್ನು ಸ್ವತಂತ್ರವಾಗಿ ಪರಿವೀಕ್ಷಿಸಲಾಗುತ್ತದೆ ಮತ್ತು ಮೌಲ್ಯ ಮಾಪನ ಮಾಡಲಾಗುತ್ತದೆ. ಇದರ ಆಧಾರದ ಮೇಲೆ ಕಾರ್ಯಯೋಜನೆಯನ್ನು ಮುಂದುವರಿಸುವ ಬಗ್ಗೆ ನಿರ್ಧಾರವನ್ನು ಮಾಡಲಾಗುತ್ತದೆ.

## ಫಲಾನುಭವಿಗಳ ಆಯ್ಕೆ

2.9 ಕಾರ್ಯಯೋಜನೆ ಮೇರೆಗೆ ಸಾಲ ತೆಗೆದುಕೊಳ್ಳುವವರು ಇಡಬ್ಲ್ಯುಎಸ್ ಅಥವಾ ಎಲ್‌ಐಜಿ ಆಗಿರಬೇಕು, ಹಾಗು ಮನೆ ನಿರ್ಮಿಸಲು ಒಂದು ನಿವೇಶನವನ್ನು ಹೊಂದಿರಬೇಕು ಅಥವಾ ಖರೀದಿಯೋಗ್ಯ ಮನೆಯನ್ನು ಗುರುತಿಸಿರಬೇಕು. ಸಾಲಗಾರರು ಕಾರ್ಯಯೋಜನೆಯ ಅಡಿಯಲ್ಲಿ ನೇರವಾಗಿ ಸಾಲಿಗರನ್ನು ಭೇಟಿ ಮಾಡಿ ಸಾಲದ ಬಗ್ಗೆ ಮಾತುಕತೆ ನಡೆಸಲು ಮುಕ್ತರು. ಆದಾಗ್ಯೂ ಅಂತಹ ಸಾಲಗಾರರು ಕಡಿಮೆ ಎಂದು ಭಾವಿಸಲಾಗಿದೆ. ಬಹುತೇಕ ಸಾಲಗಾರರು ಮತ್ತು ಸಾಲಿಗರು ಭೂಮಿ ಹೊಂದಿರುವ ಸಾಲಿಗರನ್ನು ಗುರುತಿಸಲು ಕಾಗದ ಪತ್ರಗಳನ್ನು ಸಿದ್ಧಪಡಿಸಲು ಮತ್ತು ಸಾಲಿಗರೊಡನೆ ಸಂಪರ್ಕಸಾಧಿಸಲು ಸರ್ಕಾರಗಳು/ ನಗರ ಸ್ಥಳೀಯಸಂಸ್ಥೆಗಳು (ಯುಎಲ್‌ಬಿಗಳು) ಇವರ ಮಧ್ಯೆಪ್ರವೇಶವನ್ನು ಅಪೇಕ್ಷಿಸುತ್ತಾರೆ.

2.10 ಆದ್ದರಿಂದ ಅವರು ಬ್ಯಾಂಕ್‌ನಿಂದಸಾಲ ತೆಗೆದುಕೊಳ್ಳಲು ಬೇಕಾದ ಕಾಗದ ಪತ್ರಗಳ ಸಿದ್ಧತೆ ಮತ್ತು ಕಾರ್ಯವಿಧಾನದಲ್ಲಿ ಫಲಾನುಭವಿಗಳಿಗೆ ನೆರವು ನೀಡಲು ಫಲಾನುಭವಿಗಳ ಗುರುತಿಸುವಿಕೆಯನ್ನು ಯುಎಲ್‌ಬಿ ಅಥವಾ ರಾಜ್ಯ ಸರ್ಕಾರ ಈ ಉದ್ದೇಶಕ್ಕಾಗಿ ಗುರುತಿಸಿದ ಸ್ಥಳೀಯ ಕಾರ್ಯಸಂಸ್ಥೆಯು

ಕೈಗೆತ್ತಿಕೊಳ್ಳುತ್ತದೆ. ಫಲಾನುಭವಿಯು ಸಾಲಿಗರನ್ನು ನೇರವಾಗಿ ಭೇಟಿ ಮಾಡಿದಾಗ ಅವನು/ಳು ತನ್ನ ಸಾಲದ ಅರ್ಜಿಯನ್ನು ಯುಎಲ್‌ಬಿ ಅಥವಾ ರಾಜ್ಯವು ಗುರುತಿಸಿದ ಸ್ಥಳೀಯ ಕಾರ್ಯಸಂಸ್ಥೆಯ ಮೂಲಕ ಕಳಿಸಿಕೊಡಲು ಅವರನ್ನು ಸಂಪರ್ಕಿಸಲು ಮಾರ್ಗದರ್ಶನ ನೀಡಲಾಗುತ್ತದೆ.

2.11 ಫಲಾನುಭವಿಗಳನ್ನು ಗುರುತಿಸುವಲ್ಲಿ ಯುಎಲ್‌ಬಿ ಅಥವಾ ರಾಜ್ಯ ಸರ್ಕಾರವು ಗುರುತಿಸಿದ ಕೇಂದ್ರ ಕಾರ್ಯಸಂಸ್ಥೆಯು ಸಾಧ್ಯವಾದಷ್ಟೂ ಮಟ್ಟಿಗೆ ಮಂಜೂರಾದ ಸಮೂಹದ ಭೂಮಿಯನ್ನು ಗುರುತಿಸಬೇಕು. ಇದರಿಂದ ಕಾರ್ಯಯೋಜನೆಯ ಮೂಲಕ ಅಂತಹ ಸಮೂಹಭೂಮಿಯೊಳಗೆ ಮನೆ ನಿರ್ಮಾಣವನ್ನು ಬೆಂಬಲಿಸುವುದು ಸಾಧ್ಯವಾಗುತ್ತದೆ. ಈ ಕಾರ್ಯಯೋಜನೆಯ ಅಡಿಯಲ್ಲಿ ಆದ್ಯತೆಯನ್ನು (ಫಲಾನುಭವಿಗಳು ಇಡಬ್ಲ್ಯುಎಸ್ ಅಥವಾ ಎಲ್‌ಐಜಿ ಆಗಿರುವುದಕ್ಕೆ ಒಳಪಟ್ಟಂತೆ) 2001 ರ ಜನಗಣತಿ ಅವಧಿಯ ನಗರ/ನಗರ ಪ್ರದೇಶದ ಒಟ್ಟು ಜನಸಂಖ್ಯೆಯಲ್ಲಿ ಅವರ ಪ್ರಮಾಣವನ್ನು ಆಧರಿಸಿ ಈ ಕೆಳಕಂಡವರಿಗೆ ಕೊಡಬೇಕು.

i. ಪರಿಶಿಷ್ಟ ಜಾತಿ
ii. ಪರಿಶಿಷ್ಟ ಪಂಗಡ
iii. ಅಲ್ಪ ಸಂಖ್ಯಾತರು
iv. ವಿಕಲತೆ ಯುಳ್ಳ ವ್ಯಕ್ತಿಗಳು ಮತ್ತು
v. ಮಹಿಳಾ ಫಲಾನುಭವಿಗಳು.

2.12 ಸಹಕಾರಿ ಗುಂಪು ಮನೆಗಳ ಸಂಘಗಳನ್ನು ರಚಿಸಿಕೊಳ್ಳಲು ಯೋಜಿಸಿರುವ ಅರ್ಜಿದಾರರಿಗೆ ಅಥವಾ ನೌಕರರ ಕಲ್ಯಾಣ ಗೃಹ ಸಂಘ , ಕಾರ್ಮಿಕರ ಗೃಹ ಸಂಘ ಮುಂತಾದ ಸಂಘಟನೆಗಳಿಗೆ ಆದ್ಯತೆ ನೀಡಬೇಕು. ಅಲ್ಲದೆ ಸಾಧ್ಯವಿರುವೆಡೆಗಳಲ್ಲಿ ಅಂತಹ ಸಹಕಾರಿ ಸಂಘಗಳು ಭೂಮಿಯ ವೆಚ್ಚವನ್ನು ಫಲಾನುಭವಿಗಳು ತಮ್ಮೊಳಗೆ ಹಂಚಿಕೊಂಡು 1 + 3 ಮಹಡಿಯ ಕಟ್ಟಡಗಳ ಮೂಲಕ ಮನೆ ನಿರ್ಮಿಸಿಕೊಳ್ಳಲು ಅವರನ್ನು ಉತ್ತೇಜಿಸಬೇಕು. ಆದಾಗ್ಯೂ ಇದೇನು ಕಡ್ಡಾಯವಲ್ಲ. ಕಾರ್ಯಯೋಜನೆಯ ಅಡಿಯಲ್ಲಿ ವ್ಯಕ್ತಿಗತ ಮತ್ತು ಗುಂಪು ಮನೆ ಸಾಲಗಾರರು ಉಭಯರೂ ಅರ್ಹರಿರುತ್ತಾರೆ.

2.13 ರಾಜ್ಯ/ಸಂಸ್ಥೆಗಳು/ಬ್ಯಾಂಕುಗಳು ಆಯ್ಕೆ ಮಾಡಿದ ಸಾಲಗಾರರ ಸಂಖ್ಯೆ ಇಡಬ್ಲ್ಯುಎಸ್ ಮತ್ತು ಎಲ್‌ಐಜಿ ವರ್ಗಗಳಿಗೆ ಅನುಕ್ರಮವಾಗಿ 70:30ರ ಅನುಪಾತದಲ್ಲಿರಬೇಕು. ಸಾಲದ ಅರ್ಜಿಯನ್ನು ನೇರವಾಗಿ ಅಥವಾ ಈ ಉದ್ದೇಶಕ್ಕಾಗಿ ರಾಜ್ಯದಿಂದ ಗುರುತಿಸಲ್ಪಟ್ಟ ಕಾರ್ಯಸಂಸ್ಥೆಯ ಮೂಲಕ ಸಲ್ಲಿಸಬಹುದು. ಅವರುಗಳು ಅರ್ಜಿಯೂ ಪೂರ್ಣವಾಗಿದ್ದು ಆವಶ್ಯಕ ಪ್ರಮಾಣೀಕರಣವನ್ನು ಹೊಂದಿದೆಯೆಂಬುದನ್ನು ಖಾತ್ರಿಪಡಿಸುತ್ತಾರೆ.

2.14 ಕಾಗದ ಪತ್ರಗಳು ಸಾಲಿಗರ ಕಾರ್ಯ ವಿಧಾನದ ಅಗತ್ಯಕ್ಕೆ ಅನುಸಾರವಾಗಿ ಇರಬೇಕು.

2.15 ಸಾಲಿಗರು ತಮ್ಮ ಹಣ ಸಂಭವತೆಯ ನಿರ್ಧರಣೆ ಮತ್ತು ಕಾರ್ಯವಿಧಾನದ ಅಗತ್ಯತೆಗಳಿಗನುಸಾರವಾಗಿ ಸಾಲವನ್ನು ಮಂಜೂರು ಮಾಡುತ್ತಾರೆ.

2.16 ಮನೆಗಳ ನಿರ್ಮಾಣಕ್ಕಾಗಿ ಸಾಲ ಪಡೆಯುವ ಫಲಾನುಭವಿಗಳಿಗೆ ನಿರ್ಮಾಣದ ವೇಗಕ್ಕೆ (ವಾಸ್ತವದಲ್ಲಿ ಒಂದು ವರ್ಷದೊಳಗೆ ಮುಗಿಯಬೇಕು) ಹೊಂದಿಕೊಂಡಂತೆ ಸಾಲಬಿಡುಗಡೆ ಮಾಡಲಾಗುವುದು. ಸಾಲಿಗ ಬ್ಯಾಂಕು ನಿರ್ಮಾಣದ ಪ್ರಗತಿಯನ್ನು ಪರಿವೀಕ್ಷಿಸುತ್ತಿರುತ್ತದೆ.

**ಚಾಲನಾ ಸಮಿತಿ**

3.1 ಗೃಹ ಮತ್ತು ನಗರ ಬಡತನ ನಿವಾರಣಾ ಸಚಿವಾಲಯದ ಕಾರ್ಯದರ್ಶಿಯ ಅಧ್ಯಕ್ಷತೆಯಲ್ಲಿ

ಮತ್ತು ಆಯ್ಕೆ ಮಾಡಿದ ರಾಜ್ಯ ಸರ್ಕಾರಗಳ ಸದಸ್ಯರು, ಹಿರಿಯ ಹಣಕಾಸು ಸಚಿವಾಲಯ, ಭಾರತೀಯ ರಿಸರ್ವ್ ಬ್ಯಾಂಕ್, ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್, ಹುಡ್ಕೋ ಇವುಗಳ ಕಾರ್ಯನಿರ್ವಾಹಕ ಅಧಿಕಾರಿಗಳು, ಹೆಸರಾಂತ ಬ್ಯಾಂಕರುಗಳು ಮತ್ತು ಸಾಮಾಜಿಕ ಸಂಶೋಧಕರು. ನಗರ ಗೃಹ ನರ್ಮಾಣ ಕ್ಷೇತ್ರ, ಹಣಕಾಸು ಮತ್ತು ಸಹಚರಕ್ಷೇತ್ರಗಳ ಕಾರ್ಯಕರ್ತರು ಇವರಿಂದ ಕೂಡಿದ ಒಂದು ಚಾಲನಾ ಸಮಿತಿಯನ್ನು ಗೃಹ ಸಂಘವನ್ನು ಸ್ಥಾಪಿಸುತ್ತದೆ. ಇದು ಕಾರ್ಯಾಚರಣೆಯ ಸೂಚನೆಗಳನ್ನು ಸಲಹೆ ಮಾಡಲು ಮತ್ತು ನರ್ಧರಿಸಲು, ಕಾರ್ಯಯೋಜನೆಯ ಅನುಷ್ಠಾನವನ್ನು ಪರಿವೀಕ್ಷಿಸಲು ಯೋಜನೆಯ ಅನುಷ್ಠಾನದಲ್ಲಿ ಕಾರ್ಯಯೋಜನೆಯ ಮಾರ್ಗದರ್ಶನಗಳಿಗೆ ಒಳಪಟ್ಟಂತೆ ಆವಶ್ಯಕ ಹೊಂದಾಣಿಕೆಗಳನ್ನು ಮಾಡಿಕೊಳ್ಳಲು ಸಲಹೆ ನೀಡುವ ಜವಾಬ್ದಾರಿಯನ್ನು ಹೊಂದಿರುತ್ತದೆ.

3.2 ಸಹಾಯಧನದ ವಿತರಣೆಯನ್ನು ಚಾಲನಾ ಸಮಿತಿಯು ನಿರ್ಧರಿಸಿದಂತೆ ರಾಗೃಬ್ಯಾಂ/ ಹುಡ್ಕೋ ವಿತರಿಸುತ್ತದೆ. ಕಾಲಕಾಲಕ್ಕೆ ಸಮಿತಿಯು ಕಾರ್ಯಚರಣೆಯಿಂದಾದ , ಹಣಕಾಸಿನ ವಿಷಯದ ಅನುಭವ ಇವನ್ನು ಆಧರಿಸಿ ಕಾರ್ಯವ್ಯವಸ್ಥೆಯನ್ನು ಪುನರೀಕ್ಷಿಸಬಹುದು. ನಿಧಿಯ ನಿರ್ವಹಣೆಯ ಕ್ರಮವಿಧಾನಗಳನ್ನು ಮತ್ತು ಕಾರ್ಯವ್ಯವಸ್ಥೆಯನ್ನು ಬದಲಾಯಿಸಲು/ಪರಿಷ್ಕರಿಸಲು ಸಮಿತಿಗೆ ಅಧಿಕಾರ ನೀಡಲಾಗಿದೆ.

3.3 ಎನ್‌ಜಿಓಗಳು ಸಮುದಾಯಾಧಾರಿತ ಸಂಘಟನೆಗಳು (ಸಿಬಿಓಗಳು) ಸಣ್ಣ ಹಣಕಾಸು ಸಂಸ್ಥೆಗಳು ಸ್ವಸಹಾಯ ಗುಂಪುಗಳು (ಎಸ್‌ಹೆಚ್‌ಜಿಗಳು) ಮತ್ತು ನೆರೆಹೊರೆ ಸಮಿತಿಗಳು ಕಾರ್ಯಯೋಜನೆಯೊಂದಿಗೆ ಸಾಹಚರ್ಯ ಹೊಂದಲು ಚಾಲನಾಸಮಿತಿಯು ಪ್ರತ್ಯೇಕ ಮಾರ್ಗದರ್ಶನಗಳನ್ನು ರೂಪಿಸುತ್ತದೆ.

## 4. ಕೇಂದ್ರ ಸರ್ಕಾರದ ಪಾತ್ರ

ಗೃಹ ನಿರ್ಮಾಣ ಮತ್ತು ನಗರ ಬಡತನ ನಿವಾರಣಾ ಸಚಿವಾಲಯವು (ಗೃ ಮತ್ತು ನಬನಸ):

4.1 ಕಾರ್ಯಯೋಜನೆಯ ಫಲಿತವನ್ನು ಪುನರೀಕ್ಷಿಸುವುದು ಮತ್ತು ಪರಿವೀಕ್ಷಿಸುವುದನ್ನು ಒಳಗೊಂಡಂತೆ ಕಾರ್ಯಯೋಜನೆಯನ್ನು ಅನುಷ್ಠಾನ ಮಾಡುತ್ತದೆ.

4.2 ಕೇಂದ್ರ ಕಾರ್ಯ ಸಂಸ್ಥೆಗಳಿಗೆ ಅಂದರೆ ರಾಷ್ಟ್ರೀಯ ಗೃಹ ನಿರ್ಮಾಣ ಬ್ಯಾಂಕ್ ಮತ್ತು ಹುಡ್ಕೋಗಳಿಗೆ ಕೋರಿಕೆ ಮೇರೆಗೆ ಮತ್ತು ತ್ರೈಮಾಸಿಕ ಆಧಾರ ಮೇಲೆ ಸಹಾಯಧನವನ್ನು ಬಿಡುಗಡೆ ಮಾಡುತ್ತದೆ. ಎರಡನೆ ಮತ್ತು ತರುವಾಯದ ಕಂತುಗಳನ್ನು ಆವರ್ತನೆಯ ಆಧಾರದ ಮೇಲೆಮತ್ತು ಶೇ. 70 ರಷ್ಟು ಬಳಕೆ ಆಧಾರದ ಮೇಲೆ ಬಿಡುಗಡೆ ಮಾಡುತ್ತದೆ.

4.3 ಮಾಧ್ಯಮ ಆಂದೋಳನ ಮತ್ತು ಜಾಗೃತಿ ಕಾರ್ಯಗಳನ್ನು ಕೈಗೊಳ್ಳುತ್ತದೆ.

4.4 ಕಾರ್ಯಯೋಜನೆಯನ್ನು ಪರಿವೀಕ್ಷಿಸಲು ರಾಷ್ಟ್ರೀಯ ಮಟ್ಟದಲ್ಲಿ ಪರಿವೀಕ್ಷಣಾ ಮಾಹಿತಿ ವ್ಯವಸ್ಥೆಯನ್ನು (ಎಂಐಎಸ್) ವೃದ್ಧಿಸುತ್ತದೆ.

## 5. ರಾಜ್ಯ ಸರ್ಕಾರಗಳ/ ನಗರ ಸ್ಥಳೀಯ ನಿಕಾಯಗಳ (ನಸ್ಥನಿಗಳು) ಪಾತ್ರ

5.1 ರಾಜ್ಯ ಸರ್ಕಾರಗಳು / ನಸ್ಥನಿಗಳು:

5.1.1 ಸ್ಥಳೀಯ ಮಟ್ಟದ ಕೇಂದ್ರ ಕಾರ್ಯಸಂಸ್ಥೆಯನ್ನು ಗುರುತಿಸಿ ಹಾಗೆ ಗುರುತಿಸಲ್ಪಟ್ಟ ಕೇಂದ್ರ ಕಾರ್ಯ ಸಂಸ್ಥೆ ಬಗ್ಗೆ ಗೃ ಮತ್ತು ನಬನಿಸಂಗೆ ಮಾಹಿತಿ ನೀಡುತ್ತದೆ. ಹಾಗೆ ಗುರುತಿಸಲ್ಪಟಂತಹ

ಕೇಂದ್ರ ಕಾರ್ಯಸಂಸ್ಥೆಯು ಮನೆ ನಿರ್ಮಿಸಲು ಅಥವಾ ಕೊಳ್ಳಲು ಸಾಲ ಬಯಸುವ ಫಲಾನುಭವಿಗಳನ್ನು ಗುರುತಿಸಬೇಕು ಮತ್ತು ಸಂಘಟಿಸಬೇಕು.

5.1.2 ರಾಜ್ಯ ಸರ್ಕಾರಗಳು / ನಸ್ಥನಿಗಳು ಅನುಷ್ಠಾನ ಮಾಡುತ್ತಿರುವ ನಗರ ಪರಿಮಿತಿಯೊಳಗಿನ ತೋಟದ ಮನೆ ಫಲಾನುಭವಿಗಳು ಒಳಗೊಂಡಂತೆ ಭೂಮಿ ಹೊಂದಿದ್ದು ತಾವೇ ಮನೆಗಳನ್ನು ನಿರ್ಮಿಸಿಕೊಳ್ಳಲು ಸಿದ್ಧವಿರುವ ಫಲಾನುಭವಿಗಳನ್ನು ಗುರುತಿಸಲು ಮತ್ತು ಪ್ರೇರಿಸಲು ಸ್ಥಳೀಯ ಮಟ್ಟದ ಕೇಂದ್ರ ಕಾರ್ಯ ಸಂಸ್ಥೆಗಳಿಗೆ ನೆರವು ನೀಡುತ್ತದೆ. ಈ ರೀತಿ ಫಲಾನುಭವಿಗಳನ್ನು ಗುರುತಿಸುವಾಗ ಕೇಂದ್ರಕಾರ್ಯಸಂಸ್ಥೆ/ ನಸ್ಥನಿವು ಸಮೂಹ ಪದ್ಧತಿಯನ್ನು ಅನುಸರಿಸುವುದನ್ನು ಹಾಗು ಸಮೂಹ ಮನೆಗಳ ಸಹಕಾರಿ ಸಂಘಗಳನ್ನು ಮಾಡಿಕೊಳ್ಳಲು ಪ್ರೋತ್ಸಾಹಿಸಬೇಕು ಮತ್ತು ನೆರವು ನೀಡಬೇಕು.

5.1.3 ಫಲಾನುಭವಿಗಳು ಕಾರ್ಯಯೋಜನೆಯ ವಿವರಗಳನ್ನು ಅರ್ಥಮಾಡಿಕೊಳ್ಳಲು ಸಮಾನ ಮಾಸಿಕ ಕಂತುಗಳ (ಇಎಂಐ –ಸಮಾಕಂ) ಪ್ರಮಾಣವನ್ನು ತಿಳಿಯಲು ಬ್ಯಾಂಕಿನ ಕಾರ್ಯವಿಧಾನ ಮತ್ತು ಕಾಗದ ಪತ್ರಗಳನ್ನು ಮತ್ತು ಅಗತ್ಯವಾದ ಸಾಲ ಪಡೆಯಲು ದೃಢೀಕರಣ ಪತ್ರಗಳನ್ನು ಪಡೆಯಲು ಮತ್ತು ಮರುಪಾವತಿ ರಸೀತಿ ಪಡೆಯಲು ನೇರವಾಗುವಂತೆ ಒಬ್ಬ ಸಾಮಾಜಿಕ ಕಾರ್ಯಕರ್ತನಿರುವ ಕೋಶವನ್ನು /ಮೇಜನ್ನು ರಚಿಸುತ್ತದೆ.

## 5.2 ರಾಜ್ಯ ಸರ್ಕಾರಗಳು/ ನಸ್ಥನಿಗಳು ಮತ್ತು:

5.2.1 ಚಾಲನಾ ಸಮಿತಿಯ ಮಾರ್ಗದರ್ಶನದ ಪ್ರಕಾರ ಫಲಾನುಭವಿಗಳನ್ನು ಗುರುತಿಸಲು ಮತ್ತು ಪರಿಶೀಲನೆಯನ್ನು ಕೈಗೆತ್ತಿಕೊಳ್ಳುವಲ್ಲಿ ಸಾಲಿಗರಿಗೆ ನೆರವು ನೀಡುತ್ತದೆ.

5.2.2 ಹೊಸ ಕೊಳೆಗೇರಿಗಳು ನಿರ್ಮಾಣವಾಗುವುದನ್ನು ತಡೆಯಲು ಮೂಲ ರಚನಾ ಸೇವೆಗಳು ನೆರವು ನೀಡಲಾದ ಗೃಹ ನಿವೇಶನಗಳಲ್ಲಿ ಲಭ್ಯವಿರುವಂತೆ ಖಾತ್ರಿ ಪಡಿಸಿಕೊಳ್ಳುತ್ತದೆ.

5.2.3 ಅರ್ಹಫಲಾನುಭವಿಗಳ ಅರ್ಜಿಗಳನ್ನು ಹಣಕಾಸು ಸಂಸ್ಥೆಗಳಿಗೆ ಕಳಿಸಿಕೊಡುತ್ತದೆ.

5.2.4 ಸಿಫಾರಸು ಮಾಡಲ್ಪಟ್ಟ ಅರ್ಜಿಗಳ ಸಂಖ್ಯೆ , ಮಂಜೂರಾದ ಅರ್ಜಿಗಳು, ಬಟವಾಡೆ ಮಾಡಲ್ಪಟ್ಟು ಸಾಲ ಮೊಬಲಗು, ಮತ್ತು ತಿರಸ್ಕೃತ ಅರ್ಜಿಗಳು ಮುಂತಾದುವುಗಳನ್ನು ಸೂಚಿಸಲು ನಗರ/ ಜಿಲ್ಲಾ ಮತ್ತು ರಾಜ್ಯ ಮಟ್ಟದಲ್ಲಿ ವೃದ್ಧಿಸಲಾಗುವ ಮಾಹಿತಿ ಪರಿವೀಕ್ಷಣೆ ವ್ಯವಸ್ಥೆಗೆ ಅನುಸಾರವಾಗಿ (ಮಾಪವ್ಯ) ದತ್ತಾಂಶವನ್ನು ನಗರ/ ಜಿಲ್ಲಾಮಟ್ಟಗಳಲ್ಲಿ ಪರಿವೀಕ್ಷಿಸುತ್ತದೆ.

5.2.5 ಭಾರತ ಸರ್ಕಾರವು ವೃದ್ಧಿಸಿದ ಮಾಪವ್ಯ ಯ ಆಧಾರದ ಮೇಲೆ ತ್ರೈಮಾಸಿಕವಾಗಿ ವರದಿಗಳನ್ನು ತಯಾರಿಸಿ ಗೃ ಮತ್ತು ನಬನಸ ಕ್ಕೆ ಕಳಿಸಿಕೊಡುತ್ತದೆ.

5.3 ರಾಜ್ಯ ಸರ್ಕಾರವು ಮಾಧ್ಯಮ ಆಂದೋಳನ ಹಾಗು ಕಾರ್ಯಯೋಜನೆ ಸಾಮಗ್ರಿಯ ಮುದ್ರಣ ಮತ್ತು ವಿತರಣೆಯನ್ನು ಕೈಗೆತ್ತಿಕೊಳ್ಳುತ್ತದೆ.

## 6. ಕೇಂದ್ರ ಸರ್ಕಾರದ ಕೇಂದ್ರ ಕಾರ್ಯಸಂಸ್ಥೆಗಳ ಪಾತ್ರ

6.1 ರಾಷ್ಟ್ರೀಯ ಗೃಹ ನರ್ಮಾಣ ಬ್ಯಾಂಕ್ (ರಾಗೃಬ್ಯಾಂ) ಮತ್ತು ಗೃಹ ನಿರ್ಮಾಣ ಮತ್ತು ನಗರಾಭಿವೃದ್ಧಿ ಸಂಸ್ಥೆ, ನಿಯಮಿತ (ಹುಡ್ಕೋ) ಇವುಗಳು (ಸಹಾಯಧನದ ಬಟವಾಡೆ ಮತ್ತು ಪ್ರಗತಿಯ ಪರಿವೀಕ್ಷಣೆಯ) ಕೇಂದ್ರ ಸರ್ಕಾರದ ಕೇಂದ್ರ ಕಾರ್ಯಸಂಸ್ಥೆಗಳಾಗಿರುತ್ತವೆ. ರಾಗೃಬ್ಯಾಂ / ಹುಡ್ಕೋ ಇವು ಚಾಲನಾ ಸಮಿತಿಯ ಅನುಮೋದನೆಯೊಂದಿಗೆ ಸಾಲಿಗ ಸಂಸ್ಥೆಗಳ ಪಟ್ಟಿ ಮಾಡುತ್ತದೆ.

ಇವುಗಳು ಕಾರ್ಯಯೋಜನೆಯ ಅಡಿಯಲ್ಲಿ ಸಾಲವನ್ನು ಬಟವಾಡೆ ಮಾಡುತ್ತವೆ.

6.2 ರಾಗೃಬ್ಯಾಂ (ಹುಡ್ಕೋ ಇವು ನಿಪ್ರಮೌ ಆಧಾರಿತ ಸಹಾಯಧನವನ್ನು ಬ್ಯಾಂಕುಗಳಿಗೆ/ ಗೃಹ ಸಾಲ ಸಂಸ್ಥೆಗಳಿಗೆ ಬಿಡುಗಡೆ ಮಾಡುತ್ತವೆ. ಇವುಗಳ ಸೇವೆಯನ್ನು ಚಾಲನಾ ಸಮಿತಿಯು ನಿರ್ಧರಿಸಿದಂತೆ ತ್ರೈಮಾಸಿಕ ಆಧಾರದ ಮೇಲೆ ಪಡೆದುಕೊಳ್ಳುತ್ತದೆ.

6.3 ಬ್ಯಾಂಕುಗಳು / ಗೃಸಾಸಂ ಗಳ ಬಳಕೆ/ ಅಂತ್ಯದ ಬಳಕೆ ಪ್ರಮಾಣ ಪತ್ರಗಳ ಆಧಾರದ ಮೇಲೆ ರಾಗೃಬ್ಯಾಂ / ಹುಡ್ಕೋ ನಿಯಮಿತವಾದ ಪ್ರಪತ್ರದಲ್ಲಿ ಈ ಸಂಬಂಧದ ಮಾರ್ಗದರ್ಶನದಂತೆ ಬಳಕೆ ಪ್ರಮಾಣ ಪತ್ರವನ್ನು ಗೃ ಮತ್ತು ನಬನಸ ಕ್ಕೆ ಕಳಿಸಿಕೊಡುತ್ತದೆ.

6.4 ರಾಗೃಬ್ಯಾಂ /ಹುಡ್ಕೋ ಕಾರ್ಯಯೋಜನೆಯ ಪೂರ್ಣಾವಧಿಯವರೆಗೆ ನಿಪ್ರಮೌ ಆಧಾರಿತ ಸಹಾಯಧನದ ಮೊಬಲಗುಗಳ ಪರಿವೀಕ್ಷಣೆ ಮತ್ತು ದತ್ತಾಂಶ ಸಂಗ್ರಹಣೆಗೆ ಜವಾಬ್ದಾರನಾಗಿರುತ್ತದೆ.

6.5 ರಾಗೃಬ್ಯಾಂ ಮತ್ತು ಹುಡ್ಕೋ ಈ ಕೆಳಕಂಡ ರೀತಿಯಲ್ಲಿ ಸಹಾಯಧನ ವನ್ನು ವಹಿಸಿಕೊಡುತ್ತದೆ.

6.5.1 3 ತಿಂಗಳ ಕಾಲಾವಧಿಯಲ್ಲಿ ಇಡಬ್ಲ್ಯೂ ಮತ್ತು ಎಲ್ಐಜಿ ಫಲಾನುಭವಿಗಳಿಗೆ ಒಂದು ಪ್ರಾಥಮಿಕ ಸಾಲಿಗ ಸಂಸ್ಥೆಯು ಬಟವಾಡೆ ಮಾಡಿದ ಒಟ್ಟು ಸಾಲಕ್ಕೆ ಸಂಬಂಧಿಸಿದಂತೆ ಮಾಹಿತಿಯನ್ನು ಸ್ವೀಕರಿಸಿದ ಮೇಲೆ ರಾಗೃಬ್ಯಾಂ ಅಥವಾ ಹುಡ್ಕೋ ಅವರಿಗೆ ಪ್ರತಿ ತ್ರೈಮಾಸಿಕ ಕೊನೆಯಲ್ಲಿ ಸಹಾಯಧನವನ್ನು ನೇರವಾಗಿ ಬಿಡುಗಡೆ ಮಾಡುತ್ತದೆ.

6.5.2 ಮನೆ ನಿರ್ಮಾಣ ಅಥವಾ ಆರ್ಜನೆಯ ಸಲುವಾಗಿ ಸಾಲದ ಗರಿಷ್ಠ ಮೊತ್ತ 1 ಲಕ್ಷದವರೆಗೆ ಇಡಬ್ಲ್ಯೂಎಸ್ ಮತ್ತು ಎಲ್ಐಜಿಗೆ ಸಾಲದ ಪೂರ್ಣಾವಧಿಯವರೆಗೆ ಸಹಾಯಧನವು ಶೇ. 5 ರಷ್ಟು ಇರುತ್ತದೆ. ನಿವ್ವಳ ಪ್ರಸ್ತುತ ಮೌಲ್ಯ (ನಿಪ್ರಮೌ) ಸಹಾಯಧನವು ಸಾಲ ನೀಡುವವರಿಗೆ ಮೊದಲು ಬಂದವರಿಗೆ ತ್ರೈಮಾಸಿಕ ಆಧಾರದ ಮೇಲೆ ಕೊಡಲ್ಪಡುತ್ತದೆ. ಸಾಲಿಗನಗೆ ಕೊಡಲ್ಪಟ್ಟ ನಿಪ್ರಮೌ ಸಹಾಯಧನವನ್ನು ಸಾಲಗಾರನ ಸಾಲದ ಅಸಲು ಮೊತ್ತದಲ್ಲಿ ಕಳೆದುಕೊಳ್ಳಲಾಗುತ್ತದೆ. ಆ ತರುವಾಯ ಸಾಲಗಾರನು ಸಾಲದ ಪೂರ್ಣಾವಧಿಯವರೆಗೆ ಒಂದು ಅಂಗೀಕೃತ ಕರಾರು ಸಹಿತದ ದರದಲ್ಲಿ ಬ್ಯಾಂಕುಗಳು/ಗೃಹ ಹಣಕಾಸು ಸಂಸ್ಥೆಗಳಿಗೆ ಬಡ್ಡಿ ಸಂದಾಯ ಮಾಡಬೇಕಾಗುತ್ತದೆ.

6.5.3 ರಾಗೃಹ ಮತ್ತು ಹುಡ್ಕೋ ಪೂರ್ವೋಕ್ತ ಸಹಾಯಧನಕ್ಕೆ ಅನುಸಾರವಾಗಿ ಹಣಕಾಸು ನೀಡಿದ ಮನೆಗಳ ನಿರ್ಮಾಣದ ಪರಿವೀಕ್ಷಣೆಯನ್ನು ತಮ್ಮ ತಮ್ಮ ಅಧಿಕಾರ ವ್ಯಾಪ್ತಿಯಲ್ಲಿ ಮಾಡುತ್ತವೆ. ಇದನ್ನು ಮನೆ ನಿರ್ಮಾಣದ ಅವಧಿಯಲ್ಲಿ ವ್ಯಯಿಸಿದ ಮೊತ್ತ ಮತ್ತು ಕಟ್ಟಡದ ಗುಣಮಟ್ಟ ಇವುಗಳನ್ನು ಪರಿಶೀಲಿಸುವ ಸಲುವಾಗಿ ಅವರ ಅಧಿಕಾರಿಗಳು ಸೂಕ್ತವಾದಂತೆ ಸ್ಥಳಕ್ಕೆ ಭೇಟಿಕೊಡುವ ಮೂಲಕ ಮಾಡುತ್ತದೆ.

6.5.4 ಪೂರ್ವೋಕ್ತ ನಾಮಾಂಕಿತ ಸಂಸ್ಥೆಗಳು, ಪ್ರಾಥಮಿಕ ಸಾಲಿಗ ಸಂಸ್ಥೆಗಳು ನಿನಿರ್ಮಾಣ ಪ್ರಾರಂಭಿಸಿ ಒಂದು ವರ್ಷದ ಅವಧಿಯೊಳಗೆ ಪೂರ್ಣವಾದ ಮನೆಗಳಿಗೆ ಸಂಬಂಧಿಸಿದಂತೆ ಬಳಕೆ ಪ್ರಮಾಣ ಪತ್ರಗಳನ್ನು ಒದಗಿಸುವುದನ್ನು ಖಾತ್ರಿ ಪಡಿಸಿಕೊಳ್ಳಬೇಕು. ಒಂದು ವರ್ಷದೊಳಗೆ ಕೆಲವು ಮನೆಗಳು ಪೂರ್ಣವಾಗದಿದ್ದಲ್ಲಿ ಪ್ರಾಸಾಸಂ ಗಳು ನಿರ್ದಿಷ್ಟ ಅವಧಿ ವಿಸ್ತರಣೆಗಾಗಿ ಕೇಳಿ ಕೊಳ್ಳುವುದರ ಜೊತೆಗೆ ನಿರ್ಮಾಣದ ವಿಳಂಬಕ್ಕೆ ಕಾರಣಗಳನ್ನು ಕೊಡಬೇಕು.

## 7. ಬ್ಯಾಂಕುಗಳು/ಗೃಹ ಸಾಲ ಸಂಸ್ಥೆಗಳ (ಗೃ ಸಾ ಸಂ) ಪಾತ್ರ

7.1 ಬ್ಯಾಂಕುಗಳು / ಗೃಹ ಸಾಲ ಸಂಸ್ಥೆಗಳು ಅಂದರೆ ಗೃಹ ಸಾಲ ಕಾರ್ಪೋರೇಶನ್‌ಗಳು ಗೃಹ ಸಾಲ ಸಂಘಗಳು ಕಾರ್ಯಯೋಜನೆಯ ಅವಧಿಯಲ್ಲಿ ಎರಡರಲ್ಲಿ ಒಂದು ಕೇಂದ್ರ ಕಾರ್ಯ ಸಂಸ್ಥೆಯ

ಸಂಪನ್ಮೂಲಗಳನ್ನು ಪಡೆದುಕೊಳ್ಳುವ  ಆಯ್ಕೆಯನ್ನು ಹೊಂದಿದೆ

7.2 ಬ್ಯಾಂಕುಗಳು /ಗೃಸಾಸಂ ಗಳು ರಾಗೃಬ್ಯಾಂ / ಹುಡ್ಕೋಗೆ ಅರೆ–ವಾರ್ಷಿಕ ಆಧಾರದ ಮೇಲೆ ಬಳಕೆ/ ಅಂತ್ಯದ ಬಳಕೆ ಪ್ರಮಾಣ ಪತ್ರಗಳನ್ನು ಒದಗಿಸಬೇಕು.

7.3 ಬ್ಯಾಂಕುಗಳು / ಗೃಸಾ ಸಂ ಗಳು ಪ್ರತಿ ಸಾಲಿಗಾರನಿಗೂ ಒಂದು ತಃಖ್ತೆಯನ್ನು ಒದಗಿಸಬೇಕು. ಇದರಿಂದ ಅವನು/ಳು ಸಹಾಯಧನದ ಮೊಬಲಗು ಸಹಾಯಧನವನ್ನು ಹೇಗೆ ಸರಿಹೊಂದಿಸಲಾಗಿದೆ ಮತ್ತು ಸಹಾಯಧನವು ತನ್ನ ಮಾಸಕಂ ನ ಮೇಲೆ ಯಾವ ಪರಿಣಾಮ ಬೀರಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.

7.4 ಬ್ಯಾಂಕುಗಳು / ಗೃ ಸಾಸಂ ಗಳು ಸ್ಥಿರ/ಚರ ಬಡ್ಡಿಯ ಆಧಾರದ ಮೇಲೆ ಸಾಲ ಪಡೆಯುವ ಪರಿಣಾಮಗಳ ಕುರಿತಂತೆ ಸ್ವಷ್ಟವಾಗಿ ಸಾಲಗಾರರಿಗೆ ವಿವರಿಸಬೇಕು.

**8. ಮೌಲ್ಯ ಮಾಪನ ಮತ್ತು ಮಧ್ಯಂತರ ಅವಧಿಯ ಸರಿಹೊಂದಾಣಿಕೆ**

ಇಡಬ್ಲ್ಯುಎಸ್ ಮತ್ತು ಎಲ್ಐಜಿ ಫಲಾನುಭವಿಗಳಿಗೆ ಪ್ರಾಸಾನಂ ಗಳು ನೀಡಿದ ಸಹಾಯಧನ ಕುರಿತಂತೆ ಒಂದು ವಿವರವಾದ ಪುನರೀಕ್ಷಣೆಯನ್ನು ಸಚಿವಾಲಯವು ಪ್ರತಿ 2 ವರ್ಷಗಳಿಗೊಮ್ಮೆ ಹೆಸರಾಂತ ಒಂದು ಬಾಹ್ಯ ಸಂಸ್ಥೆಯ ಮೂಲಕ ಕೈಗೆತ್ತಿಕೊಳ್ಳತ್ತದೆ. ಮಧ್ಯಂತರ ಅವಧಿಯ ಸರಿಹೊಂದಾಣಿಕೆ ಮತ್ತು ಬಡ್ಡಿ ಸಹಾಯಧನದ ಕಾರ್ಯಯೋಜನೆ ಅನುಷ್ಠಾನದಲ್ಲಿ ಸುಧಾರಣೆ ತರುವುದರ ಸಲುವಾಗಿ ಇಂತಹ ಪುನರೀಕ್ಷಣೆಗಳನ್ನು ಕೈಗೊಳ್ಳುವುದರ ಉದ್ದೇಶವಾಗಿರುತ್ತದೆ.

# ಸ್ವರ್ಣಜಯಂತಿ ಶಹರಿ ರೋಜಗಾರ ಯೋಜನೆ - ಉತ್ತಮವಾಗಿ ಕಾರ್ಯನಿರ್ವಹಿಸಿದ ಗುಂಪುಗಳ ಅಧ್ಯಯನ

**ಪ್ರಸ್ತಾವನೆ :**

ಭಾರತ ಸರಕಾರ ಬಡತನ ನಿರ್ಮೂಲನೆಗಾಗಿ ಅನೇಕ ಕಾರ್ಯಕ್ರಮಗಳನ್ನು ಜಾರಿಗೆ ತಂದಿದ್ದು, ಅದರಲ್ಲಿ ನೆಹರು ರೋಜಗಾರ ಯೋಜನೆ (ಎನ್.ಆರ್.ವೈ) ಅರ್ಬನ್ ಬೇಸಿಕ್ ಸರ್ವಿಸ್ ಪ್ರೋಗ್ರಾಂ (ಯು.ಬಿ.ಎಸ್.ಪಿ.)ಪ್ರಧಾನ ಮಂತ್ರಿಗಳು ಸಮಗ್ರ ಪಟ್ಟಣ ಬಡತನ ನಿರ್ಮೂಲನಾ ಕಾರ್ಯಕ್ರಮ (ಪಿ.ಎಂ.ಐ.ಯು.ಪಿ.)ಈ ಮೂರು ಕಾರ್ಯಕ್ರಮಗಳನ್ನು ಕ್ರೋಢೀಕರಿಸಿ, ಸ್ಥಳೀಯ ಸಂಸ್ಥೆಗಳಲ್ಲಿ ಅನುಷ್ಠಾನಗೊಳ್ಳುತ್ತಲಿದೆ. 1997ರಿಂದ ಇಲ್ಲಿಯವರೆಗೆ ಸಾವಿರಾರು ನಗರದ ಬಡವರು ಇದರ ಸದುಪಯೋಗ ಪಡೆದುಕೊಂಡು ಬಡತನದಿಂದ ಹೊರಗೆ ಬಂದಿದ್ದಾರೆ. ಈ ಬಗ್ಗೆ ನಿಖರವಾದ ದಾಖಲೆಗಳನ್ನು ಮಾಡಿರುವುದಿಲ್ಲ. ಆದ್ದರಿಂದ ಕೇಂದ್ರ ಸರ್ಕಾರದ ವಸತಿ ಮತ್ತು ನಗರ ಬಡತನ ನಿರ್ಮೂಲನಾ ಮಂತ್ರಾಲಯದಿಂದ ಕರ್ನಾಟಕದಲ್ಲಿ ಸ್ವರ್ಣಜಯಂತಿ ಶಹರಿ ರೋಜಗಾರ ಯೋಜನೆಯಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸಿದ ಕೆಲವು ಅಧ್ಯಯನಗಳ ದಾಖಲೀಕರಣ ಜವಾಬ್ದಾರಿಯನ್ನು ರಾಜ್ಯ ನಗರಾಭಿವೃದ್ಧಿ ಸಂಸ್ಥೆಗೆ ವಹಿಸಿದೆ. ಈ ಹಿನ್ನೆಲೆಯಲ್ಲಿ ಶಹರಿ ರೋಜಗಾರ ಯೋಜನೆಯಲ್ಲ ಉತ್ತಮವಾಗಿ ಕಾರ್ಯನಿರ್ವಹಿಸಿದ ಕೆಲವು ಅಧ್ಯಯನಗಳನ್ನು ಕೈಗೊಳ್ಳಲಾಗಿದೆ.

**ಅಧ್ಯಯನದ ಉದ್ದೇಶಗಳು :**

* ಯೋಜನೆಯಲ್ಲಿರುವ ಕಾರ್ಯಕ್ರಮಗಳನ್ನು ಮಾರ್ಗಸೂಚಿಯನ್ವಯ ಅನುಷ್ಠಾನಗೊಳಿಸಿರುವುದನ್ನು ದಾಖಲೀಕರಿಸುವುದು.
* ಯೋಜನೆಯ ಸದುಪಯೋಗ ಪಡೆದವರ ವೈಯಕ್ತಿಕ ಅಭಿಪ್ರಾಯಗಳನ್ನು ಸಂಗ್ರಹಿಸುವುದು ಮತ್ತು ದಾಖಲೀಕರಿಸುವುದು.
* ಸಂಗ್ರಹಿಸಲಾದ ಅಗತ್ಯವಿರುವ ಮಾಹಿತಿಯನ್ನು ತರಬೇತಿಯಲ್ಲಿ ಉಪಯೋಗಿಸಿಕೊಳ್ಳುವುದು.
* ಮುಖ್ಯವಾಗಿ ನಾಲ್ಕು ಅಂಶಗಳನ್ನು ಗಮನದಲ್ಲಿರಿಸಿ ಮಾಹಿತಿಯನ್ನು ಸಂಗ್ರಹಿಸಲಾಗಿದೆ.

**ಕೌಟುಂಬಿಕ ಪರಿಚಯ ಹಿನ್ನೆಲೆ**

ಸ್ವಯಂ ಉದ್ಯೋಗದ ಉಪಯೋಗ ಪಡೆಯುವುದಕ್ಕಿಂತ ಮೊದಲು ಎದುರಿಸುತ್ತಿದ್ದ ಸಮಸ್ಯೆಗಳು.

ಯೋಜನೆಯಿಂದ ಸೌಲಭ್ಯ ಪಡೆಯಲು ಪ್ರೇರಕವಾದ ಅಂಶಗಳು, ಬ್ಯಾಂಕಿನವರ ಸಹಕಾರ, ಉದ್ಯಮ ಆರಂಭಿಸಲು ಅನುಕೂಲಕರವಾದ ಅಂಶಗಳ ಕುರಿತು ಮಾಹಿತಿ.

ಯೋಜನೆಯ ಸದುಪಯೋಗ ಮತ್ತು ಉತ್ತಮ ಜೀವನಕ್ಕೆ ಸಹಾಯಕವಾದ ಅಂಶಗಳು.

**ಅಧ್ಯಯನದ ವಿಧಾನ :**

ಈ ಅಧ್ಯಯನವನ್ನು ಪ್ರಮುಖವಾಗಿ ಪ್ರದೇಶವಾರು ಆದ್ಯತೆಯಲ್ಲಿ ಐದು ನಗರಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಎರಡು ಮಹಾನಗರ ಪಾಲಿಕೆಗಳು ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆ ಮತ್ತು ದಾವಣಗೆರೆ ಮಹಾನಗರ ಪಾಲಿಕೆ, ಎರಡು ನಗರಸಭೆಗಳು, ಕೊಪ್ಪಳ ಜಿಲ್ಲೆಯ ಗಂಗಾವತಿ ನಗರಸಭೆ ಮತ್ತು ಚಾಮರಾಜನಗರ ಜಿಲ್ಲೆಯ ಚಾಮರಾಜ ನಗರ ನಗರ ಸಭೆ, ಒಂದು ಪುರಸಭೆ, ಮಂಗಳೂರು ಜಿಲ್ಲೆಯ ಸೂಳ್ಯ ಪುರಸಭೆ.

ಸದರಿ ಅಧ್ಯಯನವನ್ನು ಯೋಜೆಯ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಯೋಜನೆಯಲ್ಲಿರುವ ಎಲ್ಲಾ

---

***ಸಿ. ಅಶೋಕ, ಬೋಧಕರು,*** ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು

ಕಾರ್ಯಕ್ರಮಗಳನ್ನು ಕುರಿತು ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಯೋಜನೆಯಲ್ಲಿನ ಕಾರ್ಯಕ್ರಮಗಳ ಅನುಷ್ಠಾನಗೊಳಿಸಿರುವ ಆಯ್ಕೆ ಮಾಡಿಕೊಂಡ ನಗರಗಳಲ್ಲಿ ಯೋಜನೆಯ ಸದುಪಯೋಗ ಪಡೆದ ಫಲಾನುಭವಿಗಳನ್ನು ನೇರವಾಗಿ (ಸಂದರ್ಶನದ) ಚರ್ಚೆಯ ಮೂಲಕ ಫಲಾನುಭವಿಯ ಅನುಭವಗಳನ್ನು ದಾಖಲೀಕರಿಸುವುದು. ಆಯ್ಕೆ ಮಾಡಿಕೊಂಡ ನಗರಗಳಲ್ಲಿ ಉತ್ತಮವೆನಿಸಿದ ಎರಡು ಸ್ವಯಂ ಉದ್ಯೋಗ ಯೋಜನೆ, ಎರಡು ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಘಟಕ, ಒಂದು ನಗರ ಉದ್ಯೋಗ ಆಧಾರಿತ ಯೋಜನೆ, ಒಂದು ತರಬೇತಿ, ಎರಡು ನಿರಂತರ ಉಳಿತಾಯ ಗುಂಪುಗಳ ಟಿ.ಸಿ.ಜಿ.ಸಿ.ಎಸ್.ಸಿ. ಚಟುವಟಿಕೆಗಳನ್ನು ದಾಖಲೀಕರಿಸುವ ಪ್ರಯತ್ನವನ್ನು ಮಾಡಲಾಗುವುದು. ಯೋಜನೆಯ ಕುರಿತು ಮಾಹಿತಿಯನ್ನು ಪಡೆದ ಬಗ್ಗೆ, ಸ್ವಯಂ ಉದ್ಯೋಗ, ಡ್ವಾಕ್ವಾ ಗುಂಪುಗಳ ಆಯ್ಕೆ ಮಾಡಿಕೊಳ್ಳುವಲ್ಲಿ ಸಂಬಂಧಪಟ್ಟ ಅಧಿಕಾರಿಗಳು, ಸಮುದಾಯ ಅಭಿವೃದ್ಧಿ ಸಂಘ ಸಹಕಾರ ಬ್ಯಾಂಕಿನವರು ಸಾಲ ನೀಡುವಲ್ಲಿ ನೀಡಿದ ಸಹಕಾರ ಮಾರುಕಟ್ಟೆಯನ್ನು ವಿಸ್ತರಿಸಿದ ಬಗ್ಗೆ ಮಾಹಿತಿ, ಕೈಗೊಂಡ ಚಟುವಟಿಕೆಯ ಲಾಭದತ್ತ ಕೊಂಡೊಯ್ಯುವಲ್ಲಿ ಅನುಸರಿಸಿದ ಕ್ರಮಗಳು, ಸಾಲದ ಸಹಾಯಧನದ ಸದುಪಯೋಗ ಹಾಗೂ ಸಾಲದ ಮರುಪಾವತಿ, ಕುಟುಂಬದಲ್ಲಿನ ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆ ಕುರಿತು ಮಾಹಿತಿಗಳನ್ನು ಸಂಗ್ರಹಿಸಲಾಗುವುದು.

ಅಗತ್ಯವಿರುವ ಮಾಹಿತಿಗಳ / ದಾಖಲೆ ಫೋಟೋ ಇತ್ಯಾದಿಗಳನ್ನು ಸಂಬಂಧಪಟ್ಟವರ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಪಡೆಯುವುದು ಸೂಕ್ತವೆನಿಸಿದಲ್ಲಿ ಸಂಗ್ರಹಸಿದ ಮಾಹಿತಿಯನ್ನು ಈ ವರದಿಯಲ್ಲಿ ಅಳವಡಿಸಿಕೊಳ್ಳಲಾಗುವುದು.

ನಗರ ಸ್ವಯಂ ಉದ್ಯೋಗ ಕಾರ್ಯಕ್ರಮ, ಡ್ವಾಕ್ವಾ ಕಾರ್ಯಕ್ರಮ, ತರಬೇತಿ ಕಾರ್ಯಕ್ರಮ, ಮಹಿಳೆಯರ ನಿರಂತರ ಉಳಿತಾಯ ಗುಂಪು, ನಗರ ಕೂಲಿ ಆಧಾರಿತ ಕಾರ್ಯಕ್ರಮ ಕೆಲವು ಪ್ರಕರಣಗಳನ್ನು ಸಂಕ್ಷಿಪ್ತವಾಗಿ ದಾಖಲೀಕರಿಸುವ ಪ್ರಯತ್ನವನ್ನು ಮಾಡಲಾಗಿದೆ.

**ಉತ್ತಮ ನಿದರ್ಶನಗಳ ಕಲ್ಪನೆ ಮತ್ತು ವಿಧಾನಗಳು**
**(Best practices : Concepts and Criteria)**

**1. ಉತ್ತಮವಾದ ಅಂಶಗಳನ್ನು ಅನುಸರಿಸುವುದು ಎಂದರೆ ಏನು? (What is best practices?)**

ಉತ್ತಮವಾದ ಅಂಶಗಳನ್ನು ಅನುಸರಿಸುವುದನ್ನು / ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಅಂಶಗಳನ್ನು ಇತರರಿಗೆ ಮಾದರಿಯಾಗುವಂತೆ ಹೇಳಬಹುದು ಮತ್ತು ಭವಿಷ್ಯದಲ್ಲಿ ಅಗತ್ಯವೆನಿಸಿದರೆ ಇದೇ ಅಂಶಗಳನ್ನು ಮುಂದುವರಿಸಲು ಇಲ್ಲವೇ ಅಳವಡಿಸಿಕೊಳ್ಳಲು ಸಲಹೆ, ಸೂಚನೆಗಳನ್ನು ನೀಡಬಹುದು.

ಯಶಸ್ವಿಯಾದ ಉತ್ತಮ ಘಟನೆಗಳಲ್ಲಿರುವ ಅಂಶಗಳ ವಿಚಾರಗಳನ್ನು ಹಂಚಿಕೊಳ್ಳುವುದರಿಂದ ಸ್ಥಳೀಯ ಅಥವಾ ಪ್ರಾದೇಶಿಕ ಮಟ್ಟದಲ್ಲಿ ಅನುಷ್ಠಾನಗೊಳಿಸುವ ಯಾವುದೇ ಕಾರ್ಯಕ್ರಮಗಳನ್ನು / ಯೋಜನೆಗಳು ಎದುರಿಸುವ ಸಮಸ್ಯೆಗಳನ್ನು ಸುಲಭವಾಗಿ ಬಗೆಹರಿಸಿಕೊಳ್ಳಬಹುದು.

ಉತ್ತಮವಾದ ಅಂಶಗಳು ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಅಂಶಗಳನ್ನು ಉತ್ತಮ ಫಲಿತಾಂಶಗಳನ್ನು ಪರೋಕ್ಷವಾಗಿ ಇಲ್ಲವೇ ಅಪರೋಕ್ಷವಾಗಿ ಸಹಾಯಕವೆನಿಸುವ ಅಂಶಗಳನ್ನು ಬದುಕಿನ ಉತ್ತಮ ಬದಲಾವಣೆಗೆ ಅಥವಾ ಜೀವನದ ನಿರ್ವಹಣೆಗೆ ಅಳವಡಿಸಿಕೊಳ್ಳಬಹುದು.

ಉತ್ತಮವಾದ ಅಂಶಗಳು ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಅಂಶಗಳನ್ನು ಉತ್ತಮ ಫಲಿತಾಂಶಗಳನ್ನು ಕ್ರಿಯಾಯೋಜನೆ ರೂಪಿಸುವಲ್ಲಿ ಜನರ ಜೀವನ ಮಟ್ಟದ ಸುಧಾರಣೆಗೆ ಉದಾಹರಣೆಗಳಾಗಿ ನಮ್ಮ ಯೋಜನೆಗಳಲ್ಲಿ ತೊಡಗಿಸಿಕೊಳ್ಳಲು ಸಹಾಯಕವಾಗುತ್ತವೆ.

ಉತ್ತಮವಾದ ಅಂಶಗಳು ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಅಂಶಗಳನ್ನು ಅವುಗಳ ಫಲಿತಾಂಶಗಳ

ಆಧಾರದ ಮೇಲೆ ಯೋಜನೆಯ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ರೂಪಿಸಲು ಮತ್ತು ಯೋಜನೆಯ ಕಾರ್ಯಕ್ರಮಗಳ ಉದ್ದೇಶಗಳ ಈಡೇರಿಕೆಗಾಗಿ ಉತ್ತಮವಾದ ಅಂಶಗಳು ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವುದು.

**2. ಯಾಕೆ ಉತ್ತಮವಾದ ಅಂಶಗಳನ್ನು ಅನುಸರಿಸಬೇಕು? (Why best practice is important?)**

* ಯಶಸ್ವಿಯಾದ ಉತ್ತಮ ಘಟನೆಗಳಲ್ಲಿರುವ ಅಂಶಗಳನ್ನು ಅನುಸರಿಸುವುದರಿಂದ ಯೋಜನೆಯ ಉದ್ದೇಶಕ್ಕನುಗುಣವಾಗಿರುವ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಸಾಧ್ಯವಾಗದ ಅಥವಾ ತೊಂದರೆಯಲ್ಲಿರುವ ಸನ್ನಿವೇಶಗಳನ್ನು / ಘಟನೆಗಳನ್ನು ಪುನರ್ ಪರಿಶೀಲಿಸಿ / ಅವಲೋಕಿಸಿ ಯಶಸ್ವಿಯತ್ತ ಸಾಗಲು ಸಹಾಯಕವಾಗುತ್ತದೆ.
* ಉತ್ತಮವಾದ ಅಂಶಗಳು ಕ್ರಿಯೆಯಲ್ಲಿ ತೊಡಗಿಸಿಕೊಂಡಿರುವ ಅಂಶಗಳನ್ನು ಉತ್ತಮ ಫಲಿತಾಂಶಗಳನ್ನು ಅಳವಡಿಸುವುದರಿಂದ ಅಗತ್ಯವಿರುವ ಕ್ರಿಯಾಯೋಜನೆ ರೂಪಿಸಲು ಪೂರಕವಾದ ಮಾಹಿತಿಗಳನ್ನು ಗಮನದಲ್ಲಿರಿಸಿಕೊಂಡು ಯೋಜನೆಗೆ ಅಂತಿಮರೂಪ ನೀಡಹುದು.
* ಯಶಸ್ವಿಯಾದ ಉತ್ತಮ ಘಟನೆಗಳಲ್ಲಿರುವ ಅಂಶಗಳನ್ನು ಅನುಸರಿಸುವುದರಿಂದ ನಮ್ಮಲ್ಲಿರುವ ನಾವು ಎದುರಿಸುತ್ತಿರುವ ಸಮಸ್ಯೆಗಳಿಗೆ ಸುಲಭ ಪರಿಹಾರಗಳನ್ನು ಇಲ್ಲವೇ ಮಾರ್ಗಗಳನ್ನು ಕಂಡುಕೊಳ್ಳಬಹುದು.
* ಯಶಸ್ವಿಯಾದ ಉತ್ತಮ ಘಟನೆಗಳಲ್ಲಿರುವ ಅಂಶಗಳನ್ನು ಅನುಸರಿಸುವುದರಿಂದ ನಾವು ಎದುರಿಸುತ್ತಿರುವ ಸಂಕೀರ್ಣ ಸಮಸ್ಯೆಗಳನ್ನು ಸಮುದಾಯ ಮಟ್ಟದಲ್ಲಿಯೇ ಸುಲಭವಾಗಿ ಪರಿಹಾರ ಕಂಡು ಹಿಡಿಯಬಹುದು.
* ಯಶಸ್ವಿಯಾದ ಉತ್ತಮ ಘಟನೆಗಳಲ್ಲಿರುವ ಅಂಶಗಳನ್ನು ಅನುಸರಿಸುವುದರಿಂದ ನಮ್ಮ ಜ್ಞಾನದ ಪರಿಮಿತಿಯನ್ನು ಹೆಚ್ಚಿಸಿಕೊಳ್ಳಬಹುದು. ಇದರಿಂದ ಇಂದು ಮತ್ತು ಭವಿಷ್ಯದಲ್ಲಿ ಎದುರಾಗುವ ಕಲಿಕೆಯ ಅಂತರವನ್ನು ಕ್ರೋಢೀಕರಿಸಿಕೊಳ್ಳಲು ಸಹಾಯಕವಾಗುತ್ತದೆ.

## ಸ್ವರ್ಣಜಯಂತಿ ಶಹರಿ ರೋಜಗಾರ ಯೋಜನೆ, ನಗರಸಭೆ ಗಂಗಾವತಿ

ಸ್ವರ್ಣ ಜಯಂತಿ ಶಹರಿ ಯೋಜನೆ ಅಡಿಯಲ್ಲಿ ಇದುವರೆಗೆ ರೂ. 152.29 ಲಕ್ಷ ಬಿಡುಗಡೆಯಾಗಿದ್ದು, ಅದರಲ್ಲಿ ರೂ. 148.25 ಲಕ್ಷ ಖರ್ಚು ಮಾಡಿ ಶೇ. 97.34ರಷ್ಟು ಪ್ರಗತಿ ಸಾಧಿಸಲಾಗಿದೆ. ಈ ಯೋಜನೆಯಲ್ಲಿ ಸ್ವಯಂ ಉದ್ಯೋಗ, ಡ್ವಾಕ್ವಾ, ಸಾಮಾಜಿಕ ಸೇವಾ ಕಾರ್ಯಕ್ರಮ, ನಗರ ಮಜೂರಿ ಉದ್ಯೋಗ, ತರಬೇತಿ ಮತ್ತು ಅನುಸಾರ ಸಮಾಜದ ಕಟ್ಟಕಡೆಯ ಆರ್ಥಿಕವಾಗಿ ಹಿಂದುಳಿದ ಬಡಮಹಿಳೆಯರಿಗೆ ಯೋಜನೆಯ ಸೌಲಭ್ಯಗಳನ್ನು ದೊರಕಿಸಲಾಗಿದೆ. ಇಲ್ಲಿಯ ಪ್ರಗತಿಯ ಬಗ್ಗೆ ವಿವಿಧ ವಿಶ್ವವಿದ್ಯಾನಿಲಯಗಳ ತಂಡಗಳು ಆಗಮಿಸಿ ಪ್ರಾಯೋಗಿಕ ಪ್ರಗತಿಯನ್ನು ವೀಕ್ಷಿಸಿ ಪ್ರಶಂಸೆ ವ್ಯಕ್ತಪಡಿಸಿರುವುದಲ್ಲದೆ ಗಂಗಾವತಿ ನಗರಸಭೆಯು ಸ್ವರ್ಣ ಜಯಂತಿ ಶಹರಿ ಯೋಜನೆ ಅನುಷ್ಠಾನಗೊಳಿಸುವಲ್ಲಿ ಮಾದರಿ ನಗರಸಭೆಯಾಗಿ ಅಧ್ಯಯನ ತಂಡಗಳನ್ನು ಆಕರ್ಷಿಸುವಂತೆ ಉತ್ತಮ ಕಾರ್ಯಸಾಧನೆಯನ್ನು ಕಾಣಬಹುದು.

## ಬಡವರ ಸಮೀಕ್ಷೆ

ಗಂಗಾವತಿ ನಗರದಲ್ಲಿ ಯೋಜನೆಯ ಉದ್ದೇಶಕ್ಕಾಗಿ ಬಡತನ ರೇಖೆಗಿಂತ ಕಡಿಮೆ ಆದಾಯವುಳ್ಳ ಬಡವರನ್ನು ಗುರುತಿಸಲು ಸಮೀಕ್ಷೆ ಮಾಡಲಾಯಿತು. ಪ್ರಥಮ ಸಮೀಕ್ಷೆಯಲ್ಲಿ 9170 ಕುಟುಂಬಗಳನ್ನು ನಚಿತರದ ಸಮೀಕ್ಷೆಯಲ್ಲಿ 2787 ಕುಟುಂಬಗಳನ್ನು ಗುರುತಿಸಿ ಒಟ್ಟು 11957 ಕುಟುಂಬಗಳನ್ನು ಬಡತನ ರೇಖೆಗಿಂತ ಕಡಿಮೆ ಆದಾಯ ಹೊಂದಿದವರ ಬಗ್ಗೆ ಮಾಹಿತಿ ನಿರ್ಧರಿಸಲಾಯಿತು. ಇಂತಹ ಕುಟುಂಬಗಳಲ್ಲಿ ಕೊಳಚೆ ಪ್ರದೇಶಗಳಲ್ಲಿ ವಾಸಿಸುವ ಆರ್ಥಿಕವಾಗಿ ಹಿಂದುಳಿದ ಮಹಿಳೆಯರನ್ನು ಒಳಗೊಂಡ 33 ನೆರೆಹೊರೆಯ ಸಮಿತಿಗಳನ್ನು 330 ನೆರೆಹೊರೆ

ಗುಂಪುಗಳನ್ನು ರಚಿಸಲಾಗಿದೆ. ಈ ರೀತಿ ರಚನೆಯಾದ ನೆರೆಹೊರೆ ಸಮಿತಿಗಳ ಸಂಚಾಲಿಕೆಯರು ಸೇರಿ ಸಮುದಾಯ ಅಭಿವೃದ್ಧಿ ಸಂಘವನ್ನು ಪ್ರಜಾಪ್ರಭುತ್ವದ ನಿಯಮಗಳನುಸಾರ ರಚಿಸಿರುತ್ತಾರೆ. ಈ ಸಮುದಾಯ ಅಭಿವೃದ್ಧಿ ಸಂಘದ ಮುಖಾಂತರ ಯೋಜನೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳ್ಳುತ್ತಲಿವೆ.

ಯೋಜನೆಯ ಮಾರ್ಗಸೂಚಿಯನುಸಾರ ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಇದರ ಪ್ರಯೋಜನ ದೊರಕಿಸಲು ಪ್ರಾಮಾಣಿಕ ಪ್ರಯತ್ನ ಮಾಡಲಾಗಿದೆ. ಸಂಪೂರ್ಣವಾಗಿ ಪಾರದರ್ಶಕವಾದಂತಹ ಕಾರ್ಯನಿರ್ವಹಣೆಯಿಂದ ಯೋಜನೆಯ ಎಲ್ಲಾ ಘಟಕಗಳಲ್ಲಿಯೂ ಉತ್ತಮವಾದಂತಹ ಕಾರ್ಯಗಳು ಜರುಗಿ ಯೋಜನೆಯ ಫಲಾನುಭವಿಗಳ ಜೀವನಮಟ್ಟ ಸುಧಾರಣೆಯತ್ತ ಸಾಗಿದೆ.

ವಿಶೇಷ ಅಧ್ಯಯನಕ್ಕಾಗಿ ಆಗಮಿಸಿದ ಕೇಂದ್ರ ಸರಕಾರದ ಅಧ್ಯಯನದ ತಂಡಗಳು ವಿಶ್ವವಿದ್ಯಾನಿಲಯ ತಂಡಗಳು ಉತ್ತಮ ಅನುಷ್ಠಾನ ಮತ್ತು ಕಾರ್ಯನಿರ್ವಹಣೆ ಕುರಿತು ಮೆಚ್ಚುಗೆ ವ್ಯಕ್ತಪಡಿಸಿವೆ. ಇಲ್ಲಿಯ ಸಾಧನೆಯನ್ನು ಗಮನಿಸಿ ವಾಸ್ತವಿಕ ಹಾಗೂ ಪ್ರಾಯೋಗಿಕ ಅಧ್ಯಯನ ಕೈಗೊಂಡ ಆರ್.ಸಿ.ಯು.ಇ.ಎಸ್. ಹೈದ್ರಾಬಾದ್ ಇವರು ಇಡೀ ದಕ್ಷಿಣ ಭಾರತದಲ್ಲಿಯೇ ಉದಾಹರಣೆಯನ್ನಾಗಿಸಿದ್ದಾರೆ. ಮತ್ತು ಆಂಧ್ರಪ್ರದೇಶದ ಜನಪ್ರತಿನಿಧಿಗಳನ್ನು ಮತ್ತು ಯೋಜನೆಯ ಅನುಷ್ಠಾನಾಧಿಕಾರಿಗಳನ್ನು ಅಲ್ಲದೆ ಇತ್ತೀಚೆಗೆ 6 ರಾಜ್ಯಗಳ ಅಧಿಕಾರಿಗಳ ಮತ್ತು ಜನಪ್ರತಿನಿಧಿಗಳ ತಂಡದೊಂದಿಗೆ ಪ್ರಾಯೋಗಿಕ ಪರಿಶೀಲನೆಗೆ ಭೇಟಿ ನೀಡಿ ವ್ಯಕ್ತಪಡಿಸಿರುತ್ತಾರೆ.

ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯನ್ನು ಸಮರ್ಪಕವಾಗಿ ಅನುಷ್ಠಾನಗೊಳಿಸಲು ಹಾಗೂ ಸಮುದಾಯ ಪಾಲ್ಗೊಳ್ಳುವಿಕೆಯನ್ನು ಬಲಗೊಳಿಸಲು ಸಮುದಾಯ ಅಭಿವೃದ್ಧಿ ಸಂಘಗಳನ್ನು ಆರಂಭದಲ್ಲಿ ಕಾರ್ಯಕ್ರಮದ ಮಾರ್ಗಸೂಚಿಯನ್ವಯ ನೆರೆಹೊರೆ ಗುಂಪುಗಳ ಮತ್ತು ನೆರೆಹೊರೆ ಸಮಿತಿ ರಚಿಸಲಾಗಿತ್ತು. ಸದ್ಯ ನೆರೆಹೊರೆ ಸಮಿತಿ ಚಾಲ್ತಿಯಲ್ಲಿವೆ. ಆದರೆ ನೆರೆಹೊರೆ ಗುಂಪುಗಳು ನಿರಂತರ ಉಳಿತಾಯ ಗುಂಪುಗಳಾಗಿ ಕಾರ್ಯನಿರ್ವಹಿಸುತ್ತವೆ.

**ನೆರೆಹೊರೆ ಗುಂಪುಗಳು :** ಒಂದೇ ಪ್ರದೇಶದಲ್ಲಿನ 10 ರಿಂದ 40 ಕುಟುಂಬಗಳು ಸೇರಿರುತ್ತವೆ. ಈ ಗುಂಪುಗಳಲ್ಲಿ ಒಬ್ಬರು ಸ್ವಯಂ ಸೇವಕಿಯರು ಹಾಗೂ ಒಬ್ಬ ಸಂಚಾಲಕಿ ಕಾರ್ಯನಿರ್ವಹಿಸುತ್ತಾರೆ.

**ಸಮುದಾಯ ಅಭಿವೃದ್ಧಿ ಸಂಗದ ರಚನೆ** :

1. ಸಮುದಾಯ ಅಭಿವೃದ್ಧಿ ಸಂಘದ ಕರ್ತವ್ಯ ಮತ್ತು ಜವಾಬ್ದಾರಿಗಳು.
2. ಎಲ್ಲ ನೆರೆಹೊರೆ ಸಮಿತಿಗಳ ಕಿರು ಯೋಜನೆಗಳನ್ನು ಕ್ರೋಢೀಕರಿಸಿ, ಸಮುದಾಯ ಅಭಿವೃದ್ಧಿ ಸಂಘದ ಯೋಜನೆ ತಯಾರಿಸುವುದು.
3. ಸಮುದಾಯ ಅಭಿವೃದ್ಧಿ ಸಂಗದ ಯೋಜನೆಗಳನ್ನು ಅನುಮೋದಿಸುವುದು.
4. ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆ ಕಾರ್ಯಕ್ರಮ ಮತ್ತು ಇತರ ಕ್ರೋಢೀಕೃತ ಕಾರ್ಯಕ್ರಮ ಗಳಿಗೆ ಫಲಾನುಭವಿಗಳನ್ನು ಗುರುತಿಸುವುದು.
5. ಸಾಲ ನಿರ್ವಹಿಸಿ ಶಿಬಿರಗಳನ್ನು ಯೋಜಿಸುವುದು.
6. ಸಮುದಾಯ ಅಭಿವೃದ್ಧಿ ಸಂಘದ ಯೋಜನೆಗಳನ್ನು ಹಾಗೂ ನೆರೆಹೊರೆ ಸಮಿತಿಯ ಯೋಜನೆಗಳನ್ನು ಇತರೆ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುವುದು.

**ಅಧ್ಯಕ್ಷರ ಆಯ್ಕೆ :**

ದಿನಾಂಕ 28-08-98ರಂದು ಪೌರಾಯುಕ್ತರ ಅಧ್ಯಕ್ಷತೆಯಲ್ಲಿ ಸಮುದಾಯ ಅಭಿವೃದ್ಧಿ ಸಂಘ ರಚಿಸಲು ಸಭೆ ಕರೆಯಲಾಗಿತ್ತು. ಈ ಸಭೆಗೆ ನಗರ ಸಭೆಯ ಅಧ್ಯಕ್ಷರು, ಉಪಾಧ್ಯಕ್ಷರು, ಜಿಲ್ಲಾ ಯೋಜನಾಧಿಕಾರಿಗಳು,

ಪುರಸಭೆ ತಹಶೀಲ್ದಾರರು ಈ ಸಭೆಯಲ್ಲಿ ಉಪಸ್ಥಿತರಿದ್ದರು. ಈ ಸಭೆಯಲ್ಲಿ ಪ್ರಿಸೈಡಿಂಗ್ ಅಧಿಕಾರಿಗಳಾಗಿ ಪೌರಾಯುಕ್ತರು, ನಗರಸಭೆ ಗಂಗಾವತಿ ಇವರು ಸಮುದಾಯ ಅಭಿವೃದ್ಧಿ ಸಂಘದ ರಚನೆಗೆ ನೆರೆಹೊರೆ ಸಮಿತಿಗಳ ಮತ್ತು ನೆರೆಹೊರೆ ಗುಂಪುಗಳ ಸಮುದಾಯ ಕಾರ್ಯಕರ್ತೆಯರನ್ನು ಮತ್ತು ಸಂಚಾಲಕಿಯರನ್ನು ಸ್ವಾಗತಿಸಿ ಸಭೆಯ ಉದ್ದೇಶದ ಬಗ್ಗೆ ತಿಳಿಸುತ್ತಾ ಸಮುದಾಯದ ರಚನೆಗೆ ಆಗಬೇಕಿದ್ದ ಯೋಜನೆಯ ಮಾರ್ಗಸೂಚಿ ಪ್ರಕಾರ ಪ್ರಿಸೈಡಿಂಗ್ ಅಧಿಕಾರಿಗಳಿಗೆ ಸಮುದಾಯ ಅಭಿವೃದ್ಧಿ ಸಂಘದ ಅಧ್ಯಕ್ಷರು, ಉಪಾಧ್ಯಕ್ಷರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಪ್ರಾರಂಭಿಸಿ ಆಯ್ಕೆ ವಿಧಾನಗಳನ್ನು ಸಭೆಗೆ ತಿಳಿಸಿದರು. ಈ ಸಭೆಯಲ್ಲಿ ಸಮುದಾಯ ಅಭಿವೃದ್ಧಿ ಸಂಗದ ಯೋಜನೆಯ ಮಾರ್ಗಸೂಚಿಯ ಅನುಬಂಧ -4 ರಲ್ಲಿ ಇರುವಂತೆ ರಚಿಸಬೇಕಾಗಿದೆ. ಎಲ್ಲಾ ನೆರೆಹೊರೆ ಗುಂಪು ಸಮಾನ ಗುರಿ ಮತ್ತು ಉದ್ದೇಶಗಳನ್ನು ಹೊಂದಿರುವ ಪ್ರತಿನಿಧಿಗಳು, ಸಂಘದ ಕಾರ್ಯಕಾರಿ ಸದಸ್ಯರಾಗಿರುತ್ತಾರೆ. ಇವರಿಗೆ ಮಾತ್ರ ಸಂಘದ ಸಭೆಯಲ್ಲಿ ಮತದಾನ ಮಾಡುವ ಹಕ್ಕಿರುತ್ತದೆ. ನೆರೆಹೊರೆ ಗುಂಪು, ನೆರೆಹೊರೆ ಸಮಿತಿ, ಸದಸ್ಯರು ಸಂಪೂರ್ಣ ಕೋರಂ ಇದ್ದು ಆಯ್ಕೆ ಮಾಡಿ ಪ್ರಪ್ರಥಮವಾಗಿ ಸಮುದಾಯ ಅಭಿವೃದ್ಧಿ ಸಂಘದ ಅಧ್ಯಕ್ಷರನ್ನು ಆಯ್ಕೆ ಮಾಡಿದರು. ಶ್ರೀಮತಿ ಕಿನ್ನರಿದೇವಿ ಇವರು ಅಧ್ಯಕ್ಷ ಸ್ಥಾನಕ್ಕೆ ಅಭ್ಯರ್ಥಿಯಾಗಿದ್ದು, ಅವರ ಹೆಸರನ್ನು ಮತಕ್ಕೆ ಹಾಕಲಾಗಿ ಎಲ್ಲಾ ಸದಸ್ಯರನ್ನು ಶ್ರೀಮತಿ ಕಿನ್ನರಿದೇವಿಯರ ಪರವಾಗಿ ಕೈ ಎತ್ತುವ ಮೂಲಕ ಸಮ್ಮತಿ ಸೂಚಿಸಿದರು. ಅಲ್ಲದೆ, ಯಾವುದೇ ಆಕ್ಷೇಪಣೆಗಳು ವ್ಯಕ್ತವಾಗದ ಕಾರಣ ಶ್ರೀಮತಿ ಕಿನ್ನರಿದೇವಿಯವರು ಸಮುದಾಯ ಅಭಿವೃದ್ಧಿ ಸಂಘಕ್ಕೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆಂದು ಘೋಷಿಸಲಾಯಿತು.

**ಉಪಾಧ್ಯಕ್ಷರ ಆಯ್ಕೆ :**

ಅದೇ ರೀತಿ ಸಮುದಾಯ ಅಭಿವೃದ್ಧಿ ಸಂಘದ ಉಪಾಧ್ಯಕ್ಷರನ್ನು ಆಯ್ಕೆ ಮಾಡಲು ಪ್ರಿಸೈಡಿಂಗ್ ಅಧಿಕಾರಿಗಳು ಕೋರಿದರು. ಈ ಬಗ್ಗೆ ಎಲ್ಲ ಸದಸ್ಯರು ಸುದೀರ್ಘವಾಗಿ ಚರ್ಚಿಸಿ ಹಾಗೂ ಶ್ರೀಮತಿ ಸುಭದ್ರಾಬಾಯಿ ಗಂಡ ಗೋಪಾಲಸಿಂಗ್ ಇವರನ್ನು ಉಪಾಧ್ಯಕ್ಷರನ್ನಾಗಿ ಆಯ್ಕೆ ಮಾಡಲಾಯಿತು. ಇವರಿಗೆ ಸೂಚಕರಾಗಿ ಮೆಹಬೂಬಿ ಅನುಮೋದಕರಾಗಿ ಮೈಮುನ್ನಾ ಇವರು ಪ್ರಸ್ತಾಪಿಸಿದರು.

ಸಮುದಾಯ ಅಭಿವೃದ್ಧಿ ಸಂಘದ ಕಾರ್ಯಕಾರಿ ಸಮಿತಿ ಯೋಜನೆಯ ಮಾರ್ಗಸೂಚಿ ಅನ್ವಯ ನೆರೆಹೊರೆ ಸಮಿತಿಯ ಸಂಚಾಲಕಿಯರನ್ನು ಆಯ್ಕೆ ಮಾಡಬೇಕಾಗಿದ್ದು, ಈ ಪ್ರಕ್ರಿಯೆಯಲ್ಲಿ ಲಾಟರಿ ಎತ್ತುವ ಮೂಲಕ ಆಯ್ಕೆ ಮಾಡಬೇಕಾಗಿರುವುದರಿಂದ ಈ ಕಾರ್ಯಕ್ಕೆ ಸಹಕರಿಸಲು ಕೋರಿದರು. ಒಟ್ಟು 33 ನೆರೆಹೊರೆ ಸಮಿತಿಗಳಿದ್ದು, ಈ ಸಮಿತಿಗಳ ಸಂಚಾಲಕಿಯರನ್ನು ಚೀಟಿ ಬರೆದು ಒಂದು ಪೆಟ್ಟಿಗೆಯಲ್ಲಿ ಹಾಕಲಾಯಿತು. ಮತ್ತು ಸರಿಯಾಗಿ ಮಿಶ್ರಗೊಳಿಸಿ ಲಾಟರಿ ಎತ್ತುವ ಮೂಲಕ 10 ಸಂಚಾಲಕಿಯರನ್ನು ಆಯ್ಕೆ ಮಾಡಲಾಯಿತು. ಸಮುದಾಯ ಅಭಿವೃದ್ಧಿ ಸಂಘದ ಕಾರ್ಯಕಾರಿ ಸಮಿತಿಗೆ ಒಟ್ಟು 23 ಸದಸ್ಯರಾಗಿರಬೇಕು. ಈ ಕಾರ್ಯಕಾರಿ ಸಮಿತಿಯಲ್ಲಿ ಅಧ್ಯಕ್ಷರು, ಉಪಾಧ್ಯಕ್ಷರು, ಗೌರವ ಕಾರ್ಯದರ್ಶಿಗಳು ಹಾಗೂ ನೆರೆಹೊರೆ ಸಮಿತಿ ಸಂಚಾಲಕಿಯರನ್ನು ಹೊರತು ಪಡಿಸಿ ಬೇರೆಯವರಿಗೆ ಮತದಾನ ಮಾಡುವ ಅವಕಾಶ ಇರುವುದಿಲ್ಲ.

ಈ ಕಾರ್ಯಕಾರಿ ಸಮಿತಿಗೆ ಅಧ್ಯಕ್ಷರು, ಉಪಾಧ್ಯಕ್ಷರು, ಯೋಜನಾಧಿಕಾರಿಗಳು ಆಯ್ಕೆಯಾದ 10 ಸಂಚಾಲಕಿಯರು ಸ್ವಯಂಸೇವಾ ಸಂಸ್ಥೆಗಳ ಸದಸ್ಯರುಗಳು 4 ಇಲಾಖೆಗಳ ಅಧಿಕಾರಿಗಳು ನಗರಸಭೆಯ ಇಬ್ಬರು ಸದಸ್ಯಣಿಯರು ಸಂಘಕ್ಕೆ ತೆಗೆದುಕೊಂಡು ಕಾರ್ಯಕಾರಿ ಸಮಿತಿಗೆ ನೇಮಕ ಮಾಡಲು ಸಭೆ ನಿರ್ಣಯಿಸಿತು. ಮೂರನೆಯ ಬಾರಿ ಶ್ರೀಮತಿ ನಾಗರಾಜ ಕುಮಾರಿ ಗಂಡ ವೆಂಕಟೇಶ್ವರರಾವ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಉಪಾಧ್ಯಕ್ಷರಾಗಿ ಶ್ರೀಮತಿ ಮಹಾದೇವಮ್ಮ ಗಂಡ ಈರಣ್ಣ ಆಯ್ಕೆಯಾಗಿದ್ದಾರೆ. ಇವರು ಪ್ರಸ್ತುತ ಕೆಲಸ ನಿರ್ವಹಿಸಿಕೊಂಡು ಯಶಸ್ವಿಯಾಗಿ ಸಮುದಾಯ ಅಭಿವೃದ್ಧಿ ಸಂಗ ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ.

**ಕಾರ್ಯಕ್ರಮಗಳ ಅನುಷ್ಠಾನ :**

ಪ್ರಸ್ತುತ ನಗರದಲ್ಲಿ ಯಾವುದೇ ಸಾಮಾಜಿಕ ಕಾರ್ಯಕ್ರಮಗಳು ನಡೆಯಬೇಕಾದರೆ ಸಮುದಾಯ ಅಭಿವೃದ್ಧಿ ಸಂಘದ ಸದಸ್ಯರು ಹಾಜರಾಗಿ ಕಾರ್ಯಕ್ರಮ ಯಶಸ್ವಿಗೊಳಿಸುತ್ತಿದ್ದಾರೆ. ಯೋಜನೆಯ ಕೆಲಸ ಕಾರ್ಯಗಳ ಜೊತೆ ಸಾಕ್ಷರತಾ ಕಾರ್ಯಕ್ರಮ, ರಾಷ್ಟ್ರೀಯ ಹಬ್ಬಗಳಿಗೆ ಕಾರ್ಯಕ್ರಮ, ಪಲ್ಸ್‌ಪೋಲಿಯೋ ನಿರ್ಮೂಲನೆ ಕಾರ್ಯಕ್ರಮ ವಿವಿಧ ಇಲಾಖೆಯ ಕಾರ್ಯಕ್ರಮಗಳಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು ಯಶಸ್ವಿಗೊಳಿಸುತ್ತಿದ್ದಾರೆ. ಬೇಸಿಗೆಯ ಕಾಲದಲ್ಲಿ ನೀರಿನ ಅರವಟ್ಟಿಗೆ, ಸಾಕ್ಷರತಾ, ಏಡ್ಸ್ ಅವೇರ್‌ನೆಸ್ ಕಾರ್ಯಕ್ರಮ, ಪಡಿತರ ಚೀಟಿ, ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ಭಾಗ್ಯಲಕ್ಷ್ಮಿ ಯೋಜನೆಗಳನ್ನು ಬಡವರಿಗೆ ತಲುಪಿಸುವ ಕೆಲಸ ಮಾಡುತ್ತಲಿದೆ.

**ಸಮುದಾಯ ಅಭಿವೃದ್ಧಿ ಸಂಘವು ಈ ಕೆಳಕಂಡ ಉದ್ದೇಶಗಳಿಗನುಗುಣವಾಗಿ ಕಾರ್ಯ ನಿರ್ವಹಿಸಿದೆ. (Community Development Society)**

* ಸಮುದಾಯ ಅಭಿವೃದ್ಧಿ ಸಂಘವು ಒಂದು ನೊಂದಾಯಿತ ಸಂಸ್ಥೆಯಾಗಿದ್ದು, ರಿಜಿಸ್ಟ್ರಾರ್ ಆಫ್ ಸೊಸೈಟೀಸ್ ನಿಯಮದಡಿಯಲ್ಲಿ ನೊಂದಾಯಿಸಲ್ಪಟ್ಟಿರುತ್ತದೆ ಮತ್ತು ಕಾಲ ಕಾಲಕ್ಕೆ ನವೀಕರಣವನ್ನು ಮಾಡಿಸಲಾಗಿದೆ.
* ಸಮುದಾಯದ ಎಲ್ಲಾ ಅಗತ್ಯತೆಗಳನ್ನು ಗುರುತಿಸಿ, ಮುಖ್ಯವಾಗಿ ಮಹಿಳೆಯರ ಮತ್ತು ಮಕ್ಕಳ ಅಗತ್ಯತೆಗೆ ಹೆಚ್ಚು ಪ್ರಾಮುಖ್ಯತೆಯನ್ನು ನೀಡುವಲ್ಲಿ ಸಾಮೂಹಿಕ ಪ್ರಯತ್ನದಲ್ಲಿ ತೊಡಗಿಸಿಕೊಂಡಿದೆ.
* ಸಮುದಾಯದ ಅಗತ್ಯತೆಗಳನ್ನು ಪೂರೈಸಲು ಸರ್ಕಾರದ ಇತರೆ ಇಲಾಖೆಗಳು ಹಾಗೂ ಸಂಸ್ಥೆಗಳೊಂದಿಗೆ ಸಂಪರ್ಕ ಕಲ್ಪಿಸುವುದರಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಆರೋಗ್ಯ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆಗಳೊಂದಿಗೆ ಅನೇಕ ಸಹಭಾಗಿತ್ವದಲ್ಲಿ ಸಮುದಾಯ ಅಭಿವೃದ್ಧಿ ಸಂಘವು ಹಲವಾರು ಕಾರ್ಯಕ್ರಮಗಳನ್ನು ನಗರದ ಬಡವರಿಗಾಗಿ ಹಮ್ಮಿಕೊಂಡಿರುತ್ತದೆ.

ಅಗತ್ಯತೆಗೆ ತಕ್ಕಂತೆ ತರಬೇತಿಗಳನ್ನು ಗುರುತಿಸುವುದು ಮತ್ತು ಸರ್ಕಾರ / ಸರ್ಕಾರೇತರ ಸಂಸ್ಥೆಗಳೊಂದಿಗೆ ಕಂಪ್ಯೂಟರ್ ತರಬೇತಿ, ಫ್ಯಾಷನ್ ಡಿಸೈನಿಂಗ್, ಎಲೆಕ್ಟ್ರಿಕಲ್ ಹೋಮ್ ಅಪ್ಲೈಯನ್ಸ್‌ಸ್, ಎಲೆಕ್ಟ್ರಾನಿಕ್ ಸಾಮಗ್ರಿಗಳ ರಿಪೇರಿ, ಮೊಬೈಲ್ ಹಾರ್ಡ್‌ವೇರ್, ಡ್ರೈವಿಂಗ್ ತರಬೇತಿ ಜೊತೆಗೆ ಲೈಸನ್ಸ್, ಸ್ಕ್ರೀನ್ ಪ್ರಿಂಟಿಂಗ್, ಡಿಟರ್ಜೆಂಟ್, ಸೋಪ್ಸ್, ಫಿನಾಯಿಲ್ ತಯಾರಿಕೆ, ಆಟೋ ಮೊಬೈಲ್, ಟೈಲರಿಂಗ್, ಎಂಬ್ರಾಯ್ಡರಿ, ನಿಟ್ಟಿಂಗ್, ಮೇಣದ ಬತ್ತಿ ತಯಾರಿಕೆ, ಹೋಮ್ ನರ್ಸಿಂಗ್ ಇತ್ಯಾದಿ ತರಬೇತಿ ಕಾರ್ಯಕ್ರಮಗಳನ್ನು ಉತ್ತಮವಾಗಿ ನೀಡಿದೆ.

* ಸಮುದಾಯದ ಬೆಳವಣಿಗೆಗೆ ಪೂರಕವಾದ ಯೋಜನೆ, ಪ್ರಸ್ತಾವನೆ ಹಾಗೂ ಇತರೆ ಇಲಾಖೆಗಳ ಸಂಪನ್ಮೂಲಗಳನ್ನು ಉಪಯೋಗಿಸಿಕೊಂಡಿದೆ.
* ಮಹಿಳಾ ಸಬಲೀಕರಣಕ್ಕೆ ಒತ್ತು ನೀಡಿ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಆರೋಗ್ಯ, ಕಾನೂನು ಮತ್ತು ಸಾಂಸ್ಕೃತಿಕ ವಿಷಯಗಳಿಗೆ ಸಂಬಂಧಿಸಿದಂತೆ ಅರಿವು / ತಿಳುವಳಿಕೆ ಶಿಬಿರಗಳನ್ನು ಏರ್ಪಡಿಸುತ್ತಾ ಬಂದಿದೆ.
* ಸಮುದಾಯ ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಪ್ರಾಶಸ್ತ್ಯ ನೀಡಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವುದು ಸಾಮೂಹಿಕ ಪ್ರಯತ್ನದಲ್ಲಿ ತೊಡಗಿಸಿಕೊಂಡಿದೆ.
* ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಬ್ಯಾಂಕುಗಳಿಂದ ನೀಡಿರುವ ಸಾಲದ ಮರುಪಾವತಿಯ ಬಗ್ಗೆ ಸಹಕಾರ ನೀಡುವುದರ ಜೊತೆಗೆ ಬ್ಯಾಂಕುಗಳ ನಿಗದಿತ ಮರುಪಾವತಿಯನ್ನು ಮರುಪಾವತಿಯ ಗುರಿಯನ್ನು ತಲುಪಿಸುವಲ್ಲಿ ಸಮುದಾಯ ಅಭಿವೃದ್ಧಿ ಸಂಘವು ನಿರಂತರವಾಗಿ ಕಾರ್ಯ ನಿರ್ವಹಿಸಿಕೊಂಡು ಬಂದಿದೆ.
* ಸಮುದಾಯದಲ್ಲಿ ಅಸೆಟ್ಸ್ ಕ್ರಿಯೇಟ್ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.
* ಸಮುದಾಯದಲ್ಲಿ ಅಸೆಟ್ಸ್ ಕ್ರಿಯೇಟ್ ಮಾಡಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.
* ಸಮುದಾಯ ಅಭಿವೃದ್ಧಿ ಸಂಘದ ಮುಖಾಂತರ ಮಹಿಳಾ ನಿರಂತರ ಉಳಿತಾಯ ಗುಂಪುಗಳನ್ನು ರಚಿಸಿ ಇವುಗಳನ್ನು ಒಟ್ಟುಗೂಡಿಸಿ ಒಕ್ಕೂಟದ ವೇದಿಕೆಯನ್ನು ಕಲ್ಪಿಸುವುದು.

**ಸ್ವಯಂ ಉದ್ಯೋಗ (Urban Self Employment Programme)**

ನಗರ ಪ್ರದೇಶಗಳಲ್ಲಿರುವ ಬಡ ಕುಟುಂಬಗಳ ಫಲಾನುಭವಿಗಳಿಗೆ ಸಣ್ಣ ಉದ್ದಿಮೆ ಹಾಗೂ ಚಟುವಟಿಕೆಗಳನ್ನು ಕೈಗೊಳ್ಳಲು ಆರ್ಥಿಕ ನೆರವು ನೀಡುವುದು, ಸ್ವಯಂ ಉದ್ಯೋಗ ಪ್ರಾರಂಭಿಸಲು ಬ್ಯಾಂಕುಗಳ ಮುಖಾಂತರ ಸಾಲ ಸೌಲಭ್ಯ ಒದಗಿಸುವುದು. ಯೋಜನೆಯ ಗರಿಷ್ಠ ಮೊತ್ತ 50,000=00, ಬ್ಯಾಂಕ್ ಸಾಲ 80% 40,000=00 ಯೋಜನೆಯಿಂದ ಸಹಾಯಧನ 15 (7,500=00) ಫಲಾನುಭವಿಯ ಪಾಲು 5%-2,500=00. ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಫಲಾನುಭವಿಗಳನ್ನು ಗುರುತಿಸುವಾಗ ಈ ಕೆಳಗಿನ ಅಂಶಗಳನ್ನು ಗಮನದಲ್ಲಿಟ್ಟುಕೊಳ್ಳಲಾಗಿದೆ.

| | | | |
|---|---|---|---|
| * | ಮಹಿಳೆಯರಿಗೆ ಹೆಚ್ಚಿನ ಆದ್ಯತೆ | - | 33.33% |
| * | ಪರಿಶಿಷ್ಠ ಜಾತಿ | - | 16.5% |
| * | ಪರಿಶಿಷ್ಠ ಪಂಗಡ | - | 4.5% |
| * | ಅಂಗವಿಕಲರು | - | 3% |
| * | ಅಲ್ಪ ಸಂಖ್ಯಾತರು | - | 15% |

ಫಲಾನುಭವಿಗಳಿಗೆ ವಿದ್ಯಾರ್ಹತೆಯ ಬಗ್ಗೆ ಕಡ್ಡಾಯವಿರುವುದಿಲ್ಲ. ಆದರೆ ಫಲಾನುಭವಿಗಳು 9ನೇ ತರಗತಿಗಿಂತ ಹೆಚ್ಚಿಗೆ ಓದಿರಬಾರದು. (ಪಿ.ಎಂ.ಆರ್.ವೈ. 9ನೇ ತರಗತಿಯ ನಂತರದವರಿಗೆ ಅವಕಾಶ ಕಲ್ಪಿಸಲಾಗಿದೆ.)

* ಫಲಾನುಭವಿಗಳನ್ನು ಗುರುತಿಸುವಾಗ ಆರ್ಥಿಕ ಮಾನದಂಡದ ಜೊತೆಯಲ್ಲಿ ಆರ್ಥಿಕೇತರ ಮಾನದಂಡವನ್ನು ಕೂಡ ಪರಿಗಣಿಸಬೇಕು.

**ನಗರ ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಕೈಗೊಂಡಿರುವ ಚಟುವಟಿಕೆಗಳು**

ನಗರದಲ್ಲಿ ಇಲ್ಲಿಯವರೆಗೆ 842 ಗುರಿಯನ್ನು ಸಾಧಿಸಲು ಅವಕಾಶ ನೀಡಲಾಗಿತ್ತು. ಇದಕ್ಕಾಗಿ 35.86 ಲಕ್ಷ ರೂ.ಗಳನ್ನು ಖರ್ಚು ಮಾಡಲಾಗಿದೆ. ನಗರ ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಪ.ಜಾ. : 130, ಪ.ಪಂ. : 36, ಅಲ್ಪಸಂಖ್ಯಾತರು : 109, ಅಂಗವಿಕಲರು : 21, ಇತರೆ : 423 ಒಟ್ಟು 719 ಗುರಿಯನ್ನು ತಲುಪಿದೆ. ಇದರಲ್ಲಿ ಮಹಿಳೆಯರು 251 ಫಲಾನುಭವಿಗಳಾಗಿದ್ದಾರೆ ಮತ್ತು ಇವರೆಲ್ಲರೂ ನಿರತಂರ ಉಳಿತಾಯ ಗುಂಪಿನ ಸದಸ್ಯರಾಗಿದ್ದಾರೆ. ಸ್ವಯಂ ಉದ್ಯೋಗ ಕೈಗೊಳ್ಳುವವರು ಅಗತ್ಯವೆನಿಸಿದರೆ ತರಬೇತಿಯನ್ನು ಈ ಯೋಜನೆಯಲ್ಲಿ ಪಡೆಯಬಹುದು. ಈ ರೀತಿ ತರಬೇತಿ ಪಡೆದವರು ಹೈನುಗಾರಿಕೆ, ಗಾರ್ಮೆಂಟ್ಸ್, ಅಗರ ಬತ್ತಿ ತಯಾರಿಕೆ, ಗ್ಯಾರೇಜ್, ಬೊಂಬೆ ತಯಾರಿಕೆ, ಬುಕ್ ಬೈಂಡಿಂಗ್, ಪ್ರಾವಿಷನ್ ಸ್ಟೋರ್ಸ್, ಕೇಟರಿಂಗ್, ಲಾಂಡ್ರಿ, ಬ್ಯೂಟಿ ಪಾರ್ಲರ್, ಫ್ಲವರ್ ಡೆಕೋರೇಷನ್, ಹಪ್ಪಳ, ಸಂಡಿಗೆ, ಚಕ್ಕುಲಿ ಮತ್ತು ನಿಪ್ಪಟ್ಟು ತಯಾರಿಕೆ, ಚರ್ಮದ ವಸ್ತುಗಳ ತಯಾರಿಕೆ, ಕರ್ಪೂರ ತಯಾರಿಕೆ, ಫ್ಯಾನ್ಸಿ ಸ್ಟೋರ್ಸ್, ಹೇರ್ ಸಲೂನ್, ಪಾನ್ ಶಾಪ್, ಹ್ಯಾಂಡಿಕ್ರಾಫ್ಟ್, ಹಣ್ಣಿನ ಅಂಗಡಿ, ಕಾರ್ಪೆಂಟರಿ, ಕಾಂಡಿಮೆಂಟ್ಸ್, ಲಾಂಡ್ರಿ, ಫೋಟೋ ಸ್ಟುಡಿಯೋ, ಬೇಕರಿ, ಹೋಟೆಲ್, ಬಟ್ಟೆ ವ್ಯಾಪಾರ, ಆಟೋ ರಿಕ್ಷಾ, ಪಾನ್ ಶಾಪ್, ಚಪ್ಪಲಿ ಅಂಗಡಿ ಇತ್ಯಾದಿ ಚಟುವಟಿಕೆಯಲ್ಲಿ ಸ್ವಯಂ ಉದ್ಯೋಗ ಕೈಗೊಂಡಿದ್ದಾರೆ.

ನಗರ ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಕೈಗೊಂಡಿರುವ ಚಟುವಟಿಕೆಗಳಿಗೆ ಪಡೆದ ಸಾಲವನ್ನು ನಿಗದಿತ ಸಮಯದಲ್ಲಿ ಮರುಪಾವತಿಸಲಾಗಿದೆ. ಬ್ಯಾಂಕಿನವರ ಸಹಕಾರದಿಂದ ಕಾರ್ಯಕ್ರಮ ಉತ್ತಮವಾಗಿ ಅನುಷ್ಠಾನಗೊಳ್ಳುತ್ತಲಿದೆ.

## Case Study : 1

ಫಲಾನುಭವಿಯ ಹೆಸರು : ನಾಗುಬಾಯಿ

ವಿಳಾಸ : ಹಿರೇಜಂತಕಲ್, ಹೆಚ್.ಆರ್.ಜಿ. ಮನೆ ಹತ್ತಿರ, ಅಣ್ಣೂರು ಗೌರಮ್ಮ ಕ್ಯಾಂಪ್, ಗಂಗಾವತಿ.

ಕೌಟುಂಬಿಕ ಪರಿಚಯ :

ಸಾಧಾರಣ ಕುಟುಂಬದವರಾದ ನಾವು ಹೇಗೋ ಜೀವನ ನಡೆಸುತ್ತಿದ್ದೆವು. ಹೊಟ್ಟೆ ತುಂಬಾ ಊಟ ಬಿಟ್ಟರೆ ಮತ್ಯಾವ ಸೌಲಭ್ಯ ನನ್ನಲ್ಲಿರಲಿಲ್ಲ. ಆದರೆ ವಿಧಿವಶಾತ್ ನನ್ನ ಗಂಡ ನನ್ನನ್ನು ಬಿಟ್ಟು ಕಾಲವಶರಾದರು. ಇನ್ನೇನು ಪ್ರಪಂಚ ಮುಳುಗಿತ್ತು. ನನ್ನ ಗೋಳು ಯಾರಿಗೆ ಹೇಳಬೇಕು. ಏನು ಮಾಡಬೇಕು ತೋಚದೆ ಕೈ ಕಟ್ಟಿಕೊಂಡಿರಲು ಮತ್ತು ಇತ್ತ ಮಕ್ಕಳ ವಿದ್ಯಾಭ್ಯಾಸ ಅವರ ಜೀವನದ ನಿರ್ವಹಣೆಯ ಜವಾಬ್ದಾರಿ ಇವೆಲ್ಲ ನನ್ನನ್ನು ಬಹಳಷ್ಟು ವೇದನೆಗೊಳಪಟ್ಟಿತ್ತು. ನನ್ನ ವಯಸ್ಸು ತುಂಬಾ ಚಿಕ್ಕದಾಗಿರುವುದರಿಂದ ನನಗೆ ಹೊರಗಿನ ಪ್ರಪಂಚದ ಅರಿವು ಇಲ್ಲದೇ ಇರುವುದು, ಅತ್ತೆ ಮಾವನವರ ಕೈಯಲ್ಲಿ ಜೀವನ ನಿರ್ವಹಣೆ ಮಾಡುವುದು ತುಂಬಾ ಕಷ್ಟವಾಗಿತ್ತು. ಅದರಲ್ಲಿ ಗಂಡ ಸತ್ತರೆ ಅದರಲ್ಲೂ ಬಡಮಹಿಳೆಯರ ಪಾಡು ಆ ದೇವರಿಗೇ ಗೊತ್ತು. ನೊಂದ, ಬೆಂದ ನನ್ನ ಪಾಲಿಗೆ ವರವಾಗಿದ್ದು ಈ ಯೋಜನೆ.

**ಸ್ವಯಂ ಉದ್ಯೋಗದ ಉಪಯೋಗ ಪಡೆಯುವುದಕ್ಕಿಂತ ಮೊದಲು ಎದುರಿಸುತ್ತಿದ್ದ ಸಮಸ್ಯೆಗಳು :**

ಪತಿಯ ಅಕಾಲಿಕ ಮರಣದಿಂದ ನೊಂದ ನಾನು ಬಹಳಷ್ಟು ಚಿಂತನೆಯಲ್ಲಿರಲು ಚಿಕ್ಕ ವಯಸ್ಸು, ಮತ್ತೆ ಮೇಲೆ ವಿಧವೆಯ ಪಟ್ಟ, ಮನೆಯಲ್ಲಿಯೇ ಸಾಕಷ್ಟು ಜೀವನ ನಡೆಸುತ್ತಿದ್ದ ನಾನು ಒಂದು ರೂಪಾಯಿ ಬೇಕಾದರೂ ಬೇರೆಯವರನ್ನು ಆಶ್ರಯಿಸಬೇಕಿತ್ತು. ಮನೆಯಲ್ಲಿ ಸೊಸೆ ಮತ್ತು ಮಕ್ಕಳ ನಿರ್ವಹಣೆ ಮನೆಯವರಿಗೆ ಭಾರವಾದ್ದರಿಂದ ಇಲ್ಲಸಲ್ಲದ ಮಾತುಗಳನ್ನು ಕೇಳಬೇಕಾಗುತ್ತಿತ್ತು. ಆರ್ಥಿಕ ಪರಿಸ್ಥಿತಿ ಎಲ್ಲಿಯಾದರೂ ಹೋಗಿ ದುಡಿಯೋಣ ಎಂದರೆ ಹೆಚ್ಚಿನ ವಿದ್ಯಾಭ್ಯಾಸದ ಕೊರತೆ. ಇವೆಲ್ಲಾ ನನ್ನನ್ನು ಮೂಕವಿಸ್ಮಿತಳಂತೆ ಭಾಸವಾಗತೊಡಗಿತು. ಇನ್ನು ಜೀವನ ಸಾಗಿಸುವುದು ಕಷ್ಟವಾಗತೊಡಗಿತು. ಹೇಗೆ ಬದುಕು ಎದುರಿಸಬೇಕು, ಜೀವನವನ್ನು ಹೇಗೆ ಮುಂದುವರೆಸಬೇಕು, ನನ್ನ ಮತ್ತು ಮಕ್ಕಳ ಯೋಗಕ್ಷೇಮ, ಮಕ್ಕಳ ವಿದ್ಯಾಭ್ಯಾಸ, ಬದುಕಲು ತುಂಬಾ ಕಷ್ಟದ ಸಮಯದಲ್ಲಿ ನನ್ನ ಬಾಳಿಗೆ ಆದರ್ಶವಾಗಿದ್ದು ದಾರಿದೀಪವಾಗಿದ್ದು ಈ ಯೋಜನೆ.

"ಯೋಜನೆಯಿಂದ ಸೌಲಭ್ಯ ಪಡೆಯಲು ಪ್ರೇರಕವಾದ ಅಂಶಗಳು, ಬ್ಯಾಂಕಿನವರ ಸಹಕಾರ, ಉದ್ಯಮ ಆರಂಭಿಸಲು ಅನುಕೂಲಕರವಾದ ಅಂಶಗಳ ಕುರಿತು ಮಾಹಿತಿ."

ತನ್ನ ನೆರೆಹೊರೆ ಗುಂಪಿನ ಮೂಲಕ ಮಾಹಿತಿ ಪಡೆದು ಸಮುದಾಯ ಸಂಘಟಕರ ಒಂದು ಸಲಹೆ ಸಹಕಾರದ ಮೇರೆಗೆ ಸಂದರ್ಶನದಲ್ಲಿ ನಾನು ಸಂದರ್ಶನಕ್ಕೆ ಬಂದಾಗ ಕೆನರಾ ಬ್ಯಾಂಕ್ ವ್ಯವಸ್ಥಾಪಕರು ನನ್ನೆಲ್ಲಾ ಕಷ್ಟಗಳನ್ನು ಕೇಳಿ ನನಗೆ ಆರ್ಥಿಕ ಸಹಾಯವನ್ನು ಒದಗಿಸಿದ್ದು, ಯೋಜನೆಯ ಅಧಿಕಾರಿಗಳು ಮತ್ತು ಬ್ಯಾಂಕಿನ ಸಹಾಯ ಸಹಕಾರ 4 ತಿಂಗಳ ನಂತರ ಕೆನರಾ ಬ್ಯಾಂಕಿನಿಂದ 44,000=00 ರೂ. ಕಾರಕುಟ್ಟುವ ಮತ್ತು ರುಬ್ಬುವ ಯಂತ್ರಗಳ "ಭವಾನಿ ಇಂಡಸ್ಟ್ರೀಸ್"ಸ್ಥಾಪಿಸಲಾಯಿತು. ಅಂಧಕಾರದ ಬಾಳಿನಲ್ಲಿ ಆಶಾಕಿರಣ ಮೂಡಿತು. ಅಲ್ಲಿಂದ ನನ್ನ ಪರಿಸ್ಥಿತಿಯಲ್ಲಿ ಸುಧಾರಣೆಯ ಜೊತೆಗೆ ಸಂತಸದ ನಿಟ್ಟುಸಿರು ಬಿಡುವಂತೆ ಆಯಿತು. ನೆರೆಹೊರೆ ಸಮಿತಿ ಸಹಕಾರ ಯೋಜನೆಯ ಅಧಿಕಾರಿಗಳಿಂದ ಬ್ಯಾಂಕಿನವರಿಂದ ನಾನು ಆನಂದ ಜೀವನ ನಡೆಸುತ್ತಿರುವೆ. ಇವರಿಗೆ ನಾನು ಚಿರಋಣಿ. ನನ್ನನ್ನು ಸ್ವಾವಲಂಬಿಯಾಗಿ ಬದುಕಲು ಕಲಿಸಿದ ಈ ಯೋಜನೆಗೆ ತುಂಬು ಹೃದಯದ ಕೃತಜ್ಞತೆ ಸಲ್ಲಿಸುವೆ.

**ಯೋಜನೆಯ ಸದುಪಯೋಗ ಮತ್ತು ಉತ್ತಮ ಜೀವನಕ್ಕೆ ಸಹಾಯಕವಾದ ಅಂಶಗಳು**

ಯೋಜನೆಯಿಂದ ಬರಡಾದ ಬದುಕಿಗೆ ಆಸರೆ ಸಿಕ್ಕಿದೆ. ಮತ್ತು ಸಾಲವನ್ನು ಮರುಪಾವತಿ ಮಾಡಲು ಬ್ಯಾಂಕಿಗೆ ಹೋಗುವೆ. ಬ್ಯಾಂಕ್ ಸಾಲ ನಿರ್ವಹಣೆ ಖರ್ಚು ತೆಗೆದು ರೂ. 1000.00 ಗಳಿಕೆ ನನ್ನದು. "ಮನಸ್ಸಿದ್ದರೆ ಮಾರ್ಗ"ದಿಂದ

ಸಾಧಿಸಿದೆ. ನಿರ್ಜೀವವಾಗಿದ್ದ ನನಗೆ ಸಂಜೀವಿನಿಯಾಗಿದ್ದು ಎಲ್ಲರ ಸಹಕಾರ. ಮಹಿಳೆಯರಿಗೆ ಮತ್ತು ನನಗೆ ತುಂಬಾ ಪ್ರಯೋಜನವಾಗಿದೆ. ಈಗ ನಾನು ನೆಮ್ಮದಿಯ ಜೀವನ ನಡೆಸುತ್ತಿರುವೆ. ನನ್ನ ಮಕ್ಕಳ ಯೋಗಕ್ಷೇಮದ ಜೊತೆಗೆ ಮನೆಯವರೆಲ್ಲಾ ತುಂಬಾ ಸಂತೋಷದಿಂದ ಜೀವನದಲ್ಲಿ ಪ್ರಯಾಣಿಸುತ್ತಿದ್ದೆ. ಇಂತಹ ಯೋಜನೆಗಳು ಬರಬೇಕು. ನನ್ನಂತಹ ವಿಧವೆಯರಿಗೆ ಬರಡಾದ ಜೀವನದವರಿಗೆ ಆಸರೆ ಇಲ್ಲದವರಿಗೆ ನಿರುದ್ಯೋಗದವರಿಗೆ ಅವಕಾಶ ಮಾಡಿ ಕೊಟ್ಟಂತೆ ಮತ್ತು ಅದರ ಜೊತೆಗೆ ಯಾರನ್ನು ಆಶ್ರಯಿಸದೇ ಜೀವನ ನಿರ್ವಹಣೆ ಮಾಡಬಹುದು ಎಂದು ಹೆಮ್ಮೆಯಿಂದ ಹೇಳುವೆ.

**ನಿರಂತರ ಉಳಿತಾಯ ಗುಂಪು**

ಗಂಗಾವತಿ ನಗರಸಭೆಯ ವ್ಯಾಪ್ತಿಯಲ್ಲಿ 36 ವಾರ್ಡುಗಳಲ್ಲಿ ಸ್ವರ್ಣ ಜಯಂತಿ ಶಹರಿ ಯೋಜನೆ ಅಡಿಯಲ್ಲಿ ಇದುವರೆಗೆ ಉಳಿತಾಯ ಗುಂಪುಗಳ ರಚನೆ ಮಾಡಲಾಗಿದೆ. ನಿರ್ಮಲ ನಗರ ಯೋಜನೆಯಲ್ಲಿ ಒಟ್ಟು 275 ಗುಂಪುಗಳು ಕಾರ್ಯ ನಿರ್ವಹಿಸುತ್ತಲಿವೆ. ಫೆಬ್ರವರಿ - 2009 ರ ಅಂತ್ಯಕ್ಕೆ ಒಟ್ಟು ಬಿಡುಗಡೆಯಾದ ಆವರ್ತಕ ನಿಧಿ ಮೊತ್ತ 16,68,400-00 ಗುಂಪುಗಳಿಗೆ ಬಿಡುಗಡೆ ಮಾಡಿದ ಮೊತ್ತ 1668400-00. ಒಟ್ಟು ಗುಂಪಿನ ಫಲಾನುಭವಿಗಳ ಸಂಖ್ಯೆ 1385. ಯೋಜನೆಯ ಮಾರ್ಗಸೂಚಿಯಲ್ಲಿ ತಿಳಿಸಿರುವಂತೆ ಅರ್ಹ ಮಹಿಳೆಯರನ್ನು ಒಟ್ಟುಗೂಡಿಸಿ ವಿವಿಧ ಗುಂಪುಗಳಾಗಿ ರಚಿಸಲಾಗಿದೆ. ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಜಂಟಿ ಖಾತೆಗಳನ್ನು ತೆರೆದು ಹಣಕಾಸು ವ್ಯವಹಾರಗಳನ್ನು ನಿರ್ವಹಿಸಲು ಪ್ರತಿನಿಧಿ -1 ಮತ್ತು ಪ್ರತಿನಿಧಿ -2ರವರಿಗೆ ಸೂಕ್ತ ತರಬೇತಿಯನ್ನು ನೀಡಲಾಗಿದೆ.

## ಗುಂಪುಗಳು ಹೊಂದಿರುವ ಉದ್ದೇಶಗಳು

* ಮಹಿಳಾ ಸದಸ್ಯರಲ್ಲಿ ಉಳಿತಾಯದ ಅಭ್ಯಾಸವನ್ನು ಪ್ರೋತ್ಸಾಹಿಸುವುದು.
* ಬಳಿಕ ಆದಾಯ ಸೃಜನೆ, ಆಸ್ತಿ ಸಂಪಾದನೆ ಮತ್ತಿತರ ಯುಕ್ತ ಉದ್ದೇಶಗಳಿಗಾಗಿ ಸಾಲದ ಅಗತ್ಯತೆಗಳನ್ನು ಪೂರೈಸುವುದು.
* ತಮ್ಮ ಉತ್ಪಾದನೆಯನ್ನು ಹೆಚ್ಚಿಸುವಂತೆ ಮಾಡುವ ಪರಿಣತಿಯನ್ನು ಪಡೆಯಲು ಸದಸ್ಯರಿಗೆ ನೆರವಾಗುವುದು.
* ಬ್ಯಾಂಕುಗಳು, ಸ್ವಯಂಸೇವಾ ಸಂಸ್ಥೆಗಳು ಮತ್ತಿತರ ಮೂಲಗಳಿಂದ ಹಣಕಾಸು ನೆರವನ್ನು ಮತ್ತು ಇತರ ಸಂಪನ್ಮೂಲಗಳನ್ನು ಕ್ರೋಢೀಕರಿಸುವುದು ಹಾಗೂ ಕುಟುಂಬದ ಸರ್ವತೋಮುಖ ಅಭಿವೃದ್ಧಿಗಾಗಿ ವಿವಿಧ ಲಾಭದಾಯಕ ಚಟುವಟಿಕೆಗಳನ್ನು ಕೈಗೊಳ್ಳುವುದು.
* ಇತರ ಏಜೆನ್ಸಿಗಳ ಜೊತೆಗೂಡಿ ಸದಸ್ಯರಿಗೆ ಯೋಜನೆಯ ಅಡಿಯಲ್ಲಿ ವಿಮಾ ಸೇವೆಗಳನ್ನು ಒದಗಿಸುವುದು.

## ಗುಂಪಿನಲ್ಲಿ ಕಂಡು ಬಂದ ಅಂಶಗಳು :

* ಸಮಾನ ಚಿಂತನೆಯ ಮಹಿಳಾ ಸದಸ್ಯರು ಒಂದುಗೂಡಿ ಈ ಉಳಿತಾಯ ಗುಂಪುಗಳನ್ನು ಪ್ರಾರಂಭಿಸಲಾಗಿದೆ.
* ಸದಸ್ಯರಾಗಲು ಯಾರಿಗೂ ಬಲವಂತ ಮಾಡಿರುವುದಿಲ್ಲ.
* ಸದಸ್ಯರು ಗುಂಪಿನ ನಿಯಮಗಳನ್ನು ಮತ್ತು ಕರ್ತವ್ಯಗಳನ್ನು ಹಾಗೂ ಜವಾಬ್ದಾರಿಯನ್ನು ನಿರ್ವಹಿಸುತ್ತಾರೆ.
* ಗುಂಪಿನಲ್ಲಿ ಪಡೆದ ಸಾಲಗಳನ್ನು ಆದಾಯ ಉತ್ಪತ್ತಿ, ವೈಯಕ್ತಿಕ ಸಾಲ, ಆಸ್ತಿ ಸಂಪಾದನೆ ಮತ್ತಿತರ ಉಪಯುಕ್ತ ಉದ್ದೇಶಗಳಿಗಾಗಿ ಸಾಲದ ಅಗತ್ಯತೆ ಪೂರೈಸಲಾಗಿದೆ.
* ಗುಂಪುಗಳಿಗೆ ಆಂತರಿಕ ಸಾಲ ನಿರ್ವಹಣೆಗೆ ಸಮರ್ಪಕವಾಗಿ ನಿರ್ವಹಿಸಲಾಗಿದೆ.
* ಗುಂಪಿನ ವ್ಯವಹಾರಗಳ ಬಗ್ಗೆ, ಲೆಕ್ಕದ ಬಗ್ಗೆ ದಾಖಲಾತಿಗಳನ್ನು ನಿರ್ವಹಿಸಲಾಗಿದೆ.
* ಗುಂಪಿನ ಸದಸ್ಯರಿಗೆ ಗುಂಪಿನ ವ್ಯವಹಾರಗಳ ಬಗ್ಗೆ, ಲೆಕ್ಕದ ಬಗ್ಗೆ ದಾಖಲಾತಿಗಳನ್ನು ನಿರ್ವಹಿಸಲಿಕ್ಕೆ ಅಗತ್ಯ

ತರಬೇತಿಗಳನ್ನು ನೀಡಲಾಗಿದೆ.

* ಗುಂಪಿನ ನಿಯಮದಂತೆ ಪ್ರತಿ ತಿಂಗಳಿಗೆ ಎರಡು ಬಾರಿ ಸಭೆ ಸೇರಿ ಗುಂಪಿನ ವ್ಯವಹಾರಗಳ ಬಗ್ಗೆ, ಲೆಕ್ಕದ ಬಗ್ಗೆ ಒಮ್ಮತ ತೀರ್ಮಾನ ಕೈಗೊಳ್ಳುತ್ತಾರೆ.
* ಆದ್ಯತೆಯ ಮೇಲೆ ಗುಂಪಿನ ಸದಸ್ಯರಿಗೆ ಸಾಲವನ್ನು ವಿತರಿಸಲಾಗುತ್ತದೆ.
* ಗುಂಪುಗಳಿಗೆ ಸಾಲದ ಅವಶ್ಯಕತೆ ಪೂರೈಸಲು ಬ್ಯಾಂಕ್ ಸಂಪರ್ಕ ಕಲ್ಪಿಸುವುದು.
* ಮಹಿಳೆಯರಲ್ಲಿ ಉಳಿತಾಯದ ಅಭ್ಯಾಸವನ್ನು ಪ್ರೋತ್ಸಾಹಿಸುವುದಕ್ಕಾಗಿ ಯೋಜನೆಯಿಂದ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.
* ಆದಾಯ ಉತ್ಪತ್ತಿ, ವೈಯಕ್ತಿಕ ಸಾಲ, ಆಸ್ತಿ ಸಂಪಾದನೆ ಮತ್ತಿತರ ಉಪಯುಕ್ತ ಉದ್ದೇಶಗಳಿಗಾಗಿ ಸಾಲದ ಅಗತ್ಯತೆಗನುಗುಣವಾಗಿ ಸಾಲ ವಿತರಿಸಲಾಗಿದೆ.
* ಆದಾಯ ಉತ್ಪತ್ತಿಯನ್ನು ಹೆಚ್ಚಿಸಲು ಪರಿಣಿತಿಯನ್ನು ಪಡೆಯಲು ನೆರವು ಪಡೆಯುವುದು ಉದ್ಯಮಶೀಲತಾ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಸದಸ್ಯರ ಕುಟುಂಬಗಳಲ್ಲಿ ಶೈಕ್ಷಣಿಕ, ಆರೋಗ್ಯ ಹಾಗೂ ಸಾಮಾಜಿಕ ಪರಿಸ್ಥಿತಿಗಳ ಬಗ್ಗೆ ಅರಿವು ಮೂಡಿಸಲು ಗುಂಪಿನ ಸದಸ್ಯರ ಅಭಿಪ್ರಾಯದ ಮೇರೆಗೆ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

## Case Study : 2

ನಿರಂತರ ಉಳಿತಾಯ ಗುಂಪು (ಟಿ.ಸಿ.ಜಿ.)

ಶ್ರೀದೇವಿ - ನಿರಂತರ ಉಳಿತಾಯ ಗುಂಪು

ವಿಳಾಸ : ಬನ್ನಿಗಿಡದ ಕ್ಯಾಂಪ್, ವಾ.ನಂ. 12, ಶಿವಾ ಟಾಕೀಸ್ ಹಿಂದೆ, ಗಂಗಾವತಿ.

**ಕೌಟುಂಬಿಕ ಪರಿಚಯ :**

ನಮ್ಮದು ಏನು ಕೇಳ್ತೀರಾ ಸಾರ್, ನಾವು ದುಡಿದು ತಿನ್ನುವ ಜನ. ನಮ್ಮ ಗೋಳು ಸರ್ವೇಸಾಮಾನ್ಯ. ಹೆಬ್ಬೆಟ್ಟಿನ ಜನ ನಾವು. ನಮ್ಮಂತಹವರಿಗೆ ಯಾರ ನೆರವೂ ಇಲ್ಲ. ಗಂಡ ತಂದಿದ್ದರಲ್ಲಿ ಜೀವನ ನಡೆಸುವುದು, ಇದ್ದರೆ ಊಟ ಮಾಡುವುದು, ಇಲ್ಲದಿದ್ದರೆ ಉಪವಾಸ ಇರುವುದು. ನಾವು ಮಾಡುವ ಉದ್ಯೋಗದಿಂದ ಬರುವ ಲಾಭ ಸ್ವಲ್ಪ. ಇದರಲ್ಲಿ ಏನೇನು ಪಡೆಯಬಹುದು. ಇಚ್ಛೆ ಪಟ್ಟಂತಹ ವಸ್ತು ಕೊಳ್ಳುವ ಸಾಮರ್ಥ್ಯವಿಲ್ಲದ ನಮ್ಮ ಜೀವನ ಮತ್ತು ಮಕ್ಕಳ ವಿದ್ಯಾಭ್ಯಾಸ ಮಾಡಿಸಬೇಕು. ಅವರನ್ನು ಉದ್ಯೋಗದಲ್ಲಿ ತೊಡಗಿಸಬೇಕು. ಮತ್ತು ನೌಕರಿಯನ್ನು ಮಾಡಿಸಬೇಕು ಎನ್ನುವ ಹಂಬಲ. ನಮ್ಮ ಕನಸುಗಳು ನನಸಾಗುತ್ತವೆ ಇಲ್ಲವೆ ಎನ್ನುವ ನಂಬಿಕೆಯಲ್ಲಿರಲು ಪ್ರೇರಣೆ ಮತ್ತು ಆಸಕ್ತಿ.

ಸ್ವಯಂ ಉದ್ಯೋಗದ ಉಪಯೋಗ ಪಡೆಯುವುದಕ್ಕಿಂತ ಮೊದಲ ಜೀವನ / ಬದುಕು, ಎದುರಿಸುತ್ತಿದ್ದ ಸಮಸ್ಯೆಗಳು.

ಬಡತನದ ಬೇಗೆಯಲ್ಲಿ ಬೆಂದ ನಾವು ಒಳ್ಳೆಯ ಊಟ ಮಾಡಲು ಮತ್ತು ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಮಾಡಿಸಲಾಗದ ಸ್ಥಿತಿ ನಮ್ಮದು. ಯಾರ ಆಸರೆ ಬಯಸಿದರೆ ನಮಗೆ ಸಾಲ ಕೊಡಲು ಯಾರು ತಾನೇ ಸಾಲ ನೀಡಲು ಬರುತ್ತಾರೆ. ನಮ್ಮ ಗೋಳು ಕಣ್ಣೀರು ಬಿಟ್ಟರೆ ನಮ್ಮ ಆಸ್ತಿ ಬೇರೆ ಯಾವುದೂ ಇಲ್ಲ. ಹರಕು-ಮುರುಕು ಗುಡಿಸಲಿನಲ್ಲಿ ಜೀವನ ಬಿಸಿಲಿಗೆ ಸುಡುವುದು, ಮಳೆಗೆ ತೊಯ್ದು, ಚಳಿಗೆ ನಡುಗುವುದು ಇವು ಪಾಲಿನ ಸಮಸ್ಯೆಗಳು. ಇಂತಹ ಸ್ಥಿತಿಯಲ್ಲಿ ಆಸರೆಯಾಗಿ ಬಂದಿದ್ದು ಸ್ವಾವಲಂಬಿಯಾಗಿ ಬದುಕಲು ಪ್ರೇರೇಪಿಸಿದ್ದು ಈ ಯೋಜನೆ.

ಯೋಜನೆಯಿಂದ ಸೌಲಭ್ಯ ಪಡೆಯಲು ಪ್ರೇರಕವಾದ ಅಂಶಗಳು, ಬ್ಯಾಂಕಿನವರ ಸಹಕಾರ, ಉದ್ಯಮ

ಆರಂಭಿಸಲು ಅನುಕೂಲಕರವಾದ ಅಂಶಗಳ ಕುರಿತು ಮಾಹಿತಿ.

ಅಕ್ಕಪಕ್ಕದ ನೆರೆಹೊರೆ ಸಮಿತಿಯ ಸದಸ್ಯರು ಸ್ವಸಹಾಯ ಗುಂಪು ಮಾಡಿ ಅದರ ಸೌಲಭ್ಯಗಳನ್ನು ಪಡೆದು ಸ್ವಾವಲಂಬಿಯಾಗಿ ಬದುಕುವ ರೀತಿ ಮತ್ತು ಗುಂಪಿನ ಮಾಹಿತಿ ಪಡೆದುಕೊಂಡು ನಾವು ನಗರಸಭೆಗೆ ಹೋಗಿ ಅಲ್ಲಿಯ ಅಧಿಕಾರಿಗಳನ್ನು ಭೇಟಿ ಮಾಡಿ ಗುಂಪಿನ ರೂಪುರೇಷೆಗಳನ್ನು ತಿಳಿದುಕೊಂಡು 2001-02ರಲ್ಲಿ ಶ್ರೀದೇವಿ ನಿರಂತರ ಉಳಿತಾಯ ಗುಂಪು ರಚನೆ ಮಾಡಿದೆವು. ಎಸ್.ಬಿ.ಎಚ್. ಬ್ಯಾಂಕಿನಲ್ಲಿ ಖಾತೆ ತೆಗೆಯಲಾಯಿತು. ಒಂದು ವರ್ಷದವರೆಗೂ ಉಳಿತಾಯ ಮಾಡಿದೆವು. ಒಂದು ವರ್ಷದ ನಂತರ ನಮ್ಮ ಅಧಿಕಾರಿಗಳು ಬ್ಯಾಂಕ್ ಲಿಂಕೇಜ್ ಮಾಡಿಸಿ ಬ್ಯಾಂಕ್ ವ್ಯವಸ್ಥಾಪಕರಿಗೆ ನಮ್ಮ ಗುಂಪಿನ ನಮೂನೆಗಳನ್ನು ಮೀಟಿಂಗ್ ಹಾಜರಾತಿ, ಉಳಿತಾಯ ಬುಕ್ ಎಲ್ಲವನ್ನೂ ತೋರಿಸಲಾಗಿ ಎಲ್ಲವನ್ನೂ ಪರಿಶೀಲಿಸಿ ನಮಗೆ ಮೊದಲ ಸಾಲವನ್ನು ವಿತರಿಸಿದರು.

## ಯೋಜನೆಯ ಸದುಪಯೋಗ ಮತ್ತು ಉತ್ತಮ ಜೀವನಕ್ಕೆ ಸಹಾಯಕವಾದ ಅಂಶಗಳು

ಬ್ಯಾಂಕಿನಿಂದ ಮೊದಲ ಬಾರಿಗೆ ರೂ. 2000-00ರಂತೆ ಸಾಲ ಪಡೆದು ಎಲ್ಲರೂ ಹಂಚಿಕೊಂಡು ಸಣ್ಣಪುಟ್ಟ ಕಿರುವ್ಯಾಪಾರ ಪ್ರಾರಂಭಿಸಿದೆವು. ರೂ. 210000-00ರಂತೆ ಸಾಲವನ್ನು ತೆಗೆದುಕೊಳ್ಳಲಾಯಿತು. ಇದರಿಂದ ಆರ್ಥಿಕ ಸ್ಥಿತಿ ಸುಧಾರಣೆಯಿಂದ ನಮ್ಮ ಬದುಕು ಹಸಿರಿನಂತೆ ಕಂಗೊಳಿಸಲಾಯಿತು. ಹೀಗೆ ಉಳಿತಾಯ ಮಾಡಲು ಇನ್ನು ಬೇರೆ ಬೇರೆ ಕೆಲಸಗಳಿಗೆ ಪ್ರೋತ್ಸಾಹಿಸಿಕೊಂಡು ಬಟ್ಟೆ ವ್ಯಾಪಾರ, ಹೈನುಗಾರಿಕೆ, ಟೇಲರಿಂಗ್, ಹೂವಿನ ವ್ಯಾಪಾರ, ಕಮ್ಮಾರಿಕೆ ಮಾಡಲಾರಂಭಿಸಿದೆವು. ಗುಂಪಿನ ಮುಖ್ಯಸ್ಥೆಯಾದ ಪದ್ಮಾವತಿ ಗುಂಪಿನ ಸಹಾಯದಿಂದ ಗಂಡನ ಶ್ರಮದಿಂದ ನನ್ನ ಮಗನನ್ನು ಎಂ.ಟೆಕ್. ಓದಿಸುತ್ತಿದ್ದೇವೆ. ನಮ್ಮ ಸ್ಥಿತಿಗತಿ ಸುಧಾರಿಸಿಕೊಂಡು ಸಂತೋಷದಿಂದಿರಲು ಈ ಯೋಜನೆ ಪ್ರಮುಖ. ಮಹತ್ವದ ಬದಲಾವಣೆಗಳನ್ನು ನಮ್ಮ ಜೀವನದಲ್ಲಿ ತಂದಿದೆ. ಇಲ್ಲಿಯವರೆಗೆ ನಾವು ಉಳಿತಾಯ ಮಾಡಿದ್ದು ರೂ. 35000-00, ಬ್ಯಾಂಕಿನಿಂದ ಸಾಲ ಪಡೆದಿದ್ದು ರೂ. 21,000-00 ಬಂದಂತಹ ಬಡ್ಡಿ ರೂ. 4600-00 ಸುತ್ತುನಿಧಿ ರೂ. 5000-00 ಇದ್ದು ಬಂದ ಬಡ್ಡಿಯಲ್ಲಿ ಶೇ. 50ರಷ್ಟು ನಾವು ಹಂಚಿಕೊಂಡಿದ್ದು, ಉಳಿದ ಶೇ. 50ನ್ನು ಬಡಮಕ್ಕಳಿಗೆ ಪುಸ್ತಕ ಚೀಲ, ಪೆನ್ನು, ನೋಟ್‌ಬುಕ್ಸ್‌ಗಳನ್ನು ನೀಡಲಾಗಿದೆ. ಇಂತಹ ಧರ್ಮಕಾರ್ಯಗಳನ್ನು ನೆರವೇರಿಸಲು ಅನುವು ಮಾಡಿಕೊಟ್ಟ ಯೋಜನೆಗೆ ನಮ್ಮಂತಹ ಇನ್ನಿತರರಿಗೆ ಮಾರ್ಗದರ್ಶನವಾಗಲಿ ಎಂದು ಹಾರೈಸುವೆವು.

## ತರಬೇತಿ ಕಾರ್ಯಕ್ರಮದಡಿಯಲ್ಲಿ ನೀಡಲಾಗಿರುವ ತರಬೇತಿಗಳು (Training Component)

ಗಂಗಾವತಿ ನಗರಸಭೆಯ ವ್ಯಾಪ್ತಿಯಲ್ಲಿ ತರಬೇತಿ ಮತ್ತು ಮೂಲಸೌಕರ್ಯ ಯೋಜನೆಯಡಿಯಲ್ಲಿ ಸಾಧಿಸಿದ ಫೆಬ್ರುವರಿ -2009ರ ಅಂತ್ಯಕ್ಕೆ ಬಿಡುಗಡೆ ಮಾಡಿದ ಅನುದಾನ, ಒಟ್ಟು 2220093-00 ತರಬೇತಿ ಹೊಂದಿದ ಫಲಾನುಭವಿಗಳ ಸಂಖ್ಯೆ, 726. ವಿವಿಧ ತರಬೇತಿಗಾಗಿ ಅಂದರೆ ಡಾಲ್ ಮೇಕಿಂಗ್, ಚಾಕ್ ಪೀಸ್ ತಯಾರಿಕೆ, ಸ್ಕ್ರೀನ್ ಪ್ರಿಂಟಿಂಗ್, ಗೃಹವಸ್ತು ಉಪಯೋಗಿ ವಸ್ತುಗಳ ರಿಪೇರಿ, ಅಗರಬತ್ತಿ ತಯಾರಿಕೆ, ಬ್ಯಾಗ್ ತಯಾರಿಕೆ, ಟೇಲರಿಂಗ್, ಕಂಪ್ಯೂಟರ್, ಆಟೋ, ಮೇಣದ ಬತ್ತಿ ತಯಾರಿಕೆ, ಸೋಪಿನ ಪುಡಿ ತಯಾರಿಕೆ, ಕಂಪ್ಯೂಟರ್, ಕಸೂತಿ, ಟೇಲರಿಂಗ್, ಅಣಬೆ, ಮೊಬೈಲ್ ಸರ್ವಿಸಿಂಗ್, ಪತ್ರೋಳ್ಳಿ, ಫ್ಯಾನ್ಸಿ ಆಭರಣಗಳ ತಯಾರಿಕೆ, ಹೈನುಗಾರಿಕೆ, ಗಾರ್ಮೆಂಟ್ಸ್, ಅಗರಬತ್ತಿ ತಯಾರಿಕೆ, ಗ್ಯಾರೇಜ್, ಬೊಂಬೆ ತಯಾರಿಕೆ, ಬುಕ್ ಬೈಂಡಿಂಗ್, ಪ್ರಾವಿಷನ್ ಸ್ಟೋರ್ಸ್, ಕೇಟರಿಂಗ್ ಲಾಂಡ್ರಿ, ಬ್ಯೂಟಿ ಪಾರ್ಲರ್, ಫ್ಲವರ್ ಡೆಕೋರೇಷನ್, ಹಪ್ಪಳ ತರಬೇತಿ, ಎಲೆಕ್ಟ್ರಿಕಲ್ ಹೋಮ್ ಅಪ್ಲೈಯನ್ಸ್‌ಸ್, ಎಲೆಕ್ಟ್ರಾನಿಕ್ ಸಾಮಾಗ್ರಿಗಳ ರಿಪೇರಿ, ಮೊಬೈಲ್ ಹಾರ್ಡ್‌ವೇರ್, ಡ್ರೈವಿಂಗ್ ತರಬೇತಿ ಜೊತೆಗೆ ಲೈಸನ್ಸ್, ಸ್ಕ್ರೀನ್ ಪ್ರಿಂಟಿಂಗ್, ಡಿಜರ್ಟೆಂಟ್, ಸೋಪ್ಸ್, ಫಿನಾಯಿಲ್ ತಯಾರಿಕೆ, ಆಟೋ ಮೊಬೈಲ್, ಟೈಲರಿಂಗ್, ಎಂಬ್ರಾಯ್ಡರಿ, ನಿಟ್ಟಿಂಗ್, ಮೇಣದ ಬತ್ತಿ ತಯಾರಿಕೆ, ಹೋಮ್ ನರ್ಸಿಂಗ್ ಇತ್ಯಾದಿ. ಒಟ್ಟು 408,046-00

ಹಣವನ್ನು ಖರ್ಚು ಮಾಡಲಾಗಿದೆ. ಸ್ವಯಂ ಉದ್ಯೋಗ ಹಾಗೂ ಡ್ವಾಕ್ವಾಕಾರ್ಯಕ್ರಮದಡಿಯಲ್ಲಿ ಚಟುವಟಿಕೆಗಳನ್ನು ಕೈಗೊಳ್ಳಲು ಮತ್ತು ಕೌಶಲ್ಯತೆಯನ್ನು ಅಭಿವೃದ್ಧಿಗೊಳಿಸಲು ಯೋಜನೆಯ ವತಿಯಿಂದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಪ್ರತಿ ಅಭ್ಯರ್ಥಿಗೆ ತರಬೇತಿ ವೆಚ್ಚ ಗರಿಷ್ಠ 2000-00 ರೂ.ಗಳನ್ನು ಖರ್ಚು ಮಾಡಲು ಯೋಜನೆಯಲ್ಲಿ ಅವಕಾಶವನ್ನು ಕಲ್ಪಿಸಲಾಗಿದೆ. ತರಬೇತಿ ಅವಧಿ 1 ತಿಂಗಳಿನಿಂದ 3 ತಿಂಗಳಿನಿಂದ 3 ತಿಂಗಳು ಅಥವಾ ಕನಿಷ್ಟ 300 ಗಂಟೆಗಳು. ಇದಲ್ಲದೆ ತರಬೇತಿ ಕಿಟ್ಸ್‌ಗಾಗಿ 600-00.

**Case Study : 3**

ನಾನು ಭಾರತಿ. ವಾ.ನಂ. 2ರಲ್ಲಿ ವಾಸಿಸುತ್ತಿದ್ದು, ನನಗೆ ಇರಬೇಕಾದ ಗಂಡನ ಆಶ್ರಯ ಇರಲಿಲ್ಲ. ಜೊತೆಗೆ 2 ಮಕ್ಕಳು ಬೇರೆ. ನಾನೇ ಜೀವನ ನಡೆಸುವುದು ತುಂಬಾ ಕಷ್ಟಕರವಾಗಿರುವಾಗ ಪತಿಯ ಬೇರೆ ಕಡೆ ಸಂಬಂಧ. ಇದರಿಂದ ನನಗೆ ಬಹಳ ಚಿತ್ರಹಿಂಸೆ ನೀಡುತ್ತಿದ್ದರು. ಗಂಡ ಬಿಟ್ಟು ಬಂದರೆ ಸಮಾಜದಲ್ಲಿ ಸಿಗುವ ಮರ್ಯಾದೆ ಹೇಗೆ ಎಂದು ನಾನು ಅವರ ಚಿತ್ರಹಿಂಸೆ ಸಹಿಸಿಕೊಂಡು ಕೊನೆಗೆ ನನ್ನ ತಾಯಿಯವರು ಒಂದು ಸಲ ನಮ್ಮ ಮನೆಗೆ ಬಂದಾಗ ನನ್ನ ಸ್ಥಿತಿ ನನ್ನ ಸ್ಥಿತಿ ನೋಡಿ ತವರಿಗೆ ಕರೆದುಕೊಂಡು ಬಂದರು. ನಾನು ಇನ್ನೊಬ್ಬರಿಗೆ ಭಾರವಾಗಬಾರದು ಎಂಬ ಸ್ಥಿತಿ ನನ್ನನ್ನು ಮತ್ತು ಮಕ್ಕಳನ್ನು ಇನ್ನೊಬ್ಬರ ಆಶ್ರಯದಲ್ಲಿ ಬೆಳೆಯುವಂತೆ ಮಾಡಿತು. ಬದುಕಿನಲ್ಲಿ ಬೇಸತ್ತು ವಿದ್ಯಾವಂತಳಾದ ನಾನು ಏನಾದರೂ ಮಾಡಬೇಕು, ಸಾಧಿಸಬೇಕು, ಸ್ವಾವಲಂಬಿಯಾಗಿ ಮಾಡಬೇಕೆಂಬ ದೃಢನಿಶ್ಚಯ ಮಾಡಿದೆ. ಬದುಕಲು ಒಂದು ಹುಲ್ಲುಕಡ್ಡಿ ಸಿಕ್ಕಿದರೂ ಸಾಕು ಎನ್ನುವ ನಿಟ್ಟಿನಲ್ಲಿ ಆಸರೆಯಾಗಿ ಬಂದಿದ್ದು ಯೋಜನೆ. 2006-07ನೇ ಸಾಲಿನಲ್ಲಿ ತರಬೇತಿಯಲ್ಲಿ ನನಗೆ ಒಂದು ಅವಕಾಶ ಸಿಕ್ಕಿದ್ದು, ಬ್ಯೂಟಿಪಾರ್ಲರ್ ತರಬೇತಿ. ಇಲ್ಲಿ ಅವಕಾಶ ಮಾಡಿಕೊಟ್ಟಂತಹ ಸಿಬ್ಬಂದಿಯವರಿಗೆ ನಾನು ಎಷ್ಟು ಧನ್ಯವಾದಗಳನ್ನು ಸಲ್ಲಿಸಿದರೂ ಕಡಿಮೆ. ತರಬೇತಿ ಮುಗಿಸಿದ ನಂತರ ನನ್ನನ್ನು ಮತ್ತಷ್ಟು ಸಮಾಜದಲ್ಲಿ ತಲೆ ಎತ್ತಿ ನಿಲ್ಲಲು ಮತ್ತು ನನ್ನಂತಹ ನೊಂದ ಮಹಿಳೆಯರಿಗೆ, ಪತಿಯಿಂದ ದೂರವಾದವರಿಗೆ ಆಸರೆ ಇಲ್ಲದ ಬದುಕಿಗೆ ಚೇತನವಾಗಿ ಬಂದದ್ದು ಈ ಯೋಜನೆ. ಅಧಿಕಾರಿಗಳ ಸಲಹೆಯಂತೆ ಅರ್ಜಿ ಸಲ್ಲಿಸಿದ ನಂತರ 2 ತಿಂಗಳೊಳಗೆ ಬ್ಯಾಂಕಿನಿಂದ ರೂ. 50,000 ಸಾಲ ಸೌಲಭ್ಯವನ್ನು ನೀಡಲಾಯಿತು. ಬ್ಯಾಂಕ್ ವ್ಯವಸ್ಥಾಪಕರು ನನಗೆ ಸಹಾಯ ನೀಡುವಲ್ಲಿ ಸಹಕರಿಸಿದರು. ಇಂತಹ ಯೋಜನೆಗಳು ಬರಬೇಕು. ನಮ್ಮಂತಹವರಿಗೆ ದಾರಿದೀಪವಾಗಬೇಕು. ನಾನು ಈಗ ನನ್ನ ಮಕ್ಕಳೊಂದಿಗೆ ಬ್ಯೂಟಿಪಾರ್ಲರ್ ಶಾಪ್‌ನಲ್ಲಿ ಸಂತಸದಿಂದ, ನೆಮ್ಮದಿಯಿಂದ ಜೀವನ ನಡೆಸುತ್ತಿದ್ದೇನೆ.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (ಡ್ವಾಕ್ವಾ) ಗುಂಪು**
**(Development Women and Children in Urban Area)**

**ಡ್ವಾಕ್ವಾ ಗುಂಪಿನ ಉದ್ದೇಶಗಳು**

* ಗುಂಪಿನಲ್ಲಿ ಕನಿಷ್ಠ 10 ಮಹಿಳೆಯರು ಇರಬೇಕು.
* ಗುಂಪಿಗೆ ಸಾಲದ ಸೌಲಭ್ಯ ಗರಿಷ್ಠ 2.50 ಲಕ್ಷ ರೂ.ಗಳು.
* ಯೋಜನೆಯಿಂದ ಧನಸಹಾಯ ಗರಿಷ್ಠ 1.25 ಲಕ್ಷ ಅಥವಾ ಶೇ. 50% ರಷ್ಟು ಯೋಜನಾ ವೆಚ್ಚ.
* ಡ್ವಾಕ್ವಾ ಗುಂಪು ನಿರತಂರ ಉಳಿತಾಯ ಗುಂಪು ಆಗಿದ್ದಲ್ಲಿ ಗುಂಪಿಗೆ ತಲಾ 5000-00 ರೂ.ಗಳ ಆವರ್ತಕ ನಿಧಿ ಬಿಡುಗಡೆ.
* ಗುಂಪಿನಿಂದ ಮಾರ್ಜಿನ ಹಣ - 5%
* ಡ್ವಾಕ್ವಾ ಕಾರ್ಯಕ್ರಮದಲ್ಲಿ ಗುಂಪು ಉದ್ಯೋಗ ಕೈಗೊಳ್ಳುವ ಮೊದಲು ಉದ್ಯಮಶೀಲತಾ ಅಭಿವೃದ್ಧಿ

ಕಾರ್ಯಕ್ರಮದಡಿಯಲ್ಲಿ ತರಬೇತಿ ಪಡೆಯುವ ಬಗ್ಗೆ ಹಾಗೂ ಉದ್ಯೋಗದ ಬಗ್ಗೆ ಕೌಶಲ್ಯ ತರಬೇತಿ ಪಡೆಯುವ ಬಗ್ಗೆ ಗುಂಪು ಮಾಹಿತಿ ಹೊಂದಿರಬೇಕು.

ಗಂಗಾವತಿ ನಗರಸಭೆಯ ವ್ಯಾಪ್ತಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಗುಂಪು ಯೋಜನೆಯಡಿಯಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿದ ಅನುದಾನ, 2446296-00, ಫಲಾನುಭವಿಗಳ ಸಂಖ್ಯೆ 246, ಖರ್ಚಾದ ಅನುದಾನ 1606296-00.

ಡ್ವಾಕ್ರಾ ಕಾರ್ಯಕ್ರಮದಡಿಯಲ್ಲಿ ಆರ್ಥಿಕ ನೆರವು ಪಡೆದ ಗುಂಪುಗಳು ಈ ಕೆಳಗಿನ ಚಟುವಟಿಕೆಯನ್ನು ನಡೆಸುತ್ತಿವೆ.

ಹೈನುಗಾರಿಕೆ, ಗಾರ್ಮೆಂಟ್ಸ್, ಅಗರಬತ್ತಿ ತಯಾರಿಕೆ, ಮೇಣದ ಬತ್ತಿ ತಯಾರಿಕೆ, ಬೊಂಬೆ ತಯಾರಿಕೆ, ಬುಕ್ ಬೈಂಡಿಂಗ್, ಥ್ರೆಡ್ ರಿವೈಂಡಿಂಗ್, ಮಲ್ಟಿ ಪರ್ಪಸ್ ಸೊಸೈಟಿ, ಪ್ರಾವಿಷನ್ ಸ್ಟೋರ್ಸ್, ಕೇಟರಿಂಗ್, ಬ್ಯೂಟಿ ಪಾರ್ಲರ್, ಪ್ಲವರ್ ಡೆಕೊರೇಷನ್, ಅಡಿಕೆ ಹಾಳೆಯಲ್ಲಿ ತಟ್ಟೆ ತಯಾರಿಕೆ, ಹಪ್ಪಳ, ಸಂಡಿಗೆ, ಚಕ್ಕುಲಿ ಮತ್ತು ನಿಪ್ಪಟ್ಟು ತಯಾರಿಕೆ, ಬಾಟಲಿ ಮುಚ್ಚಳ ತಯಾರಿಕಾ ಘಟಕ, ಚರ್ಮದ ವಸ್ತುಗಳ ತಯಾರಿಕೆ, ಕರ್ಪೂರ ತಯಾರಿಕೆ, ಫ್ಯಾನ್ಸಿ ಸ್ಟೋರ್ಸ್, ಹೇರ್ ಸಲೂನ್, ಪಾನ್ ಷಾಪ್, ಹ್ಯಾಂಡಿ ಕ್ರಾಫ್ಟ್, ಹಣ್ಣಿನ ಅಂಗಡಿ, ಕಾರ್ಪೆಂಟರಿ, ಕಾಂಡಿಮೆಂಟ್ಸ್, ಲಾಂಡ್ರಿ, ಫೋಟೋ ಸ್ಟುಡಿಯೋ, ಬೇಕರಿ, ಹೊಟೇಲ್ ಇತ್ಯಾದಿ ಅಗತ್ಯ ತರಬೇತಿಯನ್ನು ಪಡೆದುಕೊಂಡಿವೆ.

ಗಂಗಾವತಿ ನಗರಸಭೆಯ ವ್ಯಾಪ್ತಿಯಲ್ಲಿ ಒಟ್ಟು 33 ಡ್ವಾಕ್ರಾ ಕಾರ್ಯಕ್ರಮದಡಿಯಲ್ಲಿ ಆರ್ಥಿಕ ನೆರವು ಪಡೆದ ಗುಂಪುಗಳು ಈ ಕೆಳಗಿನ ಸ್ವೀಟ್ ವ್ಯಾಪಾರ, ರೆಡಿಮೇಡ್ ಗಾರ್ಮೆಂಟ್ಸ್ ಹಾಲಿನ ಡೈರಿ, ರೇಷ್ಮೆ ಹಾರ ತಯಾರಿಕೆ, ಕುರಿ ಸಾಕಾಣಿಕೆ, ಪತ್ರೋಳಿ ಎಲೆ ತಯಾರಿಕೆ, ಸೋಪು ಫಿನಾಯಿಲ್ ತಯಾರಿಕೆ, ರೊಟ್ಟಿ ತಯಾರಿಕೆ, ರೊಟ್ಟಿ ವ್ಯಾಪಾರ, ಚಟುವಟಿಕೆಗಳನ್ನು ನಡೆಸುತ್ತಿವೆ. ಈ ಪೈಕಿ ಹಲವು ಪ್ರಮುಖ ಗುಂಪುಗಳೆಂದರೆ ಸ್ಪಂದನ, ವಿಜಯಲಕ್ಷ್ಮಿ, ವರಮಹಾಲಕ್ಷ್ಮಿ, ಶ್ರೀಸಾಯಿ, ದಾನಮ್ಮದೇವಿ, ಮಾತೋಶ್ರೀ, ಚೇತನ, ಸುವರ್ಣ ಕರ್ನಾಟಕ, ಪ್ರಿಯಾಂಕ, ಸುಜಾತ, ಭಾರ್ಗವಿ ಇತ್ಯಾದಿ. ಇದರಲ್ಲಿ ಪರಿಶಿಷ್ಟ ಜನಾಂಗದ 48 ಮಹಿಳೆಯರು ಪ.ಪಂ. 18 ಮಹಿಳೆಯರು, ಅಲ್ಪ ಸಂಖ್ಯಾತರು 37 ಮಹಿಳೆಯರು, ಇತರೆ 221 ಒಟ್ಟು 322 ಮಹಿಳೆಯರು ಯೋಜನೆಯ ಸದುಪಯೋಗವನ್ನು ಅನುಭವಿಸುತ್ತಿದ್ದಾರೆ. ಈ ಗುಂಪುಗಳಿಗೆ ಇಲ್ಲಿಯವರೆಗೆ ಒಟ್ಟು 1,277250/- ಯೋಜನಾವೆಚ್ಚವನ್ನು ಖರ್ಚು ಮಾಡಲಾಗಿದೆ. ಯೋಜನೆಯಿಂದ ಒಟ್ಟು 412500/- ಸಹಾಯ ಧನವನ್ನು ನೀಡಲಾಗಿದೆ. ಆರಂಭದಲ್ಲಿ ಎಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (ಡ್ವಾಕ್ರಾ) ಗುಂಪುಗಳು ನಿರಂತರ ಉಳಿತಾಯ ಗುಂಪುಗಳಾಗಿ ಕಾರ್ಯನಿರ್ವಹಿಸಿದ್ದ ಅನುಭವವನ್ನು ಹೊಂದಿವೆ. ವ್ಯಾವಹಾರಿಕ ಜ್ಞಾನವನ್ನು ಹೊಂದಿರುತ್ತಾರೆ. ಹೀಗಾಗಿ ಇಲ್ಲಿನ ಬಹುತೇಕ ಡ್ವಾಕ್ರಾ ಗುಂಪುಗಳು ಸ್ವಾವಲಂಬಿ ಗುಂಪುಗಳಾಗಿ ಕಾರ್ಯನಿರ್ವಹಿಸುತ್ತವೆ. ಯೋಜನೆಯಲ್ಲಿ ಸಾಲ ಪಡೆದ ಬಹುತೇಕ ಗುಂಪುಗಳು ಸಾಲವನ್ನು ಮರುಪಾವತಿ ಮಾಡಿರುತ್ತಾರೆ. ಈ ನಗರದಲ್ಲಿ ಮಹಿಳೆಯರು ಗುಂಪುಗಳನ್ನು ರಚಿಸಿ, ಸ್ವಯಂ ಉದ್ಯೋಗ ಕೈಗೊಂಡು, ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳಲು ಸಹಕಾರಿಯಾಗಿದೆ.

## Case Study : 4

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ (ಡ್ವಾಕ್ರಾ) ಗುಂಪು ಡ್ವಾಕ್ರಾ**

ಫಲಾನುಭವಿಯ ಹೆಸರು : ಭಾರ್ಗವಿ ಡ್ವಾಕ್ರಾ ವಿಳಾಸ, ಬನ್ನಿಗಿಡದ ಕ್ಯಾಂಪ್, ವಾ. ನಂ. : 12 ಶಿವೆ ಟಾಕೀಜ್ ಹಿಂದೆ, ಗಂಗಾವತಿ, ಬಿದಿರಿನ ಸಾಮಗ್ರಿ ಘಟಕ, ಮಲ್ಲಮ್ಮ, ನಾಗಮ್ಮ, ರೇಣುಕಾ, ಶೋಭಾ, ಗಾಯತ್ರಿ, ಹುಲಿಗೆಮ್ಮ, ಗೀತಾ, ದುರಗಮ್ಮ, ಶಂಕ್ರಮ್ಮ, ಗಾಳೆಮ್ಮ.

**ಕೌಟುಂಬಿಕ ಪರಿಚಯ :**

ನಮ್ಮ ಕುಟುಂಬಗಳು ತೀರಾ ಬಡತನದಲ್ಲಿಯೇ ನಿರ್ವಹಣೆ. ಬಡತನದ ಪ್ರವಾಹದ ವಿರುದ್ಧ ಈಜುವುದು ನಮ್ಮ ಬದುಕಿನ ಬವಣೆ. ಗಂಡ ತಂದಿದ್ದರಲ್ಲಿ ಅಡುಗೆ ಮಾಡಿ ಮಕ್ಕಳಿಗೂ ಗಂಡನಿಗೂ ನೀಡಿ ಮಿಕ್ಕಿದ್ದು ಊಟ ಮಾಡುವ ಸಂದರ್ಭ. ಗಂಡಸರು ಮಾಡುವುದು ಬಿದಿರಿನ ಕೆಲಸದಲ್ಲಿ ಕೈಗೂಡುವುದು, ಗಂಡಂದಿರು ಕೆಲಸ ಮಾಡುವಾಗ ಕೈಗೆ ಚಾಕು ಪೆಟ್ಟು ಬಿದ್ದರೆ 8 ದಿನಗಳ ಕೆಲಸ ನಿಂತು ಹೋಗುತ್ತಿತ್ತು. ಇದರಿಂದ ಸಮಸ್ಯೆ ಬಹಳವಾಗುತ್ತಿತ್ತು. ಆದಾಯವಿಲ್ಲದೇ ಜೀವನ ನಿರ್ವಹಣೆ ಮಾಡುವುದು ಬಹಳ ಕಷ್ಟವಾಗುತ್ತಿತ್ತು. ಇಂತಹ ಸಮಯದಲ್ಲಿ ಬೆಳಕಾಗಿ ಬಂದಿದ್ದು ಈ ಯೋಜನೆ.

ಸ್ವಯಂ ಉದ್ಯೋಗದ ಉಪಯೋಗ ಪಡೆಯುವುದಕ್ಕಿಂತ ಮೊದಲ ಜೀವನ / ಬದುಕು, ಎದುರಿಸುತ್ತಿದ್ದ ಸಮಸ್ಯೆಗಳು.

ನಾವು ಗಂಡಂದಿರು ಕೆಲಸದಲ್ಲಿ ಭಾಗಿಯಾಗಿ ಹೆಚ್ಚಿನ ಕೆಲಸ ಮಾಡಲು ಆರ್ಥಿಕ ಸಮಸ್ಯೆ. ನಾವು ವಿದ್ಯಾವಂತರಿಲ್ಲದ್ದು ಮತ್ತೊಂದು ಸಮಸ್ಯೆ. ಮುಸುರೆ ಕೆಲಸಗಳನ್ನು ಮಾಡಲು ಮನಸ್ಸು ಒಪ್ಪದು. ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾರ ಮುಂದೆಯೂ ಕೈ ಚಾಚುವಂತಿಲ್ಲ. ಸಾಲವನ್ನು ನಾವು ಬಯಸಿದರೂ ಕೊಡುವವರು ಯಾರೂ ಇಲ್ಲ. ನಮ್ಮ ಆಸೆ ಆಕಾಂಕ್ಷೆಗಳು ಆಸೆಗಳಾಗಿ ಉಳಿಯುತ್ತಿದ್ದವು. ಬೊಂಬಿನ ಕೆಲಸ ಯಾವಾಗಲೂ ಸತತವಾಗಿರುವುದಿಲ್ಲ. ಮದುವೆ ಮಾಸ, ಜಾತ್ರೆ ಸಮಯ ಇಂತಹ ಕಾಲದಲ್ಲಿ ಮಾತ್ರ ಮಾರಾಟ. ಇದರಿಂದ ಆರ್ಥಿಕ ಸಮಸ್ಯೆ ಎದುರಿಸುತ್ತಿದ್ದೆವು. ಯೋಜನೆಯಿಂದ ಸೌಲಭ್ಯ ಪಡೆಯಲು ಪ್ರೇರಕವಾದ ಅಂಶಗಳು, ಬ್ಯಾಂಕಿನವರ ಸಹಕಾರ, ಉದ್ಯಮ ಆರಂಭಿಸಲು ಅನುಕೂಲಕರವಾದ ಅಂಶಗಳ ಕುರಿತು ಮಾಹಿತಿ.

ನಮ್ಮ ಸಹಜ ಜೀವನದಲ್ಲಿ ನಾವೆಲ್ಲ ಕೂಲಿ ಮಾಡುತ್ತಿರುವಲ್ಲಿ ನಮ್ಮನ್ನು ಹುಡುಕಿ ಬಂದಿದ್ದು ಈ ಯೋಜನೆಯ ಸಿಬ್ಬಂದಿಗಳು ಮೊದಲು ಮಲಿಯಮ್ಮ ನಿರಂತರ ಉಳಿತಾಯ ಗುಂಪು ರಚಿಸಿ ಉಳಿತಾಯವನ್ನು ಪ್ರಾರಂಭಿಸಿದೆವು. 7 ತಿಂಗಳ ನಂತರ ನಮ್ಮ ಕುಲಕಸುಬು ಇದಾಗಿರುವುದರಿಂದ ನೀವು ಏಕೆ ಈ ಕೆಲಸವನ್ನು ಅಭಿವೃದ್ಧಿ ಮಾಡಬಾರದೆಂದು ನಮಗೆ ಅರಿವು ಮೂಡಿಸಿ ನಾವು ಸಾಲವನ್ನು ಕೊಡುವುದಾಗಿ ತಿಳಿಸಿದರು ಹಾಗೂ ನಿಮ್ಮ ಗಂಡಂದಿರಿಗೆ ತಾಯಿ ತಂದೆಗಳಿಗೆ ಹೆಗಲು ಕೊಡಬಹುದು. ಸಣ್ಣ ಪ್ರಮಾಣದಲ್ಲಿದ್ದುದನ್ನು ಹೆಚ್ಚಿನ ಮಟ್ಟದಲ್ಲಿ ಪ್ರೇರೇಪಿಸಿದರು. ಮಾತಿನಂತೆ ನಡೆದುಕೊಂಡ ಸಿಬ್ಬಂದಿಯವರು ನಮಗೆ ಡ್ವಾಕ್ರಾ ಅರ್ಜಿ ಹಾಕಿಸಿ 2 ತಿಂಗಳಲ್ಲಿ ನಮಗೆ ಸಿಂಡಿಕೇಟ್ ಬ್ಯಾಂಕಿನಿಂದ ರೂ. 95,000-00 ಸಾಲ ನೀಡಲಾಗಿ, ರೂ. 50000-00 ಸಹಾಯಧನ, ರೂ. 5000-00 ಮಾರ್ಜಿನ್‌ನಂತೆ ಸಾಲ ಸೌಲಭ್ಯ ಒದಗಿಸಲಾಯಿತು. ಕ್ರಮೇಣವಾಗಿ ನಾವು ಅಭಿವೃದ್ಧಿ ಹೊಂದುತ್ತಾ ಈಗ ನೆಮ್ಮದಿಯ ಉಸಿರು ಬಿಡುತ್ತಿದ್ದೇವೆ.

## ಯೋಜನೆಯ ಸದುಪಯೋಗ ಮತ್ತು ಉತ್ತಮ ಜೀವನಕ್ಕೆ ಸಹಾಯಕವಾದ ಅಂಶಗಳು

ಈ ಯೋಜನೆಯಿಂದ ನಾವು ಸಂತಸ ಕಂಡಿದ್ದಲ್ಲದೆ ಮಕ್ಕಳಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡುವುದರಲ್ಲಿ ಸಹಾಕಾರಿಯಾಗಿದ್ದೇವೆ. ಮನೆಯ ದುರಸ್ತಿ, ಬಿಸಿಲು, ಮಳೆಯಿಂದ ರಕ್ಷಣೆ ಮಾಡಿಕೊಂಡಿದ್ದೇನೆ. ಸಕಾಲದಲ್ಲಿ ಬೊಂಬಿನ ಸಾಮಗ್ರಿಗಳನ್ನು ಹೆಚ್ಚಿನ ಮಟ್ಟದಲ್ಲಿ ಸಂಗ್ರಹಿಸಿಕೊಂಡು ಇಟ್ಟಿರುತ್ತೇವೆ. ಬೇಡಿಕೆಗಳು ಬಂದಾಗ ನಾವು ಮದುವೆಯ ಮನೆಯ ಶೃಂಗಾರ ಬೇಸಿಗೆಯಲ್ಲಿ ಬೀಸಣಿಕೆ, ಮುಂತಾದವು ಮಾಡಿ ಮಾರಾಟ ಮಾಡುತ್ತೇವೆ. ಬಂದಂತಹ ಮೊತ್ತದಲ್ಲಿ ಖರ್ಚು ವೆಚ್ಚ ಕಳೆದು ಬ್ಯಾಂಕಿಗೆ ಸಾಲವನ್ನು ಮರುಪಾವತಿ ಮಾಡಿ ಉಳಿದ ಮೊತ್ತದಲ್ಲಿ ನಾವೆಲ್ಲ ಹಂಚಿಕೊಂಡು ಸಂತೋಷದಿಂದಿದ್ದೇವೆ. ನಮ್ಮಂತಹ ಬಡವರಿಗೆ ಯಾರೂ ಸಹಾಯ ಮಾಡದ ಸಂದರ್ಭದಲ್ಲಿ ಯಾವ ಗ್ಯಾರಂಟಿಯಿಲ್ಲದೆ ನಮ್ಮಂತಹ ಬಡವರಿಗೆ ರೂ. 10000-00 ಸಾಲ ನೀಡಿದ್ದು ಒಂದು ಗಣನೀಯವಾದುದು. ಕುರುಡನಿಗೇನು ಬೇಕು? 2 ಕಣ್ಣು ಸರ್, ಆ ಕಣ್ಣುಗಳೇ ಈ ಯೋಜನೆಯು. ಮತ್ತು ಸಿಬ್ಬಂದಿ ವೃಂದ ಇಂತಹ ಒಂದು ಯೋಜನೆಗೆ ಸಾಲಸೌಲಭ್ಯ

ನೀಡಿದ ಬ್ಯಾಂಕ್ ಸಿಬ್ಬಂದಿಗೆ ತುಂಬು ಹೃದಯದ ಧನ್ಯವಾದಗಳು. ಈ ತರಹದ ಯೋಜನೆಗಳು ಬಹಳ ಅವಶ್ಯಕವಾಗಿವೆ. ಬಡವರಿಗೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಯೋಜನೆಗಳು ಕಾರ್ಯರೂಪಕ್ಕೆ ಬರಲಿ ಎಂದು ತುಂಬು ಹೃದಯದಿಂದ ಶ್ಲಾಘಿಸುತ್ತಿದ್ದೇನೆ.

## ನಗರ ಉದ್ಯೋಗ ಆಧಾರಿತ ಯೋಜನೆ (Urban weage employment Programme)

ಈ ಕಾರ್ಯಕ್ರಮದಲ್ಲಿ ನಗರ ಪ್ರದೇಶಗಳಲ್ಲಿ ಕೂಲಿ ಆಧಾರಿತ ಕಟ್ಟಡ ನಿರ್ಮಾಣ ಹಾಗೂ ಇತರೆ ಕಾಮಗಾರಿ ಕೆಲಸಗಳಲ್ಲಿ ಬಡ ಕುಟುಂಬದ ಸದಸ್ಯರಿಗೆ ಉದ್ಯೋಗ ಒದಗಿಸುವುದು. ಈ ಯೋಜನೆ ಪ್ರಮುಖವಾಗಿ ಪಟ್ಟಣದಲ್ಲಿನ ಕೊಳಗೇರಿ ಮತ್ತು ಕಡುಬಡವರ ಪ್ರದೇಶಗಳನ್ನು ಭೌತಿಕವಾಗಿ ಅಭಿವೃದ್ಧಿ ಪಡಿಸುವ ಗುರಿಯನ್ನು ಹೊಂದಿರುವುದಾಗಿದ್ದು, ಗಂಗಾವತಿ ನಗರದಲ್ಲಿ ಪ್ರಮುಖವಾಗಿ ಆಶ್ರಯ ಮನೆಗಳಲ್ಲಿ ವಾಸಿಸುವಂತ ಮತ್ತು ಕೊಳಗೇರಿಗಳಲ್ಲಿ ವಾಸಿಸುವಂತಹ ಜನರ ಬಡಾವಣೆಗಳಲ್ಲಿ ಚರಂಡಿ, ಕಾಲುವೆ, ಕಲ್ಲು ಚಪ್ಪಡಿ ಕಾಮಗಾರಿ, ಕಾಂಕ್ರೀಟ್ ಡಕ್ ನಿರ್ಮಾಣ ಕಾಮಗಾರಿ ಮತ್ತು ಮಿನಿವಾಟರ್ ಸಪ್ಲೆ ಮೊದಲಾದ ಕಾಮಗಾರಿಗಳನ್ನು ಕೈಗೊಳ್ಳುವುದರ ಮೂಲಕ ಜನರ ದೈನಂದಿನ ಜೀವನವನ್ನು ಸುಧಾರಿಸಿದೆ ಎಂದು ಹೇಳಬಹುದು. ಹಾಗೆಯೇ ಈ ಯೋಜನೆಯಡಿ ಇಲ್ಲಿನ ಬಡವರಿಗೆ ಉದ್ಯೋಗ / ಕೂಲಿಯನ್ನು ಒದಗಿಸಿ ಕೊಡುವುದರ ಮೂಲಕ ಅವರ ಆರ್ಥಿಕ ಪರಿಸ್ಥಿತಿಯನ್ನು ಸಹಾ ಸುಧಾರಿಸಿದೆ ಎಂಬುದನ್ನು ಕೆಳಗಿನ ಅಂಕಿ-ಅಂಶಗಳ ಸಹಾಯದಿಂದ ತಿಳಿಯಬಹುದು.

* ಈ ಕಾರ್ಯಕ್ರಮದಲ್ಲಿ ವಿದ್ಯಾರ್ಹತೆಗೆ ಯಾವುದೇ ನಿರ್ಬಂಧನೆ ಇರುವುದಿಲ್ಲ.
* ಈ ಕಾರ್ಯಕ್ರಮವು 5 ಲಕ್ಷಕ್ಕಿಂತ ಕಡಿಮೆ ಜನಸಂಖ್ಯೆ ಇರುವ ನಗರಗಳಿಗೆ ಮಾತ್ರ ಅನ್ವಯಿಸುವುದು. ಮಹಾನಗರ ಪಾಲಿಕೆಗಳಿಗೆ ಈ ಕಾರ್ಯಕ್ರಮವು ಅನ್ವಯಿಸುವುದಿಲ್ಲ.
* ಈ ಘಟಕದಲ್ಲಿ ಕನಿಷ್ಠ ಕೂಲಿ ಆಧಾರದ ಮೇಲೆ ಫಲಾನುಭವಿಗಳಿಗೆ ಕೂಲಿ ನೀಡುವ ನಿಯಮವನ್ನು ಪಾಲಿಸಲಾಗುತ್ತದೆ.

ಸ್ವರ್ಣ ಜಯಂತಿ ಶಹರಿ ರೋಜಗಾರ ಯೋಜನೆ ಅಡಿಯಲ್ಲಿ ನಗರ ಉದ್ಯೋಗ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಯನ್ನು ಯೋಜನೆಯ ಮಾರ್ಗಸೂಚಿ ಅನುಸಾರ 60 : 40 ಅನುಪಾತದಂತೆ (ಶೇ. 60 ಸಾಮಗ್ರಿ ಬಳಕೆ ಮತ್ತು ಶೇ. 40 ಕೂಲಿಗಾಗಿ) ಬಳಕೆ ಮಾಡಿಕೊಂಡು ಕಾಮಗಾರಿ ನಿರ್ವಹಿಸಲಾಗಿದೆ. ಮತ್ತು ಶೇ. 40ರಷ್ಟು ಕೂಲಿಯನ್ನು ಯೋಜನೆಯಲ್ಲಿ ಸಮೀಕ್ಷೆ ಮಾಡಿದ ಬಿ.ಪಿ.ಎಲ್. ಕುಟುಂಬಗಳ ಕಡಿಮೆ ಆದಾಯವುಳ್ಳವರಿಗೆ ಕೂಲಿ ಒದಗಿಸಲಾಗಿದೆ.

ಸ್ವರ್ಣ ಜಯಂತಿ ಶಹರಿ ರೋಜಗಾರ ನಗರಸಭೆ ಗಂಗಾವತಿ ನಗರ ಉದ್ಯೋಗ ಯೋಜನೆಯಡಿಯಲ್ಲಿ ಕೈಗೊಂಡ ಕಾಮಗಾರಿಗಳು -2009 ರ ಅಂತ್ಯಕ್ಕೆ ನಗರ ಉದ್ಯೋಗ ಯೋಜನೆಯಡಿಯಲ್ಲಿ ಬಿಡುಗಡೆ ಮಾಡಿದ ಹಣ. 4958565-00, ಗುರಿಯನ್ನು 31,92,565-00 ನಿಗದಿ ಪಡಿಸಲಾಗಿತ್ತು. ತೆಗೆದುಕೊಂಡ ಕಾಮಗಾರಿಗಳೆಂದರೆ, ಕೊಳಚೆ ಪ್ರದೇಶದಲ್ಲಿ 11ಸಮುದಾಯ ಭವನ ನಿರ್ಮಾಣ, ಕೊಳಚೆ ಪ್ರದೇಶದಲ್ಲಿ 8 ಅಂಗನವಾಡಿ ಕೇಂದ್ರಗಳ ನಿರ್ಮಾಣ, 11 ಅಕ್ಷರ ದಾಸೋಹ ಅಡಿಗೆ ಕೇಂದ್ರಗಳ ನಿರ್ಮಾಣ, 4 ಸಮುದಾಯ ಭವನಗಳು ಮತ್ತು 1 ಶೌಚಾಲಯ, ಸಮುದಾಯ ಭವನ 1 ಇವುಗಳ ನಿರ್ಮಾಣಕ್ಕೆ ಖರ್ಚು ಮಾಡಲಾದ ಹಣ 5,05000.00

ಗಂಗಾವತಿ ನಗರದಲ್ಲಿ 31 ವಾರ್ಡುಗಳಿದ್ದು 30 ಕೊಳಚೆ ಪ್ರದೇಶಗಳನ್ನು ಹೊಂದಿದೆ ಮತ್ತು ವಲಸೆ ಬಂದವರಿಂದ ಕೂಡಿದ ನಗರವಾಗಿದೆ. ಈ ಯೋಜನೆ ಅಡಿಯಲ್ಲಿ ನಗರದಲ್ಲಿ ಒಟ್ಟು 33 ನೆರೆಹೊರೆ ಸಮಿತಿಗಳಿವೆ. ಕೊಳಚೆ ಪ್ರದೇಶದಲ್ಲಿರುವ ನೆರೆಹೊರೆ ಸಮಿತಿ, ಗುಂಪುಗಳ ಸದಸ್ಯರು ಸಭೆ ಮಾಡಲು ಸಮುದಾಯ ಭವನಗಳು ಇರಲಿಲ್ಲ. ಯಾವುದೇ ರಸ್ತೆಯ ಬದಿಯಲ್ಲಿ ಕುಳಿತುಕೊಂಡು ಸಭೆ / ಕಾರ್ಯಕ್ರಮಗಳನ್ನು ಮಾಡಿಕೊಂಡು ಹೋಗುವ

ಪರಿಸ್ಥಿತಿಯಿತ್ತು.

1997-98ರಿಂದ ಈ ಯೋಜನೆಯ ಅಡಿಯಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಮುಂದಾಗಿದ್ದು, ನಗರದ ವಿವಿಧ ಕೊಳಚೆ ಪ್ರದೇಶಗಳಲ್ಲಿ 18 ಸಮುದಾಯ ಭವನಗಳ ನಿರ್ಮಾಣ ಹಾಗೂ 8 ಅಂಗನವಾಡಿ ಕೇಂದ್ರಗಳು, ಒಂದು ಬಾಲವಾಡಿ ಕೇಂದ್ರ ನಿರ್ಮಾಣ, ಹಾಗೂ ರಸ್ತೆ, ಚರಂಡಿಯಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸಿದೆ. ಈ ಎಲ್ಲಾ ಕಟ್ಟಡಗಳಲ್ಲಿಯೂ ಅಂಗನವಾಡಿ ಕೇಂದ್ರಗಳು, ಅಕ್ಷರ ದಾಸೋಹದ ಅಡುಗೆ ಕೇಂದ್ರಗಳು, ತರಬೇತಿ ಕೇಂದ್ರಗಳು, ಮುಂದುವರಿಕೆ ಶಿಕ್ಷಣ ಕೇಂದ್ರಗಳು, ಸಾಕ್ಷರತಾ ಕಾರ್ಯಕ್ರಮ, ಗ್ರಂಥಾಲಯಗಳು ನಡೆಯುತ್ತಿವೆ. ಬಡವರ ಮದುವೆ, ವಿವಿಧ ಶಿಬಿರಗಳು ನಡೆಯಲು ಸಹಕಾರಿಯಾಗಿರುತ್ತವೆ. ಈ ಎಲ್ಲಾ ಕಟ್ಟಡಗಳನ್ನು ನಗರಸಭೆ ಸ್ಥಳದಲ್ಲಿ ನಿರ್ಮಾಣ ಮಾಡಿದ್ದು, ನಗರಸಭೆ ಅಧೀನದಲ್ಲಿವೆ. ಇವೆಲ್ಲವುಗಳು ಈ ಯೋಜನೆಯ ಆಸ್ತಿಯೆಂದರೂ ತಪ್ಪಾಗಲಾರದು. ಪ್ರತಿಯೊಂದು ಕಾರ್ಯಕ್ರಮಗಳು ಇಂತಹ ಸಮುದಾಯ ಭವನಗಳಲ್ಲಿ ನಡೆಯುತ್ತಿವೆ. ಹಾಗೂ ಬೀದಿ ಬದಿಯಲ್ಲಿ ಚಿಂದಿ ಆಯುವ ಅನಾಥ ಬಡಮಕ್ಕಳನ್ನು ಸೇರಿಸಿ ಇವರಿಗೆ ಶಿಕ್ಷಣ ಕೊಡಿಸಲು ಅರುಣೋದಯ ಶಿಶುವಿಹಾರ ಮತ್ತು ಪ್ರಾಥಮಿಕ ಶಾಲೆಯನ್ನು 1 ರಿಂದ 5 ನೇ ತರಗತಿಯವರೆಗೆ ಪ್ರಾರಂಭಿಸಲಾಗಿದೆ. ಈ ಶಾಲೆಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಶಿಕ್ಷಣ ಇಲಾಖೆಯಿಂದ ಮಾನ್ಯತೆ ಪಡೆದಿರುತ್ತದೆ.

ಕಟ್ಟಡ ನಿರ್ವಹಣೆ. ನಗರ ಕೂಲಿ ಉದ್ಯೋಗ ಅಡಿಯಲ್ಲಿ ನಿರ್ಮಿಸಲಾಗಿರುವ ವಿವಿಧ ಕಟ್ಟಡಗಳ ನಿರ್ವಹಣೆಯನ್ನು ಆಯಾ ನೆರೆಹೊರೆ ಗುಂಪಿನ ಸಂಚಾಲಕಿಯವರು ಮತ್ತು ನಿರಂತರ ಉಳಿತಾಯ ಗುಂಪಿನ ಪ್ರತಿನಿಧಿಗಳು ಇದರ ಜವಾಬ್ದಾರಿಯನ್ನು ವಹಿಸುತ್ತಾರೆ. ಯೋಜನೆಯ ಉದ್ದೇಶ ಸಫಲಗೊಂಡಿದೆ.

ಸಾಮಾಜಿಕ ಸೇವಾ ಯೋಜನೆ :ಬಡ ಜನರ ಸಾಮಾಜಿಕ ಮತ್ತು ಸಾಂಸ್ಕೃತಿಕ ಬದಲಾವಣೆ ತರುವಲ್ಲಿ ಕೊಳಚೆ ಪ್ರದೇಶದಗಳಲ್ಲಿನ ಜನರ ಬಾಳಿಗೆ ಇದೊಂದು ಆಶಾಕಿರಣ ಎಂದೇ ಹೇಳಬಹುದು. ಏಕೆಂದರೆ, ಸದರಿ ಯೋಜನೆ ಅಡಿಯಲ್ಲಿ ಕೈಗೊಂಡಿರುವ ಆರೋಗ್ಯ ಶಿಬಿರ, ಸ್ವಚ್ಛತಾ ತಿಳುವಳಿಕೆ ಶಿಬಿರ, ಕಣ್ಣಿನ ಪರೀಕ್ಷೆ ಶಿಬಿರ, ಅಂಗವಿಕಲರಿಗೆ ನೀಡಿರುವ ಸೌಲಭ್ಯಗಳು ಹಾಗೂ ಅಶಕ್ತರಿಗೆ ನೀಡಿರುವ ಸೌಲಭ್ಯಗಳು, ಬಡವರ ಜೊತೆ ಸರ್ಕಾರ ಬೆನ್ನುಲುಬಾಗಿದೆ ಮತ್ತು ಸರ್ಕಾರ ಬಡವರ ಜೀವನದಲ್ಲಿ ಯಾವಾಗಲೂ ಕೈ ಜೋಡಿಸುತ್ತಿದೆ ಎನ್ನುವುದನ್ನು ತೋರಿಸಿಕೊಟ್ಟಿದೆ. ಈ ಯೋಜನೆ ಅಡಿ ಕೈಗೊಂಡಿರುವ ಚಟುವಟಿಕೆಗಳು ಅನೇಕ, ಅವುಗಳನ್ನು ಕೆಳಗಿನ ಅಂಕಿ ಅಂಶ ಮತ್ತು ಛಾಯಾ ಚಿತ್ರದ ಮೂಲಕ ತಿಳಿಯಬಹುದು. ಹಾಗೂ ಈ ಯೋಜನೆಯಿಂದ ಸದರಿ ಜನರ ಜೀವನ ಅನೇಕ ರೀತಿಯಲ್ಲಿ ಉದಾ. ಶೈಕ್ಷಣಿಕವಾಗಿ, ಸಾಮಾಜಿಕವಾಗಿ, ಸಾಂಸ್ಕೃತಿಕವಾಗಿ ಮತ್ತು ಭೌತಿಕವಾಗಿ ಬದಲಾವಣೆಯನ್ನುಂಟು ಮಾಡಿದೆ ಎಂದು ಹೇಳಬಹುದು. ಹಾಗೂ ಈ ಯೋಜನೆಯ ಪ್ರಗತಿಯನ್ನು ಕೆಳಗಿನ ಅಂಕಿ ಅಂಶಗಳಿಂದ ತಿಳಿಯಬಹುದು. ಈ ಕಾರ್ಯಕ್ರಮದಡಿಯಲ್ಲಿ ಯೋಜನೆಯ ಬಗ್ಗೆ ಅರಿವು ಮೂಡಿಸಲು ತರಬೇತಿ, ಮೌಲ್ಯಮಾಪನ ಹಾಗೂ ಇತರೆ ಮಾಹಿತಿಗಳನ್ನು ಒಟ್ಟುಗೂಡಿಸಿ ಸಹಾಯ ಮಾಡಲು ನೆರವಾಗುವಂತೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು. ಯೋಜನೆಯ ಅನುಷ್ಠಾನ ಕುರಿತು ಹೆಚ್ಚಿನ ತಿಳುವಳಿಕೆ ಮೂಡಿಸುವ ಬಗ್ಗೆ ತರಬೇತುದಾರರ ತರಬೇತಿ ಕಾರ್ಯಕ್ರಮ ಆಯ್ದ ಪ್ರತಿನಿಧಿಗಳಿಗೆ ತರಬೇತಿ ಹಾಗೂ ಯೋಜನಾ ಸಿಬ್ಬಂದಿ ವರ್ಗದವರಿಗೆ ತರಬೇತಿ ನೀಡಲು ಅವಕಾಶವಿದೆ. ಇದಕ್ಕಾಗಿ ತರಬೇತಿ ಸಂಸ್ಥೆಗಳಿಗೆ ಅನುದಾನ ನೀಡಲಾಗುತ್ತಿದೆ.

ಯೋಜನೆಯಡಿಯಲ್ಲಿ ಜಿಲ್ಲಾವಾರು ಸಮುದಾಯ ಅಭಿವೃದ್ಧಿ ಸಂಘಗಳನ್ನು ರಚಿಸಿ, ಇವುಗಳ ಮುಖಾಂತರ ಸಮುದಾಯದಲ್ಲಿ ಸಾಮಾಜಿಕ, ಶೈಕ್ಷಣಿಕ, ಆರೋಗ್ಯ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಅನುಷ್ಠಾನಗೊಳಿಸಲಾಗಿದೆ. ಸಮುದಾಯ ಅಭಿವೃದ್ಧಿ ಸಂಘಗಳಡಿಯಲ್ಲಿ ನಿರಂತರ ಉಳಿತಾಯ ಗುಂಪುಗಳನ್ನು ರಚಿಸಿ, ಗುಂಪುಗಳ ಸಭೆಯಲ್ಲಿ ಚರ್ಚಿಸಿ, ಸಮುದಾಯಕ್ಕೆ ಬೇಕಾದ ಸೌಲಭ್ಯಗಳನ್ನು ಒದಗಿಸಲಾಗಿದೆ. ಸಾಮಾಜಿಕ ಸೇವೆಗಳು ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿ, ಫೆಬ್ರವರಿ 2009ರ ಅಂತ್ಯಕ್ಕೆ ಈವರೆಗೂ ಕೈಗೊಂಡ ಚಟುವಟಿಕೆಗಳು.

* ಆರೋಗ್ಯ ತಪಾಸಣೆ ಶಿಬಿರಗಳು ಹಾಗೂ ಔಷಧಿ ವಿತರಣೆ, ಕಣ್ಣು ತಪಾಸಣೆ ಶಿಬಿರಗಳು ಹಾಗೂ ಸರ್ಕಾರಿ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಕನ್ನಡಕ ವಿತರಣೆ.
* ಸರ್ಕಾರಿ ಹಾಗೂ ಮಹಾನಗರ ಪಾಲಿಕೆ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ಮಕ್ಕಳಿಗೆ ನೋಟ್ ಪುಸ್ತಕ ಹಾಗೂ ಶಾಲೆಗಳಿಗೆ ಪೀಠೋಪಕರಣಗಳು ಹಾಗೂ ಆಟದ ಸಾಮಗ್ರಿಗಳನ್ನು ವಿತರಿಸಲಾಗಿದೆ.
* ಶಾಲೆಗಳಿಗೆ ಗ್ರಂಥಾಲಯ ನಿರ್ಮಿಸಲು ಪೀಠೋಪಕರಣಗಳು ಹಾಗೂ ಪುಸ್ತಕಗಳನ್ನು ವಿತರಿಸಲಾಗಿದೆ.
* ಸಾಂಸ್ಕೃತಿಕ ಸ್ಪರ್ಧೆಗಳನ್ನು ಏರ್ಪಡಿಸಿ ಗುಂಪುಗಳ ಸದಸ್ಯರಿಗೆ ಬಹುಮಾನ ವಿತರಣೆ.
* ಉಳಿತಾಯ ಗುಂಪುಗಳ ಸಭೆ ನಡೆಸಲು ಜಮುಖಾನಾ ಹಾಗೂ ಗುಂಪಿನ ದಾಖಲಾತಿಗಳನ್ನು ಇಟ್ಟುಕೊಳ್ಳಲು ಜಿಂಕೇ ಪೆಟ್ಟಿಗೆಗಳನ್ನು ವಿತರಿಸಲಾಗಿದೆ.
* ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಿಗೆ ಕೂರಲು ಮಣೆ, ಆಟದ ಸಾಮಗ್ರಿಗಳು ಹಾಗೂ ಅಡುಗೆ ಸಾಮಗ್ರಿಗಳನ್ನು, ಅಂಗನವಾಡಿ ಕೇಂದ್ರಗಳಿಗೆ ಗ್ಯಾಸ್ ಸಿಲಿಂಡರ್‌ಗಳನ್ನು ಒದಗಿಸಲಾಗಿದೆ.
* ಸದಸ್ಯರ ಮಕ್ಕಳಿಗೆ ವಿದ್ಯಾರ್ಥಿ ವೇತನ ಕೊಡಿಸಲಾಗಿದೆ. ನಿರಂತರ ಉಳಿತಾಯ ಗುಂಪುಗಳ ಸದಸ್ಯರಿಗೆ ಭಾರತೀಯ ಜೀವ ವಿಮಾ ನಿಗಮನದ ವತಿಯಿಂದ ಗುಂಪು ವಿಮಾ ಯೋಜನೆಯಡಿಯಲ್ಲಿ ಸದಸ್ಯತ್ವ ನೀಡಲಾಗಿದೆ.

ಇದಕ್ಕಾಗಿ ಇಲ್ಲಿಯವರೆಗೆ ಒಟ್ಟು 2692474-00 ಬಿಡುಗಡೆ ಮಾಡಲಾಗಿದೆ. 2123774-00 ಖರ್ಚು ಮಾಡಲಾಗಿದೆ.

ಎಸ್.ಜೆ. ಎಸ್. ಆರ್.ವೈ. ಯೋಜನೆಯನ್ನು ಅನುಷ್ಠಾನದಲ್ಲಿನ ಪ್ರಮುಖ ತೊಡಕುಗಳು ಯೋಜನೆಯನ್ನು ಅನುಷ್ಠಾನದ ಪ್ರಗತಿಯು ಕುಂಠಿತವಾಗುತ್ತಿರುವ ಬಗ್ಗೆ ಪರಿಶೀಲಿಸಿದಾಗ ಈ ಕೆಳಗಿನ ಕೆಲವು ಅಂಶಗಳನ್ನು ಗುರುತಿಸಲಾಗಿದೆ.

* ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ಸಾಲದ ಮೊತ್ತ 50,000-00 ರೂ.ಗಳು ಕೆಲವು ಚಟುವಟಿಕೆಗಳಿಗೆ ಸಾಲದೇ ಇರುವುದರಿಂದ, ಈ ಗರಿಷ್ಠ ಮೊತ್ತವನ್ನು ಹೆಚ್ಚಿಸಬೇಕಾಗಿದೆ.
* ಸ್ವಯಂ ಉದ್ಯೋಗ ಕಾರ್ಯಕ್ರಮದಡಿಯಲ್ಲಿ ವಿದ್ಯಾರ್ಹತೆಗೆ ಸಂಬಂಧಿಸಿದಂತಹ ಯಾವುದೇ ನಿರ್ಬಂಧನೆ ಇರಬಾರದು.
* ಡ್ವಾಕ್ವಾ ಕಾರ್ಯಕ್ರಮದಲ್ಲಿ ಮಹಿಳೆಯರ ಸಂಖ್ಯೆಯನ್ನು 10 ಸದಸ್ಯರಿಂದ ಇನ್ನೂ ಕಡಿಮೆ ಮಾಡುವುದು.
* ಯೋಜನೆಯಲ್ಲಿ ಯಾವುದೇ ವಿಶೇಷ ಕಾರ್ಯಕ್ರಮಗಳನ್ನು ಅಳವಡಿಸಲು ಸಾಧ್ಯವಿಲ್ಲದೇ ಇರುವುದು.
* ಕೌಶಲ್ಯ ತರಬೇತಿ ಕಾರ್ಯಕ್ರಮದಡಿಯಲ್ಲಿ ತರಬೇತಿ ವೆಚ್ಚದ ಗರಿಷ್ಠ ಮೊತ್ತ ಕೇವಲ ರೂ. 2000-00 ಇರುವುದರಿಂದ ತಾಂತ್ರಿಕ ಹಾಗೂ ವಿಶೇಷ ತರಬೇತಿಗಳನ್ನು ನೀಡಲು ಸಾಧ್ಯವಾಗದೇ ಇರುವುದು.
* ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳ ಸಮೀಕ್ಷೆಯನ್ನು ಕಾಲಕಾಲಕ್ಕೆ ಮಾಡದೆ ಇರುವುದರಿಂದ ಕೆಲವು ರಾಜ್ಯಗಳಲ್ಲಿ ಸರಿಯಾದ ಜನಸಂಖ್ಯಾ ಮಾಹಿತಿ ಇರುವುದಿಲ್ಲ.
* ಬ್ಯಾಂಕ್‌ಗಳಿಂದ ಸಹಕಾರ ಸಿಗದೇ ಇರುವುದರಿಂದ ಸ್ವಯಂ ಉದ್ಯೋಗ ಕಾರ್ಯಕ್ರಮದಲ್ಲಿ ಪ್ರಗತಿ ಇರುವುದಿಲ್ಲ.
* ಯೋಜನೆಯ ಬಗ್ಗೆ ಸರಿಯಾದ ಅರಿವು ಹಾಗೂ ಮಾಹಿತಿ ಜನರಿಗೆ ಲಭ್ಯವಿರುವುದಿಲ್ಲ.
* ನಗರದ ಬಡವರ ಪರಿಸ್ಥಿತಿಯ ಬಗ್ಗೆ ಯೋಜನೆಯ ಸಿಬ್ಬಂದಿ, ಬ್ಯಾಂಕ್ ಹಾಗೂ ಸರ್ಕಾರೇತರ ಸಂಸ್ಥೆಗಳಿಗೆ ಹೆಚ್ಚಿನ ಕಾಳಜಿ ವಹಿಸುವ ಹಾಗೆ ತರಬೇತಿ ನೀಡಬೇಕಾಗಿದೆ.
* ಯೋಜನೆಯ ಮಾರ್ಗಸೂಚಿಯಲ್ಲಿ ಸಮುದಾಯ ಅಭಿವೃದ್ಧಿಗೆ ಸಂಬಂಧಿಸಿದಂತೆ ಚಟುವಟಿಕೆಗಳನ್ನು

ಕೈಗೊಳ್ಳಲು ನಿರ್ದಿಷ್ಟ ಸೂಚನೆ ಇಲ್ಲದಿರುವುದು.

* ಸ್ವಯಂ ಉದ್ಯೋಗ ಚಟುವಟಿಕೆಗಳಿಂದ ತಯಾರಾದ ವಸ್ತುಗಳಿಗೆ ಮಾರ್ಕೆಟಿಂಗ್ ಸೌಲಭ್ಯ ಒದಗಿಸದೇ ಇರುವುದು.

**ಸಮಾರೋಪ :**

ಈ ಮೇಲಿನ ಅಂಶಗಳನ್ನು ಕ್ರೋಢೀಕರಿಸಿ ಹೇಳುವುದಾದರೆ ಸ್ವರ್ಣ ಜಯಂತಿ ಶಹರಿ ರೋಜ್ಗಾರ್ ಯೋಜನೆಯು ಗಂಗಾವತಿ ನಗರದಲ್ಲಿ ಬಡತನ ರೇಖೆಯಲ್ಲಿರುವ ಕುಟುಂಬಗಳಿಗೆ ವರದಾನವಾಗಿದೆ. ಮತ್ತು ಅವರ ಜೀವನದ ಆರ್ಥಿಕ, ಶೈಕ್ಷಣಿಕ, ಸಾಮಾಜಿಕ ಮತ್ತು ಭೌತಿಕ ಜೀವನದಲ್ಲಿ ಬದಲಾವಣೆಯನ್ನು ತರುವುದರ ಮೂಲಕ ವ್ಯಕ್ತಿ ಬಡವನಾಗಿದ್ದರೂ ಸಹಾ ಹೇಗೆ ಸ್ವಾವಲಂಬಿಯಾಗಿ ಬದುಕಬಹುದು ಎಂಬುದನ್ನು ಎಸ್.ಇ.ಪಿ. ಯೋಜನೆ ಮೂಲಕ ತೋರಿಸಿಕೊಟ್ಟಿದೆ. ಸ್ವಾರ್ಥ, ಸ್ವಹಿತ ಇದಿಷ್ಟೇ ಬದುಕಲ್ಲ. ಇದನ್ನು ಮೀರಿ ನಿಂತ ಭಾವವೇ ಬದುಕು ಎಂಬುದನ್ನು ಡ್ವಾಕ್ವಾ ಮತ್ತು ಟಿ.ಸಿ.ಜಿ. ಯೋಜನೆಯಲ್ಲಿ ಫಲಾನುಭವಿಗಳು ಜಾತಿ ಭೇದ ಮರೆತು ಸಾಲ ಕೊಡು-ಕೊಳ್ಳುವಿಕೆಯಲ್ಲಿ ಭಾಗಿಯಾಗುವುದರ ಮೂಲಕ ತೋರಿಸಿಕೊಟ್ಟಿದೆ. ಸಾಮಾಜಿ ಸೇವಾ ಯೋಜನೆಯಡಿ ಕೈಗೊಳ್ಳುವ ಕಾರ್ಯಕ್ರಮದಲ್ಲಿ ಬಡವರನ್ನು ಭಾಗವಹಿಸುವಂತೆ ಮಾಡುವುದರ ಮೂಲಕ ಉಳಿತಾಯ, ಸಹಕಾರದ ಬದುಕನ್ನು ರೂಪಿಸಿದೆ.

# ಎಸ್.ಜೆ. ಎಸ್.ಆರ್.ವೈ. ಕಾರ್ಯಕ್ರಮದ ಮೂಲಕ ಮಹಿಳಾ ಸಬಲೀಕರಣ

ಮಂಡ್ಯ ನಗರಸಭೆಯ ಮೂಲಕ ಅನುಷ್ಠಾನಗೊಳ್ಳುತ್ತಿರುವ ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯಲ್ಲಿನ ಕಾರ್ಯಕ್ರಮಗಳನ್ನು ಆಯ್ಕೆ ಮಾಡಿಕೊಂಡು ಅಧ್ಯಯನವನ್ನು ನಡೆಸಲಾಯಿತು. ಈ ಅಧ್ಯಯನದಲ್ಲಿ ಯೋಜನೆಯಲ್ಲಿ ನಗರದ ಬಡ ಮಹಿಳೆಯರು ಪ್ರಯೋಜನಗಳನ್ನು ಪಡೆದುಕೊಳ್ಳುವ ಮೂಲಕ ಯಾವ ರೀತಿಯ ಮಹಿಳಾ ಸಬಲೀಕರಣವಾಗಿದೆ ಎಂಬ ವಿಷಯವಾಗಿ ಅಧ್ಯಯನವನ್ನು ಕೇಂದ್ರೀಕರಿಸಲಾಗಿದೆ. ಕ್ಷೇತ್ರ ಅಧ್ಯಯನಕ್ಕಾಗಿ ಯೋಜನೆಯ 15 ಸ್ವಂತ ಉದ್ಯೋಗಿ ಮಹಿಳೆಯರನ್ನು, 5 ನಿರಂತರ ಉಳಿತಾಯ ಮತ್ತು ಸಾಲ ಗುಂಪುಗಳನ್ನು ಮತ್ತು 5 ಡ್ವಾಕ್ರಾ ಗುಂಪುಗಳನ್ನು (ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ) ಸಂದರ್ಶಿಸುವ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಗಿದೆ. ಈ ಅಧ್ಯಯನವನ್ನು ಮಾರ್ಚ್ 2009 ರಲ್ಲಿ ಕೈಗೊಳ್ಳಲಾಗಿದೆ. ಈ ಕ್ಷೇತ್ರ ಅಧ್ಯಯನದಲ್ಲಿ ಸಂಗ್ರಹಿಸಿದ ಅಂಶಗಳನ್ನು ಈ ಕೆಳಕಂಡಂತೆ ವಿವರಿಸಲಾಗಿದೆ.

## ಕ್ಷೇತ್ರ ಅಧ್ಯಯನದ ಉದ್ದೇಶಗಳು

1. ಸ್ವರ್ಣ ಜಯಂತಿ ಶಹರಿ ರೋಜಗಾರ್ ಯೋಜನೆಯಲ್ಲಿನ ಸ್ವಂತ ಉದ್ಯೋಗ, ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ ಮತ್ತು ನಿರಂತರ ಉಳಿತಾಯ ಮತ್ತು ಸಾಲ ಗುಂಪುಗಳ ಮೂಲಕ ಮಹಿಳೆಯರ ಸಬಲೀಕರಣದ ಅಧ್ಯಯನವನ್ನು ಕೈಗೊಳ್ಳುವುದು.
2. ಈ ಯೋಜನೆಯಲ್ಲಿ ಮಹಿಳೆಯರ ಸಾಮಾಜಿಕ, ಶೈಕ್ಷಣಿ, ಆರ್ಥಿಕ ಮತ್ತು ರಾಜಕೀಯ ಸಬಲೀಕರಣವಾಗಿರುವ ಬಗ್ಗೆ ತಿಳಿದುಕೊಳ್ಳುವುದು.

**ಹಿನ್ನೆಲೆ**

ಭಾರತಕ್ಕೆ ಸ್ವಾತಂತ್ರ್ಯ ಬಂದ 50 ವರ್ಷಗಳ ನೆನಪಿಗಾಗಿ ಈ ಯೋಜನೆಯನ್ನು ಕೇಂದ್ರ ಸರ್ಕಾರ ನಗರ ಪ್ರದೇಶದ ಬಡ ಜನರಿಗಾಗಿ 1997ರಿಂದ ಜಾರಿಗೆ ತಂದಿರುತ್ತದೆ. ಈ ಯೋಜನೆಯು ನಗರ ಸ್ಥಳೀಯ ಸಂಸ್ಥೆಗಳಲ್ಲಿ ರಚನೆಯಾಗಿರುವ ಸಮುದಾಯ ಅಭಿವೃದ್ಧಿ ಸಂಘಗಳ ಮೂಲಕ ಅನುಷ್ಠಾನಗೊಳ್ಳುತ್ತಿದೆ. ಅಂತೆಯೇ ಈ ಕಾರ್ಯಕ್ರಮವು ಮಂಡ್ಯ ನಗರಸಭೆಯಲ್ಲಿ 1998ರಿಂದ ಚಾಲ್ತಿಯಲ್ಲಿದೆ.

ಮಂಡ್ಯ ನಗರಸಭೆಯು 2001ರ ಜನಗಣತಿಯ ಪ್ರಕಾರ 1,31,179 ಜನಸಂಖ್ಯೆಯನ್ನು ಅದರಲ್ಲಿ 66,551 ಪುರುಷರು ಮತ್ತು 64,628 ಮಹಿಳೆಯರಿದ್ದಾರೆ. ಈ ನಗರ ಸಭೆಯು ಒಟ್ಟು 35 ವಾರ್ಡುಗಳನ್ನು ಹೊಂದಿದೆ. ಈ ನಗರ ಸಭೆಯ ಸಮುದಾಯ ಅಭಿವೃದ್ಧಿ ಸಂಘದ ಮೂಲಕ 8,554 ಬಡ ಕುಟುಂಬಗಳನ್ನು ಗುರುತಿಸಲಾಗಿದೆ. ಈ ಕುಟುಂಬಗಳು ಒಟ್ಟು 42,755 ಜನಸಂಖ್ಯೆಯನ್ನು ಹೊಂದಿದ್ದು, ಅದರಲ್ಲಿ 23,516 ಗಂಡಸರು ಮತ್ತು 19,239 ಮಹಿಳೆಯರು ಇದ್ದಾರೆ. ಈ ಬಡ ಕುಟುಂಬಗಳನ್ನು ಸೇರಿಸಿ 212 ನೆರೆಹೊರೆ ಗುಂಪುಗಳನ್ನು ರಚನೆ ಮಾಡಲಾಗಿದೆ. ಪ್ರತಿ ನೆರೆಹೊರೆ ಗುಂಪಿಗೆ ಒಬ್ಬ ಮಹಿಳೆಯನ್ನು ಸ್ಥಳೀಯ ಸಮುದಾಯ ಕಾರ್ಯಕರ್ತೆಯಾಗಿ ನೇಮಿಸಲಾಗಿದೆ. (ಪ್ರತಿ ನೆರೆಹೊರೆ ಗುಂಪು 10 ರಿಂದ 40 ಕುಟುಂಬಗಳನ್ನು ಒಳಗೊಂಡಿರುತ್ತವೆ.) ಪ್ರತಿ ವಾರ್ಡ್ ಮಟ್ಟದಲ್ಲಿ 21 ನೆರೆಹೊರೆ ಸಮಿತಿಗಳನ್ನು ರಚಿಸಲಾಗಿದೆ. ಪ್ರತಿ ನೆರೆಹೊರೆ ಸಮಿತಿಗೆ ಒಬ್ಬ ಮಹಿಳೆಯನ್ನು ಸಂಚಾಲಕಿಯನ್ನಾಗಿ ನೇಮಿಸಲಾಗಿದೆ. (ಪ್ರತಿ ನೆರೆಹೊರೆ ಸಮಿತಿಯು 10 ನೆರೆಹೊರೆ ಗುಂಪುಗಳನ್ನು ಅಥವಾ 200 ರಿಂದ 250 ಬಡ ಕುಟುಂಬಗಳನ್ನು ಒಳಗೊಂಡಿದೆ.)

---

***ಡಾ. ಬಿ.ಎಸ್. ಶಂಕರ್,*** ಬೋಧಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು

ಹಾಗೆಯೇ ಇಡೀ ನಗರದ ಬಡಜನರನ್ನು ಕೇಂದ್ರವಾಗಿಟ್ಟುಕೊಂಡು ಒಂದು ಸಮುದಾಯ ಅಭಿವೃದ್ಧಿ ಸಂಘವನ್ನು ರಚನೆ ಮಾಡಲಾಗಿದೆ. ಈ ಸಮುದಾಯ ಅಭಿವೃದ್ಧಿ ಸಂಘಕ್ಕೆ ಒಬ್ಬ ಮಹಿಳೆಯನ್ನು ಅಧ್ಯಕ್ಷಳನ್ನಾಗಿ ಮತ್ತು ಒಬ್ಬ ಮಹಿಳೆಯನ್ನು ಉಪಾಧ್ಯಕ್ಷಳನ್ನಾಗಿ ಆಯ್ಕೆ ಮಾಡಲಾಗಿದೆ. ಈ ಸಂಘದಲ್ಲಿ ನಗರಸಭೆಯ ಪೌರಾಯುಕ್ತರು, ಬಡ ಕುಟುಂಬಗಳು ಹೆಚ್ಚಾಗಿರುವ ಪ್ರದೇಶಗಳಿಂದ ಆಯ್ಕೆಯಾಗಿ ಬಂದಿರುವ ಇಬ್ಬರು ಮಹಿಳಾ ಪ್ರತಿನಿಧಿಗಳು, ನಗರದ ತಾಲ್ಲೂಕು ಮಟ್ಟದ ಅಧಿಕಾರಿಗಳಾದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಸಮಾಜ ಕಲ್ಯಾಣ ಅಧಿಕಾರಿ, ಹಿಂದುಳಿದ ಮತ್ತು ಅಲ್ಪ ಸಂಖ್ಯಾತರ ಇಲಾಖೆ ಅಧಿಕಾರಿ, ಕೈಗಾರಿಕಾ ವಿಸ್ತರಣಾ ಅಧಿಕಾರಿ, ಶಿಕ್ಷಣಾಧಿಕಾರಿ ಇವರುಗಳು ಸದಸ್ಯರುಗಳಾಗಿರುತ್ತಾರೆ. ಕಮ್ಯೂನಿಟಿ ಅಫೇರ್ಸ್ ಆಫೀಸರ್ ಸದಸ್ಯ ಕಾರ್ಯದರ್ಶಿಗಳಾಗಿರುತ್ತಾರೆ. ಈ ಸಂಘದ ಹಣಕಾಸಿನ ವ್ಯವಹಾರವನ್ನು ನಡೆಸುವ ಸಲುವಾಗಿ ಸಿ.ಡಿ.ಎಸ್. ಅಧ್ಯಕ್ಷರ ಮತ್ತು ಪೌರಾಯುಕ್ತರ ಹೆಸರಿನಲ್ಲಿ ಜಂಟಿ ಖಾತೆಯನ್ನು ತೆರೆಯಲಾಗಿದ್ದು, ಇವರಿಬ್ಬರ ಜಂಟಿ ಸಹಿಯೊಂದಿಗೆ ವ್ಯವಹಾರವು ನಡೆಯುತ್ತಿರುತ್ತದೆ. ಈ ಸಂಘವನ್ನು ಕರ್ನಾಟಕ ಸೊಸೈಟಿ ರಿಜಿಸ್ಟ್ರೇಷನ್ ಆಕ್ಟ್ ನಿಯಮದಡಿಯಲ್ಲಿ ನೊಂದಾಯಿಸಲಾಗಿರುತ್ತದೆ.

ಸಮುದಾಯ ಅಭಿವೃದ್ಧಿ ಸಂಘಕ್ಕೆ ಯೋಜನೆಯ ವಿವಿಧ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ 1998ರಿಂದ 2009ರ ಜನವರಿ ಅಂತ್ಯದವರೆಗೆ ಸುಮಾರು ರೂ. 18,10,450 ಹಣ ಬಿಡುಗಡೆಯಾಗಿರುತ್ತದೆ. ಅದರಲ್ಲಿ ಸ್ವಂತ ಉದ್ಯೋಗಕ್ಕೆ ಸಹಾಯಧನವಾಗಿ ರೂ. 28,52,587 ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮಕ್ಕೆ ಸಹಾಯಧನವಾಗಿ ರೂ. 20,41,666 ನಿರಂತರ ಉಳಿತಾಯ ಮತ್ತು ಸಾಲ ಗುಂಪುಗಳಿಗೆ ಸುತ್ತು ನಿಧಿಯಾಗಿ ರೂ. 12,88667 ತರಬೇತಿಗೆ 15,58,386 ಮೂಲ ಸೌಕರ್ಯಕ್ಕಾಗಿ ರೂ. 10,20,000 ವೇತನಾಧಾರಿತ ಉದ್ಯೋಗ ಕಾರ್ಯಕ್ರಮಕ್ಕೆ ರೂ. 59,09,325 ಸಮುದಾಯ ಸಾಮಾಜಿಕ ಸೇವೆಗಳಿಗೆ ರೂ. 24,19,819 ಮತ್ತು ಆಡಳಿತ ಮತ್ತು ಕಚೇರಿ ಖರ್ಚುಗಳಿಗೆ ರೂ. 10,13,000 ರೂ.ಗಳನ್ನು ಬಿಡುಗಡೆ ಮಾಡಲಾಗಿದೆ.

ಈ ಬಿಡುಗಡೆಯಾದ ಹಣದಲ್ಲಿ ಸ್ವಂತ ಉದ್ಯೋಗದ ಸಹಾಯಧನ ರೂ. 18,55,572 ರೂಪಾಯಿಗಳನ್ನು ಖರ್ಚು ಮಾಡಲಾಗಿದ್ದು ಇದರಲ್ಲಿ 415 ಫಲಾನುಭವಿಗಳಿಗೆ ಕನಿಷ್ಟ 5000 ರೂಪಾಯಿಗಳಿಂದ ಗರಿಷ್ಠ 50,000 ಸಾವಿರ ರೂಪಾಯಿಗಳವರೆಗೆ ಒಟ್ಟು ರೂ. 1,36,50,000ಗಳಷ್ಟು ಸಾಲವನ್ನು ನೀಡುವ ಮೂಲಕ ವಿವಿಧ ಸ್ವಂತ ಉದ್ಯೋಗಕ್ಕಾಗಿ ಹಣಕಾಸಿನ ಸಹಾಯವನ್ನು ಕಲ್ಪಿಸಲಾಗಿದೆ. ಈ ಸ್ವಂತ ಉದ್ಯೋಗ ಆಯ್ಕೆ ಮಾಡಿಕೊಳ್ಳುವ ಪ್ರತಿ ಫಲಾನುಭವಿಗೆ ಯೋಜನೆಯ ಶೇ. 15ರಷ್ಟು ಹಣವನ್ನು ಸಹಾಯಧನದ ಮೂಲಕ ನೀಡಲಾಗಿದೆ. ಹಾಗೂ ಶೇ. 5ರಷ್ಟು ಹಣವನ್ನು ಫಲಾನುಭವಿಯು ಹಾಕಿರುತ್ತಾರೆ. ಉಳಿದ ಶೇ. 40 ರಷ್ಟು ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಸಾಲವಾಗಿ ಕೊಡಿಸಲಾಗುತ್ತಿದೆ. ಇದರ ಮೂಲಕ ಚಿಲ್ಲರೆ ಅಂಗಡಿ, ತಳ್ಳುವ ಗಾಡಿಯಲ್ಲಿ ವ್ಯಾಪಾರ, ಕ್ಯಾಂಟೀನ್, ಪಾನ್ ಬೀಡಾ ಅಂಗಡಿ, ಬಟ್ಟೆ ವ್ಯಾಪಾರ, ತರಕಾರಿ ವ್ಯಾಪಾರ, ಪ್ರಾವಿಜನ್ ಸ್ಟೋರ್, ಬ್ಯೂಟಿ ಪಾರ್ಲರ್, ಚಪ್ಪಲಿ ಅಂಗಡಿ, ಬೂಟ್ ತಯಾರಿಸುವುದು, ಸೀರೆ ವ್ಯಾಪಾರ, ಗಂಧದ ಕಡ್ಡಿ ಉಜ್ಜುವುದು, ಹೊಟೇಲ್, ರೆಡಿಮೇಡ್ ಬಟ್ಟೆ ಮಾರಾಟ ಮಾಡುವುದು ಮುಂತಾದ ಸ್ವಂತ ಉದ್ಯೋಗಗಳನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಈ ಸ್ವಂತ ಉದ್ಯೋಗಗಳಿಗಾಗಿ ಸಾಲ ಪಡೆದ ಕೆಲವರು ಈಗಾಗಲೇ ಪೂರ್ತಿ ಹಣವನ್ನು ಮರುಪಾವತಿ ಮಾಡಿರುವುದು ಅಧ್ಯಯನದ ಮೂಲಕ ಕಂಡು ಬಂದಿರುತ್ತದೆ.

ಡ್ವಾಕ್ರಾ ಗುಂಪು (ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ) ಕಾರ್ಯಕ್ರಮಕ್ಕೆ (ಡ್ವಾಕ್ರಾ ಗುಂಪು 5 ರಿಂದ 10 ಮಹಿಳೆಯರು ಸೇರಿಕೊಂಡು ಒಂದೇ ತರಹದ ಗುಂಪು ಚಟುವಟಿಕೆಯನ್ನು ಕೈಗೊಳ್ಳುವುದು.) ಸಹಾಯಧನವಾಗಿ ರೂ. 10,47,500ಗಳನ್ನು ಖರ್ಚು ಮಾಡಲಾಗಿದೆ. ಶೇ. 45ರಷ್ಟು ಹಣವನ್ನು ರಾಷ್ಟ್ರೀಕೃತ ಬ್ಯಾಂಕ್‌ಗಳ ಮೂಲಕ ಸಾಲವಾಗಿ ಕೊಡಿಸಲಾಗುತ್ತಿದೆ ಹಾಗೂ ಶೇ. 5ರಷ್ಟು ಹಣವನ್ನು ಗುಂಪಿನ ಎಲ್ಲಾ ಸದಸ್ಯರೂ ಸೇರಿ ಹಾಕಿರುತ್ತಾರೆ. ಈ ಸಹಾಯಧನದ ಮೂಲಕ 14 ಗುಂಪುಗಳಿಗೆ, ಪ್ರತಿ ಗುಂಪಿಗೆ ಕನಿಷ್ಠ ರೂ. 50,000ದಿಂದ ಗರಿಷ್ಠ ರೂ. 2,50,000

ರೂಪಾಯಿಗಳಷ್ಟು ಸಾಲ ಸೌಲಭ್ಯ ನೀಡಲಾಗಿದೆ. ಡ್ವಾಕ್ರಾ ಗುಂಪುಗಳು ಹೈನುಗಾರಿಕೆ, ಅಗರಬತ್ತಿ, ಸ್ಟೀಲ್ ಸಾಮಾನುಗಳ ಹೋಲ್‌ಸೇಲ್ ವ್ಯಾಪಾರ ಮತ್ತು ರೀಟೇಲ್ ಬಿದಿರು ಉದ್ಯಮದಲ್ಲಿ ಅಲಂಕಾರಿಕ ಹೂ ಬುಟ್ಟಿಗಳು ಮುಂತಾದ ಗುಂಪು ಉದ್ಯೋಗವನ್ನು ಆಯ್ಕೆ ಮಾಡಿಕೊಂಡಿರುತ್ತಾರೆ. ಈ ಡ್ವಾಕ್ರಾ ಗುಂಪುಗಳಲ್ಲಿ ಕೆಲವು ಗುಂಪುಗಳು ಈಗಾಗಲೇ ಪೂರ್ತಿ ಹಣವನ್ನು ಮರುಪಾವತಿ ಮಾಡಿರುವುದು ಅಧ್ಯಯನದ ಸಮಯದಲ್ಲಿ ಗುಂಪುಗಳನ್ನು ಸಂದರ್ಶಿಸುವ ಮೂಲಕ ಕಂಡು ಬಂದಿರುತ್ತದೆ.

ನಿರಂತರ ಉಳಿತಾಯ ಮತ್ತುಸಾಲ ಗುಂಪುಗಳಿಗೆ ಸುತ್ತು ನಿಧಿಯಾಗಿ ರೂ. 6,26,026ಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಸಮುದಾಯ ಅಭಿವೃದ್ಧಿ ಸಂಘದ ಮೂಲಕ ಒಟ್ಟು 125 ಗುಂಪುಗಳನ್ನು ರಚಿಸಲಾಗಿರುತ್ತದೆ. ಪ್ರತಿ ಗುಂಪಿನಲ್ಲೂ 10ರಿಂದ 20 ಮಹಿಳಾ ಸದಸ್ಯರು ಸದಸ್ಯತ್ವವನ್ನೊಂದಿದ್ದಾರೆ. ಈ ಸುತ್ತುನಿಧಿ ಹಣವನ್ನು ಒಂದು ವರ್ಷ ಪೂರೈಸಿದ ಪ್ರತಿ ಗುಂಪಿಗೆ 5000 ರೂಪಾಯಿಗಳಂತೆ ನೀಡಲಾಗಿದೆ. ಈ ಎಲ್ಲಾ ಗುಂಪುಗಳು ಒಟ್ಟು 48,47, 380 ರೂ.ಗಳನ್ನು ಉಳಿತಾಯ ಮಾಡಿರುತ್ತವೆ.

ಈ ಗುಂಪುಗಳು ಆಂತರಿಕ ಸಾಲ ವಿತರಣೆಯಾಗಿ 90,85,386 ರೂ.ಗಳನ್ನು ನೀಡಿರುತ್ತವೆ. ಗುಂಪುಗಳು ಸ್ವಇಚ್ಛೆಯಿಂದಲೇ ಬ್ಯಾಂಕ್‌ಗಳೊಂದಿಗೆ ಹೊಂದಾಣಿಕೆ ಮಾಡಿಕೊಂಡು ಸಾಲ ಸೌಲಭ್ಯವನ್ನು ಪಡೆದುಕೊಂಡಿವೆ. ಗುಂಪುಗಳ ಸದಸ್ಯರುಗಳು ತಮಗೆ ಅವಶ್ಯಕವೆನಿಸಿದ ಉದ್ದೇಶಗಳಾದ ಮಕ್ಕಳ ವಿದ್ಯಾಭ್ಯಾಸಕ್ಕಾಗಿ, ಆರೋಗ್ಯಕ್ಕಾಗಿ, ಮನೆ ರಿಪೇರಿಗಾಗಿ, ವ್ಯಾಪಾರಕ್ಕಾಗಿ, ದಿನನಿತ್ಯದ ಅಗತ್ಯಗಳಿಗಾಗಿ, ಮದುವೆಗಾಗಿ ಮುಂತಾದ ಉದ್ದೇಶಗಳಿಗೆ ಸಾಲವನ್ನು ಗುಂಪುಗಳ ಮೂಲಕ ಪಡೆದುಕೊಂಡಿರುವುದು ಕಂಡು ಬಂದಿದೆ. ಪಡೆದ ಸಾಲದ ಹಣವನ್ನು 10 ತಿಂಗಳ ಅವಧಿಯಲ್ಲಿ ಮರುಪಾವತಿ ಮಾಡುತ್ತಿರುತ್ತಾರೆ. ಗುಂಪಿನಿಂದ ಪಡೆಯುವ ಸಾಲಕ್ಕೆ ಶೇ. 2 ಮಾಸಿಕ ಬಡ್ಡಿಯಂತೆ ಹಾಗೂ ಬ್ಯಾಂಕ್‌ನಿಂದ ಪಡೆಯುವ ಸಾಲಕ್ಕೆ ಸ್ವಸಹಾಯ ಗುಂಪುಗಳಿಗೆ ನೀಡುವ ಬಡ್ಡಿಯ ದರದಂತೆ ಬಡ್ಡಿ ವಿಧಿಸಲಾಗಿದೆ.

## ಅಧ್ಯಯನದ ಸಂದರ್ಭದಲ್ಲಿ ಸಂದರ್ಶಿಸಿದ ಮಹಿಳಾ ಸ್ವಂತ ಉದ್ಯೋಗಿಗಳು

| ಕ್ರಮಸಂಖ್ಯೆ | ಹೆಸರು | ಸ್ವಂತ ಉದ್ಯೋಗಯೋಜನೆಗೆ ಪಡೆದ ಸಾಲದ ಮೊತ್ತ (ರೂ.ಗಳಲ್ಲಿ) | |
|---|---|---|---|
| 1 | ವಿಶಾಲಾಕ್ಷಮ್ಮ | ಮಿಠಾಯಿ ವ್ಯಾಪಾರ | 10,000 |
| 2 | ಮಾದಮ್ಮ | ಬಟ್ಟೆ ವ್ಯಾಪಾರ | 10,000 |
| 3 | ಲೆಡ್ವಿನ್ ಡಿಸೋಜಾ | ತಾಮ್ರದ ಪಾತ್ರೆ ತಯಾರಿ | 50,000 |
| 4 | ಲಕ್ಷ್ಮಿ | ಮೈಕ್ ಸೆಟ್ | 38,000 |
| 5 | ಶಾಂತಮ್ಮ | ಬಟ್ಟೆ ವ್ಯಾಪಾರ | 35,000 |
| 6 | ಆರ್. ಲಕ್ಷ್ಮಿ | ಚಪ್ಪಲಿ ಮತ್ತು ಷೂ ತಯಾರಿಸುವುದು | 30,000 |
| 7 | ಕವಿತಾ | ಸ್ಯಾರಿ ವ್ಯಾಪಾರ | 35,000 |
| 8 | ಮಂಜುಳಾ | ತಳ್ಳುಗಾಡಿಯಲ್ಲಿ ತಿಂಡಿ ವ್ಯಾಪಾರ | 20,000 |
| 9 | ಭಾರತಿ | ಸೀರೆ ವ್ಯಾಪಾರ | 50,000 |
| 10 | ರತ್ನಮ್ಮ | ಮನೆಯಲ್ಲಿ ಹೋಟೆಲ್ ನಡೆಸುವುದು | 50,000 |
| 11 | ಸೋಮಲತ | ಫ್ಯಾನ್ಸಿಸ್ಟೋರ್ಸ್ | 25,000 |
| 12 | ಸರೋಜಾ | ಪಾನ್ ಬೀಡಾ ಅಂಗಡಿ | 40,000 |
| 13 | ಜಮುನಾ | ರುಬ್ಬುವ ಯಂತ್ರ | 30,000 |
| 14 | ಷಾಜಿದ್ ಉನ್ನೀಸಾ | ಸೀರೆ, ಡ್ರೆಸ್ ವ್ಯಾಪಾರ | 40,000 |
| 15 | ಶ್ವೇತಾ | ಎಂಬ್ರಾಯಿಡರಿ | 40,000 |

ಆಧಾರ : ಮಾರ್ಚ್ ತಿಂಗಳಲ್ಲಿ ಮಂಡ್ಯ ನಗರಸಭೆಯ ಮೂಲಕ ಕೈಗೊಂಡ ಕ್ಷೇತ್ರ ಅಧ್ಯಯನ

## ಕ್ಷೇತ್ರ ಅಧ್ಯಯನದಲ್ಲಿ ಕಂಡು ಬಂದಂತಹ ಅಂಶಗಳು

ಸ್ವಂತ ಉದ್ಯೋಗ

1. ಸ್ವಂತ ಉದ್ಯೋಗಕ್ಕೆ ಸಾಲವನ್ನು ಪಡೆದುಕೊಂಡಿರುವುದರಿಂದ ಒಂದು ಉದ್ಯೋಗ ಕಲ್ಪಿಸಿಕೊಳ್ಳಲು ಸಹಾಯವಾಗಿದೆ. ಮೊದಲು ನಾವು ಯಾವುದೇ ಸ್ವಂತ ಉದ್ಯೋಗ ಮಾಡುವ ಮನಸ್ಸಿದ್ದರೂ ಸಹ ಬ್ಯಾಂಕ್‌ನಿಂದ ಸಾಲ ಪಡೆಯಲು ಸಾಧ್ಯವಾಗದೆ ತುಂಬ ತೊಂದರೆಯನ್ನು ಅನುಭವಿಸುತ್ತಿದ್ದೆವು. ಆದರೆ ಈ ಯೋಜನೆಯ ಮೂಲಕ ನಮಗೆ ಸ್ವಂತ ಉದ್ಯೋಗಕ್ಕೆ ಹಣಕಾಸಿನ ನೆರವು ದೊರಕಿರುವುದರಿಂದ ನಮಗೆ ಹೆಚ್ಚು ಸಹಾಯಕವಾಗಿದೆ.
2. ಈ ಸ್ವಂತ ಉದ್ಯೋಗದ ಮೂಲಕ ನಮ್ಮ ಕುಟುಂಬಗಳಲ್ಲಿನ ಹಣಕಾಸಿನ ಸಮಸ್ಯೆಗಳು ಕಡಿಮೆಯಾಗಿದೆ. ಈಗ ನಾವು ಪ್ರತಿ ತಿಂಗಳಿಗೆ ಸರಾಸರಿ 2000 ರಿಂದ 3000 ರೂ.ಗಳವರೆಗೆ ಆದಾಯ ಗಳಿಸುತ್ತಿರುವುದರಿಂದ ನಮಗೆ ನಮ್ಮ ಕುಟುಂಬದ ಕೆಲವು ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗಿದೆ. ಈ ಮೊದಲು ಯಾವ ಬ್ಯಾಂಕ್‌ಗಳೂ ನಮಗೆ ಸಾಲವನ್ನು ಕೊಡಲು ಮುಂದೆ ಬರುತ್ತಿರಲಿಲ್ಲ. ಹಾಗೂ ತುಂಬಾ ದುಬಾರಿ ಬಡ್ಡಿಯನ್ನು ನೀಡಿ ಸಾಲವನ್ನು ಖಾಸಗಿ ವ್ಯಕ್ತಿಗಳಿಂದ ಪಡೆಯುತ್ತಿದ್ದುದರಿಂದ ಆ ಹಣಕ್ಕೆ ಬಡ್ಡಿಯನ್ನು ತುಂಬಲು ನಮಗೆ ತುಂಬಾ ಕಷ್ಟಕರವಾಗಿತ್ತು. ಆದರೆ ಈ ಯೋಜನೆಯ ಮೂಲಕ ಸ್ವಂತ ಉದ್ಯೋಗಕ್ಕೆ ಹಣಕಾಸಿನ ನೆರವು ದೊರಕಿರುವುದರಿಂದ ನಮ್ಮ ಕುಟುಂಬಗಳಲ್ಲಿ ತುಂಬಾ ನೆಮ್ಮದಿಯ ವಾತಾವರಣ ನಿರ್ಮಾಣವಾಗಿದೆ.
3. ನಾವು ಈ ಯೋಜನೆಗೆ ಸೇರುವ ಮೊದಲು ಅತಿ ಹೆಚ್ಚು ಬಡ್ಡಿ ನೀಡಿ ಖಾಸಗಿ ವ್ಯಕ್ತಿಗಳಿಂದ ಸಾಲ ಪಡೆದು ಸ್ವಂತ ಉದ್ಯೋಗ ಮಾಡುವ ಧೈರ್ಯ ಮಾಡುವುದು ಕಷ್ಟವಾಗಿತ್ತು. ಆದರೆ ಈ ಯೋಜನೆಯಲ್ಲಿ ಕಡಿಮೆ ಬಡ್ಡಿ ಹಾಗೂ ಮರುಪಾವತಿ ಮಾಡಲು 3 ವರ್ಷಗಳಿಂದ 7 ವರ್ಷಗಳವರೆಗೆ ಕಾಲಾವಕಾಶವಿರುವುದರಿಂದ ಅನುಕೂಲವಾಗಿದೆ.
4. ಯೋಜನೆಯ ಮೂಲಕ ನಾವು ನಮ್ಮ ಕುಟುಂಬದಿಂದ ಹೊರಗಡೆ ವ್ಯಾಪಾರ ವ್ಯವಹಾರಗಳಲ್ಲಿ ತೊಡಗಿಸಿಕೊಂಡು ದುಡಿಯುತ್ತಿರುವುದರಿಂದ ಸ್ವಾವಲಂಬಿಗಳಾಗಿದ್ದೇವೆ ಎಂಬ ಮನೋಭಾವನೆ ಬೆಳೆದಿದೆ.
5. ಸ್ವಂತ ಉದ್ಯೋಗದ ಮೂಲಕ ನಮ್ಮ ಕುಟುಂಬಗಳ ಎಲ್ಲಾ ಆರ್ಥಿಕ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗದಿದ್ದರೂ ಕೂಡ ಸಾಧ್ಯವಾದಷ್ಟು ಮಟ್ಟಿಗೆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಇದರಿಂದ ಸಹಾಯಕಾರಿಯಾಗಿದೆ.
6. ನಮ್ಮ ಕುಟುಂಬಗಳಲ್ಲಿ ನಮ್ಮ ಮನೆಗಳ ಯಜಮಾನರುಗಳಿಂದ ಮೊದಲಿಗಿಂತ ಸ್ವಲ್ಪ ಮಟ್ಟದ ಗೌರವವನ್ನು ಹೆಚ್ಚಿಗೆ ನಿರೀಕ್ಷೆ ಮಾಡಬಹುದಾಗಿದೆ.
7. ನಮ್ಮ ಕುಟುಂಬಗಳಲ್ಲಿ ಎಲ್ಲಾ ನಿರ್ಧಾರಗಳನ್ನು ಕೈಗೊಳ್ಳುವಾಗ ನಮ್ಮ ಅಭಿಪ್ರಾಯಗಳಿಗೆ ಮಾನ್ಯತೆ ನೀಡಲಾಗುತ್ತಿದೆ. ಆದರೆ ಮೊದಲು ನಮ್ಮ ಕುಟುಂಬಗಳ ಯಜಮಾನರು ಯಾವುದೇ ನಿರ್ಧಾರಗಳನ್ನು ನಮಗೆ ಗೊತ್ತಿಲ್ಲದೇ ತಾವೇ ತೆಗೆದುಕೊಳ್ಳುತ್ತಿದ್ದರು. ಆದರೆ ಈಗ ನಾವುಗಳೂ ಸಹ ಸ್ವಂತ ಉದ್ಯೋಗದ ಮೂಲಕ ಹಣ ಸಂಪಾದಿಸುತ್ತಿರುವುದರಿಂದ ಹಾಗೂ ಕುಟುಂಬದ ಇತರ ಸದಸ್ಯರೂ ಈ ಸ್ವಂತ ಉದ್ಯೋಗದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ನಮಗೆ ಎಲ್ಲಾ ವಿಷಯಗಳಲ್ಲೂ ತುಂಬಾ ಮಾನ್ಯತೆ ಸಿಗುತ್ತಿದೆ.
8. ನಮ್ಮ ಮಕ್ಕಳ ವಿದ್ಯಾಭ್ಯಾಸಕ್ಕೆ, ಮಕ್ಕಳ ಆರೋಗ್ಯ ಹಾಗೂ ಮತ್ತಿತರೇ ಮೂಲಗಳಿಗೆ ನಾವೇ ಹಣಕಾಸನ್ನು ಒದಗಿಸುವ ಮೂಲಕ ಅವರು ವಿದ್ಯಾಭ್ಯಾಸ, ಆರೋಗ್ಯ ಮತ್ತಿತರ ಸೌಕರ್ಯಗಳನ್ನು ಹೊಂದಲು ನೆರವಾಗಿದ್ದೇವೆ.
9. ಈ ಉದ್ಯೋಗದಿಂದ ಗುಂಪುಗಳ ಮೂಲಕ ಅಲ್ಪ ಸ್ವಲ್ಪ ಉಳಿತಾಯವನ್ನು ನಿರಂತರ ಉಳಿತಾಯ ಮತ್ತು

ಸಾಲ ಗುಂಪುಗಳಲ್ಲಿ ಮಾಡಲು ಸಹಾಯವಾಗಿದೆ ಮತ್ತು ಆ ಗುಂಪುಗಳ ಮೂಲಕ ಸಾಲ ಸೌಲಭ್ಯ ಪಡೆಯಲು ಅನುಕೂಲವಾಗಿದೆ.

10. ಸ್ವಂತ ಉದ್ಯೋಗವನ್ನು ಹೊಂದಿರುವುದರಿಂದ ಬ್ಯಾಂಕ್‌ನೊಂದಿಗೆ ಸಂಪರ್ಕ ಹೊಂದಲು ಅವಕಾಶವಾಗಿರುವುದರಿಂದ ಹಣಕಾಸಿನ ವ್ಯವಹಾರ ಜ್ಞಾನ ಬಂದಿದೆ. ಹಾಗೂ ಬ್ಯಾಂಕ್‌ಗಳ ಮೂಲಕ ಮತ್ತಷ್ಟು ನೆರವು ಪಡೆಯಲು ಸಹಾಯಕವಾಗಿದೆ.
11. ನಾವು ಕುಟುಂಬಗಳ ಹೊರಗಡೆ ನಿಂತು ಕೆಲಸ ಮಾಡುತ್ತಿರುವುದರಿಂದ ಇತರ ಜನಸಾಮಾನ್ಯರೊಂದಿಗೆ ಬೆರೆಯಲು ಮತ್ತು ಸಾಮಾಜಿಕ ಸ್ಥಿತಿಗತಿ ತಿಳಿಯಲು ನೆರವಾಗಿದೆ.
12. ನಮ್ಮ ಮನೆಗಳಿಗೆ ಬೇಕಾದ ಇನ್ನಿತರೆ ಅಗತ್ಯ ವಸ್ತುಗಳನ್ನು ಕೊಂಡುಕೊಳ್ಳಲು ಇದರಿಂದ ನೆರವು ದೊರಕಿದೆ.
13. ನಮ್ಮ ಕುಟುಂಬಗಳ ಇತರ ಸದಸ್ಯರು ಸಹ ತಮ್ಮ ಬಿಡುವಿನ ವೇಳೆಯಲ್ಲಿ ಈ ಉದ್ಯೋಗದಲ್ಲಿ ತೊಡಗಿಸಿಕೊಳ್ಳುತ್ತಿರುವುದರಿಂದ ಆ ಮೂಲಕ ಅವರೂ ಪರೋಕ್ಷವಾಗಿ ಉದ್ಯೋಗ ಹೊಂದಲು ಅನುಕೂಲವಾಗಿದೆ. ಹಾಗೂ ಆ ಮೂಲಕ ನಮಗೂ ನಮ್ಮ ಕುಟುಂಬಗಳಿಂದ ಬಾಹ್ಯ ಬೆಂಬಲ ದೊರಕಿದೆ.
14. ನಮ್ಮ ನಮ್ಮ ಕುಟುಂಬಗಳ ಸದಸ್ಯರ ನಡುವೆ ಉತ್ತಮ ಬಾಂಧವ್ಯ ವೃದ್ಧಿಗೆ ಈ ಸ್ವಂತ ಉದ್ಯೋಗವನ್ನು ಕೈಗೊಂಡಿದ್ದರಿಂದ ಸಹಕಾರಿಯಾಗಿದೆ.
15. ಈ ಸಾಲ ಮರುಪಾವತಿ ಆದ ನಂತರ ಬ್ಯಾಂಕ್ ಮೂಲಕ ಮತ್ತೆ ಸಾಲ ಪಡೆಯುವುದರೊಂದಿಗೆ ನಮ್ಮ ಸ್ವಂತ ಉದ್ಯೋಗಗಳನ್ನು ಮತ್ತಷ್ಟು ಅಭಿವೃದ್ಧಿ ಪಡಿಸಲು ಉತ್ತೇಜನ ದೊರಕಿದೆ.
16. ನಮ್ಮ ಕುಟುಂಬಗಳ ಸಾಮಾಜಿಕ ಅಭಿವೃದ್ಧಿ ಮತ್ತು ಆರ್ಥಿಕ ಅಭಿವೃದ್ಧಿಗೆ ಸಹಾಯಕವಾಗಿದೆ.
17. ನಮ್ಮಗಳ ವೈಯಕ್ತಿಕ ಜೀವನ ಮಟ್ಟವನ್ನು ಮತ್ತಷ್ಟು ಉತ್ತಮ ಪಡಿಸಿಕೊಳ್ಳಲು ಈ ಯೋಜನೆ ನಮಗೆ ಉತ್ತಮ ಅವಕಾಶವನ್ನು ಕಲ್ಪಿಸಿಕೊಟ್ಟಿದೆ.

## ಕ್ಷೇತ್ರ ಅಧ್ಯಯನದಲ್ಲಿ ಸಂದರ್ಶಿಸಿದ ಡ್ವಾಕ್ವಾ ಗುಂಪುಗಳು
## (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ)

| ಕ್ರಮಸಂಖ್ಯೆ | ಹೆಸರು | ಗುಂಪಿನ ಪ್ರತಿನಿಧಿಯ ಹೆಸರು | ಗುಂಪು ಉದ್ಯೋಗ | ಗುಂಪಿನ ಸದಸ್ಯರ ಸಂಖ್ಯೆ | ಯೋಜನೆಗೆ ಪಡೆದ ಸಾಲದ ಮೊತ್ತ | ಸಾಲದ ಮೊತ್ತ |
|---|---|---|---|---|---|---|
| 1 | ಸ್ನೇಹಾ ಡ್ವಾಕ್ವಾ ಗುಂಪು | ತಿಮ್ಮಮ್ಮ | ಸಿದ್ಧ ಉಡುಪು ತಯಾರಿ | 10 | 1,25,000 | 1,25,000 |
| 2 | ಅರ್ಪತ್ ಡ್ವಾಕ್ವಾ ಗುಂಪು | ಜೀನತ್ | ಚುಮ್ಕಿ ಮತ್ತು ಎಂಬ್ರಾಯಿಡರಿ | 10 | 1,25,000 | 1,25,000 |
| 3 | ಲಕ್ಷ್ಮಿ ಡ್ವಾಕ್ವಾ ಗುಂಪು | ಕವಿತಾ | ಅಗರಬತ್ತಿ ತಯಾರಿಕೆ | 10 | 25,000 | 25,000 |
| 4 | ಐಶ್ವರ್ಯ ಡ್ವಾಕ್ವಾ ಗುಂಪು | ಜಯಲಕ್ಷ್ಮಿ | ಬಿದಿರು ವಸ್ತುಗಳ ತಯಾರಿಕೆ | 10 | 1,25,000 | 1,25,000 |
| 5 | ಬಿಸ್ಮಿಲ್ಲಾ ಡ್ವಾಕ್ವಾ ಗುಂಪು ಖನ್ನಾ | ಪರ್ಮಾದಾ | ಮಸಾಲೆ ಸಾಂಬಾರು ಪುಡಿ ತಯಾರಿಸುವುದು | 10 | 1,25,000 | 1,25,000 |

ಆಧಾರ : ಮಾರ್ಚ್ ತಿಂಗಳಲ್ಲಿ ಮಂಡ್ಯ ನಗರಸಭೆಯ ಮೂಲಕ ಕೈಗೊಂಡ ಕ್ಷೇತ್ರ ಅಧ್ಯಯನ

**ಡ್ವಾಕ್ರಾ ಗುಂಪು (ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ)**

1. ಈ ಡ್ವಾಕ್ರಾ ಗುಂಪುಗಳ ಮೂಲಕ ನಮ್ಮ ಮಹಿಳೆಯರಿಗೆ ಉದ್ಯೋಗ ದೊರಕಿದೆ. ಮೊದಲು ನಾವು ನಮ್ಮ ಮೂಲವೃತ್ತಿಗಳಲ್ಲಿ ತೊಡಗಿಸಿಕೊಂಡು ಅದರಲ್ಲೇ ಬದುಕು ರೂಪಿಸಿಕೊಂಡಿದ್ದೆವು. ಆದರೆ ಈ ಗುಂಪು ಉದ್ಯೋಗದಿಂದ ಆದಾಯ ಗಳಿಸುತ್ತಿರುವುದರ ಜೊತೆಗೆ ನಮ್ಮಲ್ಲಿ ಬದಲಾವಣೆಯಾಗಿದೆ.
2. ಈ ಗುಂಪುಗಳಿಂದ ಸದಸ್ಯರ ನಡುವೆ ಉತ್ತಮ ಬಾಂಧವ್ಯ ಏರ್ಪಟ್ಟಿದೆ ಹಾಗೂ ನಾವೆಲ್ಲರೂ ಒಂದೇ ಎಂಬ ಮನೋಭಾವನೆ ರೂಪುಗೊಂಡಿದೆ.
3. ಈ ಗುಂಪುಗಳ ಮೂಲಕ ನಾವು ಮನೆಯ ಹೊರಗೆ ಬಂದು ಕೆಲಸ ಮಾಡಲು ಸಹಾಯಕವಾಗಿರುವುದರಿಂದ ನಮಗೆ ನಮ್ಮ ಸಾಮಾಜಿಕ ಸ್ಥಿತಿಗತಿಗಳ ಬಗ್ಗೆ ತಿಳಿಯಲು ಅನುಕೂಲವಾಗಿದೆ.
4. ಇದರಿಂದ ನಮ್ಮ ಕುಟುಂಬಗಳಿಗೆ ಹಣಕಾಸಿನ ನೆರವು ದೊರಕುವುದರ ಜೊತೆಗೆ ಕುಟುಂಬದ ಜೀವನ ನಿರ್ವಹಣೆಗೆ ಹೆಚ್ಚು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದೆ.
5. ಈ ಗುಂಪುಗಳನ್ನು ಸೇರಿದ ಮೇಲೆ ಪ್ರತಿಯೊಬ್ಬರೂ ತಿಂಗಳಿಗೆ 1000 ರೂಪಾಯಿಗಳ ಆದಾಯ ಗಳಿಸುತ್ತಿರುವುದರಿಂದ ಸ್ವಲ್ಪ ಹಣವನ್ನು ಉಳಿತಾಯ ಸಂಘಗಳ ಮೂಲಕ ಉಳಿತಾಯ ಮಾಡಲು ಸಾಧ್ಯವಾಗಿದೆ.
6. ನಮ್ಮ ಕುಟುಂಬಗಳ ಆರ್ಥಿಕ ಸಮಸ್ಯೆಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಬಗೆಹರಿಸಿಕೊಳ್ಳಲು ನಾವು ಈ ಡ್ವಾಕ್ರಾ ಗುಂಪುಗಳನ್ನು ಸೇರಿದ್ದರಿಂದ ಸಾಧ್ಯವಾಗಿದೆ.
7. ನಮ್ಮ ಕುಟುಂಬಗಳಲ್ಲಿ ಎಲ್ಲಾ ನಿರ್ಧಾರಗಳನ್ನು ಕೈಗೊಳ್ಳುವಾಗ ನಮ್ಮ ಅಭಿಪ್ರಾಯಗಳಿಗೆ ಮಾನ್ಯತೆ ನೀಡುತ್ತಿರುವುದರಿಂದ ನಮಗೆ ನಮ್ಮ ಕುಟುಂಬಗಳಲ್ಲಿ ವಿಶೇಷ ಸ್ಥಾನ ಲಭಿಸಿದೆ.
8. ನಮಗೆ ಯಾವೊಂದು ಬ್ಯಾಂಕ್‌ಗಳು ಸಾಲವನ್ನೇ ಕೊಡಲು ಮುಂದೆ ಬಂದಿರಲಿಲ್ಲ. ಈ ಯೋಜನೆಯ ಮೂಲಕ ಈ ಗುಂಪುಗಳನ್ನು ಸೇರಿರುವುದರಿಂದ ಬ್ಯಾಂಕ್‌ನಿಂದ ಸಾಲ ಸೌಲಭ್ಯಗಳನ್ನು ಸುಲಭವಾಗಿ ಪಡೆಯಲು, ಆ ಮೂಲಕ ಈ ಗುಂಪು ಉದ್ಯೋಗಗಳನ್ನು ಕೈಗೊಳ್ಳಲು ಹಾಗೂ ಬ್ಯಾಂಕ್‌ನೊಂದಿಗೆ ವ್ಯವಹರಿಸಲು ಸಾಧ್ಯವಾಗಿದೆ. ಈ ಗುಂಪು ಉದ್ಯೋಗಗಳನ್ನು ಒಬ್ಬೊಬ್ಬ ಮಹಿಳೆಯರೆ ಮಾಡಲು ಹಲವು ಸಮಸ್ಯೆಗಳು ಎದುರಾಗುವುದರಿಂದ ಈ ಮೊದಲು ಉದ್ಯೋಗ ಕೈಗೊಳ್ಳಲು ಸಾಧ್ಯವಾಗಿರಲಿಲ್ಲ. ಆದರೆ ಈ ಗುಂಪುಗಳಲ್ಲಿ ಸದಸ್ಯರಾಗಿದ್ದರಿಂದ ಇದು ಸಾಧ್ಯವಾಗಿದೆ.
9. ಈ ಗುಂಪುಗಳ ಸದಸ್ಯರಾಗುವ ಮೂಲಕ ಸ್ವಾವಲಂಬಿಗಳಾಗಲು ಒಂದು ಉತ್ತಮ ವೇದಿಕೆ ಕಲ್ಪಿಸಿಕೊಟ್ಟಂತಾಗಿದೆ.
10. ಈ ಗುಂಪುಗಳ ಇತರ ಸದಸ್ಯರ ಜೊತೆಗೂಡಿ ಸಾಮಾಜಿಕ ಸೌಲಭ್ಯಗಳಲ್ಲಿ ತೊಡಗಿಸಿಕೊಳ್ಳಲು ಇದರಿಂದ ನೆರವಾಗಿದೆ. ಈಗಾಗಲೇ ಹಲವು ನಮ್ಮಗಳ ಸದಸ್ಯರ ಸಮಸ್ಯೆಗಳನ್ನು ಅಂದರೆ ಹಣಕಾಸಿನ, ಆರೋಗ್ಯ, ಶಿಕ್ಷಣ, ಸುತ್ತಮುತ್ತಲಿನ ಸಮಸ್ಯೆಗಳು ಹಾಗೂ ಕುಟುಂಬದ ಇತರ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಅನುಕೂಲವಾಗಿದೆ.
11. ನಮ್ಮ ಕುಟುಂಬಗಳ ಮಕ್ಕಳ ಶಿಕ್ಷಣ ಮತ್ತು ಆರೋಗ್ಯಕ್ಕೆ ಹಾಗೂ ನಮ್ಮ ಕುಟುಂಬದ ಸದಸ್ಯರ ಇತರ ಸಮಸ್ಯೆಗಳ ನಿವಾರಣೆಗೆ ಸಹಾಯಕವಾಗಿದೆ.
12. ನಾವು ಈ ಗುಂಪುಗಳನ್ನು ಸೇರುವ ಮೊದಲು ಎದುರಿಸುತ್ತಿದ್ದಂತಹ ಆರ್ಥಿಕ ಮತ್ತಿತರ ಕೌಟುಂಬಿಕ ಭಯದ ವಾತಾವರಣ ಸ್ವಲ್ಪ ಮಟ್ಟಿಗೆ ಕಡಿಮೆಯಾಗಿರುವುದರ ಜೊತೆಗೆ ಸ್ವಲ್ಪ ಧೈರ್ಯ ಉಂಟಾಗಿದೆ.
13. ನಾವುಗಳು ಗುಂಪುಗಳ ಮೂಲಕ ಬ್ಯಾಂಕ್‌ನೊಂದಿಗೆ ಉತ್ತಮ ಬಾಂಧವ್ಯ ಹೊಂದಿರುವುದರಿಂದ ಬ್ಯಾಂಕ್ ಮೂಲಕ ಮತ್ತಷ್ಟು ಹಣಕಾಸಿನ ನೆರವನ್ನು ಡ್ವಾಕ್ರಾ ಗುಂಪುಗಳಿಗೆ ಮತ್ತು ಉಳಿತಾಯ ಗುಂಪುಗಳಿಗೆ ಪಡೆಯಲು ಸಹಾಯಕವಾಗಿದೆ.

14. ಶೈಕ್ಷಣಿಕವಾಗಿ ನಾವುಗಳು ಸಾಕ್ಷರರಾಗಿದ್ದೇವೆ. ಹಾಗೂ ನಮ್ಮ ನಮ್ಮ ಹೆಸರುಗಳನ್ನು ಬರೆಯಲು, ಓದಲು ಹಾಗೂ ವ್ಯವಹಾರಕ್ಕೆ ಅಗತ್ಯವಾದಷ್ಟು ಜ್ಞಾನವನ್ನು ಹೊಂದಲು ಇದರಿಂದ ಸಾಧ್ಯವಾಗಿದೆ ಎಂದು ತಿಳಿಸಿರುತ್ತಾರೆ.

## ಕ್ಷೇತ್ರ ಅಧ್ಯಯನದಲ್ಲಿ ಸಂದರ್ಶಿಸಿದ ನಿರಂತರ ಉಳಿತಾಯ ಮತ್ತು ಸಾಲ ಗುಂಪು

| ಕ್ರಮ ಸಂಖ್ಯೆ | ಗುಂಪಿನ ಹೆಸರು | ಗುಂಪಿನ ಪ್ರತಿನಿಧಿಯ ಹೆಸರು | ಗುಂಪಿನ ಸದಸ್ಯರ ಸಂಖ್ಯೆ |
|---|---|---|---|
| 1 | ಐಶ್ವರ್ಯ ನಿರಂತರ ಉಳಿತಾಯ ಮತ್ತು ಸಾಲ ಗುಂಪು | ಮೀನಾ | 20 |
| 2 | ಶ್ರೀ ಅನ್ನಪೂರ್ಣೇಶ್ವರಿ ನಿರಂತರ ಉಳಿತಾಯ ಮತ್ತು ಸಾಲ ಗುಂಪು | ಭಾಗ್ಯ | 20 |
| 3 | ವಿಮೋಚನಾ ನಿರಂತರ ಉಳಿತಾಯ ಮತ್ತು ಸಾಲ ಗುಂಪು | ಹೆಲಿನ್ | 20 |
| 4 | ಸುಭಿಕ್ಷಾ ನಿರಂತರ ಉಳಿತಾಯ ಮತ್ತು ಸಾಲ ಗುಂಪು | ಸುನೀತಾ | 20 |
| 5 | ಆದರ್ಶ ನಿರಂತರ ಉಳಿತಾಯ ಮತ್ತು ಸಾಲ ಗುಂಪು | ಸುಮತಿ | 20 |

ಆಧಾರ : ಮಾರ್ಚ್ ತಿಂಗಳಲ್ಲಿ ಮಂಡ್ಯ ನಗರ ಸಭೆಯ ಮೂಲಕ ಕೈಗೊಂಡ ಕ್ಷೇತ್ರ ಅಧ್ಯಯನ

**ನಿರಂತರ ಉಳಿತಾಯ ಮತ್ತು ಸಾಲ ಗುಂಪು**

1. ಉಳಿತಾಯ ಸಂಘಗಳ ಸದಸ್ಯರಾದ ಮೇಲೆ ನಮಗೆ ನಮ್ಮ ಅಗತ್ಯಕ್ಕೆ ತಕ್ಕಂತೆ ಸಾಲ ಸೌಲಭ್ಯವನ್ನು ಪಡೆಯಲು ಸಾಧ್ಯವಾಗಿದೆ. ಆದರೆ ಈ ಮೊದಲು ಯಾವುದೇ ಬ್ಯಾಂಕ್‌ನಲ್ಲಿಯಾಗಲೀ ಅಥವಾ ಖಾಸಗಿ ವ್ಯಕ್ತಿಗಳಿಂದಾಗಲೀ ಸಾಲ ಪಡೆಯುವುದು ಅಷ್ಟು ಸುಲಭವಾಗಿರಲಿಲ್ಲ. ಒಂದು ವೇಳೆ ನೀಡಿದರೂ ಸಹ ತುಂಬಾ ದುಬಾರಿಯಾದ ಅಂದರೆ ತಿಂಗಳಿಗೆ 100 ಕ್ಕೆ 10 ರೂ. ಅಥವಾ 7, 5 ರೂ. ಬಡ್ಡಿ ನೀಡಬೇಕಾಗುತ್ತಿತ್ತು. ಆದರೆ ಈಗ ಆ ಪರಿಸ್ಥಿತಿಯಿಲ್ಲ.
2. ಈ ಸಂಘಗಳಿಗೆ ಸೇರಿರುವುದರಿಂದ ನಮಗೆ ತಕ್ಷಣ ಎದುರಾಗಬಹುದಾದ ಆರ್ಥಿಕ ಸಮಸ್ಯೆಗಳು ದೂರವಾಗಿವೆ. ಹಾಗೂ ಅವುಗಳನ್ನು ಬಗೆಹರಿಸಿಕೊಳ್ಳಲು ಸಾಧ್ಯವಾಗಿದೆ.
3. ನಾವು ನಮ್ಮ ನಮ್ಮ ಸಂಘಗಳಲ್ಲಿ 10ರಿಂದ 20 ಸದಸ್ಯರನ್ನು ಹೊಂದಿದ್ದೇವೆ. ಆದರೂ ಸಹ ನಮ್ಮಲ್ಲಿ ಒಳ್ಳೆಯ ಒಗ್ಗಟ್ಟು. ಎಲ್ಲರೂ ಹೊಂದಿಕೊಂಡು ಹೋಗುವ ಗುಣ, ಸಹಬಾಳ್ವೆ, ಸಹಕಾರ ಮನೋಭಾವನೆಯನ್ನು ಹೊಂದಿದ್ದೇವೆ.
4. ಈ ಸಂಘಗಳಲ್ಲಿ ಸದಸ್ಯರಾದ ಮೇಲೆ ನಮ್ಮ ಕೆಲವು ಕಷ್ಟಗಳು ದೂರವಾಗಿವೆ. ಹಾಗೂ ಕಷ್ಟ ಬಂದರೂ ಸಹ ಅದನ್ನು ಎದುರಿಸುವ ಧೈರ್ಯ ಸಹ ಬಂದಿದೆ.
5. ನಾವುಗಳು ಈ ಗುಂಪುಗಳ ಸದಸ್ಯರಾಗುವ ಮೊದಲು ಯಾವುದೇ ಹಣಕಾಸಿನ ಸೌಲಭ್ಯವನ್ನು ಹೊಂದಬೇಕಾದರೂ ಸಹ ನಮ್ಮ ಕುಟುಂಬಗಳ ಯಜಮಾನರುಗಳನ್ನು ಕೇಳಿ ಪಡೆಯುವ ಮತ್ತು ಅವರ ತೀರ್ಮಾನದಂತೆ ನಡೆದುಕೊಳ್ಳುತ್ತಿದ್ದೆವು. ಆದರೆ ಈಗ ನಮಗೆ ಸ್ವತಂತ್ರ ನಿರ್ಧಾರ ತೆಗೆದುಕೊಳ್ಳುವ ಸ್ವತಂತ್ರ ಸಿಕ್ಕಿದೆ.
6. ನಮ್ಮ ಕುಟುಂಬಗಳ ಯಜಮಾನರುಗಳಿಂದ ಉತ್ತಮ ಸಹಕಾರ ದೊರಕಿದೆ. ಹಾಗೆಯೇ ಅವರುಗಳು ಸಹ ಪರೋಕ್ಷವಾಗಿ ನಮ್ಮ ಸಂಘಗಳಿಗೆ ಉತ್ತಮ ಸಹಕಾರವನ್ನು ನೀಡುತ್ತಿದ್ದಾರೆ.
7. ಈ ಸಂಘಗಳಲ್ಲಿ ಸದಸ್ಯರಾದ ಮೇಲೆ ಯಾವುದಾದರೂ ಉದ್ಯೋಗಗಳನ್ನು ಮಾಡಬೇಕೆನ್ನುವ ಉದ್ದೇಶವನ್ನೊಂದಿರುವುದಾಗಿ ತಿಳಿಸಿರುತ್ತಾರೆ. ಆದರೆ ಸೂಕ್ತವಾದ ಯಾವ ಸ್ವಂತ ಉದ್ಯೋಗಗಳನ್ನು ಆಯ್ಕೆ

ಮಾಡಿಕೊಳ್ಳಬೇಕೆನ್ನುವ ಗೊಂದಲವನ್ನೊಂದಿರುವುದಾಗಿ ತಿಳಿಸಿರುತ್ತಾರೆ.

8. ನಾವು ಸಂಘಗಳ ಮೂಲಕ ಸದಸ್ಯರಾಗುವುದರೊಂದಿಗೆ ಬ್ಯಾಂಕ್‌ಗಳೊಂದಿಗೆ ಉತ್ತಮ ಸಂಪರ್ಕವನ್ನು ಹೊಂದಿದ್ದೇವೆ. ಇದರಿಂದಾಗಿ ನಮಗೆ ಬ್ಯಾಂಕ್ ವ್ಯವಹಾರ ತಿಳಿದಿದೆ. ಹಾಗೂ ನಮ್ಮ ಗುಂಪುಗಳಿಗೆ ಬ್ಯಾಂಕ್‌ಗಳು ಹಣಕಾಸಿನ ನೆರವನ್ನು ನೀಡುತ್ತಿರುವುದರಿಂದ ಆ ಹಣದಿಂದ ಉದ್ಯೋಗ ಕೈಗೊಳ್ಳಲು ಮತ್ತು ನಮ್ಮ ಕುಟುಂಬಗಳಿಗೆ ಬೇಕಾದ ಹಣಕಾಸಿನ ಸೌಲಭ್ಯಗಳನ್ನು ಕಲ್ಪಿಸಿಕೊಳ್ಳಲು ಇದು ತುಂಬಾ ಸಹಾಯಕವಾಗಿದೆ.

9. ಈ ಸಂಘಗಳಲ್ಲಿರುವ ಪ್ರತಿ ಸದಸ್ಯರೂ ವೈಯಕ್ತಿಕವಾಗಿ 3000 ದಿಂದ 5000 ರೂ.ಗಳವರೆಗೆ ತಮ್ಮದೇ ಉಳಿತಾಯವನ್ನೊಂದಿದ್ದಾರೆ. ಆದ್ದರಿಂದ ಅವರು 10,000 ಅಥವಾ 20,000 ರೂ. ಸಾಲವನ್ನು ವೈಯಕ್ತಿಕವಾಗಿ ಪಡೆಯಲು ಸಾಧ್ಯವಾಗಿದೆ. ಹಾಗೂ ಬ್ಯಾಂಕ್‌ಗಳು ಸಹ ಇವರ ಉಳಿತಾಯದ ಆಧಾರದ ಮೇಲೆ ಗುಂಪುಗಳಿಗೆ 1 ಲಕ್ಷ, 2 ಲಕ್ಷ, 3 ಲಕ್ಷ ಹೀಗೆ ಸಾಲವನ್ನು ನೀಡುತ್ತಿರುವುದರಿಂದ ನಾವು ಅತಿ ಹೆಚ್ಚು ಸಾಲ ಸೌಲಭ್ಯಗಳನ್ನು ಹೊಂದಲು ಅನುಕೂಲವಾಗಿದೆ.

10. ನಮ್ಮ ಕುಟುಂಬಗಳ ಮಕ್ಕಳ ವಿದ್ಯಾಭ್ಯಾಸ, ಆರೋಗ್ಯ, ಮದುವೆ, ಮನೆ ರಿಪೇರಿ, ಮನೆಗೆ ಬೇಕಾದ ಅಗತ್ಯ ವಸ್ತುಗಳ ಖರೀದಿ ಮಾಡಲು ಹಾಗೂ ಈ ಕೆಲಸಗಳಿಗೆ ಬೇಕಾದ ಹಣಕಾಸನ್ನು ಹೊಂದಲು ಸುಲಭವಾಗಿದೆ.

11. ಈ ಸಂಘಗಳಲ್ಲಿ ಸದಸ್ಯರಾದ ಮೇಲೆ ಇಲ್ಲಿನ ಸಂಘಗಳಿಂದ ಸಾಲವನ್ನು ಪಡೆದು ಸಣ್ಣ ಪುಟ್ಟ ವ್ಯಾಪಾರಗಳಾದ ತರಕಾರಿ ವ್ಯಾಪಾರ, ಹೂ ಮಾರಾಟ, ಹಣ್ಣುಗಳ ಮಾರಾಟ, ಸಣ್ಣ ಅಂಗಡಿ, ಎಲೆ ವ್ಯಾಪಾರ, ಕಿರು ವ್ಯಾಪಾರ, ಪಾನ್ ಬೀಡಾ ವ್ಯಾಪಾರ, ತಳ್ಳುಗಾಡಿಯಲ್ಲಿ ತಿಂಡಿ ವ್ಯಾಪಾರ, ಟೀ ಅಂಗಡಿ ನಡೆಸುವುದು, ತಳ್ಳುಗಾಡಿಯಲ್ಲಿ ಸಿಹಿತಿಂಡಿ, ಊಟ ಮತ್ತಿತರೆ ವ್ಯಾಪಾರ ಮಾಡಲು ಹಣಕಾಸು ದೊರಕುತ್ತಿದೆ. ಹಾಗೆಯೇ ವ್ಯಾಪಾರವನ್ನು ಮತ್ತಷ್ಟು ವಿಸ್ತರಿಸಲು ಸಹಾಯಕವಾಗಿದೆ.

12. ಸಂಘಗಳ ಸಭೆಗಳಿಗೆ ವಾರಕ್ಕೆ ಮತ್ತು ತಿಂಗಳಿಗೆ ಒಂದು ಸಾರಿ ಹಾಜರಾಗುತ್ತಿರುವುದರಿಂದ ಇತರ ಕುಟುಂಬಗಳ ಸದಸ್ಯರ ಸಾಮಾಜಿಕ ಹಾಗೂ ಆರ್ಥಿಕ ಸಮಸ್ಯೆಗಳ ಬಗ್ಗೆ ತಿಳಿಯಲು ಮತ್ತು ಅವುಗಳನ್ನು ಸಂಘದ ಸದಸ್ಯರ ಜೊತೆಗೂಡಿಸಿಕೊಂಡು ಬಗೆಹರಿಸಿಕೊಳ್ಳಲು ಸಾಧ್ಯವಾಗಿದೆ.

13. ನಾವುಗಳು ಗುಂಪುಗಳ ಮೂಲಕ ಯಾವುದಾದರೂ ಗುಂಪು ಉದ್ಯೋಗಗಳನ್ನು ಮಾಡುವ ಉದ್ದೇಶವನ್ನು ಹೊಂದಿರುವುದಾಗಿ ತಿಳಿಸಿರುತ್ತಾರೆ. ಹಾಗೆಯೇ ನಾವುಗಳು ಯಾವ ಯಾವ ಗುಂಪು ಉದ್ಯೋಗಗಳನ್ನು ಹೊಂದಬೇಕೆನ್ನುವ ಸಮಸ್ಯೆಯನ್ನು ಎದುರಿಸುತ್ತಿರುವುದಾಗಿ ತಿಳಿಸಿರುತ್ತಾರೆ.

14. ಈ ಸಂಘಗಳ ಸದಸ್ಯರಾಗುವುದರೊಂದಿಗೆ ರಾಜಕೀಯವಾಗಿ ನಮ್ಮ ಸದಸ್ಯರುಗಳು ಗುರುತಿಸಿಕೊಳ್ಳಲು ಸಾಧ್ಯವಾಗಿದೆ. ಹಾಗೂ ನಮಗೆ ರಾಜಕೀಯ ವ್ಯಕ್ತಿಗಳ ಮೂಲಕ ಉತ್ತಮ ಸಹಕಾರ ಮತ್ತು ಸೌಲಭ್ಯಗಳನ್ನು ಹೊಂದಲು ಅನುಕೂಲವನ್ನು ಕಲ್ಪಿಸಿದೆ.

15. ನಮ್ಮ ಸಮಸ್ಯೆಗಳಾದ ನೀರು, ಒಳಚರಂಡಿ, ಸ್ವಚ್ಛತೆ, ರಸ್ತೆ, ಅಂಗನವಾಡಿ, ಆರೋಗ್ಯ ಕೇಂದ್ರ, ಶೌಚಾಲಯ ವ್ಯವಸ್ಥೆಯನ್ನು ಪಡೆಯಲು ಹಾಗೂ ಸಂಬಂಧಿಸಿದ ಇಲಾಖೆಗಳಿಗೆ ಹೋಗಿ ಆ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ನಾವು ಈ ಸಂಘಗಳನ್ನು ಸೇರಿರುವುದರಿಂದ ಸಾಧ್ಯವಾಗಿದೆ.

16. ಈ ಗುಂಪುಗಳ ಮೂಲಕ ಶೈಕ್ಷಣಿಕವಾಗಿ ನಾವುಗಳು ಸಾಕ್ಷರರಾಗಿದ್ದೇವೆ. ಹಾಗೂ ನಮ್ಮ ನಮ್ಮ ಹೆಸರುಗಳನ್ನು ಬರೆಯಲು, ಓದಲು ಹಾಗೂ ವ್ಯವಹಾರಕ್ಕೆ ಅಗತ್ಯವಾದಷ್ಟು ಜ್ಞಾನವನ್ನು ಬೆಳೆಸಿಕೊಳ್ಳಲು ಸಹಾಯಕವಾಗಿದೆ ಎಂದು ತಿಳಿಸಿರುತ್ತಾರೆ.

## ಈ ಕ್ಷೇತ್ರ ಅಧ್ಯಯನದಲ್ಲಿ ಗಮನಿಸಿದ ಮಹಿಳಾ ಸಬಲೀಕರಣದ ಅಂಶಗಳು

ಈ ಅಧ್ಯಯನದಲ್ಲಿ ಮಹಿಳಾ ಸಬಲೀಕರಣಕ್ಕೆ ಸಂಬಂಧಿಸಿದಂತೆ ಕಂಡು ಬಂದಂತಹ ಅಂಶಗಳೆಂದರೆ :

1. ಈ ಮಹಿಳೆಯರು ಈ ಯೋಜನೆಯ ಮೂಲಕ ಸ್ವಂತ ಉದ್ಯೋಗ, ಡ್ವಾಕ್ರಾ ಗುಂಪು ಉದ್ಯೋಗ (ಮಹಿಳೆ ಮತ್ತು ಮಕ್ಕಳ ಅಭಿವೃದ್ಧಿ ಕಾರ್ಯಕ್ರಮ) ಮತ್ತು ನಿರಂತರ ಉಳಿತಾಯ ಮತ್ತು ಸಾಲ ಗುಂಪುಗಳ ಮೂಲಕ ಉದ್ಯೋಗಗಳನ್ನು ಹೊಂದುವ ಮೂಲಕ ಸ್ವಾವಲಂಬಿಗಳಾಗಲು ಸಹಾಯಕವಾಗಿದೆ.
2. ಈ ಯೋಜನೆಯಲ್ಲಿ ಮಹಿಳೆಯರು ತಮ್ಮನ್ನು ತೊಡಗಿಸಿಕೊಂಡಿದ್ದರಿಂದ ಅವರ ಕುಟುಂಬಗಳಲ್ಲಿ ಸೂಕ್ತ ಸ್ಥಾನ ಹಾಗೂ ಗೌರವ ದೊರೆತಿದೆ. ಹಾಗೆಯೇ ಯಾವುದೇ ಕುಟುಂಬದ ನಿರ್ಧಾರಗಳನ್ನು ತೆಗೆದುಕೊಳ್ಳುವಾಗಲೂ ಸಹ ಇವರಿಗೂ ಉತ್ತಮ ಪ್ರಾಧಾನ್ಯತೆಯನ್ನು ನೀಡಲಾಗುತ್ತಿದೆ ಎಂಬ ಅಂಶ ಕಂಡು ಬಂದಿದೆ.
3. ಈ ಮಹಿಳೆಯರು ಕುಟುಂಬದ ಚೌಕಟ್ಟಿನೊಳಗೆ ಇದ್ದುದರಿಂದ ಕುಟುಂಬದ ಹೊರಗಿನ ವ್ಯವಸ್ಥೆ, ಸಾಮಾಜಿಕ, ಸ್ಥಿತಿಗತಿಗಳು ಗೊತ್ತಿರಲಿಲ್ಲ. ಆದರೆ ಈಗ ಇವರಿಗೆ ಸಾಕಷ್ಟು ಅನುಭವವಾಗಿದೆ. ಸಾಮಾಜಿಕ ಸ್ಥಿತಿಗತಿ ಹೇಗಿದೆ ಎಂಬ ಬಗ್ಗೆ ಎಲ್ಲವೂ ತಿಳಿದಿದೆ. ಅಂದರೆ ಈ ಮಹಿಳೆಯರಿಗೆ ಕುಟುಂಬದ ಒಳಗೆ ಮತ್ತು ಹೊರಗೆ ಅವರ ಜವಾಬ್ದಾರಿಗಳಾವುವು ಎಂಬ ಅರಿವು ಮೂಡಿದೆ.
4. ಈ ಯೋಜನೆಯ ಮೂಲಕ ಆರ್ಥಿಕ ಸ್ವಾವಲಂಬಿಗಳಾಗಲು ಇವರಿಗೆ ಅನುಕೂಲವಾಗಿದೆ. ಹಾಗೆಯೇ ಅವರುಗಳು ಕುಟುಂಬದ ಕೆಲವು ಆರ್ಥಿಕ ನಿರ್ಧಾರಗಳನ್ನು ತೆಗೆದುಕೊಳ್ಳಲು ಸ್ವತಂತ್ರರಾಗಿದ್ದಾರೆ.
5. ಈ ಮಹಿಳೆಯರು ತಮ್ಮನ್ನು ರಾಜಕೀಯವಾಗಿ ಗುರುತಿಸಿಕೊಳ್ಳಲು ಹಾಗೂ ರಾಜಕೀಯವಾಗಿ ಬೆಳೆಯಲು ಸಾಧ್ಯವಾಗಿದೆ.
6. ಬೇರೆ ಬೇರೆ ಇಲಾಖೆಗಳ ಮೂಲಕ ಅವರಿಗೆ ಸಿಗಬೇಕಾಗಿರುವ ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಮತ್ತಿತರ ಸೌಲಭ್ಯಗಳನ್ನು ಪಡೆದುಕೊಳ್ಳಲು, ಅವರ ಹಕ್ಕುಗಳನ್ನು ಚಲಾಯಿಸಲು ಸಹಾಯಕವಾಗಿದೆ.
7. ಅವರೆಲ್ಲರಿಗೂ ವೈಯಕ್ತಿಕವಾಗಿ, ಸಾಮಾಜಿಕವಾಗಿ ಕುಟುಂಬದ ಹೊರಗೆ ಅವರ ಹಕ್ಕುಗಳಾವುವು ಎಂಬುದು ಗೊತ್ತಾಗಿದೆ.
8. ಈ ಮಹಿಳೆಯರು ಶೈಕ್ಷಣಿಕವಾಗಿ ಈಗ ಸಾಕ್ಷರಸ್ಥರಾಗಿದ್ದಾರೆ. ಈಗ ಅವರಿಗೆ ಬರೆಯಲು ಮತ್ತು ಓದಲು ಬರುತ್ತಿದ್ದು ಮೊದಲಿನ ರೀತಿ ಅವರನ್ನು ಯಾರೂ ಮೋಸ ಮಾಡಲು ಬರುವುದಿಲ್ಲ ಎಂಬ ಅಂಶ ಗಮನಕ್ಕೆ ಬಂದಿರುತ್ತದೆ.

ಈ ಕ್ಷೇತ್ರ ಅಧ್ಯಯನದ ಮೂಲಕ ಈ ಮಹಿಳೆಯರಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ, ಶೈಕ್ಷಣಿಕವಾಗಿ ಮಹತ್ತರ ಸುಧಾರಣೆಗಳು ಆಗಿರುವುದನ್ನು ಕಾಣಬಹುದಾಗಿದೆ. ಹಾಗೆಯೇ ಈ ಮಹಿಳೆಯರು ವೈಯಕ್ತಿಕವಾಗಿ ಹಾಗೂ ಗುಂಪುಗಳ ಮೂಲಕ ಸಬಲೀಕರಣವಾಗಿರುವುದು ಕಂಡು ಬಂದಿರುತ್ತದೆ.

***Notes***

***Notes***

***Notes***

***Notes***

*Notes*